
# ಉರಗಾದ್ರಿವಾಸ ವಿಠಲದಾಸಾರ್ಯರ ಜೀವನ ಮತ್ತು ಕೃತಿಗಳು



ಪ್ರಕಟಣೆ:

ತಿರುಮಲೆ ತಿರುಪತಿ ದೇವಸ್ಥಾನಗಳ ದಾಸಸಾಹಿತ್ಯಯೋಜನೆ

ತಿರುಪತಿ.

# ಉರಗಾದ್ರಿವಾಸ ವಿಠಲದಾಸಾರ್ಯರ ಜೀವನ ಮತ್ತು ಕೃತಿಗಳು


ಲೇಖಕ – ಸಂಪಾದಕ

**ಡಾ॥ ಕೆ. ಎಂ. ಕೃಷ್ಣಾರಾವ್,** ಎಂ.ಎ., ಪಿ.ಎಚ್.ಡಿ.

(ನಿವೃತ್ತ) ಪ್ರಾಧ್ಯಾಪಕ,

ಉಸ್ಮಾನಿಯ ವಿಶ್ವವಿದ್ಯಾಲಯ

ಹೈದರಾಬಾದ್.



ಪ್ರಕಟಣೆ:

**ತಿರುಮಲೆ ತಿರುಪತಿ ದೇವಸ್ಥಾನಗಳ ದಾಸಸಾಹಿತ್ಯಯೋಜನೆ**

**ತಿರುಪತಿ.**

Uragadri Vasa Vittala Dasa Krithigalu

T.T.D. Religious Publication Series No.

Price : Rs.

Published by

Sri M.V.S. Prasad, I.A.S
Executive Officer
Tirumala Tirupati Devasthanams, Tirupati

Printed at :

Tirumala Tirupati Devasthanams Press, Tirupati
Copies : 3000.

# ಪ್ರಕಾಶಕರ ಮೊದಲ ಮಾತು

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ
ಅಭ್ಯುತ್ಥಾನ ಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್

ಇದು ಗೀತಾಚಾರ್ಯನ ಅಮೃತವಾಣಿ. ಭಗವಂತ ಹಾಗೂ ಅವನ ಭಕ್ತರ ಅವತಾರಗಳು, ಪ್ರಬಲಿದ ಅಧರ್ಮವನ್ನು ಬದಿಗೊತ್ತಿ ಧರ್ಮದ ಪುನರುದ್ಧಾರಕ್ಕಾಗಿ. ಕರುಣಾಮಯನಾದ ಜಗನ್ನಾಥನು ಕಲಿಯುಗದಲ್ಲಿ ಜೀವರು ಧರ್ಮಮಾರ್ಗದಿಂದ ಚ್ಯುತರಾಗದಂತೆ ನಿರಂತರ ರಕ್ಷಿಸಲು ಭೂವೈಕುಂಠವೆನಿಸಿದ ವೇಂಕಟಾದ್ರಿಗೆ ಬಂದು ನಿಂತನು. ಧರ್ಮಸಂಸ್ಥಾಪಕನಾದ ಸ್ವಾಮಿಯ ಸೇವೆಗಾಗಿ ವಿವಿಧ ಪ್ರಾಂತಗಳಲ್ಲಿ ಅನೇಕ ಜ್ಞಾನಿವರೇಣ್ಯರು ಅವತರಿಸಿದರು. ಧರೆಗಿಳಿದು ಬಂದ ಎಲ್ಲ ಜ್ಞಾನಿಗಳು ಶ್ರೀನಿವಾಸನನ್ನು ಸೇವಿಸುತ್ತಾ, ಸಮಾಜ ಸುಧಾರಣೆಗಾಗಿ ಶ್ರಮಿಸಿದರು. ಕರ್ನಾಟಕ ಹರಿದಾಸರು ಸಹ ಈ ಗುಂಪಿಗೆ ಸೇರಿದವರು.

ಕರ್ನಾಟಕದ ಹರಿದಾಸರಿಗೆ ವೇಂಕಟಾದ್ರಿ ತವರೂರು. ಎಲ್ಲ ಹರಿದಾಸರು ಶ್ರೀನಿವಾಸನನ್ನು ಮನಸಾರ ಕೊಂಡಾಡಿರುವರು. ಶ್ರೀನಿವಾಸನ ಕರುಣಾಕಟಾಕ್ಷದಿಂದ ಹೊರಹೊಮ್ಮಿದ ಇವರ ಸಾಹಿತ್ಯ ಮೀಸಲಳಿಯದ ನಿತ್ಯ ನೂತನ ಸಜೀವ ಪವಿತ್ರಸಾಹಿತ್ಯ. ಇವರ ಕೃತಿಗಳು ಶ್ರುತಿ ಸ್ಮೃತಿ ಪುರಾಣಗಳಿಗೆ ವ್ಯಾಖ್ಯಾನದಂತಿರುವವು. ಸಾಮಾನ್ಯ ಜನರಿಗೆ ತಿಳಿಯಲಸಾಧ್ಯವಾದ ಅನೇಕ ವೇದಾಂತರಹಸ್ಯಗಳನ್ನು ಹರಿದಾಸರು ತಮ್ಮ ಕೃತಿಗಳಲ್ಲಿ ವಿಶದಪಡಿಸಿರುವರು. ಹೀಗೆ ಎಲ್ಲ ಹರಿದಾಸರು ಸಮಾಜಕ್ಕೆ ತಮ್ಮದೇ ಆದ ಒಂದು ವಿಶಿಷ್ಟ ಸೇವೆಯನ್ನು ಸಲ್ಲಿಸಿರುವರು.

ಇಂಥಾ ಹರಿದಾಸ ಪರಂಪರೆಗೆ ಸೇರಿದವರು ಶ್ರೀ ಉರಗಾದ್ರಿವಾಸ ವಿಠಲದಾಸರು. ಉರಗಾದ್ರಿವಾಸವಿಠಲದಾಸರ ಸಾಹಿತ್ಯ ಶ್ರೀನಿವಾಸನ ಅಡಿದಾವರೆಗಳನ್ನೇ ಆಶ್ರಯಿಸಿ ನಿಂತಿದೆ. ಇವರ ಅಂಕಿತನಾಮ ಶ್ರೀನಿವಾಸನದಾಗಿದೆ.

ಪ್ರಕೃತ ಹೊತ್ತಿಗೆಯಲ್ಲಿ ದಾಸರ ಸಮಗ್ರ ಕೃತಿಗಳನ್ನು ಪ್ರಕಟಿಸುತ್ತಿದೇವೆ. ಇದು ದಾಸಸಾಹಿತ್ಯ ಪ್ರಾಜೆಕ್ಟಿನ 28 ನೇ ಕುಸುಮವಾಗಿರುವುದು. ದಾಸರ ಜೀವನ ಚರಿತ್ರೆಯನ್ನು ಸುಂದರವಾಗಿ ಬರೆದು ದಾಸರ ಎಲ್ಲಾ ಕೃತಿಗಳನ್ನು ಸಂಗ್ರಹಿಸಿ ಕೊಟ್ಟ ಶ್ರೀ ಡಾ|| ಕೆ. ಎಮ್. ಕೃಷ್ಣರಾವ್ (ಬೆಂಗಳೂರು) ಇವರಿಗೆ ಧನ್ಯವಾದಗಳು. ದಾಸಸಾಹಿತ್ಯಾಭಿಮಾನಿಗಳು ಈ ನಮ್ಮ ಕಾರ್ಯವನ್ನು ಪ್ರೋತ್ಸಾಹಿಸಬೇಕಾಗಿ ಕೋರುತ್ತೇನೆ.

**ಎಮ್.ವಿ.ಎಸ್. ಪ್ರಸಾದ್**
ಐ. ಎ. ಎಸ್.
ಕಾರ್ಯನಿರ್ವಹಣಾಧಿಕಾರಿ
ತಿರುಮಲ ತಿರುಪತಿ ದೇವಸ್ಥಾನಗಳು
ತಿರುಪತಿ.

# ಶ್ರೀ ಉರಗಾದ್ರಿವಾಸವಿಠಲರ ಜೀವನ - ಕೃತಿಗಳ ಬಗ್ಗೆ ಸಂಕ್ಷಿಪ್ತ ಪರಿಚಯ

ಕನ್ನಡಿಗರ ಅಧ್ಯಾತ್ಮ ಸಾಧನೆಗಾಗಿ ಕ್ರಿ. ಶ. ೧೫ ನೆಯ ಶತಮಾನದಲ್ಲಿ ೀಪಾದರಾಜರಿಂದ ಸ್ಥಾಪಿತವಾದ ಕರ್ಣಾಟಕ ಹರಿದಾಸ ಪಂಥ, ಅನೇಕ ಶಿಷ್ಯ-ಶಿಷ್ಯರಿಂದ ಅತಿಶಯವಾಗಿ ಬೆಳೆದು – ಈಗಲೂ ಮುಂದುವರಿಯುತ್ತಿದೆ. ಮವಾಗಿ ಗುರುಗಳಿಂದ ಅಂಕಿತ-ಹರಿದಾಸದೀಕ್ಷೆ ಪಡೆದ ನೂರಾರು ಮಂದಿ ರಿದಾಸರು ವಿವಿಧ ಛಂದೋಪ್ರಕಾರಗಳಲ್ಲಿ ರಾಗ ತಾಳ ಲಯಬದ್ಧವಾದ ಸಾವಿ ರು ಕೃತಿಗಳನ್ನು ರಚಿಸಿದ್ದಾರೆ. ಹೀಗೆ ರಚನೆಯಾದ ಹರಿದಾಸ ಸಾಹಿತ್ಯವಾಹಿನಿ ದು ಸಂತತವಾಗಿ ಹರಿಯುತ್ತಲೇ ಇರುವುದು ಅದರ ಒಂದು ವೈಶಿಷ್ಟ್ಯವೆನ್ನ ಹುದು. ಈ ಐನೂರುವರ್ಷಗಳಲ್ಲಿ ಹರಿದು ಬಂದ ಈ ದಾಸಸಾಹಿತ್ಯವನ್ನು ೂರು ಘಟ್ಟಗಳಲ್ಲಿ ಗುರುತಿಸಬಹುದು.

ಮೊದಲನೆಯ ಪ್ರಾರಂಭ ಘಟ್ಟ, ಅದರ ಉಗಮಕಾಲದಲ್ಲಿ ಶ್ರೀಪಾದ ಜರು, ವ್ಯಾಸರಾಜರು, ವಾದಿರಾಜರು, ವಿಜಯೀಂದ್ರರು, ಪುರಂದರದಾಸರು, ನಕದಾಸರೇ ಮೊದಲಾದವರಿಂದ ರಚಿತವಾದ ಸಾಹಿತ್ಯ. ಇದಾದ ಸುಮಾರು ೂರುವರ್ಷಗಳ ಅನಂತರ ಹಂಪೆಯಿಂದ ಈ ಆಧ್ಯಾತ್ಮಿಕ-ಸಾಹಿತ್ಯಕ ಆಂದೋಳನ ದು ರಾಯಚೂರು ಜಿಲ್ಲೆಯಲ್ಲಿ ತಲೆಯೆತ್ತಿ ಮುಂದುವರೆಯಿತು. ಚೀಕಲಪರವಿಯ ೀ ವಿಜಯದಾಸರ ನೇತೃತ್ವದಲ್ಲಿ ಅವರ ಶಿಷ್ಯ-ಪ್ರಶಿಷ್ಯರನೇಕರು ಈ ಪಂಥವನ್ನು ನ್ನಾಗಿ ಬೆಳೆಸಿ ಭೂಯಿಷ್ಠವಾಗಿಯೇ ಕೃತಿನಿರ್ಮಾಣಮಾಡಿದರು. ಅವರಲ್ಲಿ ಮುಖರು ಎಂದರೆ ಶ್ರೀ ವಿಜಯದಾಸರು, ಆದವಾನಿಯ ರಂಗನಾಮದ ತಿಮ್ಮ ಯ್ಯನವರು, ಉತ್ತನೂರಿನ ಶ್ರೀ ಗೋಪಾಲದಾಸರು, ಶ್ರೀ ಮೋಹನ ಾಸರು, ಬ್ಯಾಗವಟ್ಟಿ ಮಾನ್ವಿಯ ಶ್ರೀ ಜಗನ್ನಾಥದಾಸರು, ಶ್ರೀ ಕಲ್ಲೂರು ಬ್ಬಣ್ಣದಾಸರು, ಲಿಂಗಸುಗೂರಿನ ಶ್ರೀ ಪ್ರಾಣೇಶದಾಸರು, ಕರ್ಜಗಿಯ ಶ್ರೀ ಾಸಪ್ಪದಾಸರು ಇತ್ಯಾದಿ. ಇದು ದಾಸಸಾಹಿತ್ಯದ ಎರಡನೆಯ ಘಟ್ಟವೆನ್ನಬಹುದು. ಈ ಕಾಲದ ಸಾಹಿತ್ಯ ಹೆಚ್ಚು ತತ್ವನಿಷ್ಠೆಯಿಂದ ತುಂಬಿದ್ದು ಎಂಬುದು ಸ್ಪಷ್ಟವಾಗಿ ಾಣುತ್ತದೆ.

ಮೂಲದಲ್ಲಿ ದಾಸಸಾಹಿತ್ಯದ ಧ್ಯೇಯ, ಜನಮನದಿಂದ ಆತ್ಮೋ ದ್ಧಾರಕ್ಕಾಗಿ ಅರಿತು ಅನುಷ್ಠಾನದಲ್ಲಿಟ್ಟುಕೊಳ್ಳಬೇಕಾದ ಪ್ರಮೇಯರತ್ನಗಳು ರಿಯವಾಗದೆ, ಜೀವಂತವಾಗಿ, ಉಪಯುಕ್ತವಾಗಿ, ಅರ್ಥವಾಗುವಂತೆ ತಿಳಿಯು ೇಳುವುದೇ ಆಗಿದೆ. ಈ ಮಹತ್ಕಾರ್ಯ ಈ ಎರಡನೆಯ ಘಟ್ಟದಲ್ಲಿ ಗಮನಾರ್ಹವಾಗಿ ಹುಮಟ್ಟಿಗೆ ಸಾಧಿತವಾಗಿದೆ. ದ್ವೈತ ಪ್ರಮೇಯಗಳ ಕರಂಡದಂತೆ ಶ್ರೀಹರಿಕಥಾ

ಮೃತ ಸಾರವೆಂಬ ಕೃತಿರತ್ನ ಶ್ರೀ ಜಗನ್ನಾಥದಾಸವರೇಣ್ಯರಿಂದ ರಚಿತವಾದುದು ಈ ಘಟ್ಟದ ಕಾಲದಲ್ಲೇ. ಇದೊಂದು ಹಿರಿಯ ಸಾಧನೆ. ಇದಲ್ಲದೆ ಇದಕ್ಕೂ ಅಧಿಕವಾಗಿ ಶ್ರೀ ವಿಜಯದಾಸರು ರಚಿಸಿದ ಸಾವಿರಾರು ಸುಳಾದಿಗಳಿವೆ. ಇವರಿಗೆ ಸುಳಾದಿ ದಾಸರು ಎಂಬ ಅಡ್ಡ ಹೆಸರು ಬಂದಿದೆ. ಬಹು ಅರ್ಥ–ಭಾವ–ಪ್ರಮೇಯ ಗರ್ಭಿತವಾಗಿ ಅನೇಕ ವೇಳೆ ಬಹು ಕ್ಲಿಷ್ಟವಾಗಿಯೂ ಈ ಕೃತಿಗಳಿವೆ. ಸಾಮಾನ್ಯರಿಗೆ ಸುಲಭವಾಗಿ ದಕ್ಕುವುದಿಲ್ಲವೆಂಬುದೂ ನಿಜವೇ ಆಗಿದೆ. ಹೊರನೋಟಕ್ಕೆ ಪಾಂಡಿತ್ಯಮಯವಾಗಿ ಕಾಣಬರದಿದ್ದರೂ, ಒಳಹೊಕ್ಕಂತೆಲ್ಲಾ ತುಂಬ ಗಹನವಾದವು ಎಂಬುದು ತಿಳಿಯುತ್ತದೆ.

ಶ್ರೀಮದಾನಂದತೀರ್ಥರು ಪ್ರತಿಪಾದಿಸಿದ ಮತ್ತು ಅವರ ತರುವಾಯ ಅವರ ಅನುಯಾಯಿ ವಿದ್ವಾಂಸರು ಮಾಡಿದ ಟೀಕೆ ಟಿಪ್ಪಣಿಗಳ ಸಾರಭಾಗವನ್ನೊಳಗೊಂಡಂತೆ ಕಠಿಣವಾದ ರೀತಿಯಲ್ಲಿ ಗಂಡು ಶೈಲಿಯಲ್ಲಿ ಈ ಕಾಲದ ದಾಸ ಸಾಹಿತ್ಯ ರಚಿತವಾಗಿದೆ. ಅನೇಕ ಸುಳಾದಿಗಳಿಗೆ–ಇತರ ಹಲವು ಪದಗಳಿಗೆ ಅರ್ಥ ಹೇಳುವುದು ಕಷ್ಟವೇ ಎಂದು ಅನೇಕರಿಗೆ ಅನುಭವವಾಗಿದೆ. ವಿದ್ವನ್ಮಣಿಗಳ ಕಠಿಣ ಜಟಿಲ ಗ್ರಂಥಗಳ ಪ್ರಭಾವ ಹರಿದಾಸರ ಮೇಲೂ ಆಗಿರಲಿಕ್ಕೆ ಸಾಕು. ಅಥವಾ ದಾಸಸಾಹಿತ್ಯವೆಂದರೇನು, ತುಂಬ ಸರಳವಾದದ್ದೂ, ಎಲ್ಲರಿಗೂ ಅರ್ಥವಾಗುವಂತಹುದು, ಅದರಲ್ಲೇನಿದೆ ಎಂಬ ಮಾತನ್ನು ಗಮನಿಸಿ, ಅದರಲ್ಲೂ ಕಷ್ಟವಾದುದುಂಟು–ಅಲ್ಲಿ ಪಾಂಡಿತ್ಯವೂ ಉಂಟು ಎಂದು ತೋರಿಸಲು ಹಾಗೆ ರಚಿತವಾಗಿದ್ದರೂ ಇರಬಹುದೇನೊ.

ಇದು ಎರಡನೆಯ ಘಟ್ಟವಾದರೆ, ೧೯–೨೦ ಶತಮಾನಗಳಲ್ಲಿ ಬೆಳೆಯುತ್ತಿರುವುದು ಮೂರನೆಯ ಘಟ್ಟ ಎನ್ನಬಹುದು ಬಳ್ಳಾರಿ ರಾಯಚೂರುಗಳನ್ನು ದಾಟಿ ಮೈಸೂರು, ಬೆಂಗಳೂರು, ಧಾರವಾಡ, ಗುಲ್ಬರ್ಗಗಳ ಕಡೆಗೂ ಅನೇಕ ಹರಿದಾಸರು ಆಗಿಹೋಗಿದ್ದಾರೆ–ಈಗಲೂ ಇದ್ದಾರೆ. ತುಮಕೂರಿನ ಬಳಿಯ ದೇವರಾಯದುರ್ಗದಲ್ಲಿ ದಾಸಕೂಟ ಸಭೆಯನ್ನು ಸ್ಥಾಪಿಸಿ, ಬಹುಕಾಲ ಅಲ್ಲಿದ್ದು ಸಾವಿರಕ್ಕೂ ಹೆಚ್ಚು ಮಂದಿ ಶಿಷ್ಯರನ್ನು ಹೊಂದಿದ್ದ ಶ್ರೀ ಪರಮಪ್ರಿಯ ಸುಬ್ಬರಾಯದಾಸರು ಅವರ ಶಿಷ್ಯ ಪ್ರಶಿಷ್ಯ ವರ್ಗದವರಿಂದ ಬಹುವಾಗಿ ದಾಸಸಾಹಿತ್ಯ ಬೆಳೆದಿದೆ.

ಸದ್ಯ ಪ್ರಕಟವಾಗುತ್ತಿರುವ ಕೃತಿಗಳು ಅವರ ಶಿಷ್ಯವರೇಣ್ಯರಾದ ಚಿತ್ರದುರ್ಗದ ಶ್ರೀ ಮ. ಶ್ರೀನಿವಾಸರಾಯರ (ಶ್ರೀ ಉರಗಾದ್ರಿವಾಸ ವಿಠಲದಾಸರ)ದೇ ಆಗಿವೆ

ಶ್ರೀ ವಿಜಯದಾಸರ ನೇತೃತ್ವದಲ್ಲಿ ಸಂವರ್ಧನೆಗೊಂಡ ದಾಸಪಂಥ ಒಂದು ತಿರುವನ್ನು ಪಡೆಯಿತು; ಒಂದು ಕ್ರಮ–ಶಿಸ್ತು ಅದಕ್ಕೆ ಬಂದಿತೆನ್ನಬಹುದು. ಶಿಷ್ಯನ ಯೋಗ್ಯತೆಯನ್ನರಿತು ಗುರುಗಳು ಆತನ ಬಿಂಬಮೂರ್ತಿಯನ್ನು ಗುರುತಿಸಿ ಅಂಕಿತವೆಂದಿತ್ತು, ಆ ಅಂಕಿತದಿಂದ ಪ್ರಾರಂಭವಾಗಿ, ಗುರುಗಳ (ಕೃತಿಕಾರರ) ಅಂಕಿತದಿಂದ

ಪರಮಾತ್ಮನಾಗುವ ಮೂರು, ಐದು, ಏಳು ನುಡಿಗಳ ಪದವನ್ನು 'ಅಂಕಿತಪದ'ವನ್ನಾಗಿ ರಚಿಸಿ, ಶಿಷ್ಯನ-ಸಾಧಕನ ಉಪಾಸನೆಗಾಗಿ ಕೊಡುವ ಪದ್ಧತಿ, ಈ ಕಾಲದಲ್ಲಿ ರೂಢಿಗೆ ಬಂದಿತು. ಕೆಲವರಿಗೆ ಅದು ದೈವದತ್ತವಾಗಿಯೇ ದೊರಕಿರುವುದೂ ಉಂಟು. ಸಾಕ್ಷಾತ್ ಶ್ರೀ ವಿಜಯದಾಸರಿಗೆ ಅದು ದೂರದ ವ್ಯಾಸಕಾಶಿಯಲ್ಲಿ, ವಿಜಯವಿಠಲ ಎಂಬ ಅಂಕಿತ, ತೈಜಸರೂಪೀ ಪರಮಾತ್ಮನಿಂದ ಶ್ರೀ ಪುರಂದರದಾಸರ ಮೂಲಕ, ಕೇವಲ ಅನಿರೀಕ್ಷಿತವಾಗಿ ಸ್ವಪ್ನದಲ್ಲಿ ನಾಲಿಗೆಯ ಮೇಲೆ ಬರೆಯುವುದರ ಮೂಲಕ ದೊರೆಯಿತು! ಅವರು ಅನಂತರ ಭಾಗಣ್ಣನವರೇ ಮೊದಲಾದವರಿಗೆ ಅಂಕಿತ ಪದ ರಚಿಸಿ ಹರಿದಾಸ ದೀಕ್ಷೆಯನ್ನಿತ್ತರು. ಶ್ರೀಬ್ಯಾಗವಟ್ಟಿ ಶ್ರೀನಿವಾಸಾಚಾರ್ಯರಿಗೆ ಪಂಢರಪುರದಲ್ಲಿ ಚಂದ್ರಭಾಗ ನದಿಯಲ್ಲಿ ಗುರುಗಳ ಭವಿಷ್ಯ ನುಡಿ-ಸೂಚನೆಯಂತೆ- ಅವ್ಯಕ್ತ ಪಾಂಡುರಂಗ ವಿಠಲನಿಂದಲೇ ಶುಭ್ರ ಸ್ಫಟಿಕ ಶಿಲಾಫಲಕದ ಮೂಲಕವಾಗಿ "ಶ್ರೀ ಜಗನ್ನಾಥವಿಠಲ" ಎಂಬ ಅಂಕಿತ ದೊರೆತ ವಿಷಯ ಪ್ರಸಿದ್ಧವಾಗಿದೆ. ಈ ಅಂಕಿತ ಶಿಲೆ ಈಗಲೂ ಆ ಘಟನೆಗೆ ಸಾಕ್ಷಿಯಾಗಿದೆ. (ಆದರೆ ಅದು ಕರ್ನಾಟಕದ ಗಡಿಯನ್ನು ದಾಟಿದೆ!) ಇವರು ವಿಜಯದಾಸರ ಶಿಷ್ಯ ಶ್ರೀ ಗೋಪಾಲದಾಸರ ಶಿಷ್ಯರು.

ಶ್ರೀ ವಿಜಯದಾಸರ ಶಿಷ್ಯಪರಂಪರೆಯೇ ಈಗಲೂ ನಡೆಯುತ್ತಿರುವುದು. ಶ್ರೀ ವಿಜಯದಾಸರ ಏಳನೆಯ ತಲೆಮಾರಿನ ಶಿಷ್ಯರು ಶ್ರೀನಿಧಿವಿಠಲಾಂಕಿತರಾದ ದೀಪದ ಅಣ್ಣಯ್ಯಾಚಾರ್ಯರು. ಇವರ ಶಿಷ್ಯರು ಶ್ರೀ ವರವಿಠಲಾಂಕಿತರಾದ ಶ್ರೀ ಸೌದಿ ರಾಮಚಂದ್ರಪ್ಪನವರು. (ಕ್ರಿ.ಶ. 1875) ಇವರ ಶಿಷ್ಯರು ಮುದ್ದುಮೋಹನ ವಿಠಲಾಂಕಿತರಾದ ದೊಡ್ಡ ಬಳ್ಳಾಪುರದ ಶ್ರೀ ರಾಘವೇಂದ್ರದಾಸರು. (ಕ್ರಿ.ಶ. 1898) ಇವರ ಶಿಷ್ಯರು ತಂದೆ ಮುದ್ದುಮೋಹನ ವಿಠಲಾಂಕಿತ, ಪರಮ ಪ್ರಿಯ ಬಿರುದಾಂಕಿತ ಶ್ರೀ ನರಸೀಪುರದ ಸುಬ್ಬರಾಯದಾಸರು. (ದೇವರಾಯನದುರ್ಗದ ದಾಸರು) ಕ್ರಿ.ಶ. 1865--1940.

ಪರಮ ಪ್ರಿಯರ ಶಿಷ್ಯೋತ್ತಮರೇ ಉರಗಾದ್ರಿವಾಸ ವಿಠಲಾಂಕಿತರಾದ ಸಚ್ಚರಿತ್ರ ನ್ಯಾಯಕರಾದ ಶ್ರೀ ಮ. ಶ್ರೀನಿವಾಸರಾಯರು. (ಚಿತ್ರದುರ್ಗ)-ಕ್ರಿ.ಶ. 1871 -1964. ಎಂದರೆ ಶ್ರೀ ವಿಜಯದಾಸರಿಂದ ಇವರು ಹನ್ನೆರಡನೆಯ ತಲೆಯವರು ಎಂದಂತಾಯಿತು.

ಕ್ರಿ. ಶ. ೨೦ ನೆಯ ಶತಮಾನದಲ್ಲಿ ದಾಸಸಾಹಿತ್ಯದ ಬೆಳವಣಿಗೆ ವಿವಿಧವೂ ವಿಶಿಷ್ಟವೂ ಆಗಿದೆ. ದಾಸ ಪೀಳಿಗೆಯ ಪರಂಪರೆಯನ್ನನುಸರಿಸಿ ಛಂದೋಬದ್ಧವಾಗಿ ಸಂಗೀತ ಶಾಸ್ತ್ರಕ್ಕನುಸರಿಸಿ ರಾಗ ತಾಳ ಲಯ ಬದ್ಧವಾಗಿ ಹಾಡಲನುಕೂಲವಾದ ಕೃತಿಗಳ ರಚನೆ ಒಂದುಕಡೆ ಆಗುತ್ತಿದ್ದರೆ, ಮತ್ತೊಂದುಕಡೆ ದಾಸಸಾಹಿತ್ಯದ ಉಗಮ, ಬೆಳವಣಿಗೆ, ಸಂಕೇತ, ಉಪಕಾರ, ಹರಿದಾಸರ ಜೀವನ ಚರಿತ್ರೆಗಳು

ವ್ಯಕ್ತಿತ್ವಗಳನ್ನು ಕುರಿತು ವಿಮರ್ಶಾತ್ಮಕ, ಸಮೀಕ್ಷಾತ್ಮಕ ಪ್ರಬಂಧ—ಮಹಾ ಪ್ರಬಂಧಗಳು—ಹೀಗೆ ಈಗಿನ ಸಾಹಿತ್ಯ ಸೃಷ್ಟಿ, ವಿಶಾಲವಾಗಿಯೂ, ವಿಶ್ಲೇಷಣಾತ್ಮಕವಾಗಿಯೂ, ಆಳವಾಗಿಯೂ, ನೂತನ ದೃಷ್ಟಿಯುಳ್ಳದ್ದಾಗಿಯೂ, ಪರಿಚಯಾತ್ಮಕವಾಗಿಯೂ, ಇರುವುದನ್ನು ಗಮನಿಸಬಹುದು.

ಪ್ರಾಚೀನ ಸಾಹಿತ್ಯವನ್ನು ಸಂಗ್ರಹಿಸಿ, ಗ್ರಂಥಸಂಪಾದನ ಶಾಸ್ತ್ರಕ್ಕನುಸರಿಸಿ ಸಂಪಾದಿಸಿ ಪ್ರಕಟಿಸುವ ಕಾರ್ಯವೂ ಆಗಿದೆ. ಮೊದಮೊದಲು ಕೇವಲ ಸಂಗ್ರಹವಾಗಿದ್ದುದು ಈ ಹೊಸ ತಿರುವನ್ನು ಅದು ಪಡೆದಿದೆ. ವಿಮರ್ಶೆಯ ರೂಪದಲ್ಲಿ ದಾಸ ಸಾಹಿತ್ಯಾವಲೋಕನ ಕಾರ್ಯವೂ ಆಗಿದೆ. ಈ ಕಾರಣದಿಂದ ಈ ಶತಮಾನದಲ್ಲಿ ನಡೆದಿರುವ ಕಾರ್ಯ ಪ್ರಶಂಸಾರ್ಹವಾಗಿದೆ ಎಂದು ಸಂತೋಷದಿಂದ ಹೇಳಬಹುದಾಗಿದೆ.

ಈ ಮಾತಿಗೆ ಉದಾಹರಣೆಯಾಗಿ ಸಾಕ್ಷಿಯಾಗಿ ಹಲವು ಕೃತಿಗಳನ್ನು ಉಲ್ಲೇಖಿಸಬಹುದು. ಈ ವಲಯದಲ್ಲಿ ಬಹುಶ ಪ್ರಥಮ ಕೃತಿ ಬೇಲೂರು ಕೇಶವದಾಸರ ಕರ್ನಾಟಕ ಭಕ್ತವಿಜಯ, ಹರಿದಾಸಸಾಹಿತ್ಯ ಎಂಬ ಹೊತ್ತಿಗೆಗಳು. ಅನಂತರ ಅನೇಕ ಕೃತಿಗಳು ಹೊರಬಂದುವು. ಡಾ॥ ರಂ. ಶ್ರೀ ಮುಗಳಿ ಅವರ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹರಿದಾಸಸಾಹಿತ್ಯಕ್ಕೆ ಸಂಬಂಧಪಟ್ಟಭಾಗ; ಡಾ॥ ಎಚ್. ಕೆ. ವೇದವ್ಯಾಸಾಚಾರ್ಯರ ಕರ್ನಾಟಕ ಹರಿದಾಸರು; ಡಾ॥ ಕೆ. ಎಂ. ಕೃಷ್ಣರಾವ್ ಅವರ ಶ್ರೀ ಜಗನ್ನಾಥದಾಸರು; ಡಾ॥ ಎ. ಟಿ. ಪಾಟೀಲರ ಪ್ರಸನ್ನ ವೆಂಕಟದಾಸರು, ಶ್ರೀ ಹಲಗೂರು ಕೃಷ್ಣಾಚಾರ್ಯರ ಕರ್ನಾಟಕ ಸಂಗೀತವೂ ದಾಸಕೂಟವೂ; ಶ್ರೀ ವರದಿ ಭೀಮಾಚಾರ್ಯರ ದಾಸಕೂಟದ ಅರುಣೋದಯ; ದಾಸಸಾಹಿತ್ಯ – ದ್ವಿತೀಯ ಘಟ್ಟದ ಸಾಧನೆ; ಶ್ರೀ ರಾಸ್ವಾ ಪಂಚಮುಖಿ ಅವರ ಹರಿದಾಸಸಾಹಿತ್ಯ; ಶ್ರೀ ಕಟ್ಟೇ ಶೇಷಾಚಾರ್ಯರ ಕವಿ ಕನಕದಾಸರು; ಶ್ರೀ ಎಂ.ಆರ್. ಗೋವಿಂದರಾವ್ ಅವರ ಹರಿಭಕ್ತಿ ವಿಜಯ (ನಾಲ್ಕು ಭಾಗಗಳು); ಡಾ॥ ಜಿ. ವರದರಾಜರಾವ್ ಅವರ ಹರಿದಾಸ ಹೃದಯ; ಡಾ॥ ಕೆ. ಗೋಕುಲನಾಥ್ ಅವರ ಶ್ರೀ ವಿಜಯದಾಸರು; ಹರಿದಾಸ ಭಾರತಿ ಸುಬೋಧ, ಅನೇಕ ಸ್ಮರಣ ಸಂಚಿಕೆಗಳು ಜಯಂತಿ ಜೀವನಪರಿಮಳ, ಜಯಕರ್ನಾಟಕ, ಪ್ರಬುದ್ಧ ಕರ್ನಾಟಕ ಕನ್ನಡನುಡಿ, ಉರಗಾದ್ರಿವಾಸ ವಿಠಲ ಪ್ರಕಾಶನಗಳು—ಹೀಗೆ ಅನೇಕ ಪುಸ್ತಕಗಳನ್ನು ಈ ದಿಶೆಯಲ್ಲಿ ಗಮನಿಸಬಹುದಾಗಿದೆ. ಇಲ್ಲೆಲ್ಲಾ ಹರಿದಾಸರ ಜೀವನ ಮತ್ತು ವ್ಯಕ್ತಿತ್ವ ಸಾಧನೆ ಮತ್ತು ಕೃತಿಗಳ ಸಮೀಕ್ಷೆ ನಡೆದಿರುವುದನ್ನು ಕಾಣಬಹುದು.

ಇವುಗಳಲ್ಲದೆ ಹರಿದಾಸರ ಅನೇಕ ಕೃತಿಗಳನ್ನು ಶಾಸ್ತ್ರೀಯ ರೀತಿಯಲ್ಲಿ ಸಂಪಾದಿಸಿ ಅಚ್ಚುಕಟ್ಟಾಗಿ ಪ್ರಕಟಿಸಲಾಗಿದೆ. ಈ ನಿಟ್ಟಿನಲ್ಲಿ ಗಮನಿಸಬಹುದಾದ ಹಲವು ಹೊತ್ತಗೆಗಳಿವೆ. ಮೈಸೂರು ವಿಶ್ವವಿದ್ಯಾಲಯದ ಅಧ್ಯಯನ ಸಂಸ್ಥೆ ಪ್ರಕಟ

ಸಿರುವ ಶ್ರೀ ಶ್ರೀಪಾದರಾಜರ ಕೃತಿಗಳು, ಶ್ರೀ ಮಹೀಪತಿದಾಸರ ಕೃತಿಗಳು, ಶ್ರೀ ವಾದಿರಾಜರ ಕೃತಿಗಳು, ಶ್ರೀ ಗೋಪಾಲದಾಸರ ಕೃತಿಗಳು; ಪುರಂದರದಾಸರ ಚತುಶ್ಶತಮಾನ ಸಮಿತಿಯವರು ಪ್ರಕಟಿಸಿರುವ ಪುರಂದರದಾಸರ ಕೃತಿಗಳು—ಹಾಗೇ ಕನಕದಾಸರ ಕೃತಿಗಳು; ಡಾ॥ ಕೆ. ಎಂ. ಕೃಷ್ಣರಾವ್ ಅವರ ಹರಿಕಥಾಮೃತಸಾರ, ಕನಕದಾಸರ ಕೃತಿಗಳು, ಹರಿಭಕ್ತಿಸಾರ, ಜಗನ್ನಾಥದಾಸರ ಕೃತಿಗಳು, ಹನುಮದ್ವಿಲಾಸ, ಹರಿದಾಸಭಾರತೀ ಪ್ರಕಟಣೆಗಳು (ಉಗಾಭೋಗಗಳು, ತತ್ವಸುವಾಲಿಗಳು ಇತ್ಯಾದಿ). ಅಲ್ಲದೆ ಹರಿದಾಸ ಕೀರ್ತನ ತರಂಗಿಣಿಮಾಲೆಯಲ್ಲಿ ಶ್ರೀ ಸುಬೋಧ ಅವರ ಪ್ರಕಟಣೆಗಳು—ಉಡುಪಿ ಪಾವಂಜೆ ಗುರುರಾವ್ ಮತ್ತು ವರದೇಂದ್ರ ಹರಿದಾಸ ಸಾಹಿತ್ಯ ಮಾಲೆಯ ಪ್ರಕಟಣೆಗಳು.

ಇವುಗಳಲ್ಲದೆ ಬಿಡಿ ಲೇಖನಗಳು ಬಹು ಸಂಖ್ಯೆಯಲ್ಲಿ—ಪತ್ರಿಕೆಗಳಲ್ಲಿ ಸಂಭಾವನಾಗ್ರಂಥಗಳಲ್ಲಿ, ಸ್ಮರಣ ಸಂಚಿಕೆಗಳಲ್ಲಿ ಪ್ರಕಟವಾಗಿವೆ. ಈ ಬಗೆಯ ವಿಮರ್ಶಾತ್ಮಕ ಲೇಖನಗಳು ಈ ಶತಮಾನದ ವೈಶಿಷ್ಟ್ಯ. ದಾಸಸಾಹಿತ್ಯದ ಬೆಳವಣಿಗೆಯಲ್ಲಿ ಇದೊಂದು ಹೊಸ ಗಮನಾರ್ಹವಾದ ಸಾಧನೆ.

ಇತ್ತೀಚಿಗೆ ತಿರುಮಲ ತಿರುಪತಿ ದೇವಸ್ಥಾನದ ಆಡಳಿತ ಮಂಡಳಿ ದಾಸ ಸಾಹಿತ್ಯ ಯೋಜನೆ ಎಂಬ ಹೊಸಶಾಖೆಯನ್ನೇ ತೆರೆದು ಅನೇಕ ಉಪಯುಕ್ತ ಕೃತಿಗಳನ್ನು ಪ್ರಕಟಿಸುವ ಆಕಾಂಕ್ಷೆ ಹೊಂದಿದ್ದು ಕಾರ್ಯಪ್ರವೃತ್ತವಾಗಿದೆ. ಅಲ್ಲದೆ ಅವರು ಸುಮಾರು ಒಂದು ಲಕ್ಷರೂಪಾಯಿ ವೆಚ್ಚದಲ್ಲಿ ಸಿದ್ಧಪಡಿಸಿರುವ ನಕ್ಷೆಗಳು ಚಿತ್ರಗಳು ಶಿಲ್ಪಗಳು ತೈಲಚಿತ್ರಗಳು, ತದ್ ವಿವರಣೆಗಳುಳ್ಳ ಒಂದು ಪ್ರದರ್ಶನವನ್ನು ದೇಶದ ಅನೇಕ ಸ್ಥಳಗಳಲ್ಲಿ ಏರ್ಪಡಿಸುತ್ತಿರುವುದು ದಾಸಸಾಹಿತ್ಯದ ಪ್ರಚಾರಕ್ಕೆ—ತಿಳುವಳಿಕೆಗೆ ತುಂಬ ಸಹಾಯಕವಾಗುವ ಮಹತ್ಕಾರ್ಯವಾಗಿದ್ದು, ಇದರಿಂದ ಬಹು ಮಂದಿ ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಈ ಪ್ರದರ್ಶನದ ಜೊತೆಯಲ್ಲೇ ಅವರು ದಾಸಸಾಹಿತ್ಯದ ವಿವಿಧ ಮುಖಗಳನ್ನು ಕುರಿತು ಉಪನ್ಯಾಸಮಾಲೆಯನ್ನು ಏರ್ಪಡಿಸುತ್ತಿರುವುದು ಪ್ರಶಂಸಾರ್ಹ ಕಾರ್ಯವಾಗಿದೆ. ತಿ.ತಿ.ದೇ. ಯವರ ಈ ಸಂಚಾರೀ ಪ್ರದರ್ಶನಾಲಯ (Mobile Exhibition) ಮತ್ತು ವಿದ್ವಾಂಸರಿಂದ ಉಪನ್ಯಾಸಮಾಲೆ, ದಾಸಸಾಹಿತ್ಯ ಪ್ರಕಟಣೆ ಎಂಬ ತ್ರಿದಳಾತ್ಮಕವಾದ ಕಾರ್ಯ ದಾಸ ಸಾಹಿತ್ಯ ಯೋಜನೆಯ ಪ್ರಮುಖ ಅಂಗವಾಗಿದೆ. ಹೈದರಾಬಾದ್ ತಿರುಪತಿ, ವಿಶಾಖಪಟ್ಟಣ, ಬೆಂಗಳೂರು, ಬಳ್ಳಾರಿ, ಬೊಂಬಾಯಿ, ಚಿತ್ರದುರ್ಗ, ಗಂಗಾವತಿ, ಉಡುಪಿ ಮುಂತಾದ ಸ್ಥಳಗಳಲ್ಲಿ ಈ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆದಿವೆ. ಹರಿದಾಸರ ವಿವಿಧ ಕಲೆಗಳ ಸಾಧನೆಯ ಚಿತ್ರ ಇಲ್ಲಿ ನಮಗೆ ದೊರೆಯುತ್ತದೆ.

ಪ್ರಸ್ತುತ ಪ್ರಕಟಣೆ—ಶ್ರೀ ಉರಗಾದ್ರಿವಾಸ ವಿಠಲದಾಸರ ಜೀವನ ಮತ್ತು ಕೃತಿಗಳು ಎಂಬುದು ಕೂಡ ತಿರುಮಲ ತಿರುಪತಿ ದೇವಸ್ಥಾನದವರ ದಾಸಸಾಹಿತ್ಯ ಯೋಜನೆಯ ಆಶ್ರಯದಲ್ಲೇ ಹೊರ ಬರುತ್ತಿರುವುದು.

ಮೇಲೆ ವಿವರಿಸಿದಂತೆ ಶ್ರೀ ವಿಜಯದಾಸರ ಶಿಷ್ಯಪೀಳಿಗೆಯಲ್ಲಿ ಬಂದ ಹನ್ನೆರಡನೆಯ ತಲೆಯವರಾದ ಶ್ರೀ ಉರಗಾದ್ರಿವಾಸ ವಿಠಲಾಂಕಿತ ಹರಿದಾಸರ ಲೌಕಿಕ ನಾಮವು—ತಾಯಿ, ತಂದೆಗಳು ಅಕ್ಕರೆಯಿಂದ ನಾಮಕರಣೋತ್ಸವದಲ್ಲಿಟ್ಟ ಹೆಸರ ಶ್ರೀನಿವಾಸ ಎಂದು. ಮುಂದೆ ಲೌಕಿಕವಾಗಿ ಪ್ರಸಿದ್ಧವಾದ ಹೆಸರು ಮಳವಳ್ಳಿ ಶ್ರೀನಿವಾಸರಾವ್ ಎಂದು. ಮಳವಳ್ಳಿ ಪುರುಷೋತ್ತಮರಾಯರ ಮಗ ಶ್ರೀಕೃಷ್ಣರಾಯರು. ಇವರ ಮಗ ಎ.ವಿ ಸ್ಕೂಲಿನ ಉಪಾಧ್ಯಾಯ ಶ್ರೀ ಎಂ. ಸ್ವಾಮಿರಾವ ಅವರ ಪತ್ನಿ ಶ್ರೀಮತಿ ರಾಧಾಬಾಯಿ ದಂಪತಿಗಳಿಗೆ ನಾಲ್ಕು ಮಂದಿ ಗಂಡುಮಕ್ಕಳ ಮತ್ತು ಇಬ್ಬರು ಹೆಣ್ಣುಮಕ್ಕಳು ರಾಘವೇಂದ್ರರಾವ್, ರಾಮರಾವ್, ಶ್ರೀನಿವಾಸರಾವ್ ಮತ್ತು ಶ್ರೀಧರರಾವ್; ಕೃಷ್ಣಾಬಾಯಿ ಮತ್ತು ಜೀವೂಬಾಯಿ.

ಶ್ರೀ ಮ. ಶ್ರೀನಿವಾಸರಾಯರ ಜನ್ಮಸ್ಥಳ ಶಿವಮೊಗ್ಗ ಜಿಲ್ಲೆಯ, ತುಂಗೆಯ ತಡಿಯ ಹೊಳೆಹೊನ್ನೂರು. ಜನ್ಮದಿನ ಕ್ರಿ.ಶ. 6–2–1871 ಯುವ ಸಂವತ್ಸರ ಮಾಘ ಶುದ್ಧ ಏಕಾದಶಿ. ಶ್ರೀಮದುತ್ತರಾದಿ ಮಠದ ಪೀಠಸ್ಥ ಯತಿವರೇಣ್ಯ ಶ್ರೀ ಸತ್ಯಧರ್ಮ ತೀರ್ಥ ಶ್ರೀಪಾದಂಗಳವರ ದಿವ್ಯ ವೃಂದಾವನ ಸನ್ನಿಧಾನ ಇರುವ ಕಟ್ಟೆಹದ ಬೀದಿಯಲ್ಲೇ ಇವರ ಶೈಶವ ಬಾಲ್ಯ ದಿನಗಳು ಕಳೆದುವು.

ಮಾತಾಪಿತೃಗಳ ಅತಿಮ ವಾತ್ಸಲ್ಯದ ಪರಿಣಾಮವೋ, ಇವರಿಗೆ ಒಂಭತ್ತು ವರ್ಷ ತುಂಬುವತನಕ ವಿದ್ಯಾಭ್ಯಾಸವೇ ಪ್ರಾರಂಭವಾಗಲಿಲ್ಲ! ಆ ಮೇಲೂ ಅನೇಕ ಎಡರುತೊಡರುಗಳು ಬಂದು ವಿದ್ಯಾಭ್ಯಾಸಕ್ಕೆ ವಿಘ್ನಗಳೊದಗಿ ಸಮರ್ಪಕವಾಗಿ ನಡೆಯಲಿಲ್ಲ. ಹದಿನಾಲ್ಕನೆಯ ವಯಸ್ಸಿನಲ್ಲಿ ತೀರ್ಥರೂಪರವರು ತೀರಿಕೊಂಡರು. ತಂದೆಯ ಮರಣದ ಪರಿಣಾಮವಾಗಿ, ಮೊದಲೇ ಇದ್ದ ದಾರಿದ್ರ್ಯ ಪರಿಸ್ಥಿತಿ ಇನ್ನೂ ಉಲ್ಬಣವಾಗಿ ಬಾಲಕ ಬಳಲ ಬೇಕಾಯಿತು. ಬಹು ಕಷ್ಟದಿಂದ ಬಂಧುಗಳ ಮನೆಯಲ್ಲಿದ್ದುಕೊಂಡು ವ್ಯಾಸಂಗಿಸಿ ಅಂದಿನ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ, ನಾರ್ಮಲ್ ಸ್ಕೂಲ್ ಅಧ್ಯಾಪಕ ತರಬೇತಿ ಪಡೆದು ಕೆಲವುದಿನಗಳ ಅನಂತರ ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿಗೆ ಸೇರಿದ ಕಳೂರುಕಟ್ಟೆಯ ಪ್ರಾಥಮಿಕ ಶಾಲೆಯಲ್ಲಿ ಅಧ್ಯಾಪಕರಾಗಿ ನೇಮಕ ಪಡೆದರು. ಸಂಬಳ ಒಂದು ತಿಂಗಳಿಗೆ ಏಳುರೂಪಾಯಿ!

ಅನಂತರ ಸ್ವಂತ ಪರಿಶ್ರಮದಿಂದ ಉತ್ಸಾಹದಿಂದ ಡ್ರಾಯಿಂಗ್ ಕಲಿತು ಮತ್ತು ಅಪ್ಪರ್ ಸೆಕೆಂಡರಿ ಪರೀಕ್ಷೆಯಲ್ಲಿ ಡ್ರಾಯಿಂಗ್ ವಿಷಯದಲ್ಲಿ ವಿಶೇಷ ಪರಿಣತಿ ಹೊಂದಿ ತೇರ್ಗಡೆಯಾದರು.

ಇದರ ಪರಿಣಾಮವಾಗಿ ಅದೇ ಕಳೂರು ಕಟ್ಟೆಯಲ್ಲಿನ ಮಾಧ್ಯಮಿಕ ಶಾಲೆಯ ಉಪಾಧ್ಯಾಯರಾದರು. ಸಂಬಳ ಹದಿನೈದು ರೂಪಾಯಿಗಳಿಗೆ ಏರಿತು! ಆ ಕಾಲದಲ್ಲೇ

ಇವರ ಮನಃಪ್ರವೃತ್ತಿ ಹೆಚ್ಚಾಗಿ ಆಧ್ಯಾತ್ಮಿಕದ ಕಡೆಗೆ ತಿರುಗಿ ಅಂತಹವರ ಸಂಗವನ್ನೇ ಅರಿಸಿ ಪಡೆದುಕೊಂಡು ಜ್ಞಾನದ ಬೆಳವಣಿಗೆಗೆ ಗಮನವಿತ್ತುದು.

ಆ ಕಾಲದಲ್ಲಿ ಇವರ ಅಧ್ಯಾತ್ಮ ಪ್ರವೃತ್ತಿಗೆ ಪುಟವಿತ್ತು ಜ್ಞಾನಗಳಿಗೆ ಕಾರಣರಾದವರು ಅದೇ ಊರಿನಲ್ಲಿದ್ದ ಹೆಡ್‌ಮುನಿಷಿ ಕೃಷ್ಣರಾಯರೆಂಬುವರು. ಈ ಅಧ್ಯಾತ್ಮ ಚಿಂತನೆ–ವ್ಯಾಸಂಗಗಳಿಂದ ಅವರಿಗೆ ಚಿತ್ತಶಾಂತಿ ದೊರೆಯಿತು.

ಅದೇ ಊರಿನಲ್ಲಿದ್ದಾಗ ಒಮ್ಮೆ ಶಿವಗಂಗಾ ಸ್ವಾಮಿಗಳು ಕಳಲೂರು ಪಟ್ಟಿಗೆ ಸಂಚಾರಕ್ಷೇನ ಆಗಮಿಸಿ ಪ್ರವಚನ ಮಾಡಿದರು. ಶ್ರೀ ಶ್ರೀನಿವಾಸರಾಯರು ಅಲ್ಲಿ ಹಾಜರಿದ್ದು ಶ್ರೀಗಳವರ ಪ್ರವಚನವನ್ನು ಆಲಿಸಿ ಕೆಲವು ಪ್ರಶ್ನೆಗಳನ್ನು ಕೇಳಿದರು–ಸಂಭಾಷಣೆಯೂ ನಡೆಯಿತು. ಸ್ವಾಮಿಗಳು ಇವರ ತತ್ತ್ವಜ್ಞಾನ ತೀಕ್ಷ್ಣಬುದ್ಧಿ ಶಕ್ತಿಗಳನ್ನು ಬಹುವಾಗಿ ಪ್ರಶಂಸಿಸಿ ತುಂಬ ಸಂತೋಷದಿಂದ ಇವರನ್ನು ಸನ್ಮಾನಿಸಿದರು.

ಕೆಲವು ದಿನಗಳ ಅನಂತರ ತಮ್ಮ ಅಕ್ಕ ಜೀವೂಬಾಯಿ ಭಾವ ಶ್ರೀ ಧನ್ವಂತ್ರಿ ಹನುಮಂತರಾಯರು ಈ ದಂಪತಿಗಳ ಜ್ಯೇಷ್ಠ ಪುತ್ರಿ ಸೌ॥ ತುಂಗಾಬಾಯಿಯವರನ್ನು ರಾಯರು ಲಗ್ನವಾದರು.

ಶ್ರೀನಿವಾಸರಾವ್–ತುಂಗಾಬಾಯಿ ದಂಪತಿಗಳಿಗೆ ಮೂವರು ಹೆಣ್ಣುಮಕ್ಕಳು ಮಾತ್ರ–ಶ್ರೀಮತಿ ಪದ್ಮಾವತಿಬಾಯಿ, ಕಮಲಾಬಾಯಿ ಮತ್ತು ವನಜಾಬಾಯಿ ಎಂದು. ಪುತ್ರಸಂತಾನವಿಲ್ಲ. ಸದ್ಯ ಕೊನೆಯವರಾದ ವನಜಾಬಾಯಿ ಮಾತ್ರ ಜೀವಂತರಿದ್ದಾರೆ–ಚಿತ್ರದುರ್ಗದಲ್ಲೇ.

ಉಪಾಧ್ಯಾಯವೃತ್ತಿ ಈ ಕಾಲದಲ್ಲೂ ಅಷ್ಟೇನೂ ಆಕರ್ಷಕವಲ್ಲ. ಆರ್ಥಿಕ ದೃಷ್ಟಿಯಿಂದಂತೂ ಅದು ತೀರ ನಿಜವಾದ ಮಾತು. ಅದರಲ್ಲೂ ಪ್ರಾಥಮಿಕ–ಮಾಧ್ಯಮಿಕ ಶಾಲೆಗಳ ಅಧ್ಯಾಪಕರ ಪಾಡಂತೂ ಹೇಳುವುದೇ ಬೇಡ. ಹಿಂದೆ ಅಲ್ಪ ಸ್ವಲ್ಪ ಸ್ಥಾನಮಾನಗಳಾದರೂ ಇದ್ದುವು. ಈಗ ಅದೂ ಮಾಯ. ಆ ಕಾಲದಲ್ಲಂತೂ ಧ್ಯಾಪಕವರ್ಗಕ್ಕೆ ಅತ್ಯಂತ ಕನಿಷ್ಠ ವೇತನವಿತ್ತು. ಮೂವತ್ತು ವರ್ಷ ಸರಕಾರೀ ಲೆಗಳಲ್ಲಿ ನಿರ್ವಂಚನೆಯಿಂದ ಶ್ರದ್ಧೆಯಿಂದ ದುಡಿದು, ಪ್ರಭಾವೀ ಉಪಾಧ್ಯಾಯರು ಂದು ಸಹೋದ್ಯೋಗಿಗಳಿಂದ, ಅಧಿಕಾರಿಗಳಿಂದ, ವಿದ್ಯಾರ್ಥಿಗಳಿಂದ ಪ್ರಶಂಸೆ ಡೆದ ಶ್ರೀ ಶ್ರೀನಿವಾಸರಾಯರ ನಿವೃತ್ತಿವೇತನ ಹನ್ನೊಂದೂಕಾಲು ರೂಪಾಯಿ !

ಅಲ್ಪವರಮಾನದಲ್ಲಿ ಐದಾರು ಮಂದಿಗಳುಳ್ಳ ಸಂಸಾರವನ್ನು "ಯದೃಚ್ಛಾ ಲಾಭ ಸಂತುಷ್ಟಿ" ಎಂಬ ಅಧ್ಯಾತ್ಮ ದೃಷ್ಟಿ ವೈಶಾಲ್ಯದಿಂದ, ವೈರಾಗ್ಯದಿಂದ

ಘಾಲಲಿಪಿಗೆ ಮನಸೋಯದೆ, ನೆರೆಹೊರೆಯವರನ್ನು ನೋಡಿ ಕರುಬದೆ-ಕಾದಿಯದೆ ಸಮಚಿತ್ತರಾಗಿ ಸರಳ ಜೀವನವನ್ನು ನಡೆಸಿದರು ಶ್ರೀನಿವಾಸರಾಯರು.

ಲೌಕಿಕ ದೃಷ್ಟಿಯಿಂದ ಅವರ ವಿದ್ಯಾಭ್ಯಾಸದ ಮಟ್ಟ ದೊಡ್ಡದಾಗದಿದ್ದರೂ, ಅವರ ಸ್ವಂತ ಪರಿಶ್ರಮ-ವ್ಯಾಸಂಗ ಶ್ರದ್ಧೆಗಳಿಂದಾಗಿ ಅವರ ಜ್ಞಾನ ಅಧಿಕವಾಗಿದ್ದಿತು. ಕಾವ್ಯಾಭ್ಯಾಸವನ್ನು ಚೆನ್ನಾಗಿ ಮಾಡಿ ಕವನ ರಚಿಸುವ ಕಲೆಯೂ ಅವರಿಗೆ ಕರಗತವಾಗಿದ್ದಿತು. ಕೇಶಿರಾಜನ ಶಬ್ದಮಣಿದರ್ಪಣದ ವ್ಯಾಸಂಗವನ್ನು ಅವರು ಆಳವಾಗಿ ಮಾಡಿದ್ದರು. ಪುರಂದರ ಕನಕ ವಿಜಯ ಗೋಪಾಲ ಜಗನ್ನಾಥ ದಾಸಾರ್ಯರ ಕೃತಿಗಳನ್ನು ಚೆನ್ನಾಗಿ ಮನನ ಮಾಡಿದ್ದರು. ಕುಮಾರವ್ಯಾಸ ಲಕ್ಷ್ಮೀಶರನ್ನು ಚೆನ್ನಾಗಿ ಓದಿಕೊಂಡಿದ್ದರು. ಸಂಸ್ಕೃತಜ್ಞಾನವೂ ಅವರಿಗೆ ಚೆನ್ನಾಗಿದ್ದಿತು. ಇವೆಲ್ಲದರಿಂದ ಬಂದ ಜ್ಞಾನವನ್ನು ಅನುಷ್ಠಾನದಲ್ಲಿ ತರುವ ಸ್ವಭಾವವೂ ಅವರದಾಗಿದ್ದಿತು.

ಶ್ರೀನಿವಾಸರಾಯರು ಅಧ್ಯಾಪಕರಾಗಿ ಕೆಲಸಮಾಡಿದ ಅನೇಕ ಶಾಲೆಗಳಲ್ಲಿ ವಿದ್ಯಾರ್ಥಿಗಳ, ಸಹ ಅಧ್ಯಾಪಕರ ಅನುಕೂಲಕ್ಕಾಗಿ ಅನೇಕ ನಾಟಕಗಳನ್ನು ಬರೆದು ಕೊಡುತ್ತಿದ್ದರು. ಚಂದ್ರಹಾಸ, ಶಾಕುಂತಲ ಮೊದಲಾದುವು ಅವುಗಳಲ್ಲಿ ಪ್ರಮುಖವಾದುವು. ಅನೇಕ ಅವರ ನಾಟಕಗಳು ಶಾಲೆಗಳ ರಂಗಸ್ಥಳದ ಮೇಲೆ ಪ್ರದರ್ಶನವೂ ಆಗಿ ಅನೇಕರ ಪ್ರಶಂಸೆಗೆ ಪಾತ್ರವಾದುವು. ಸ್ವಯಂ ನಾಟಕ ಕಾರರೇ ದುಷ್ಯಂತ ಪಾತ್ರದಲ್ಲಿ ವಿಜೃಂಭಿಸಿ ಖ್ಯಾತಿಯನ್ನೇ ಪಡೆದರು.

ಕಳೂರ ಕಟ್ಟೆಯಿಂದ ಶಿಕಾರಿಪುರಕ್ಕೆ ವರ್ಗವಾಯಿತು—ಕನ್ನಡ ಮಾಧ್ಯಮಿಕ ಶಾಲೆಯ ಮುಖ್ಯೋಪಾಧ್ಯಾಯರಾಗಿ. ಆ ಊರಿನಲ್ಲಿ ಮನೆಯಲ್ಲಿ ಒಂದು ಹಸುವನ್ನು ಕಟ್ಟಿಕೊಂಡರಂತೆ. ಗೋಕ್ಷೀರವನ್ನು ದೇವರ ಅಭಿಷೇಕಕ್ಕಾಗಿ ವಿನಿಯೋಗಿಸುತ್ತಿದ್ದರು. ಗೋಸೇವೆಯಲ್ಲೂ ನಿರತರಾದರು. ಆದರೆ ಕೆಲವು ದಿನಗಳಲ್ಲಿ ಆ ಗೋವು ಅಸುನೀಗಿತು. ಇದರಿಂದ ರಾಯರಿಗೆ ಬಹು ತೀವ್ರವಾದ ದುಃಖವುಂಟಾಯಿತು. ಇದ್ದ ಕರುವನ್ನೂ ದಾನಮಾಡಿ ದುಃಖವನ್ನು ಸಹಿಸಿಕೊಂಡರು. ಚಿಂತನೆಯಿಂದ ಇವರ ಹೃದಯ ಪರಿವರ್ತನೆಯುಂಟಾಯಿತು. ಆಧ್ಯಾತ್ಮಿಕದತ್ತ ಹೆಚ್ಚು ಹೆಚ್ಚು ಮನಸ್ಸು ತಿರುಗಿತು. ಹೃದಯಾಂತರಾಳದಿಂದ ಭಾವನೆಗಳು ಉದ್ಭೂತವಾಗಿ ಕವಿತಾರಚನೆಯ ಕಡೆಗೆ ಮನಸ್ಸಿತ್ತು ಅದರಿಂದ ಆನಂದವನ್ನು ಪಡೆಯುತ್ತಿದ್ದರು. ಆಗ ಅನೇಕ ಕೀರ್ತನೆಗಳು ರಚಿತವಾದುವು.

ತ್ರೈಜಸರೂಪಿ ಪರಮಹಂಸರೂಪದಿಂದ ಸೂಚಿಸಿದ 'ವೇಂಕಟೇಶ' ಎಂಬುದನ್ನೆ ಅಂಕಿತವೆಂದು ಬಳಸಿ ಕುಲದೈವ ಶ್ರೀ ಶ್ರೀನಿವಾಸನ ಪ್ರೀತ್ಯರ್ಥವಾಗಿ ಹಲವು ಕೃತಿಗಳನ್ನು ರಚಿಸಿದರು. ಶಿಕಾರಿಪುರದ ಸುಪ್ರಸಿದ್ಧ ಪ್ರಾಣದೇವರ (ಹುಚ್ಚುರಾಯ)ನ್ನು ವಿಶೇಷವಾಗಿ ಪೂಜಿಸಿದರು.

ವೇಂಕಟೇಶನೆ ಎನ್ನ ಪಾಲಿಪುದೊ
ಕಿಂಕರಾರ್ತಿಹರಣ

ಎಂಬ ಒಂದು ಕೃತಿಯಲ್ಲಿ ಈ ಸ್ವಪ್ನಸೂಚಿತ ಅಂಕಿತಬಗ್ಗೆ ಅವರೇ ಸ್ಪಷ್ಟವಾಗಿ ಹೇಳಿದ್ದಾರೆ.

ಇಂದು ಮಂದವಾರ ಚೈತ್ರ ವತ್ಸರ ಬಹುಧಾನ್ಯ
ಸಂದ ಶುಕ್ಲ ದ್ವಿತೀಯ ಸಂಧ್ಯಾಸವನಾ
ಬಂದು ಕೀರ್ತನ ಸೇವಾನಂತರದೀ ಎನ್ನ
ಮಂದಿರದೊಳು ಸುಪ್ತಾವಸ್ಥೆಯಿಂದಿರಲಾಗ
ಅಂದು ಕಡೆಯ ಯಾಮದಿ ತೈಜಸನೆ ನೀ ಹಂಸ
ರಿಂದೆನ್ನ ಮನಸಂಶಯ ಹರಿಸಿದೆ
ಅರುಣೋದಯದಲೆದ್ದು ಮುದದಿ
ಕರಣಶುದ್ಧನಾಗಿ ತ್ವರಿತದಿ ಸ್ವಪ್ನದ ವಿ
ವರಕಾಗಿ ಹರುಷದಿ ಹರಿಪೂಜಾಕಾಲದಿ ಅರುಹಿದೆ
ಮರುತ ಮಾರುತಿಯಾ ಉನ್ನತ ಚರಿತೆಯಾ
ನಿರುತ ಪಾಡಿ ಪೊಗಳಲಾಯತವಿತ್ತು
ತಿರುಪತಿಶೈಲಾಧಿಪ–ಮಮಕುಲಸ್ವಾಮಿ
ಪಾದಸದ್ಭಕ್ತಿಯನು ಕರುಣಿಸೊ
ಹರಿಗುರುಸೇವೆಯನು ಸರ್ವ ಸದ್ಯೋಗ್ಯ ಸಾಧನವನ್ನು
ಪರಮಹಂಸರು ಇತ್ತ ಶ್ರೀ ವೇಂಕಟೇಶಾಂಕಿತ
ಮಾರುತಿಯಾ ನುತಿಪಾ ನಿಜಹರಿಭಕುತರ
ಚರಣಕಮಲ ಬಂಡುಣಿ ಎಂದೆನಿಸಿ ಇವನಾ
ನಿರುತ ರಕ್ಷಿಸೊ ಉರಗಾದ್ರಿವಾಸ ವಿಠ್ಠಲಾ

ಬೆಟ್ಟದೊಡೆಯ ಶ್ರೀನಿವಾಸ ಅವರ ಇಷ್ಟ ಮಾರುತಿ ಎಂಬುದನ್ನೂ ಪದದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ.

ಬೆಟ್ಟದೊಡೆಯ ಶ್ರೀ ವೇಂಕಟೇಶನೆ ನೀ
ತುಷ್ಟಿಯಾದರೆ ನಿನ್ನಿಷ್ಟದಂತೆ ಫಲವು
ಸೃಷ್ಟಿಯೊಳ್ ಪುಟ್ಟಿಸಿ–ದುಷ್ಟಕರ್ಮದ ಪಾಶ

ಪಟ್ಟನೊಂಬತ್ತನ್ನ ಕಷ್ಟಪಡಿಸುವರೇ
ಸೃಷ್ಟೀಶ ಉರಗಾದ್ರಿವಾಸವಿಠ್ಠಲ ಎನ್ನ
ನಿಟ್ಟುಸಿರುವಷ್ಟು ಕಾಲ ಬಿಟ್ಟು ಭಕುತಿಯ ಕೊಟ್ಟು
ದಿಟ್ಟ ರಕ್ಷಿಸು ಇಷ್ಟು ಸ್ತುತಿಯ
ಇಷ್ಟದಾಯಕನೆಂದು ಸಾಷ್ಟಾಂಗ ನುಡಿದೆನೋ ನಿನ್ನ
ಎನ್ನ ಮನೋಭೀಷ್ಟ ಸಲಿಸಿ ನಿನಿ ಪ್ಪುವಯ್ಯ

ಶ್ರೀನಿವಾಸರಾಯರಿಗೆ ಕವಿತಾರಚನೆಯಲ್ಲದೆ ಇನ್ನೂ ಕೆಲವು ಕಲೆಗಳು ಕರಗತವಾಗಿದ್ದುವು. ಚಿತ್ರಕಲೆ, ಸಂಗೀತಕಲೆ, ರಂಗೋಲಿ ಬಿಡಿಸುವ ಕಲೆ, ಶಿಲ್ಪಕಲೆಗಳಲ್ಲಿ ಅವರಿಗೆ ಪರಿಶ್ರಮವಿದ್ದಿತು. ವೀಣೆ ಕೊಳಲುಗಳನ್ನು ನುಡಿಸುತ್ತಿದ್ದರು. ಗಣಪತಿಯನ್ನು ತಾವೇ ಸ್ವತಃ ಮಾಡಿ ಪೂಜಿಸುತ್ತಿದ್ದರು. ದೇವರನಾಮಗಳನ್ನು ವಾದ್ಯಗಳ ಸಹಕಾರದೊಂದಿಗೆ ಭಕ್ತಿರಸಭರಿತವಾಗಿ, ಸಾಹಿತ್ಯರಸ ಭಾವ ಪೂರ್ಣವಾಗಿ ರಾಯರು ಹಾಡುತ್ತಿದ್ದುದನ್ನು ಬಹುಮಂದಿ ಮೆಚ್ಚಿಕೊಂಡರು. ಅದು ಅನೇಕ ಹೃದಯಗಳನ್ನು ಅರಳಿಸಲು–ಹಸನುಮಾಡಲು ಕಾರಣವಾಯಿತು. ಬಾಳಿನ ದಾರಿಯಲ್ಲಿ ಎದುರಾದ ಕಷ್ಟಗಳನ್ನೆಲ್ಲಾ ಈ ಕಲಾಸ್ವಾದನದಲ್ಲಿ ಕರಗಿಸಲು ಅವರು ಪ್ರಯತ್ನಿಸಿ ಯಶಸ್ವಿಗಳಾಗಿದ್ದರು.

ಈ ಕಲಾವಿಭಾಗದ ಅಧಿಕವಾದಂತೆಲ್ಲಾ ಅವರ ಕಡೆಗೇ ಒಲವು ಹೆಚ್ಚಾಗಿ ಲೌಕಿಕ ವಿಷಯಗಳಲ್ಲಿ ಆಸಕ್ತಿ ಕಡಿಮೆಯಾಗುತ್ತ ಬಂದಿತು. ಸರ್ಕಾರಿ ಸೇವೆಯನ್ನು ಮಾತ್ರ ನಿಷ್ಠೆಯಿಂದ ಮಾಡಿ ಉಳಿದಕಾಲವನ್ನು ಸಾಹಿತ್ಯ ಸಂಗೀತ ಚಿತ್ರಗಳ ಸಹವಾಸದಲ್ಲಿ ಕಳೆಯುತ್ತಿದ್ದರು. ದಶಾವತಾರಗಳು, ಚತುರ್ವಿಂಶತಿ, ಭಗವದ್ರೂಪಗಳು, ಅಷ್ಟಮೂರ್ತಿಗಳು, ಬ್ರಹ್ಮಾಂಡ, ವಾಯು, ಹನುಮ, ಭೀಮ ರೂಪಗಳು ಮುಂತಾದ ಚಿತ್ರಗಳನ್ನು ಬಿಡಿಸುವುದಕ್ಕೆ ಬಹುಕಾಲವನ್ನು ವಿನಿಯೋಗಿಸುತ್ತಿದ್ದರು. ವಾದ್ಯಗಳನ್ನು ನುಡಿಸುವುದು, ಕವನಗಳನ್ನು ರಚಿಸುವುದು, ದೇವರನಾಮಗಳನ್ನು ಸುಳಾದಿಗಳನ್ನು ಹಾಡುವುದು ಇವು ಇವರ ಹವ್ಯಾಸವಾದುವು. ಲೋಕವಾರ್ತೆಯನ್ನು ಬಿಟ್ಟು ಪರಲೋಕಸಾಧನ ಕಡೆಗೆ ಮನಸ್ಸು ಹರಿಯಿತು. ಪಾರಮಾರ್ಥಿಕ ವಿಚಾರ ಮಂಥನದ ಕಡೆಗೆ ಹೃದಯ ಒಲಿದು ಶ್ರೀ ಪೂರ್ಣಪ್ರಜ್ಞರ ಸಿದ್ಧಾಂತವನ್ನು ಆಳವಾಗಿ ಅಭ್ಯಾಸಮಾಡಿದರು.

ಶಿಕಾರಿಪುರದಿಂದ ಹೊರಟು, ಬಾಗೇಪಲ್ಲಿ; ಅಲ್ಲಿಂದ ಬೌರಿಂಗ್‌ಪೇಟೆಗೆ ವರ್ಗವಾಯಿತು

ಬೌರಿಂಗ್‌ಪೇಟೆ (ಬಂಗಾರಪೇಟೆ ಎಂದು ಈಗ ಹೆಸರು) ಯಲ್ಲಿದ್ದ ಒಂದೇ ವರ್ಷಕಾಲದಲ್ಲಿ ಇವರ ಆಧ್ಯಾತ್ಮಿಕ ಜ್ಞಾನ ಪ್ರಗತಿ ಚೆನ್ನಾಗಿ ಆಗಲು ಸಾಧ್ಯವಾ

ಯಿತು. ಮುಳುಬಾಗಿಲಿನ ಶ್ರೀ ಶ್ರೀಪಾದರಾಜಮಠದ ವಿದ್ವಾಂಸರಾದ ಶ್ರೀ ತೀರ್ಥಾಚಾರ್ಯರ ಸಮಾಗಮದಿಂದ, ಅವರೊಡನೆ ನಡೆಯುತ್ತಿದ್ದ ಸಂವಾದ ಜಿಜ್ಞಾಸೆಗಳಿಂದ ಅನೇಕ ಗಹನ ಪ್ರಮೇಯಗಳ ಅರಿವುಂಟಾಯಿತು.

ಒಂದೇವರ್ಷದ ತರುವಾಯ ಬೌರಿಂಗ್ ಪೇಟೆಯಿಂದ ಚಿತ್ರದುರ್ಗಕ್ಕೆ ವರ್ಗವಾಯಿತು.

ಚಿತ್ರದುರ್ಗದಲ್ಲಿ ರಾಯರು ಕಳೆದ ದಿನಗಳು ಚಿರಸ್ಮರಣೀಯವಾದುವು. ಹೆಸರಿನ ಜೊತೆಗೆ ಹಿರಿಯರಿಂದ ಬಂದುದ್ದು ಮಳವಳ್ಳಿಯಾದರೂ, ಚಿತ್ರದುರ್ಗದಲ್ಲಿ ದೀರ್ಘಕಾಲವಿದ್ದುದಲ್ಲದೆ, ಜನಪ್ರಿಯತೆ ಪ್ರಸಿದ್ಧಿಗಳ ಕಾರಣದಿಂದಲೂ ಅವರ ಹೆಸರಿನೊಂದಿಗೆ ಚಿತ್ರದುರ್ಗ ಸೇರಿಕೊಂಡಿತು—ಚಿತ್ರದುರ್ಗದ ಶ್ರೀನಿವಾಸರಾಯರು ಎಂದು ಈಗಲೂ ಕರೆಯುತ್ತಾರೆ.

ಚಿತ್ರದುರ್ಗದ ವಾಸ, ಅಲ್ಲಿಯ ನ್ಯಾಷನಲ್ ಸ್ಕೂಲಿನ ಅಧ್ಯಾಪಕರಾಗಿ ಅವರು ಮಾಡಿದ ಕಾರ್ಯ, ಜನರ ಮತ್ತು ಇಲಾಖೆಯ ಮನ್ನಣೆಗೆ ಪಾತ್ರವಾಯಿತು. ಶ್ರೇಷ್ಠ ಮಟ್ಟದ ಅಧ್ಯಾಪಕರು, ಕಲಾವಿದರು, ತತ್ತ್ವಚಿಂತಕರು, ಸಾಧಕರು, ಕವಿಗಳು ಆದರ್ಶ ಗೃಹಸ್ಥರು—ಸಭ್ಯರು ಎಂದು ಪ್ರಸಿದ್ಧಿಯೂ ಆಯಿತು. ಅವರು ಶಾಲೆಯಲ್ಲಿ ಬೋಧಿಸುತ್ತಿದ್ದ ಕನ್ನಡ ಗ್ರಂಥಗಳ ಛಂದ-ವ್ಯಾಕರಣ-ಕಾವ್ಯ ಮೊದಲಾದುವು—ವಿದ್ಯಾರ್ಥಿಗಳ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರಿತು. ಆದರೆ ಆ ಕೀರ್ತಿ ಜನಾನುರಾಗ ಮೆಚ್ಚಿಕೆಗಳು ಅವರನ್ನು ಆಕರ್ಷಿಸಲಿಲ್ಲ. ಅದರಿಂದ ಅವರು ಹಿಗ್ಗಲಿಲ್ಲ. ಅದರ ಉಪಯೋಗವನ್ನೂ ಪಡೆಯಲು ಪ್ರಯತ್ನಿಸಲಿಲ್ಲ. ಅದು ತಮ್ಮ ಕೇವಲ ಕರ್ತವ್ಯವೆಂದು ಮಾತ್ರ ಬಗೆದು ತಮ್ಮ ಕೆಲಸವನ್ನು ತಾವು ಮಾಡಿ ಮುಗಿಸುತ್ತಿದ್ದರು. ಅವರ ಮನಸ್ಸು ಪಾರಮಾರ್ಥಿಕದ ಕಡೆಗೇ ಪ್ರವೃತ್ತವಾಗುತ್ತಿದ್ದಿತು.

ಚಿತ್ರದುರ್ಗದ ಕೋಟೆ ಪ್ರವೇಶದ ಒಳಗಡೆ ಸಂತೇಬಾಗಿಲ ಹತ್ತಿರ ಪ್ರಾಣದೇವರ ಗುಡಿಯ ಹಿಂಭಾಗದಲ್ಲಿನ ಒಂದು ಸಣ್ಣ ಕುಟೀರದಲ್ಲಿ ಸತಿ ಮತ್ತು ಮೂವರ ಮಕ್ಕಳ ಸಂಸಾರವನ್ನು ಸಂತೃಪ್ತವಾಗಿಯೇ ನಡೆಸುತ್ತಿದ್ದರು. ಆ ಪ್ರಾಣದೇವರ ಸನ್ನಿಧಾನದಲ್ಲಿ ಪ್ರತಿದಿನ ಸಂಜೆ ಹರಿಕಥಾಮೃತಸಾರದ ಪ್ರವಚನ ಮಾಡುತ್ತಿದ್ದರು. ಆ ಪ್ರಾಣದೇವರ ಪೂಜೆಯನ್ನು ಹನ್ನೆರಡುವರ್ಷಗಳಕಾಲ ಸಂತತವಾಗಿ ನೆರವೇರಿಸಿದರು. ಪ್ರಾಣದೇವರಿಗೆ ಕವಚ, ಪ್ರಭಾವಳಿ, ಕಿರೀಟ ಮುಂತಾದುವುಗಳನ್ನು ತಾವೇ ಸ್ವತಃ ಮಾಡಿ ಕೊಡಿಸಿ ರಥದಲ್ಲಿ ಕೂಡಿಸಿ ಉತ್ಸವವನ್ನು ನಡೆಸಿದರು. ಚಿತ್ರಗಳನ್ನು ಬಿಡಿಸುವುದರಲ್ಲಿ ಪರಿಣತರಾಗಿದ್ದರು. ಅವರು ಚಿತ್ರಿಸಿರುವ ಅನೇಕ ಚಿತ್ರಗಳು ಈಗಲೂ ಇವೆ.

ಅಲ್ಲಿದ್ದ ಕಾಲಾವಧಿಯಲ್ಲೇ ಮಾತೃಶ್ರೀ ರಾಧಾಬಾಯಿ ಮತ್ತು ಜ್ಯೇಷ್ಠ ಪುತ್ರಿ ಸೌ॥ ಪದ್ಮಾವತೀಬಾಯಿ ಅವರುಗಳು ತೀರಿಕೊಂಡರು. ಈ ದುಃಖವನ್ನು ಧರಿಸಿ ಅವರ ಮನಸ್ಸು ಇನ್ನೂ ಹೆಚ್ಚಾಗಿ ಆಧ್ಯಾತ್ಮಿಕದೆಡೆ ಪ್ರವೃತ್ತವಾಯಿತು.

ಭಗವದಾರಾಧನೆ, ಆಧ್ಯಾತ್ಮಿಕ ಗ್ರಂಥ ಪಠಣ–ಪ್ರವಚನ, ದಾಸಕೂಟದ ಪದ್ಧತಿಯ ಪ್ರಕಾರ ತಾರತಮ್ಯಾನುಸಾರ ಭಜನೆ, ಏಕಾದಶಿ ಜಾಗರಣೆ, ದ್ವಾದಶಿ ಪಾರಣೆ ಇವುಗಳಲ್ಲಿ ಹೆಚ್ಚಿನ ಆನಂದವನ್ನು ಅವರು ಪಡೆಯುತ್ತಿದ್ದರು; ಸಾಂಸಾರಿಕ ಕ್ಲೇಶಗಳಿಂದ ಆಗುವ ನೋವನ್ನು ಇದು ಮರೆಸುತ್ತಿತ್ತು. ಸತ್ಸಾಧನದಿಂದ ಆಧ್ಯಾತ್ಮಿಕ ಜ್ಞಾನ ಪ್ರಭೆ ಅಧಿಕವಾಗುತ್ತ ಬಂದಿತು, ಹರಿವಾಯುಗಳ ವಿಶೇಷ ಕೃಪೆಗೆ ಪಾತ್ರರೂ ಆದರು. ಇವರ ಏಕಾದಶಿ ಭಜನೆ–ಜಾಗರಣೆ ಊರಿನಲ್ಲಿ ಪ್ರಸಿದ್ಧವಾಗಿ ಅವರಿಗೆ ಜಾಗರಣೆ ಶ್ರೀನಿವಾಸರಾಯರೆಂದೇ ಕರೆಯುವುದು ರೂಢಿಗೆ ಬಂದಿತು. ಅವರ ಪ್ರತಿಶನಿವಾರ ತಪ್ಪದ ಭಜನೆಯಿಂದ ಅವರನ್ನು ಭಜನೆ ಶ್ರೀನಿವಾಸರಾಯರು ಎಂದು ಕರೆಯುವ ರೂಢಿಯಾಯಿತು.

ಕ್ರಿ.ಶ. 1926 ರಲ್ಲಿ ಸರ್ಕಾರೀ ಸೇವೆಯಿಂದ ನಿವೃತ್ತರಾದ ಮೇಲೂ, ಚಿತ್ರದುರ್ಗದ ಪರಿಸರ ಸಹವಾಸಗಳು ಸರಿಹೊಂದಿ, ಬೇಕಾದವರೊಬ್ಬರು ದಾನವಾಗಿ ನೀಡಿದ ವೇಂಕಟೇಶಪುರ ಬಡಾವಣೆಯಲ್ಲಿನ ನಿವೇಶನದಲ್ಲಿ ಕುಟೀರ ಸದೃಶವಾದ ಸಣ್ಣ ಮನೆಯನ್ನು ಕಟ್ಟಿಕೊಂಡು ವಾಸಮಾಡುತ್ತ, ತಮ್ಮ ಉಳಿದ ಜೀವಿತಕಾಲವನ್ನು ಎಂದರೆ ಮೂವತ್ತೆಂಟು ವರ್ಷಗಳ ಕಾಲ ಅಲ್ಲೇ ವಾಸಮಾಡುತ್ತ ಜೀವನವನ್ನು ಸಾರ್ಥಕಗೊಳಿಸಿಕೊಂಡರು.

ರಾಯರ ಜೀವನ ತುಂಬ ಸರಳವಾದದ್ದು. ಆಡಂಬರಕ್ಕೆ ಅಲ್ಲಿ ಎಳ್ಳಷ್ಟೂ ಅವಕಾಶವಿರಲಿಲ್ಲ. ಸರಳಜೀವನ–ಉನ್ನತ ಚಿಂತನ (Plain living; light thinking) ಎಂಬ ಭಾರತೀಯ ಆದರ್ಶ ವಿಧಾನವನ್ನು ಈ ಮಹನೀಯರಲ್ಲಿ ಚೆನ್ನಾಗಿ ಕಾಣಬಹುದಾಗಿದ್ದಿತು. ಎಷ್ಟೋವೇಳೆ ಅವರಲ್ಲಿ ಅವಧೂತ ಚರ್ಯೆಗಳೂ ಕಂಡುಬರುತ್ತಿದ್ದುವು. ಊಟಕ್ಕೆ ಕುಳಿತರೆ ಎಷ್ಟು ಬಡಿಸಿದರೂ ಊಟ ಮಾಡುತ್ತಲೇ ಇರುವುದು; ಬಡಿಸುವವರು ಸಾಕೆ ಎಂದು ಕೇಳಿದರೆ ಸಾಕು ಎಂದು ಊಟಮುಗಿಸುವುದು. ಇನ್ನೂ ಬೇಕೆ ಎಂದರೆ ಹೋಗಲಿ ಬಿಡು ಸಾಕು ಎನ್ನುತ್ತಿದ್ದರು. ನಾಲ್ಕೈದು ಬಾಂಡ್ಲೆ ಪಾಲಿ ಉಪ್ಪಿಟ್ಟನ್ನು ಒಮ್ಮೆಗೇ ತಿಂದು ಮುಗಿಸಿ ಬಿಡುತ್ತಿದ್ದರು–ಇಲ್ಲದಿದ್ದರೆ ಏನೂ ಇಲ್ಲ ಎಂದು ಇತ್ತೀಚಿಗಷ್ಟೆ (ಡಿಸೆಂಬರ್ 1984) ನಿಧನ ಹೊಂದಿದ ಅವರ ಧರ್ಮಪತ್ನಿಯವರು ಹೇಳುತ್ತಿದ್ದರು.

ಶ್ರೀನಿವಾಸರಾಯರು ಉರಗಾದ್ರಿವಾಸವಿಠಲ ದಾಸರು ಎಂದಾದದ್ದು ಒಂದು ಸ್ವಾರಸ್ಯಕರ ಪ್ರಸಂಗ. ಸ್ವಪ್ನಸೂಚಿತ ವೇಂಕಟೇಶ ಎಂಬ ಅಂಕಿತದಲ್ಲಿ ಬಹುಕಾಲ ಅನೇಕ ಕೃತಿಗಳನ್ನು ಅವರು ಆಗಾಗ್ಗೆ ಸ್ಫೂರ್ತಿಬಂದಾಗ ರಚಿಸುತ್ತಿದ್ದರು. ಆದರೂ

ಗುರು ಮುಖೇನ ಅಂಕಿತ-ದೀಕ್ಷೆ ಬೇಕು ಎಂದು ಅವರಿಗೆ ಆಗಾಗ ಅನಿಸುತ್ತಿದ್ದಿತಂತೆ. ಒಂದು ಪದದಲ್ಲಿ ಅವರೇ ಹೀಗೆ ಬರೆದರು.

ಕೃತ್ಯಕೃತ್ಯದೊಳಿದ್ದು ಕೃತಕಾತ್ಮರ ಕಳೆಯೊ ಜೀ-
ವತ್ಪಿತಾಮಹ ಜನಕ ನೀನೇ
ವ್ಯತ್ಯಂಡದಂತಿನ್ನು ಉತ್ಪತ್ತಿಗೈಸಿ ಕ-
ಣ್ಣೆತ್ತಿ ನೋಡಲರಿಯಾ-ಜೀಯಾ
ನಾ ನಿತ್ಯ ನೀ ನಿತ್ಯ- ಜಗವೆಲ್ಲ ಸತ್ಯವು
ನಿತ್ಯತ್ವವೆಲ್ಲ ಸರಿಯೆ ಎನಿಸಿದ್ದರೇನು
ಅನಾದಿಕರ್ಮದ ಬವಣೆ ಬೆನ್ನಟ್ಟಿ ಬರುತಿರ್ಪುದ-
ಜ್ಞಾನಾಂಧಕಾರದಿಂ ಧ್ಯಾನವನು ತಿಳಿಯದೆ
ಕಾನನದೊಳಗಿಪ್ಪೆನೋ-ಜ್ಞಾನಗಮ್ಯನೆಂದು
ಸಾರುತಿದೆ ಶ್ರುತಿಶಾಸ್ತ್ರಜ್ಞಾನ ಗುರು ದೊರೆತಿಲ್ಲವೊ
ಸಾನುರಾಗದಿ ನೀನೆ ಸಾಧನೆಯ ಕರುಣಿಸಿ
ಧ್ಯಾನದಲಿ ಮನಸು ನಿಲಿಸೋ-ಉಳಿಸೋ
ಶಂಖ ಚಕ್ರಾಂಕಿತನೆ ಮಂಕುಬುದ್ಧಿಯ ಬಿಡಿಸೊ
ಅಂಕಿತವೆನಗಿಲ್ಲ । ಅಂಕೆ ಇಲ್ಲವೊ ನಿನ್ನ ನೆನೆವುದಕೆ ಎಂದಿಗೂ
ಶಂಕೆ ಪಡುವನಲ್ಲ ವೇಂಕಟಾದ್ರಿನಿವಾಸ ಶ್ರೀ
ವೇಂಕಟೇಶನೆ ಮಮಕುಲ ದೈವವೆಂದನುದಿನ

ಹೀಗಿರುವಾಗ ಅವರು ಉದ್ಯೋಗದಿಂದ ನಿವೃತ್ತರಾದ ಆರುವರ್ಷಗಳ ಅನಂತರ ಕ್ರಿ.ಶ. 1932 ರಲ್ಲಿ ದೇವರಾಯನದುರ್ಗದ ಪರಮಪ್ರಿಯಶ್ರೀಸುಬ್ಬರಾಯದಾಸರು ಚಿತ್ರದುರ್ಗಕ್ಕೆ ಆಗಮಿಸಿದಾಗ, ಶ್ರೀ ಮ. ಶ್ರೀನಿವಾಸರಾಯರನ್ನು ಭೇಟಿಮಾಡುವ ಉದ್ದೇಶದಿಂದಲೇ ಅವರಿಗಾಗಿಯೇ ಅವರ ಮನೆಗೆ ಬಂದರು. ರಾಯರು ಅವರ ವಿಷಯ ಕೇಳಿದ್ದರಿಂದ, ವಿಶ್ವಾಸ ಗೌರವಗಳಿಂದ ಅವರನ್ನು ಸ್ವಾಗತಿಸಿ ಸಂಭಾಷಣೆ ಮಾಡಿದರು. ಅವರ ಇಚ್ಛಾನುಸಾರ ತಾವು ವೇಂಕಟೇಶ ಮುದ್ರಿಕೆಯಿಂದ ರಚಿಸಿದ್ದ ಅನೇಕ ದೇವರನಾಮಗಳನ್ನು ಹಾಡಿದರು. ಪರಮಪ್ರಿಯರು ತುಂಬ ಸಂತೋಷ ಸೂಚಿಸಿ-ಕೃತಿಗಳು ಬಹು ಚೆನ್ನಾಗಿವೆ, ಆದರೆ ಪದ್ಧತಿ ಪ್ರಕಾರ ಅಂಕಿತವನ್ನು ಸ್ವೀಕರಿಸಿ, ಪದಗಳಿಗೆ ಅಂಕಿತಮುದ್ರೆ ಹಾಕಿದಾಗ ಶ್ರೀಹರಿವಾಯುಗಳ ಅನುಗ್ರಹ ಹೆಚ್ಚಾಗ ಬಲ್ಲುದು, ಅದನ್ನು ಪ್ರದಾನ ಮಾಡಲೆಂದೇ ನಾವು ಇಲ್ಲಿಗೆ ಬಂದಿದ್ದೇವೆ ಎಂದು ಸ್ಪಷ್ಟವಾಗಿ ತುಂಬಾ ಸರಳವಾಗಿ ಹೇಳಿದರು.

ಆದರೆ ಶ್ರೀನಿವಾಸರಾಯರು ಮಾತ್ರ ಆಗಲಿ ನೋಡೋಣ ಎಂದಷ್ಟೆ ನುಡಿದು ಸುಮ್ಮನಾದರೇ ಹೊರತು ಅಂಕಿತ ಸ್ವೀಕಾರಕ್ಕೆ ಮುಂದಾಗಲಿಲ್ಲ. ಮಾರನೆಯದಿನ

ಪರಮಪ್ರಿಯರು ಮತ್ತೆ ಮನೆಗೆ ದಯಮಾಡಿಸಿದರು. ಇನ್ನೂ ವಿಳಂಬವೇ ? ಎಂದರೆ ಅದಕ್ಕೆ ಉತ್ತರವಾಗಿ ಶ್ರೀನಿವಾಸರಾಯರು ಕೊಂಚ ನಿಷ್ಠುರವಾಗಿಯೇ ಎಂಬ ಮಾತನಾಡಿದರು.

ತಾವು ಅಪರೋಕ್ಷ ಜ್ಞಾನಿಗಳಾದ ದಾಸರಾಯರ ಪೀಳಿಗೆಯಲ್ಲಿ ಬಂದಿರುರಾದರೆ ಮಾತ್ರ ನಾನು ಅಂಕಿತ ಸ್ವೀಕಾರಕ್ಕೆ ಸಿದ್ಧ. ಹಾಗಿಲ್ಲದಿದ್ದರೆ ನಾನು ಗುಭಕ್ಷಕನಾಗುವುದೂ ಬೇಡ; ತಾವು ಶಿಷ್ಯ ಭಕ್ಷಕರಾಗುವುದೂ ಬೇಡ* ಹೀಗೆ ಹೇಳಿ ನನ್ನ ದಿಟ್ಟತನಕ್ಕೆ ಕ್ಷಮೆ ಬೇಡುತ್ತೇನೆ–ಎಂದು ಬಿಟ್ಟರು. ಅದಕ್ಕೂ ಪರಮಪ್ರಿಯರು ಸಹನ ಮೂರ್ತಿಗಳಾಗಿ ಕೋಪಗೊಳ್ಳದೆ ಉತ್ತರವಿತ್ತರು. ಎಷ್ಟೋ ದೇವರ ನಾಮಗಳನ್ನು ನೀವು ಈಗಾಗಲೇ ರಚಿಸಿರುತ್ತೀರಿ. ಅವುಗಳ ಪೈಕಿ ಒಂದರಲ್ಲಿ ಜ್ಞಾನಗುರು ದೊರೆತಿಲ್ಲ–ಅಂಕಿತವೆನಗಿಲ್ಲ ಎಂದು ಹೇಳಿಕೊಂಡಿರುವಿರಲ್ಲವೆ? ಎಂದರು. ಈ ಮಾತು ಶ್ರೀನಿವಾಸರಾಯರ ಮೇಲೆ ವಿಶೇಷ ಪರಿಣಾಮವನ್ನುಂಟುಮಾಡಿತು. "ಹೃತ್ಪದ್ಮದೊಳಿದ್ದು ಹೃತ್ತಾಪ ಕಳೆಯೋ" ಎಂಬ ದೇವರನಾಮಗಳಲ್ಲಿ ಹಾಗೆ ತಾವು ಹೇಳಿಕೊಂಡಿರುವುದು ಸತ್ಯ. ಆದರೆ ಆ ದೇವರ ನಾಮವನ್ನು ತಾವು ರಚಿಸಿ ಎಷ್ಟೋ ವರ್ಷಗಳಾಗಿವೆ. ಅದು ಎಲ್ಲೂ ಪ್ರಕಟವಾಗಿಲ್ಲ. ತಮಗೂ ಪರಮಪ್ರಿಯರಿಗೂ ಅಂತಹ ನಿಕಟ ಸಂಬಂಧ–ಪರಿಚಯವೂ ಇಲ್ಲ. ಹಾಗಿರುವಾಗ ಆ ದೇವರನಾಮದ ನುಡಿಗಳ ಇವರಿಗೆ ಹೇಗೆ ತಿಳಿದುವು? ಎಂಬ ಯೋಚನೆ ಆಶ್ಚರ್ಯವುಂಟುಮಾಡಿತು–ಪುಳಕಿತರಾಗಿ ಪರಮಪ್ರಿಯರಲ್ಲಿ ಭಯಭಕ್ತಿ ವಿಶ್ವಾಸಗಳನ್ನು ಬೆಳಗಿಸಿಕೊಂಡರು. ಅವರೂ ತಮ್ಮ ಹಿಂದಿನ ಪಟ್ಟನ್ನು ಬಿಡದೆ 'ತಮ್ಮ ಗುರುಪರಂಪರೆಯನ್ನು ತಿಳಿಸೋಣವಾಗಲಿ ಎಂದರು. ಆಗ ಪರಮಪ್ರಿಯರು ತಮ್ಮ ಗುರುಗಳು ಮುದ್ದುಮೋಹನವಿಠಲಾಂಕಿತ ದೊಡ್ಡಬಳ್ಳಾಪುರದ ರಾಘವೇಂದ್ರ ದಾಸರು; ಅವರ ಗುರುಗಳು ಶ್ರೀ ವರವಿಠಲಾಂಕಿತ ಸವದಿರಾಮಚಂದ್ರಪ್ಪನವರು; ಅವರ ಗುರುಗಳು ಶ್ರೀನಿಧಿವಿಠಲರು–ಹೀಗೆ ಈ ಪರಂಪರೆ ಶ್ರೀ ವಿಜಯ ದಾಸರ ವರೆಗೂ ಹೋಗುವುದು. ಶ್ರೀ ವಿಜಯದಾಸಾರ್ಯರೇ ನಮ್ಮ ಮೂಲಗುರುಗಳು ಎಂದು ಹೆಮ್ಮೆಯಿಂದ ಹೇಳಿಕೊಂಡರು. ಅಷ್ಟೇ ಅಲ್ಲದೆ ನಿಮ್ಮಲ್ಲಿರುವ ದಾಸಪೀಳಿಗೆಯಲ್ಲಿ ನಾವು ಆಗಲೇ ಬಂದು ನಿಮ್ಮ ಮನೆಯಲ್ಲೇ ಇದ್ದೇವೆ–ನೋಡಿಕೊಳ್ಳಬಹುದು ಎಂದರು. ಇಷ್ಟಾದರೂ ಚಿಕಿತ್ಸಕ – ವಿಮರ್ಶಾತ್ಮಕ ಬುದ್ಧಿಮತಿಯುಳ್ಳ ಶ್ರೀನಿವಾಸರಾಯರು ತೈಜಸರೂಪೀ ಪರಮಾತ್ಮನ ಆಜ್ಞೆಯನ್ನು ನಾನು ಇನ್ನೂ ಕಾಯಬೇಕೆಂಬ ಅಪೇಕ್ಷೆಯುಳ್ಳವನಾಗಿದ್ದೇನೆ ಎಂದರು. ಪರಮಪ್ರಿಯರು ಆಗಲೂ ತಾಳ್ಮೆಯಿಂದ ಆ ಕಾಲ ಬಹುಬೇಗ ಪ್ರಾಪ್ತವಾಗುವುದು ಎಂದರು. ಮಾರನೆಯದಿನ ಪರಮಪ್ರಿಯರು ಚಿತ್ರದುರ್ಗವನ್ನು ಬಿಟ್ಟರು.

---

* ಈ ಶಬ್ದಗಳು ರಾಯರಿಗೆ ತುಂಬ ಪ್ರಿಯವಾಗಿದ್ದು ಆಗಾಗ ಅವುಗಳನ್ನು ಪ್ರಯೋಗಿಸುತ್ತಿದ್ದರು. ಗುರುಗಳು ಶಿಷ್ಯರ ಹೃತ್ತಾಪಹಾರಕರಾಗ ಬೇಕೇ ಹೊರತು ವಿತ್ತಾಪಹಾರಕರಾಗಬಾರದು ಎಂದೂ ಪದೇ ಪದೇ ಅವರು ನುಡಿಯುತ್ತಿದ್ದುದು ಲೇಖಕರ ಕಿವಿಗಳಲ್ಲಿ ಈಗಲೂ ಮೊಳಗುತ್ತಿದೆ.

ಕೆಲವು ತಿಂಗಳುಗಳಾದ ಬಳಿಕ ಅವರು ಮತ್ತೆ ಚಿತ್ರದುರ್ಗಕ್ಕೆ ಬಂದರು. ದ್ದೇಶ ಮುಖ್ಯವಾಗಿ ಶ್ರೀನಿವಾಸರಾಯರಿಗೆ ದಾಸದೀಕ್ಷೆ ನೀಡಬೇಕೆಂಬುದೇ ಆಗಿದ್ದಿತು. ರಿಂದ ಮುಂದೆ ಹರಿದಾಸಪೀಳಿಗೆ ಬೆಳೆಯುತ್ತದೆ ಎಂಬುದು ಅವರಿಗೆ ತಿಳಿದಿದ್ದುದೇ ರಣ. ಆಗ ಅವರು ಮತ್ತೆ ಬರುವ ಹೊತ್ತಿಗೆ ಶ್ರೀ ಶ್ರೀನಿವಾಸರಾಯರಿಗೆ ಸ್ವಪ್ನ ಚನೆಯಾಗಿದ್ದು ಅವರು ಅಂಕಿತ ಸ್ವೀಕಾರಕ್ಕೆ ಸಿದ್ಧರಾಗಿದ್ದರು. ಅಂತರಂಗದಲ್ಲಿ ಮ್ಮ ಕುಲದೈವ ಇಷ್ಟದೈವ ವೇಂಕಟೇಶನ ನಾಮಸೂಚಕವಾದ ಹೆಸರೇ ಅಂಕಿತವಾಗ ಕು ಎಂದು ಅಪೇಕ್ಷೆ ಇದ್ದರೂ, ಹೊರಗೆ ಅದನ್ನು ಬಾಯಿಬಿಟ್ಟು ಗುರುಗಳಿಗೆ ಹೇಳ ಲ್ಲ. ಅವರ ಸ್ವಭಾವವೇ ಅಂತಹುದಾಗಿದ್ದಿತು. ಪರಮಪ್ರಿಯರು ಅವರ ಈ ಅಪೇಕ್ಷೆ ಯನ್ನು ಅರಿತಿರುವರೋ ಎಂಬಂತೆ 'ಉರಗಾದ್ರಿವಾಸವಿಠಲ ಎಂಬ' ಸೊಗಸಾದ ಂಕಿತನಾಮವನ್ನು ಉಪದೇಶಿಸಿ, ಹರಿದಾಸ ದೀಕ್ಷೆಯಲ್ಲಿ ರಾಯರನ್ನು ನಿಯೋಗಿ ದರು.

ಅಂತೂ ಚಿತ್ರದುರ್ಗದ ಮ. ಶ್ರೀನಿವಾಸರಾಯರು ಅಧಿಕೃತವಾಗಿ ಹರಿದಾಸ ಳಿಗೆಯೊಳಗೆ ಸೇರಿದರು; ಪರಮಪ್ರಿಯರ ಪ್ರಿಯಶಿಷ್ಯರಾದರು. ರಾಯರಿಗೆ ಂಕಿತಪ್ರದಾನ ಮಾಡುವ ಅಂಕಿತ ಪದ ಹೀಗೆ ರಚಿತವಾಯಿತು.

ಉರಗಾದ್ರಿವಾಸವಿಠಲ ನೀನಿವರ
ಪರಮಾದರದಿ ಕಾಪಾಡೊ ಹರಿಯೆ ॥ ಪ ॥

ಗುರುಕರುಣವನೆ ಪಡೆದು ಹರಿ ವಾಯು
ಗುರುಗಳ ಸೇವೆಯನೆ ಇತ್ತು ಕಾಪಾಡೊ ಹರಿಯೆ ॥ ಅ.ಪ. ॥

ಗುರುಕರುಣವನು ಪಡೆಯದೆ ಸುರನರಾದ್ಯರಿಗೆ
ಹರಿಕರುಣ ದೊರೆಯದೆಂಬುದು ಸಿದ್ಧ
ನಿರುತ ದೃಢ ಮನವ ನೀನಿತ್ತು ಕಾಪಾಡೊ ಹರಿಯೆ
ಸಲೆ ನಿನ್ನ ದಾಸರ ದಾಸ್ಯವನೆ ಇತ್ತು ಸತತ ಕಾಪಾಡೊ ಹರಿಯೆ
ಪರಮ ಭಾಗವತರ ಸಂಗವನು ಇತ್ತು
ಪರಮಕೃಪೆಯಿಂದ ರಕ್ಷಿಸೊ ಹರಿಯೆ
ಪಂಚರೂಪಾತ್ಮಕನೆ ಪಂಚಭೇದವನರುಹಿ
ಸಂಚಿತಾಗಾಮಿಗಳ ಹರಿಸಿ ಮಿಂಚಿನಂದದಿ ಪೊಳೆಯೊ ಹರಿಯೆ
ಗುರುಶಿಷ್ಯ ಬಿಂಬಐಕ್ಯ ಚಿಂತನೆಯಿಂದ
ಹರಿವಾಯುಮತದಲ್ಲಿ ನಿರುತ ಕಾಪಾಡೊ ಹರಿಯೆ
ಪರಮಭಾಗವತರನು ಹಿಂದೆ ರಕ್ಷಿಸಿದಂತೆ ನೀನಿವನ

ನಿರುತ ಕಾಪಾಡೊ ಹರಿಯೆ
ಪರಮಭಾಗವತ ತಂದೆ ಮುದ್ದುಮೋಹನ ವಿಠಲ ಇನ್ನು
ನರಲಿ ಒಂದಂಶದಲಿ ಇದ್ದೂ ಹೃದಯಾಂಬರದಿ ನಿನ್ನ ಬಿಂ
ಬರೂಪ ತೋರಿ ಕಾಪಾಡೊ ಹರಿಯೆ

ಈ ಅಂಕಿತಪದ ತುಂಬ ಅರ್ಥಗರ್ಭಿತವು, ಅಂಕಿತಯುಕ್ತ ಪಡೆದವರ ಯೋಗ್ಯತೆಯ ಸೂಚಕವೂ ಆಗಿದೆ. ಇದರಲ್ಲಿ ಹೇಳಿರುವುದನ್ನು ಗಮನಿಸಿದರೆ ರಾಯರ ಸಾಧನೆ ಎಷ್ಟು ದೊಡ್ಡದು ಎಂಬುದು ಚೆನ್ನಾಗಿ ತಿಳಿಯುತ್ತದೆ. "ಸಂಚಿತಾಗಾಮಿಗಳ ಹರಿ. ಮಿಂಚಿನಂದದಿ ಪೊಳೆಯೊ—ನಿನ್ನ ಬಿಂಬರೂಪವ ತೋರಿ ಕಾಪಾಡೊ ಹರಿಯೆ" ಎಂದ ಅಪರೋಕ್ಷ ಜ್ಞಾನವಿತ್ತು ಅನುಗ್ರಹಿಸು ಎಂದು ಜ್ಞಾನಪ್ರದ ರೂಪಿ ವಿಠಲನಲ್ಲಿ ಗುರುಗಳು ಶಿಷ್ಯನ ಶ್ರೇಯಃಪ್ರಾರ್ಥನೆ ಮಾಡಿರುವುದು ಅರ್ಥಗರ್ಭಿತ—ಭವಿಷ್ಯಸೂಚಕ ಆಗಿದೆ.

ಇದಾದ ತರುವಾಯ ರಾಯರ ಗುರುದತ್ತ ಅಂಕಿತದಿಂದ ಅನೇಕ ಕೃತಿಗಳನ್ನು ರಚಿಸಿದರು. ಅವರು ರಚಿಸಿದ ತಮ್ಮ ಗುರುಗಳ ಮಹಿಮಾದ್ಯೋತಕವಾದ ಸ್ತುತಿರೂಪದ ಒಂದು ಪದ ಹೀಗಿದೆ.

ಪಾಲಿಸೊ ದಾಸರಾಯ ಗುರುವೆ ನೀ । ಪಾಲಿಸೊ ।
ತಂದೆ ದಯಾಳುವೆ ಎನ್ನ । ಮನದ । ಕುಂದು ಕೊರತೆಗಳನ್ನ
ಇನ್ನು । ಬಿಡದೆ
ಬಂದ ಸಂಶಯಗಳನ್ನ । ಹರಿಸಿ । ಬಂದು । ತೋರಿದೆ ಪಂಥವನ್ನ
ತಂದೆ ಮುದ್ದುಮೋಹನ್ನ ವಿಠಲನ್ನ ಹೃದಯಾರವಿಂದದಿ ನೋಡುವ
ಸುಂದರ ಗುರುವೆ ನೀ ।
ಪರಮಕರುಣದಿ ಇಂದೆನ್ನ । ಪೊರೆದ ಶ್ರೀ ವೇಂಕಟೇಶಾಭಿನ್ನ
ಉರಗಾದ್ರಿವಾಸ ವಿಠಲಾಖ್ಯನ್ನ । ತೋರಿ । ಕೊಟ್ಟು ನೀನಂಕಿತವನ್ನ
ಗುರು ನಿನ್ನ ಕರುಣಕ್ಕೆಣೆಯುಂಟೆ ಧರೆಯೊಳು
ಉರಗಾದ್ರಿವಾಸ ವಿಠಲನ್ನ ನಿಜದಾಸ

ಗುರುಸ್ತುತಿಯ ಈ ಪದದಲ್ಲಿ ಹಿಂದೆ ಬಳಸುತ್ತಿದ್ದ ಸ್ವಪ್ನ ಸೂಚಿತ ಅಂಕಿತ ವೇಂಕಟೇಶ ಮತ್ತು ಈಗ ಗುರುದತ್ತವಾದ ಅಂಕಿತ ಉರಗಾದ್ರಿವಾಸ ವಿಠಲ ಎರಡೂ ಇರುವುದನ್ನು ಕಾಣಬಹುದು.

ಈ ಎರಡೂ ಅಂಕಿತಗಳಿಂದ ಅವರು ರಚಿಸಿದ ಕೃತಿಗಳ ಸಂಖ್ಯೆ ಅನೇಕ ನೂರುಗಳಷ್ಟಾಗಿದ್ದುವು. ಆದರೆ ಈಗ ನಮಗೆ ದೊರಕಿರುವುದು ಅಲ್ಪಸಂಖ್ಯೆಯ ಕೃತಿಗಳು ಮಾತ್ರ. ಅದಕ್ಕೆ ಕಾರಣ ಹೀಗೆ—

ಸಂಸಾರ ಸಮೇತರಾಗಿ ಒಮ್ಮೆ ಮೈಸೂರಿಗೆ ಅವರು ತೆರಳಿದ್ದಾಗ ಕೃಷ್ಣರಾಜ ಸಾಗರಕ್ಕೆ ದಯೆ ಮಾಡಿದ್ದರು. ಜೊತೆಯಲ್ಲಿ ಅವರ ಕೃತಿಗಳನ್ನು ಬರೆದಿದ್ದ ಪುಸ್ತಕವೂ ಇದ್ದಿತು ಒಂದು ಚೀಲದಲ್ಲಿ. ಅದು ಒಬ್ಬ ಹುಡುಗನ ಕೈಯಲ್ಲಿದ್ದಿತು. ಪುಸ್ತಕದ ಚೀಲವನ್ನು ಸಾಗರದಲ್ಲೇ ಬಿಟ್ಟು ಮೈಸೂರಿಗೆ ಬಂದದ್ದಾಯಿತು. ಹೀಗೆ ಅದು ಕಳೆದು ಹೋದ ಮೇಲೆ ಮತ್ತೆ ಅವುಗಳನ್ನು ಬರೆದಿಡಲು ಸಾಧ್ಯವಾಗಲಿಲ್ಲ. ಅವರ ಮಕ್ಕಳು ಶಿಷ್ಯರು ಬಾಯಿಪಾಠಮಾಡಿ ಬರೆದುಕೊಂಡಿಟ್ಟುಕೊಂಡಿರುವಷ್ಟು ಮಾತ್ರ ಈಗ ನಮಗೆ ಲಭ್ಯ. ಅಂತಹ ಒಂದು ಪುಸ್ತಕದ ಆಧಾರದಿಂದಲೇ ಇಲ್ಲಿ ಕೃತಿಗಳನ್ನು ಪ್ರಕಟಮಾಡುತ್ತಿರುವುದು.

ರಾಯರಿಗೆ ಕುಲದೈವ ವೇಂಕಟೇಶನಲ್ಲಿ ಪರಮಭಕ್ತಿ. ಸಂಪೂರ್ಣ ಶ್ರೀನಿವಾಸ ಸ್ತೋತ್ರಪರವಾದ ಕೃತಿಗಳೇ ಅವರದು ಹೆಚ್ಚಾಗಿವೆ. ಭವಿಷ್ಯೋತ್ತರ ಪುರಾಣಾಂತರ್ಗತ ಶ್ರೀನಿವಾಸಕಲ್ಯಾಣ ಕೃತಿ, ಇನ್ನೆಂದಿಗೋ ನಿನ್ನ ದರುಶನ, ವೇಂಕಟಾಚಲ ಮಾಹಾತ್ಮ್ಯ-ವಿರಾಡ್ರೂಪವರ್ಣನೆ-ಜಗದಾದಿವಂದ್ಯನಿಗೆ ಶರಣು ಇವು ಅವರ ಅನರ್ಘ್ಯ ಕೃತಿಗಳು. ಇವುಗಳಲ್ಲಿ ವಿರಾಡ್ರೂಪವರ್ಣನೆಯು ಸೊಗಸು ವರ್ಣಿಸಲಸದಳವಾಗಿದೆ. ಮಿಂದು ಮಡಿಯುಟ್ಟು, ಪವಿತ್ರವಾಗಿ ಶುದ್ಧ ಸಾತ್ವಿಕ ಭಕ್ತಿಯಿಂದ ತಿರುಮಲೆಯನ್ನು ಸೇರಲು ಮೆಟ್ಟಲುಗಳನ್ನು ಏರಲು ಪ್ರಾರಂಭಮಾಡಿದಾಗ ನಿರರ್ಗಳವಾಗಿ ಸ್ತೋತ್ರವಾಹಿನಿಯಾಗಿ ಶ್ರೀನಿವಾಸದೇವರ ವಿಶೇಷ ಕಾರುಣ್ಯ ಪ್ರೇರಣೆ ಸ್ಫೂರ್ತಿಗಳಿಂದ ಪ್ರಾರಂಭವಾಗಿ ಶ್ರೀನಿವಾಸನಮೂರ್ತಿ ದರ್ಶನದ ವಿವರ-ಮಹಿಮೆಗಳವರೆಗೆ ಹರಿದು ಬಂದಿರುವ ಈ ಕೃತಿ ಬಹುರಮ್ಯವಾಗಿದೆ, ಪ್ರಮೇಯಭರಿತವಾಗಿದೆ-ಅದ್ಭುತವೆನಿಸುತ್ತದೆ. ಐವತ್ತೈದು ನುಡಿಗಳ ಈ ದೀರ್ಘಕೃತಿಯಲ್ಲಿ ಅನೇಕ ತತ್ತ್ವಗಳು ತುಂಬಿಕೊಂಡು ಕೃತಿಕಾರರ ಅಪಾರ ಜ್ಞಾನ ಭಕ್ತಿ ದ್ಯೋತಕವೂ ಆಗಿದೆ.

ರಾಯರ ಕೃತಿಗಳು ವಿಶೇಷವಾಗಿ ಅಪೂರ್ವ ಆಧ್ಯಾತ್ಮ ಪ್ರಮೇಯ ಪುಂಜವಾಗಿವೆ. ಸೃಷ್ಟಿ-ಲಯ ಪ್ರಕರಣಗಳು, ಪಂಚೀಕರಣದ ವಿವರ, ಹೃದಯಾಬ್ಜ ಚಕ್ರದಲ್ಲಿನ ಭಗವದ್ರೂಪಗಳು, ಪ್ರಣವ ಮಂತ್ರಾರ್ಥ, ಪಂಚರೂಪ ಚಿಂತನ, ಪಂಚಕೋಶಗಳ ವಿವರಣೆ, ದ್ವಾದಶನಾಮಗಳು-ಪಂಚಮುದ್ರೆಗಳಲ್ಲಿನ ಭಗವದ್ರೂಪಗಳು, ಕೇಶವಾದಿ ಚತುರ್ವಿಂಶತಿ ಮೂರ್ತಿಗಳ ಚಿಂತನೆ ಉಪಾಸನಕ್ರಮ, ದಶಾವತಾರ ಸ್ತುತಿ, ಲಕ್ಷ್ಮೀನರಸಿಂಹಸ್ತೋತ್ರ, ಶ್ರೀಮದ್ಭಾಗವತ ಮಹಿಮೆ, ವಾಯುದೇವರ ಅಪೂರ್ವ ಲೀಲೆಗಳ ವಿವರಣೆ ಮೊದಲಾದುವು ತುಂಬ ಪ್ರಮೇಯಾತ್ಮಕವಾಗಿವೆ. ಅನೇಕ ರಹಸ್ಯತಮ ತತ್ತ್ವಗಳನ್ನು ಇವರ ಕೃತಿಗಳಲ್ಲಿ ಕಾಣಬಹುದು.

ರಾಯರ ಸ್ವಭಾವ ತುಂಬ ಸಂಕೋಚ ಪ್ರವೃತ್ತಿಯದು; ಅಷ್ಟೇ ಸರಳ ಅವರ ಬಾಳು. ಯಾವ ವಿಧವಾದ ಆಕರ್ಷಣೆ-ಆಡಂಬರಕ್ಕೆ ಅಲ್ಲಿ ಎಡೆಯಿಲ್ಲ. ತಮ್ಮ ಪಾಲಿಗೆ ತೃಪ್ತಿ. ಕೀರ್ತಿಯ ಬಯಕೆ ಸುತರಾಂ ಇರಲಿಲ್ಲ. ಅವರ ಎಲ್ಲರೊಂದಿಗೂ

ಸೌಜನ್ಯದಿಂದ, ನಗುಮೊಗದಿಂದ ಒಂದೆರಡು ಮಾತುಗಳನ್ನು ಮಾತ್ರ ಆಡುತ್ತಿದ್ದರು ತುಂಬ ಬೇಕಾದವರೊಂದಿಗೆ–ವಿಶ್ವಾಸವಿದ್ದವರೊಂದಿಗೆ ಮಾತ್ರ ಹೆಚ್ಚಿನ ಸಂಭಾಷಣೆ ಚರ್ಚೆ ಇತ್ಯಾದಿ. ಅದೂ ಮಿತಿಯುಳ್ಳದ್ದೇ ಆಗುತ್ತಿತ್ತು. ಅವರಾಗಿಯೇ ಯಾರಿಗೂ ಏನೂ ಹೇಳುವ ವಿವರಿಸುವ ಗೋಜಿಗೆ ಹೋಗುತ್ತಿರಲಿಲ್ಲ. ಅವರದು ಬಹು ಗುಪ್ತವಾದ ಸಾಧನೆ ಎಂಬುದಂತೂ ಎಲ್ಲರಿಗೂ ತಿಳಿದ ವಿಚಾರ.

ಆಡಂಬರದ ಸುಳಿವು ಕಂಡರೂ ರಾಜಸ ಎಂದು ಬಿಡುತ್ತಿದ್ದರು. ಅವರ ಆಪ್ತರಾಗಿದ್ದವರೊಬ್ಬರು (ಶಿಷ್ಯರೇ) ಆಚರಿಸುತ್ತಿದ್ದ ಪುರಂದರದಾಸರ ಆರಾಧನೆಯನ್ನು ರಾಜಸ ಎಂದು ಹೇಳಿದ್ದು ಈ ಲೇಖಕನಿಗೆ ನೆನಪಿದೆ.

ಅವರಾಗಿ ಎಲ್ಲಿಯೂ ಯಾರಲ್ಲಿಯೂ ಏತಕ್ಕೂ ಹೋಗುತ್ತಿರಲಿಲ್ಲ. ಆದರೂ ಶ್ರೀಜನರೂಪಿ ಹರಿ ಅವರನ್ನು ಅನೇಕರಿಗೆ ಸ್ವಪ್ನಮೂಲಕ ಪರಿಚಯ ಮಾಡಿಸುತ್ತಿದ್ದದುಂಟು. ಅನೇಕ ವಿಚಿತ್ರ ಸನ್ನಿವೇಶಗಳಲ್ಲಿ ಹರಿಪ್ರೇರಣೆಯಿಂದ ಅವರು ಅನೇಕರಿಗೆ ಅಂಕಿತಗಳನ್ನು ಪ್ರಧಾನ ಮಾಡುತ್ತಿದ್ದುದುಂಟು.

ಕಾಗದ ಪತ್ರ ಏನೂ ಇಲ್ಲದೆ ಇದ್ದರೂ ಒಮ್ಮೆ ಮನೆಯಲ್ಲಿ ಹೇಳಿದರು, "ಮೈಸೂರಿನಿಂದ ದಂಪತಿಗಳು ಇಂದು ಸಂಜೆ ಬರಬಹುದು" ಎಂದು! ಅದರಂತೆ ಅವರು ಬಂದರು. ಎಲ್ಲರಿಗೂ ಆಶ್ಚರ್ಯವಾಯಿತು. ಅವರಿಗೆ ಮಾರನೆಯ ದಿನ ಅಂಕಿತ ಪ್ರದಾನವಾಯಿತು. ಹೀಗೆ ಅವರಿಂದ ಅಂಕಿತ ಸ್ವೀಕಾರ ಮಾಡಿದವರ ಸಂಖ್ಯೆ ಸುಮಾರು ನೂರಐವತ್ತು.

ಪ್ರತಿದಿನವೂ ಬೆಳಗ್ಗೆ ಏಳುಗಂಟೆಯ ಹೊತ್ತಿಗೆ ಅವರು ತಮ್ಮ ಆಹ್ನಿಕ ದೇವತಾರ್ಚನಾದಿಗಳನ್ನು ಮುಗಿಸಿ ಭಗವದ್ಗೀತೆಯ ಶ್ಲೋಕಗಳು ಕೆಲವನ್ನು ಪಠಿಸುವ ಕಾರ್ಯಕ್ರಮ ಮುಗಿಯುತ್ತಿದ್ದಿತು. ಇದು ಅವರ ನಿಡು ಬಾಳಿನಲ್ಲಿ ಎಂದೂ ತಪ್ಪಲಿಲ್ಲ, ಪರಸ್ಥಳಕ್ಕೆ ಪ್ರಯಾಣಮಾಡಿದಾಗಲೂ ಈ ದಿನಚರಿ ಹಾಗೇ ನಡೆಯುತ್ತಿದ್ದಿತು. ಹೃದಯಾಬ್ಜ ಚಕ್ರ ಮಂಡಲವನ್ನು ನಕ್ಷೆಯಾಗಿ ಬರೆದು, ಅಚ್ಚುಮಾಡಿಸಿ ಆಪ್ತರಲ್ಲಿ ಹಂಚಿದರು. ಅದರಮೇಲೆ ತಟ್ಟೆಯಿಟ್ಟು ಸಾಲಿಗ್ರಾಮಾದಿಗಳಿಗೆ ಅಭಿಷೇಕ ಮಾಡುತ್ತಿದ್ದುದೊಂದು ಅವರ ವೈಶಿಷ್ಟ್ಯ. ಕೌಟುಂಬಿಕ ಕ್ಲೇಶಗಳಿಗೆ ಕಡಿಮೆಯೇನಿರದಿದ್ದರೂ ಎಂದೂ ಅದಕ್ಕಾಗಿ ಅವರು ಮರುಗಿದವರಲ್ಲ–ಗೊಣಗಿದವರಲ್ಲ–ಯಾರಿಗೂ ಹೇಳಿಕೊಳ್ಳುತ್ತಿರಲಿಲ್ಲ–ಹರಿಚಿತ್ತ ಎಂದು ಬಿಡುತ್ತಿದ್ದರು. ಹರಿದಾಸರ ಆದರ್ಶ ಲಕ್ಷಣಗಳನ್ನು ಅವರಲ್ಲಿ ಕಾಣಬಹುದಾಗಿದ್ದಿತು. "ಸಾಲಮಾಡಲಿಬೇಡ, ಸಾಲವಂದಿಸಬೇಡ, ನಾಳಿಗೆ ಬೇಗೆಂಬ ಚಿಂತೆ ಬೇಡ" ಎಂಬ ಶ್ರೀ ವಿಜಯದಾಸರ ವಾಣಿಯನ್ನು ಅವರು ತಪ್ಪದೆ ಪಾಲಿಸುತ್ತಿದ್ದರು. ತಮ್ಮ ತೊಂಬತ್ತ ಮೂರು ವರ್ಷಗಳ (1871–1964) ನಿಡುಬಾಳಿನಲ್ಲಿ ಯಾರಿಗೂ ಯಾತಕ್ಕೂ ಬೇಡಿ ಎನ್ನದೆ, ಸಾಲಮಾಡದೆ, ಕಷ್ಟಕಾರ್ಪಣ್ಯಗಳಿದ್ದರೂ ಶ್ರೀ ಹರಿಸ್ಮರಣೆಯಿಂದ ಅವನ್ನು ಸಹಿಸಿ, ಅಭಿಮಾನ ರಾಹಿತ್ಯದಿಂದ

ರುಪ್ಯಚಿತ್ತಲಾಭ ಸಂತುಷ್ಟಿ–ಅನುಸಂಧಾನಗಳಿಂದ ಹಸನಾದ ಬಾಳನ್ನು ನಡೆಸಿದ ಧೀರರು ಶ್ರೀನಿವಾಸರಾಯರು.

ತಮ್ಮ ಮರಣೋತ್ತರದ ಕಾರ್ಯಕಲಾಪಗಳಿಗಾಗಿ ಆರುನೂರು ರೂಪಾಯಿಗಳನ್ನು ತಲೆದಿಂಬಿನ ಕೆಳಗೆ ಇಟ್ಟು, ಧರ್ಮಪತ್ನಿಗೆ ಅದನ್ನರುಹಿ - ಹೆಚ್ಚು ಖರ್ಚು ಆಡಂಬರವಿಲ್ಲದೆ ಸರಳವಾದ ರೀತಿಯಲ್ಲಿ ಶ್ರೀಹರಿ ಪ್ರೀತಿಯಾಗುವಂತೆ ನಡೆಸಬೇಕು ಎಂದು ಸೂಚಿಸಿದ್ದರು!

ರಾಯರ ದಿನಚರಿಯ ಪುಟಗಳಿಂದ ತಿಳಿದುಕೊಳ್ಳಬೇಕಾದ ಕೆಲವು ಆಚರಣೆಗಳಿಂತು-

ರಾತ್ರಿ ಹನ್ನೆರಡು ಗಂಟೆ ಆದರೂ ಅನೇಕದಿನಗಳು ಅವರು ಹಾಸಿಗೆಯ ಮೇಲೆ ಹಾಗೆ ಕಣ್ಮುಚ್ಚಿ ಕುಳಿತುಕೊಂಡಿರುತ್ತಿದ್ದರು. ಯಾರಾದರೂ ಕೇಳಿದರೆ ತಿಂದದ್ದು ಅರ್ಧಪಚನವಾದಮೇಲೆ ಮಲಗಬೇಕು. ನಾವು ವಯಸ್ಸಾದವರು–ಮುದುಕರು–ನಾಳೆ ಬೆಳಗ್ಗೆ ಪೂಜೆಮಾಡುವಾಗ ದೇಹ ಸರಿಯಾಗಿರಬೇಕು ಎನ್ನುತ್ತಿದ್ದರು. ನನ್ನ ನಾಡಿಯೇ ನನಗೆ ಗಡಿಯಾರ ಎನ್ನುತ್ತಿದ್ದರು. ಐದುಗಂಟೆಯಲ್ಲಿ ಎದ್ದು ಕುಳಿತಿರುತಿದ್ದರು. ರಾತ್ರಿ ಮಲಗುವಾಗ ಗೋಡೆಗಳನ್ನು ಮುಟ್ಟಿ, ಚಿಂತನೆ ಮಾಡಿ, ದೇವತಾ ಸ್ಮರಣೆ ಮಾಡಿ, ಆಮೇಲೆ ಮಲಗುತ್ತಿದ್ದರು.

ಅನೇಕವೇಳೆ ಅವರಾಡುತ್ತಿದ್ದ ಮಾತು ಸತ್ಯವಾಗುವುದು ಕಂಡು ಬಂದಿದೆ. ಅಂಕಿತಪ್ರಧಾನ ಪದಗಳಲ್ಲಿ ಹೇಳಿರುವ ಅನೇಕ ವಿಚಾರಗಳು ಆಯಾ ವ್ಯಕ್ತಿಗಳ ಜೀವನದಲ್ಲಿ ಸತ್ಯವಾಗಿರುವುದೂ ಕಂಡುಬಂದಿದೆ.

“ಧನವಿಲ್ಲದಯ್ಯ – ಸಾಧನ ನಿಲ್ಲುವುದಯ್ಯ”; “ಜನ ಬಾಹೋರಯ್ಯ – ಸಜ್ಜನ ಬಾರರಯ್ಯ” ಎಂದು ಆಗಾಗ್ಗೆ ಅವರು ಹೇಳುತ್ತಿದ್ದರು. ಎಂತಹ ನುಡಿಮುತ್ತುಗಳು! ಇಂದ್ರಿಯಗಳನ್ನು ನಮ್ಮ ಅಧೀನದಲ್ಲಿರುವ ಹಾಗೆ ನೋಡಿಕೊಳ್ಳಬೇಕು; ಅವುಗಳ ಅಧೀನದಲ್ಲಿ ನಾವಿರಬಾರದು–ಎನ್ನುತ್ತಿದ್ದರು.

ಪಿಳ್ಳಂಗೇರಿ, ಉಡುಪಿ, ತಿರುಪತಿ, ಹೊಳೇನರಸೀಪುರ, ಬೆಂಗಳೂರು, ಮದ್ರಾಸು, ದೇವರಾಯದುರ್ಗ, ಅಬ್ಬೂರು, ವಸಂತಪುರ, ಪಂಢರಪುರ ಮುಂತಾದ ಸ್ಥಳಗಳಲ್ಲಿ ಪುರಂದರದಾಸರ ಆರಾಧನಾ ಮಹೋತ್ಸವವನ್ನು ಕೇವಲ ಸಾತ್ವಿಕ ರೀತಿಯಲ್ಲಿ ನಿರಾಡಂಬರವಾಗಿ ಅಂದರೆ ದಾಸವರ್ಯರಿಗೆ ಪ್ರೀತಿಯಾಗುವಂತೆ ಶುದ್ಧವಾದ ರೀತಿಯಲ್ಲಿ ಆಚರಿಸುತ್ತಿದ್ದರು. ಪ್ರತಿ ಶನಿವಾರ ಭಜನೆ ತಪ್ಪದೆ ನಡೆಸುತ್ತಿದ್ದರು. ಯಾರೂ ಇಲ್ಲದಿದ್ದರೆ ಅವರೊಬ್ಬರೆ ಕುಳಿತು ಭಜನೆ ಮಾಡುತ್ತಿದ್ದರು.

ಎಂಬತ್ತು ವರ್ಷಗಳಾದ ಮೇಲೆ (ಅವರು ಜೀವಿಸಿದ್ದು 93 ವರ್ಷಗಳು) ಅವರು ತಮ್ಮ ಪಾಲಿಗೆ ತಾವು ಏಕಾಂತವಾಗಿ ಕುಳಿತು ಶಾಂತರೀತಿಯಿಂದ ಚಿಂತನೆ

ಮಾಡುತ್ತಿದ್ದಾಗ ಮೊಮ್ಮಕ್ಕಳು, ಅಕ್ಕ ಪಕ್ಕದ ಮನೆಯ ಮಕ್ಕಳು, ಪರಿಚಿತರ ಮಕ್ಕಳು ಬಂದು ಪಕ್ಕದಲ್ಲಿ ಕುಳಿತರೆ–ಏನಮ್ಮ ಏನೂ ಕೆಲಸವಿಲ್ಲವೆ ? ಏನಾದರೂ ಕೆಲಸನೋಡಿ ಮಾಡಿ ಎನ್ನುತ್ತಿದ್ದರು. ಆಗ ಅವರ ಮಗಳು–ನೀವೊಬ್ಬರೇ ಇರುವಿರಲ್ಲ ಬೇಜಾರಾಗುವುದಿಲ್ಲವೆ ? ಜೊತೆಗೆ ಇರೋಣ ಎಂದು ಕುಳಿತಿದ್ದೇವೆ ಎಂದರೆ, ನಾನೊಬ್ಬನೇ ಕೂತಿಲ್ಲವಮ್ಮ–ಬೇಕಾದಷ್ಟು ಜನ ನನ್ನೊಂದಿಗಿದ್ದಾರೆ. ನಮ್ಮ ದೇಶದಲ್ಲೇ ಎಷ್ಟೋ ಮಂದಿ ದೇವತೆಗಳಿದ್ದಾರೆ. ಅಲ್ಲದೆ ನೀವು ಹೇಳಿದಂತೆ ಒಬ್ಬನೇ ಕುಳಿತಿರಲು ನನಗೆ ಬೇಜಾರಿಲ್ಲ; ಒಬ್ಬನೇ ಕುಳಿತಿದ್ದರೇ ನನಗೆ ಹೆಚ್ಚಿನ ಪ್ರಯೋಜನ ಎನ್ನುತ್ತಿದ್ದರು.

ಅವರು ವೃತ್ತಪತ್ರಿಕೆಗಳನ್ನು ಓದುತ್ತಿದ್ದುದು ಮಧ್ಯಾಹ್ನ ಎರಡೂವರೆ ಗಂಟೆಗೆ. ಬೆಳಿಗ್ಗೆ ದೇವರ ಪೂಜೆಯಾದ ಮೇಲೆ ದೇವರ ಮನೆಯಿಂದ ಹೊರಬಂದು ಮಕ್ಕಳ ತಲೆಯಮೇಲೆ ಕೈ ಇಡಿಸಿ ಆಶೀರ್ವದಿಸುತ್ತಿದ್ದರು. ದೇವತಾರ್ಚನೆ ಮಾಡಿದ ಕೈಯಿಂದಾಗಿ ದೇವರು ಒಳ್ಳೆಯದನ್ನು ಮಾಡಲಿ ಎನ್ನುತ್ತಿದ್ದರು. ದೇವರ ಮನೆ ಪ್ರತ್ಯೇಕವಾಗಿ ಇದ್ದುದರಲ್ಲಿ ದೊಡ್ಡದಾಗಿಯೇ ಇದ್ದಿತು. ಅನೇಕವೇಳೆ ಅಲ್ಲಿ ದೇವರ ಮುಂದೆ ರಂಗೋಲಿ ಬಿಡಿಸುತ್ತಿದ್ದರು. ಒಂದುಮೂಲೆಯಲ್ಲಿ ಎರಡು ಮೂರು ದೊಡ್ಡ ಡಬ್ಬಿಗಳಲ್ಲಿ ಎಣ್ಣೆ ಸದಾ ಇರುತ್ತಿದ್ದಿತು. ದೀಪಗಳು ಎಷ್ಟೋ ಸಂತತವಾಗಿ ಉರಿಯುತ್ತಿದ್ದುವು. ಎಣ್ಣೆಯನ್ನೆಲ್ಲ ಯಾರೋ ಭಕ್ತರು ತಂದು ಇಟ್ಟದ್ದು ಅದನ್ನು ಪ್ರತ್ಯೇಕವಾಗಿ ದೇವರ ಮನೆಯಲ್ಲೇ ಇರಿಸಿ, ದೀಪ ಹಚ್ಚಿ ನಂದದಂತೆ ನೋಡಿಕೊಳ್ಳುತ್ತಿದ್ದರು. ಮನೆಯಲ್ಲಿ ಅಡಿಗೆಗೆ ಎಣ್ಣೆ ಇರದಿದ್ದರೂ ದೇವರ ಮನೆಯ ಎಣ್ಣೆ ಮಾತ್ರ ಅಡಿಗೆಮನೆಗೆ ಹೋಗುತ್ತಿರಲಿಲ್ಲ. ಯಾವಾಗಲೂ. ಇದು ಅವರ ನಿಷ್ಠೆ–ನಿಸ್ಪೃಹೆ.

ಚಿತ್ರದುರ್ಗ ಅಂತಹ ದೊಡ್ಡ ಪಟ್ಟಣವೇನಲ್ಲ; ಜಿಲ್ಲಾ ಮುಖ್ಯಸ್ಥಳ. ಸಾಮಾನ್ಯವಾಗಿ ಒಬ್ಬರಿಗೊಬ್ಬರು ಪರಿಚಯವಿದ್ದವರೇ. ನೇರವಾಗಿ ಅಲ್ಲದಿದ್ದರೂ ಪರೋಕ್ಷವಾಗಿಯಾದರೂ ಪರಿಚಯ ಉಂಟು. ಒಂದೇ ಊರಿನಲ್ಲಿ ನಲವತ್ತು ವರ್ಷಗಳಷ್ಟು ದೀರ್ಘಕಾಲ ವಾಸವಾಗಿದ್ದವರು–ಸಾಕಷ್ಟು ಪ್ರಸಿದ್ಧಿ ಪಡೆದವರೂ ಆದ ಇವರ ವಿಷಯ ಎಲ್ಲರಿಗೂ ತಿಳಿದದ್ದೇ. ಆದರೂ ಕುಹಕಿಗಳು ಎಲ್ಲಾಕಾಲದಲ್ಲೂ ಇರುವಂತೆ ಇಲ್ಲಿಯೂ ಇದ್ದರು. ಇವರೊಬ್ಬ ದಾಸರು ಎಂದು ಉಪೇಕ್ಷೆಯಿಂದಿದ್ದವರು ಹಲವರು. ಅನೇಕ ಮಂದಿ ದೊಡ್ಡ ದೊಡ್ಡ ಮನುಷ್ಯರನ್ನು ಶಿಷ್ಯರಾಗಿ ಉಳ್ಳ ಈ ದಾಸರು ಅವರಿಂದ ಯಥೇಚ್ಛವಾಗಿ ಧನಗಳಿಸಿಕೊಂಡು ಸುಖಜೀವನ ನಡೆಸುತ್ತಾರೆ ಎಂದವರೂ ಉಂಟು. ಮನೆಗೆ ಬಂದು ನೋಡಿ ಚೆನ್ನಾಗಿ ತಿಳಿದು ಆಡುವ ಮಾತುಗಳಲ್ಲ ಅವು. ಎಷ್ಟೋ ಚಿತ್ರದುರ್ಗದಲ್ಲಿ ಇವರ ಮನೆಗೆ ಒಂದು ಫರ್ಲಾಂಗಿನಷ್ಟೇ ದೂರದಲ್ಲಿದ್ದವರು, ಏನು ಶ್ರೀನಿವಾಸರಾಯರ ಮನೆಯಲ್ಲಿ ಎಲ್ಲದಕ್ಕೂ (ಅಡಿಗೆಮಾಡುವುದಕ್ಕೂ) ಬೆಳ್ಳಿ ಪಾತ್ರೆಗಳನ್ನೇ ಉಪಯೋಗಿಸುತ್ತಾರಂತಲ್ಲ–ಹೌದೆ? ಎಂದು ನನ್ನನ್ನೇ ಕೇಳಿದರು. ಅದು ನಿಜವಲ್ಲ–ಅವರು ಬಡತನದ ಜೀವನದಲ್ಲೇ ಇರುವವರು ಎಂದು ನಾನು ಉತ್ತರ

ಕೊಟ್ಟರೂ ಅವರಿಗೆ ಆ ಪದ್ಧತಿಯಲ್ಲಿ ನಂಬಿಕೆ ಬರಲಿಲ್ಲ. ಅವರಿಗೆ ನೂರಾರು ಮಂದಿ ಶಿಷ್ಯರಿದ್ದಾರಂತೆ – ಅವರೆಲ್ಲ ಚೆನ್ನಾಗಿ ಗಳಿಸುವವರು – ಗುರುಗಳಿಗೆ ಕೊಡದೆ ಇರುತ್ತಾರೆಯೇ? ಎಂದರು. ಶಿಷ್ಯರಿರುವುದು ನಿಜ–ಆದರೆ ಅವರೆಲ್ಲ ಗುರುಗಳಿಗೆ ದಕ್ಷಿಣೆ ಕೊಡುವರೆಂಬುದು ನಿಜವಲ್ಲ ಎಂದು ನಾನು ತಿಳಿದಿದ್ದೇನೆ ಎಂದೆ.

ಒಮ್ಮೆ ಅವರ ಮನೆಗೆ ಭೇಟಿಗಾಗಿ ಹೋಗಿದ್ದಾಗ ಅವರು ಜ್ವರದಿಂದ ನರಳುತ್ತಾ ಮಲಗಿದ್ದರು. ಮನೆಯಲ್ಲಿ ಸಕ್ಕರೆ ಇರಲಿಲ್ಲ. ನನಗೆ ಕಾಫಿ ಕೊಡಬೇಕೆಂದು ಅವರೇ ಹೇಳಲಾರರು ಹೇಳದಿರಲಾರರು. ಮನೆಯಲ್ಲಿ ಪತಿ–ಪತ್ನೀ ಇಬ್ಬರಲ್ಲದೆ ಮತ್ತೊಬ್ಬರಿಲ್ಲ. ಎಂಟನೆಯ ತಾರೀಖಾಗಿದ್ದರೂ ಅನಾರೋಗ್ಯದ ಕಾರಣದಿಂದ ಅವರು ವಿಶ್ರಾಂತಿ ವೇತನವನ್ನು ಪಡೆಯುವುದಕ್ಕೆ ಖಜಾನೆಗೆ ಹೋಗಿರಲಿಲ್ಲ. ನನಗೆ ಸಾಕಷ್ಟು ಬಳಕೆ ಯಿದ್ದುದರಿಂದ, ಅವರ ಧರ್ಮಪತ್ನಿಯವರ ಮೂಲಕ ಇದ್ದ ಸ್ಥಿತಿಯನ್ನರಿತುಕೊಂಡೆ. ನೇರವಾಗಿ ಅವರಿಗೆ ಹೇಳಿದೆ–"ನನ್ನಿಂದಾದ ಸೇವೆಯನ್ನು ಮಾಡಲು ಬಿಡಿ" ಎಂದು. ನಿಮ್ಮಂತಹವರಿಗೆ ಹೇಗಪ್ಪ ಹೇಳುವದು ಎಂದು ತುಂಬ ಸಂಕೋಚ ಪಟ್ಟುಕೊಂಡು, ನಾನು ಬಲಾತ್ಕಾರಮಾಡಿದ ಮೇಲೆ ಹೇಳಿದ್ದು ಎರಡು ಕೆಲಸ. ಒಂದು ಅವರ ನಿವೃತ್ತಿವೇತನ ತರುವುದು–ಎರಡು ಸೊಸೈಟಿಯಿಂದ ಸಕ್ಕರೆ ಕೊಂಡುಬರುವುದು. ತಲೆದಿಂಬಿನ ಕೆಳಗೆ ಇಟ್ಟುಕೊಂಡಿದ್ದ ವಿಶ್ರಾಂತಿವೇತನ ಪತ್ರವನ್ನು ತೆಗೆದು ನನ್ನ ಕೈಗಿತ್ತಾಗ ಅದನ್ನು ನೋಡಿ ನನಗೆ ಆಶ್ಚರ್ಯವಾಯಿತು. ಏಕೆಂದರೆ ಅವರ ವಿಶ್ರಾಂತಿವೇತನ ಮೂವತ್ತೊಂದು ದಿನಗಳಿಗೆ ಹನ್ನೊಂದು ರೂಪಾಯಿ ಇಪ್ಪತ್ತೆಂಟು ಪೈಸೆಗಳು ಮಾತ್ರ ಎಂದು ಅದರಲ್ಲಿತ್ತು. ಈ ವೇತನದಿಂದ ನಿಮ್ಮ ಜೀವನ ಹೇಗೆ ನಡೆಯುತ್ತದೆ ಎಂದು ನೇರವಾಗಿ ಅವರನ್ನು ಪ್ರಶ್ನಿಸಿದೆ. ಅಷ್ಟೇ ಅಲ್ಲ ಶಿಷ್ಯರಿಗೆ ಈ ವಿಚಾರವನ್ನು ನೀವು ತಿಳಿಸಿದರೆ ಪ್ರಯೋಜನವಾಗಬಹುದು ಎಂದೂ ಸೂಚಿಸಿದೆ. ಆಗ ಅದಕ್ಕೆ ಉತ್ತರವಾಗಿ ಅವರಾಡಿದ ಮಾತು ಸುವರ್ಣಾಕ್ಷರಗಳಿಂದ ಬರೆದಿಡಬೇಕಾದುದು. "ನಾನು ಗುರುವಾಗಿರುವುದು ಶಿಷ್ಯರ ವಿತ್ತಾಪಹಾರಕ್ಕಲ್ಲ; ಸಾಧ್ಯವಾದರೆ [illegible] ಅವರ ಹೃತ್ತಾಪಹಾರಕನಾಗ ಬೇಕಾದುದು ನನ್ನ ಕರ್ತವ್ಯ' ಎಂದರು.

ರಾಯರ ಶಿಷ್ಯರನೇಕರು ಉನ್ನತ ಹುದ್ದೆಯಲ್ಲಿದ್ದರು. ಆಗಿನ ಮೈಸೂರು ಸಂಸ್ಥಾನದ Chief Engineer ಆಗಿದ್ದವರೇ ಅವರ ಶಿಷ್ಯರಾಗಿದ್ದರು. ಮತ್ತೊಬ್ಬರು ರೇಲ್ವೆ ಎಂಜಿನಿಯರ್ ಆಗಿದ್ದರು. ಅನೇಕರು ಡಾಕ್ಟರುಗಳಾಗಿದ್ದರು. ಅವರಿಗೇನೂ ಇವರಿಗೆ ಸಹಾಯಮಾಡಲು ಭಾರವಾಗುತ್ತಿರಲಿಲ್ಲ. ಆದರೆ ರಾಯರು ಯಾರನ್ನೂ ಯಾವುದಕ್ಕೂ ಏನನ್ನೂ ಕೇಳಲಿಲ್ಲ. ಒಂದು ಕಾಸೂ ಸಹ ಅವರಿಗೆ ಸಾಲವಿರಲಿಲ್ಲ. ಅದು ಹೇಗೆ ಅವರು ಸಂಸಾರನಿರ್ವಹಣೆ ಮಾಡುತ್ತಿದ್ದರೆಂಬುದು ಒಗಟಾಗಿದ್ದಿತು.

ಅವರಾಡುತ್ತಿದ್ದ ಅನೇಕ ಮಾತುಗಳು ಸುಭಾಷಿತಗಳಾಗಿದ್ದುವು. ಬೀಸುವ ಕಲ್ಲನ್ನು ಗರಗರ ತಿರುಗಿಸುತ್ತಿದ್ದರೆ ಅದು ಬೇಗ ಕೆಟ್ಟುಹೋಗುವುದು. ಹಾಗೇ ದೇಹವನ್ನು ಸರಿಯಾಗಿ ನೋಡಿಕೊಳ್ಳದಿದ್ದರೆ ಹೆಚ್ಚುಕಾಲ ಸರಿಯಾಗಿರಲಾರದು. ಚೆನ್ನಾಗಿ ಅಗಿದು ಆಹಾರವನ್ನು ನುಂಗಿ ಜೀರ್ಣಿಸಿಕೊಳ್ಳಬೇಕು. ಅಂಗಾಂಗಗಳ ಚಲನೆಗಾಗಿ ವೃದ್ಧರೂ ಕೆಲಸಮಾಡಬೇಕು. 93 ನೆಯ ವಯಸ್ಸಿನಲ್ಲಿಯೂ ಅವರು ತಮ್ಮ ಬಟ್ಟೆಯನ್ನು ತಾವೇ ಒಗೆದುಕೊಳ್ಳುತ್ತಿದ್ದರು. ಮಕ್ಕಳು ಒಗೆದುಕೊಡಲು ಮುಂದಾದರೂ ಬೇಡ ಎನ್ನುತ್ತಿದ್ದರು- ಅವರು ಕುಳಿತು ಮಲಗಿ ಓಡಾಡುತ್ತಿದ್ದ ಸ್ಥಳವನ್ನು ಅಚ್ಚುಕಟ್ಟಾಗಿ ಕಸಗುಡಿಸಿ ಚೊಕ್ಕಟವಾಗಿಟ್ಟುಕೊಳ್ಳುತ್ತಿದ್ದರು. ಆಗಾಗ್ಗೆ ಕಟ್ಟಿಗೆ ಒಡೆದುಕೊಡುತ್ತಿದ್ದರು. ದೇವರ ಪೂಜೆಗೆ ತಾವೇ ಸ್ವತಃ ಅಣಿಮಾಡಿಕೊಳ್ಳುತ್ತಿದ್ದರು. ಚಿತ್ರದುರ್ಗದಲ್ಲಿ ನೀರಿನಬರ ಎಂದೂ ಇದ್ದದ್ದೇ. ಈಗಂತೂ ವಿಚಿತ್ರವೆಂದರೆ ಇವರಿರುವ ಬೀದಿಯ ನಲ್ಲಿಗಳಲ್ಲಿ ಉಪ್ಪು ನೀರು ಬರುತ್ತದೆ-ಹಿಂದಿನ ಬೀದಿಗಳಲ್ಲಿ ಸಿಹಿ ನೀರು ಬರುತ್ತದೆ! ಬೆಳಗ್ಗೆ ಅಷ್ಟು ಹೊತ್ತಿಗೇ ನಿಂತು ಹೋಗುತ್ತಿದ್ದ ನೀರನ್ನು ಕಾದು ಮಡಿಯಲ್ಲಿ ಪೂಜೆಗಾಗಿ ನೀರನ್ನು ಹಿಡಿದಿಟ್ಟುಕೊಳ್ಳುತ್ತಿದ್ದರು. ಎಷ್ಟೋ ವೇಳೆ ಮನೆಯಲ್ಲಿನ ಅನಾನುಕೂಲದ ದೆಸೆಯಿಂದ ನೈವೇದ್ಯಕ್ಕಾಗಿ ಅನ್ನ-ಹುಗ್ಗಿ ಏನನ್ನಾದರೂ ಅವರೇ ಮಾಡಿಕೊಳ್ಳುತ್ತಿದ್ದರು. ಇವೆಲ್ಲಾ ಆರೋಗ್ಯ ಕಾಪಾಡಿಕೊಳ್ಳುವುದಕ್ಕೆ ಎಂದು ಹೇಳುತ್ತಿದ್ದರು.

ಶಿಸ್ತುಪಾಲನೆಯ ವಿಚಾರದಲ್ಲಿ ರಾಯರು ಕಠಿಣವಾಗಿರುತ್ತಿದ್ದರು. ಇಂತಹ ಕಡೆಗೆ ಹೋಗಿಬರಲು ಇಷ್ಟು ಕಾಲ ಬೇಕಾಗುವುದು ಎಂದು ಲೆಕ್ಕ ಹಾಕಿ ಮೇಲೆ ಹತ್ತು ನಿಮಿಷ ಕೊಟ್ಟು ಆ ಅವಧಿಯಲ್ಲಿ ಹಿಂತಿರುಗಬೇಕು ಎಂದು ಹುಡುಗರಿಗೆ ಹೇಳುತ್ತಿದ್ದರು. ಸುಮ್ಮನೆ ಕೆಲಸವಿಲ್ಲದೆ ಅಲ್ಲಿ ಇಲ್ಲಿ ಓಡಾಡಿ ಕಾಲವನ್ನು ವ್ಯರ್ಥವಾಗಿ ಕಳೆಯಬಾರದು. ಕಳೆದ ಕಾಲ ಉಪಯುಕ್ತವಾದ ರೀತಿಯಲ್ಲಿರಬೇಕು ಸಾರ್ಥಕವಾಗಿರಬೇಕು. ವ್ಯರ್ಥ ಕಾಲಕ್ಷೇಪ ಮಾಡಕೂಡದು ಎನ್ನುತ್ತಿದ್ದರು ಅಪೇಕ್ಷೆಗಳ ಗುಲಾಮರು ನಾವಾಗಬಾರದು. ಅವುಗಳ ಮೇಲೆ ಹತೋಟಿ ನಮಗಿರಬೇಕು ಎನ್ನುತ್ತಿದ್ದರು.

ಕಾಡು ಹರಟೆ ಅವರಿಗಾಗದು. ಭಜನೆ ಮಾಡುವುದು ಕೂಡ ನಿರ್ದಿಷ್ಟ ಅವಧಿಯಲ್ಲಿ ಮಾತ್ರ ಮಾಡಿ ಮುಗಿಸುವವರು ಇವರು. ಅವರಷ್ಟೇ ವಯಸ್ಸಿನ ಹಿರಿಯರೊಬ್ಬರು, ದೊಡ್ಡ ಹುದ್ದೆಯಲ್ಲಿದ್ದು ನಿವೃತ್ತರಾದವರು ದಿನವೂ ಇವರ ಮನೆಗೆ ಸಂಜೆ ಬಂದು ಮಾತನಾಡುತ್ತ ಹೊತ್ತು ಕಳೆಯುತ್ತಿದ್ದರು. ಉಪಯುಕ್ತವಾದ ಮಾತು ಕಡಿಮೆ. ಆಧ್ಯಾತ್ಮಿಕ ಇಲ್ಲವೇ ಇಲ್ಲ ಎಂದರೂ ಸರಿ. ಇದು ಇವರಿಗೆ ಸೇರದು. ಆದರೂ ದಾಕ್ಷಿಣ್ಯಕ್ಕೆ ಅವರ ಭೇಟಿಯನ್ನು ಸ್ನೇಹವನ್ನು ಸಹಿಸುತ್ತಿದ್ದರು. ನಿರ್ದಿಷ್ಟ ಅವಧಿ ಮುಗಿದ ಮೇಲೆ ಅವರಿಗೆ ಹೇಗೋ ಎಚ್ಚರಿಕೆ ನೀಡುತ್ತಿದ್ದರು. ಹೆಚ್ಚು ಹೊತ್ತು ನಾವು ಹೀಗೆ ಮಾತನಾಡುತ್ತ ಕುಳಿತುಬಿಟ್ಟರೆ ರಾತ್ರಿ ಊಟಕ್ಕೆ ಹೊತ್ತಾಗಿ ಜೀರ್ಣವಾಗುವುದಕ್ಕೆ ತೊಂದರೆಯಾಗುತ್ತದೆ. ಎಲ್ಲರ ಮನೆಯಲ್ಲಿ ಹೆಂಗಸರಿಗೆ ತೊಂದ

ಹೆಚ್ಚು ಕಷ್ಟವಾಗುತ್ತದೆ—ಎಂದೆಲ್ಲಾ ಪರ್ಯಾಯವಾಗಿ ಹೇಳಿದರೂ, ಅವರು ಅದನ್ನು ಗ್ರಹಿಸುತ್ತಿರಲಿಲ್ಲ. ಜೊತೆಗೆ ನಿರ್ದಾಕ್ಷಿಣ್ಯವಾಗಿ ಹೇಳುವರು—ಹೊತ್ತಾಯಿತು ಇನ್ನು ತಾವು ದಯಮಾಡಿಸುತ್ತೀರಾ? ನಾಳೆ ಭೇಟಿಯಾಗೋಣ ಎಂದು ಸ್ಪಷ್ಟವಾಗಿಯೇ ಹೇಳುವರು. ಅದಕ್ಕೂ ಅವರು ಒಮ್ಮೆನ್ನು ಬಗ್ಗುತ್ತಿರಲಿಲ್ಲ. ಆಗ ಇವರೇ ಎದ್ದು ಹೊರಗೆ ಹೋಗಿಬಿಡುತ್ತಿದ್ದರು! ಆಗ ಅನಿವಾರ್ಯವಾಗಿ ಅವರು ಎದ್ದು ಮನೆಗೆ ಹೋಗಲೇ ಬೇಕಾಗುತ್ತಿತ್ತು!

ತಮ್ಮ ಶುದ್ಧವಾದ ಆಚರಣೆ ನಿಷ್ಕಪಟ ನಡೆತೆಗಳಿಂದ ಆಪ್ತವರ್ಗದಿಂದಲೂ ಶಿಷ್ಯರಿಂದಲೂ ವಿಶೇಷವಾಗಿ ಮನ್ನಣೆ ಹೊಂದಿದವರು ಶ್ರೀನಿವಾಸರಾಯರು. ಅನೇಕರು ಅವರನ್ನು ವಿವಿಧರೀತಿಯಲ್ಲಿ ಕಂಡು ಕೊಂಡಾಡಿದ್ದಾರೆ. ಜ್ಞಾನಭಕ್ತಿ ವಿರಕ್ತಿಯುಕ್ತರೂ, ಧ್ಯಾನನಿಧಿಧ್ಯಾಸಾದಿಶೀಲರೂ, ಬುಧರಿಂದ ವಂದ್ಯರೂ, ಪ್ರಾಣ ಮಹಾಸಕ್ತರೂ, ಆಗಮಗಳ ಸಿದ್ಧಿಯನ್ನು ಸ್ವಾನುಭವದಿಂದ ಪಡೆದವರೂ ಸರಸಸದ್ಗುಣ ಶೀಲರೂ, ದಾಸಧರ್ಮೋದ್ದೀಪಕರೂ, ದಾಸಕೂಟರತ್ನರೂ, ದಾಸ ಪೃದ್ದೇಶ ಪೋಷಕರು, ಮಾತರಿಶ್ವ ಪದಾಬ್ಜಯುಭೃಂಗರೂ, ಪರಮ ಅಭಿಜ್ಞರೂ, ಚಿತ್ರ ಗಾನ ಕಲಾವಿದರೂ, ನಿರ್ಲಿಪ್ತರೂ, ಅತಿಗೋಪ್ಯಸಾಧನಶೀಲರೂ, ಟೀಕಾಕೃತ್ಪ್ರಭು ಕೃಪಾಪಾತ್ರರು, ಪರಮ ಸಾತ್ವಿಕ ಮನೋವೃತ್ತಿಯುಳ್ಳವರೂ, ರಾಜಸ ತಾಮಸ ಪ್ರವೃತ್ತಿದೂರರೂ, ಮಂದಮತಿಗಳನ್ನಾದರೂ ಮುಂದಕ್ಕೆ ಕರೆದಾದರಿಸುವವರೂ, ಹರಿನಾಮಾಮೃತ ಪಾನ ಸಂತೃಪ್ತರೂ, ಸರ್ವೇಶಯನನ್ನು ಸರ್ವತ್ರದಲಿ ಧ್ಯಾನಿಸುವವರೂ, ಆದರ್ಶ ಹರಿದಾಸಲಕ್ಷಣಗಳನ್ನು ಮೈಗೂಡಿಸಿಕೊಂಡು ಅನುಷ್ಠಾನದಲ್ಲಿಟ್ಟು ಕೊಂಡ ಪೂರ್ಣಾಯುಸ್ಸನ್ನು ಸತ್ಯವರ್ತಾಚರಣೆಯಿಂದ ಸಾರ್ಥಕಪಡಿಸಿಕೊಂಡವರು ಎಂಬುವು ಕೆಲವು ಅಭಿಪ್ರಾಯಗಳು ಮಾತ್ರ.

ಉರಗಾದ್ರಿವಾಸ ದಾಸರ ಅನೇಕ ಕೃತಿಗಳು ವಿಶಿಷ್ಟ ಸನ್ನಿವೇಶಗಳಲ್ಲಿ ವಿಶಿಷ್ಟ ಕಾರಣದಿಂದ ರಚಿತವಾದುವು ಎಂದು ತಿಳಿದುಬಂದಿದೆ.

ಚಿತ್ರದುರ್ಗದ ಹಳೇ ಊರೊಳಗೆ ವ್ಯಾಸದೇವರ ಪೂಜೆ ಮಾಡುತ್ತಿದ್ದ ಕಾಲ ದಲ್ಲಿ ಶಿಷ್ಯರಾದ ಶ್ರೀ ಎಚ್. ಭೀಮರಾಯರಿಗೆ ಮಳಖೇಡದಲ್ಲಿ ಶ್ರೀ ಟೀಕಾರಾಯರ ಸಣ್ಣ ವೃಂದಾವನ ದೊರೆತು, ಅದನ್ನು ಅವರು ತುಂಬ ಸಂತೋಷ ಉತ್ಸಾಹಗಳಿಂದ ಗುರುಗಳಲ್ಲಿಗೆ ತೆಗೆದುಕೊಂಡು ಬಂದು ತೋರಿದಾಗ, ಸ್ವಪ್ನಸೂಚನೆಯ ಪ್ರಕಾರ "ಜಯತೀರ್ಥಮುನಿವರ್ಯ" ಎಂಬ ಪದ ರಚನೆಯಾಯಿತು

ಏನು ನಿನ್ನಯ ಕರುಣಾರಾಶಿ ಎಂತಿಹುದಯ್ಯ
ಬಿಡೆ ಸಲಿಸಲು ಮನೆಗೆ ಲೀನಾಗಿ ನೀ ಬಂದೆ
ಬಡಪ್ರಾಯನೆಂದೆನ್ನ ಉದ್ಧರಿಸಲೋಸು ಗದಿ
ಬಿಸಜಾಕ್ಷನ ಪಾದ ದಾಸನನಿಶ

ಜಯಗುರುವೆ ಶ್ರೀ ವಿಜಯದಾಸರಲ್ಲಿನ್ನ ನಮನೋ
ಜಯವ ಹುಟ್ಟಿಸಿದ ನಿನ್ನ ಕರುಣಾವೆಂತೋ
ಸೂಚಿಸಿ ತೋರಿದ ಸ್ವಪ್ನ ನಿಜವು ಆಗಲಿ ಎಂದು
ಬಿಜಯಮಾಡಿದೆ ನಿನ್ನ ನಿಜದಾಸರೊಡನೆ

ಎಂದು ಹಾಡಿದ್ದಾರೆ.

ಪುರಂದರದಾಸರ ಪುಣ್ಯದಿನಾಚರಣೆಗಾಗಿ ಕೆಲವು ಶಿಷ್ಯರೊಂದಿಗೆ ಉಡುಪಿಗೆ ತೆರಳಿದ್ದಾಗ ವಾಸುದೇವ ತೀರ್ಥದಲ್ಲಿ–ಹೆಂಗಸರು ಯಾರೂ ಸ್ನಾನಮಾಡಲು ಹೋಗಬೇಡಿರಿ ಎಂದು ಸೂಚನೆಯಿತ್ತು, ತಾವು ಸ್ನಾನಮಾಡಿ ಮೇಲುಕಟ್ಟೆಯಲ್ಲಿ ದೇವತಾರ್ಚನೆ ಮಾಡುತ್ತ ಕುಳಿತರು. ಜೊತೆಗೆ ಬಂದವರಲ್ಲಿ ಒಬ್ಬ ಮಹಿಳೆ ಗುರುಗಳ ಮಾತಿಗೆ ಲಕ್ಷ್ಯ ಕೊಡದೆ, ಸ್ನಾನ ಮಾಡುವ ಅಪೇಕ್ಷೆಯಿಂದ ತೀರ್ಥದಲ್ಲಿ ಇಳಿದು ಕಾಲುಜಾರಿ ನೀರಿನೊಳಗೆ ಹೋದರು. ಅದನ್ನು ಗಮನಿಸಿದ ಗಂಡಸರೊಬ್ಬರು ಕೊಳದಲ್ಲಿ ಧುಮುಕಿ ಮುಳುಗಿದ್ದವರನ್ನು ಹೊರಕ್ಕೆ ಎಳೆದು ಹಾಕಿದರು. ದೇವರ ದಯದಿಂದ ಮಹಿಳೆ ಬದುಕಿಕೊಂಡಳು. ಗುರುಗಳು ಅಪಮೃತ್ಯು ಪರಿಹಾರವಾಯಿತು. ಗಂಡಾಂತರವನ್ನು ಪರಾಭವಮಾಡಿದ ಸ್ವಾಮಿ ಎಂದು ಹೇಳಿ, ಆ ಸನ್ನಿವೇಶ–ಘಟನೆಯ ಸ್ಮಾರಕವಾಗಿ ಶ್ರೀ ಟಿ. ಆರ್. ಶ್ರೀನಿವಾಸಮೂರ್ತಿ ಎಂಬುವ ಆ ಮಹಿಳೆಯ ಬಂಧುವಿಗೆ ಜಯಾಪತಿವಿಠಲ ಎಂಬ ಅಂಕಿತವನ್ನು ಪ್ರದಾನ ಮಾಡಿದರು.

ಒಮ್ಮೆ ಸ್ವಪ್ನದಲ್ಲಿ ಒಬ್ಬ ವೃದ್ಧ ಮುತ್ತೈದೆ–ಆದರೆ ಬಹು ಸ್ಫುರದ್ರೂಪಿ ಕಾಣಿಸಿಕೊಂಡು "ನಮ್ಮ ಯಜಮಾನರಿಗೆ ಸ್ವಲ್ಪ ಬುದ್ಧಿ ಹೇಳಿ" ಎಂದರು. ಆದರೆ ರಾಯರು ನೀವೇ ಇಷ್ಟು ವೃದ್ಧರು. ಇನ್ನು ನಿಮ್ಮ ಯಜಮಾನರು ಎಂದರೆ ನಿಮಗಿಂತ ದೊಡ್ಡವರು–ಅಂಥಹ ಹಿರಿಯರಿಗೆ ನಾನೇನು ಬುದ್ಧಿ ಹೇಳಬಲ್ಲೆ–ನನ್ನ ಯೋಗ್ಯತೆಯು? ಎಂದರು. ಅದಕ್ಕೆ ಆವರು ಇಲ್ಲ–ನೀವು ಹೇಳಬೇಕು ಎಂಬುವದೇ ಮರೆಯಾದರು. ಮಾರನೆಯ ದಿನ ಬೆಳಿಗ್ಗೆ ನಿಂದಾಸ್ತುತಿರೂಪವಾದ ಪದ ಒಂದು ತಾನಾಗಿಯೇ ಸ್ಫೂರ್ತಿ ವಿಶೇಷದಿಂದ ಚಿಮ್ಮಿ ಹೊರಹೊಮ್ಮಿತು!

ಜೋಕನೆ ಅನ್ನಕ್ಕನವ್ವ ಭಾಗೀರಥಿ ಎಂದು ಪ್ರಾರಂಭವಾಗುವ ಈ ಕೃತಿ ಬಹು ಸ್ವಾರಸ್ಯವಾಗಿ ರಮ್ಯವಾಗಿದೆ.

ಮತ್ತೊಮ್ಮೆ ಜಟಾಧಾರಿಯಾದೊಬ್ಬ ವಿಭೂತಿಧರಿಸಿದ ಸ್ಮಾರ್ತ ಬ್ರಾಹ್ಮಣ ಸ್ವಪ್ನದಲ್ಲಿ ಕಾಣಿಸಿಕೊಂಡು ಒಂದು ತಟ್ಟೆಯಲ್ಲಿ ಮಾಂಗಲ್ಯವನ್ನಿಟ್ಟುಕೊಂಡು ಇದು ಸರಿಯಾಗಿಲ್ಲ–ಸರಿಮಾಡಬೇಕು ಎಂದು ಹೇಳಿದಂತೆ ಆಯಿತು. ಇದು ಏನೋ ಅಶುಭ ಸೂಚನೆ ಎಂದು ರಾಯರಿಗೆ ಎನ್ನಿಸಿ ಬಳ್ಳದ ಮನೆಯವರನ್ನು ಕರೆಸಿಕೊಂಡು

ಹೇಳಿದರು. ಇವತ್ತೇನೋ ಗಂಡಾಂತರವಿದೆ. ನೀನು ಮನೆಯಲ್ಲೇ ಇರಿ-ಸಹಾಯ ಬೇಕಾಗಬಹುದು ಎಂದರು. ಇವರಿಗೆ ತುಂಬ ಬೇಕಾದವರಾದ್ದರಿಂದ ಅವರು ಹಾಗೆಯೇ ಆಗಲಿ ಎಂದು ಎಲ್ಲಿಗೂ ಹೋಗದೆ ಏನಾಗುವುದೋ ಎಂಬ ಕುತೂಹಲ – ನಿರೀಕ್ಷೆಯಲ್ಲೇ ಇರುವವರಾದರು. ಸಂಜೆಯವರೆಗೆ ಏನೂ ವಿಶೇಷ ಜರುಗಲಿಲ್ಲ. ಅನಂತರ ಇದ್ದಕ್ಕಿದ್ದ ಹಾಗೆ ರಾಯರ ಧರ್ಮಪತ್ನಿ ತುಂಗಮ್ಮನವರು ಬಾಗಿಲಿನ ಚೌಕಟ್ಟಿಗೆ ತಲೆ ಜೋರಾಗಿ ತಗುಲಿದ ಪರಿಣಾಮವಾಗಿ ಕೆಳಗೆ ಬಿದ್ದು ಜ್ಞಾನ ತಪ್ಪಿ ಮೂರ್ಛೆಹೋದರು! ದೇವರ ಮುಂದೆ ತಂದು ಮಲಗಿಸಿ ತೀರ್ಥವನ್ನು ಪ್ರೋಕ್ಷಿಸಿ ದೇವರಿಗೆ ಮಂಗಳಾರತಿ ಮಾಡಿದ ಮೇಲೆ ಎಚ್ಚರಿಕೆಬಂದು ಸ್ವಲ್ಪ ಚೇತರಿಸಿಕೊಂಡರು. ರಕ್ತ ಧಾರಾಕಾರವಾಗಿ ಹರಿದಿತ್ತು. ಆಗ ಮೂಡಿಬಂದ ಪದಗಳು "ಭಯಕೃತ್ ಭಯನಾಶನ" ಮತ್ತು "ಕಂಟಕವ ಹರಿಸೊ ಶ್ರೀಕಂಠಮೂರುತಿಯೆ" ಎಂಬ ಎರಡೂ ತುಂಬ ಸ್ವಾರಸ್ಯವಾಗಿವೆ.

ಸ್ವಸ್ಥ ಚಿತ್ತವಿಲ್ಲ ಶ್ರೀಹರೀ
ಈ ಸ್ಥಿತಿಯಲ್ಲಿ ಎನ್ನ ನೋಡುವರೇ
ದುಸ್ಥಿತಿಯ ಬಡವನ ಕೈಯ ಬಿಡುವರೇ–ಶೌರೇ

ಎಂದು ಅಳಲನ್ನು ತೋಡಿಕೊಂಡಿದ್ದಾರೆ.

ರಾಯರ ಪ್ರಿಯ ಶಿಷ್ಯರೆನಿಸಿದ್ದ ಶ್ರೀ ಹೊಳೇನರಸೀಪುರದ ಶಾಮರಾಯರಿಗೊಮ್ಮೆ ವಿಷಮ ಶೀತಜ್ವರ ಬಂದು ಅವರು ತುಂಬ ಬಳಲಿಹೋದಾಗ, ಅಪಮೃತ್ಯು ಪರಿಹಾರಕರಾದ ಶ್ರೀ ಲಕ್ಷ್ಮೀನರಸಿಂಹಸ್ವಾಮಿಯನ್ನು ಸ್ತೋತ್ರಮಾಡುವ "ನಾರಸಿಂಹ ಶ್ರೀನಾರಸಿಂಹ" (ಕ್ರಮಸಂಖ್ಯೆ 52) ಎಂಬ ಪದವನ್ನು ರಚನೆಮಾಡಿ, ರೋಗಿಯ ತಲೆದಸಿಯಲ್ಲಿಟ್ಟು ಪ್ರಾರ್ಥಿಸಿಕೊಂಡಾಗ ಜ್ವರ ಇಳಿದು ಅವರಿಗೆ ಗುಣವಾಯಿತು

ಪಾರುಗಾಣಿಸಿ ದುರಿತೌಘ ಹರಿಸಿ ಕಾಯೊ ನಾರಸಿಂಹ
ನರಹರಿ ಜ್ವರಹರಿ ಘೋರವ್ಯಾಧಿಯ
ಪರಿಹಾರಗೈಸಿ ಪರಿಪಾಲಿಸಬೇಕಯ್ಯ
ಸಂಕಟ ಹರಿಸೊ ಈ ಭವಕಂಟಕದಿಂ ಶ್ರೀ
ವೇಂಕಟೇಶಾತ್ಮಕ ಭೀಕರರೂಪ
ಶಂಕರಾಂತರ್ಗತ ಸಂಕರುಷಣಮೂರ್ತೇ
ಮಂಕುಹರಿಸಿ ಪದ ಪಂಕಜ ತೋರಯ್ಯ

ಎಂದು ಅನನ್ಯವಾಗಿ ಭಕ್ತಿಯಿಂದ ಪ್ರಾರ್ಥಿಸಿಕೊಂಡು ಜ್ವರಬಾಧೆಯಿಂದ ನರಳುತ್ತಿದ್ದ ಶಿಷ್ಯನ ಆಪತ್ತನ್ನು ಪರಿಹಾರಮಾಡಿದ್ದಾರೆ

ಈ ಬಡ ದಾಸದಂಪತಿಗಳನ್ನು ಭೋಜನಕ್ಕೆ ಆಹ್ವಾನಿಸಿ (ದಂಪತಿ ಪೂಜೆ ಮಾಡುತ್ತೇವೆಂದು ಹೇಳಿ) ಪುಣ್ಯಾತ್ಮರೊಬ್ಬರು ಮದ್ದು ಹಾಕಿ ಕಳಿಸಿದರು! ಇದರ ಪರಿಣಾಮವಾಗಿ ರಾಯರಿಗೆ ಕಾಮಾಲೆ, ಪತ್ನಿ ತುಂಗಮ್ಮನವರಿಗೆ ಎರಡು ವರ್ಷಗಳಷ್ಟು ದೀರ್ಘಕಾಲ ಬಾಯಿ ಹುಣ್ಣು ಮುಂತಾದ ವ್ಯಾಧಿಗಳು ಹಿಡಿದು ತುಂಬ ಕಷ್ಟಪಟ್ಟರು. ಕುಲದೈವ ತಿಮ್ಮಪ್ಪನಿಗೆ ಬಾಯಿಬೀಗದ ಹರಕೆ ಹೊತ್ತುಕೊಂಡರು ತುಂಗಮ್ಮನವರು. ರಾಯರಿಗೆ ಕಾಮಾಲೆ ನೊಪ್ಪಿನ ಔಷಧಿಯಿಂದ ಗುಣವಾಯಿತು. ಬಾಯಿ ಹುಣ್ಣು ಗುಣವಾದ ಮೇಲೆ ಹರಕೆ ಸಲ್ಲಿಸಲು ತಿರುಮಲೆಗೆ ತೆರಳಿದರು. ಅಂಗೀರಸ ಸಂವತ್ಸರದಲ್ಲಿ ಗರುಡಗಂಬದ ಬಳಿ ತಮ್ಮ ಹರಕೆಯನ್ನು ಸಲ್ಲಿಸಿಯಾದ ಮೇಲೆ ಸುಮ್ಮನೆ ಕುಳಿತುಕೊಂಡಿದ್ದಾಗ, ಆ ದಿನ ಬ್ರಹ್ಮೋತ್ಸವದಂಗದ ಜೋ ಸೇವೆಯನ್ನು ಮಾಡಿಸಿದ್ದ ಅಪರಿಚಿತ ಭಕ್ತರು ಇವರಿಬ್ಬರನ್ನು ಸ್ವಾಮಿಯ ದರ್ಶನಕ್ಕೆ ಕರೆದುಕೊಂಡು ಹೋಗಿ ಎಲ್ಲಾ ಸೇವೆಯನ್ನು ಇವರ ಕೈಯಿಂದಲೇ ಮಾಡಿಸಿದರು!

ಈ ಘಟನೆಯನ್ನು "ಕಂಡೆನಾ ಬ್ರಹ್ಮಾಂಡನೊಡೆಯ ಶ್ರೀ ವೇಂಕಟರೇಶನ (ಕ್ರಮ ಸಂಖ್ಯೆ 44) ಎಂಬ ಕೃತಿಯಲ್ಲಿ ಸೂಚ್ಯವಾಗಿ ಹೇಳಿದ್ದಾರೆ.

ತುಂಗಮುಖಿ ಸತ್ಸಂಗವಿತ್ತು ಮನದಂತರವರಿ
ಆಂಗೀರಸದಿ ಮಂಗಳ ಪೂರ್ಣಮ ಭಾರ್ಗವನಾಶರದಿ
ಭಾರ್ಗವಿಪತಿ ನಿನ್ನನುಗ್ರಹದಿ ನಗದೊಡೆಯನ ಭಕ್ತ
ರಘುಹರಿಸುತ ಪನ್ನಗಗಿರಿಯೊಡೆಯ ನಿನ್ನಯ ಗುಡಿಯನ್ನು
ಬಗೆಬಗೆ ಸ್ತುತಿಪರ ಹಿಂಡನ್ನು ನಾ ಕಂಡೆನೊ
ಜಾಗುಮಾಡದೆ ಬಾಯಿಬೀಗವ ಕೈಕೊಂಡು
ಸಾಗಿ ಕಾಸಾರದಿ ಸ್ನಾನ ಮಾಡಿಕೊಂಡು
ಬಾಗಿ ವರಾಹದೇವರ ವಂದಿಸಿ
ಬೇಗದಿ ಹರಕೆ ಕೈಕೊಂಡಿಹ ದೇವನ
..............ನಿನ್ನಯ
ಸನ್ನಿಧಿಯನಾ ಒಮ್ಮನದಿ
ಒಮ್ಮೆಯಾದರು ಮನ್ನನದಲಿ ನಿನ್ನಯ
ಸನ್ಮಂಗಳರೂಪವ ನಿಲ್ಲಿಸದೇ ಸುಮ್ಮನೆ ಕುಳಿತು
ಇಮ್ಮನನಾಗಿರೆ ಘನಮ್ಮನೆ ಎನ್ನನು ಒಳಕೊಯ್ದು
ಕಣ್ಮನದಣಿಯಲಿ ನೀನಿಂದ ನೀನೆನ್ನಯ ತಂದೆಸನ್ಮನದಿಂದ
ಪಾಮರನೆಂದೆನ್ನ ಪ್ರೇಮದಿ ಕರುಣಿಸಿ
ಸನ್ನಿಧಿಯ ತೋರ್ದ ಜಗದೀಶ
ಕಾಮಿತಜನರ ಕಲ್ಪದ್ರುಮ ನೀನೆಲೊ
ಈ ಮೇಲು ಗಿರೀಶಾ ಶ್ರೀ ವೇಂಕಟೇಶಾ ನಿನ್ನ

ಕ್ರಿ. ಶ. 1959 ರಲ್ಲಿ ರಾಯರೊಂದಿಗೆ ಬೇಖಳ ತಿರುಪತಿ ಯಾತ್ರೆ ಮಾಡಿದಾ। ಈ ಬಗೆಯ ಅನುಭವ ಎರಡಾವರ್ತಿ ಆದುದು ನೆನಪಿದೆ. ಸಣ್ಣ ಸೇವೆಮಾಡಿಸಿ ನಮ್ಮನ್ನು ಅತ್ಯಂತ ದೊಡ್ಡ ಸೇವೆ ಮಾಡಿಸಿದ್ದವರಿಗೂ ಮುಂದೆ ಕರೆದು ಕುಳ್ಳಿರಿಸಿದ್ದ ಆಶ್ಚರ್ಯವಾಯಿತು. ಹಗಲೇ ಮಾರನೆಯದಿನ ದರ್ಶನ ದೊರೆಯದೆ ದೇವಸ್ಥಾನದ ಮುಂದೆ ಮಾತನಾಡುತ್ತ ಕುಳಿತಿದ್ದ ನಮ್ಮ ಬಳಿಗೆ ತ್ರಿನಾಮಧಾರಿ ಅಪರಿಚಿತ ಪುರುಷನೊಬ್ಬ ಬಂದು "ದರ್ಶನಮು ಕಾವಲಸಿಉಂದಾ" ಎಂದು ಕೇಳಿ, ಉತ್ತರಕ್ಕೂ ಕಾಯದೆ ನಮ್ಮಿಬ್ಬರನ್ನು ಕೈಹಿಡಿದು ಸೀದಾ ದೇವಾಲಯಕ್ಕೆ ಕರೆದುಕೊಂಡು ಹೋಗಿ ದರ್ಶನಮಾಡಿಸಿ ನಾಪತ್ತೆಯಾದುದು ಆಶ್ಚರ್ಯವನ್ನುಂಟುಮಾಡಿತು.

ರಾಯರ ಹಿರೇಮಗಳು ಗರ್ಭಿಣಿಯಾಗಿದ್ದು ತಾಯಿಯಲ್ಲಿಗೆ ಬಂದು ಪ್ರಸವ ಕಾಲ ಸನ್ನಿಹಿತವಾದಾಗ, ಪ್ಲೇಗ್ ನಿಮಿತ್ತ ಊರ ಹೊರಗೆ ಗುಡಿಸಿಲಿನಲ್ಲಿ ವಾಸವಾಗಿದ್ದ ಸಂದರ್ಭ! ಒಂದು ಮೈಲಿಗೂ ಹೆಚ್ಚು ದೂರವಿತ್ತು ಆಸ್ಪತ್ರೆ. ರಾತ್ರಿ ಹೊತ್ತು ರೋಗಿ ಗರ್ಭಿಣಿಯನ್ನು ಕರೆದುಕೊಂಡು ಹೋಗುವ ಬಗೆಹೇಗೆ? ಪಕ್ಕದ ಮನೆ ಪುಟ್ಟಾಚಾರ್ಯರು "ಗಾಡಿ ಮಾತ್ರ ಇದೆ–ಎತ್ತು ಇಲ್ಲ" ಎಂದರು. ಎತ್ತಿಲ್ಲದ ಬಂಡಿಯನ್ನು ತಂದು ಗಾಡಿಯಲ್ಲಿ ತಾಯಿಮಗಳು ಇಬ್ಬರನ್ನು ಕೂಡಿಸಿ ಪ್ರಿಯಶಿಷ್ಯ ಶಾಮರಾಯರು ಹಿರಿಯ ಅಳಿಯ ವೆಂಕೋಬರಾಯರು ಎತ್ತುಗಳಾಗಿ ಗಾಡಿಯನ್ನು ಎಳೆದರು. ರಾಯರು ದೀಪಹಿಡಿದುಕೊಂಡು ಹೊರಟರು. ಹೀಗೆ ನಡುರಾತ್ರಿಯಲ್ಲಿ ಆಸ್ಪತ್ರೆ ಸೇರಿದರು! ಈ ಸಂದರ್ಭದಲ್ಲಿ ಒಂದು ದೇವರನಾಮ ರಚನೆಯಾಯಿತು.

ವೇಂಕಟಾಚಲನಿವಾಸ–ಶ್ರೀಜಗದೀಶ
ಸಂಕಟಹರಿಸೊ ಶ್ರೀಶ

............ ........

ಲೋಕನಾಥ ಲೋಕಬಂಧು ದಯಾಸಿಂಧು
ಭಕುತರನಿಮಿತ್ತಬಂಧು ಎಂದೆಂದೂ
ಭಕುತರ ಬೆಂಬಲನು ಎಂದೂ ಇನಿತೆಂದೂ
ಪಾಕಶಾಸನ ಮುಖ್ಯ ಪಿನಾಕಿಪಿತ ಸುರಶ್ರೇಷ್ಠ ವಂದ್ಯ
ವಿಳಂಬವ ನೀ ಕೈಬಿಡದೆ ಕರ್ಮ
ಪಾಕಮಾಡಿಸೊ ಕಾಲನಾಮಕ
ಬಂಧಕಗಳ ತಂದೊಡ್ಡಿ ಭಕುತರ ಮನ
ಎಂದೆಂದು ಪರಿಶುದ್ಧ ಮಾಡಿ ಕಾಯುವನೋಡಿ
ಬಂದ ಬಂಧವ ಹರಿಸಿ ಉದ್ಧರಿಸಿ
ಹಿಂದು ಮುಂದೂ ಕಾಣದ ಮಗು
ಅಂಧಕಾರಕ್ಕೆಡಲಿ ಸಿಲುಕಿದೆ

ಬಂಧನೋಚಿತ ನೆಚ್ಚುವೋ ಅನಾಥ
ಬಂಧು ನೀನೆಂದು ನಂಬಿದೇ...

—ಕ್ರಮಸಂಖ್ಯೆ 45.

ಚಿತ್ರದುರ್ಗದ ಊರೊಳಗಿರುವ ಪ್ರಾಣದೇವರ ಗುಡಿಯ ಹಿಂದೆ ಒಂದು ಮನೆಯಲ್ಲಿ ವಾಸವಾಗಿದ್ದಾಗ ಊರಿಗೆ ಪ್ಲೇಗುಬೇನೆ ಅಡರಿ ಜನ ತಂಗಾಲಾದರು. ಬಹು ಜನ ಮನೆಗಳನ್ನು ಬಿಟ್ಟು ಊರ ಹೊರಗೆ ಹೋಗಿ ವಾಸ ಮಾಡಿದರು. ರಾಯರು ಮಾತ್ರ ಅಲ್ಲಿಂದ ಕದಲಲಿಲ್ಲ. "ವಾನಪ್ರಸ್ಥಾಶ್ರಮಕ್ಕೆ ಹೋಗಿ" ಎಂದು ಸ್ವಪ್ನ ಸೂಚನೆಯಾಯಿತು. ಅಲ್ಲಿಂದ ಕಿತ್ತುಕೊಂಡು ಹೋಗುವುದು ಕಷ್ಟವಾಗಿ ಇನ್ನು ಎಂಟು ದಿನ ಅಲ್ಲಿಯೇ ವಾಸವನ್ನು ಮುಂದುವರಿಸಿದರು. ಆಗೊಂದು ರಾತ್ರಿ ಭೂತಾಕಾರದ ಕರಡಿಯೊಂದು ಮನೆಯ ಹಿಂಭಾಗದಲ್ಲಿ ಬಂದು ಮನೆಯೊಳಗೆ ಬಗ್ಗಿ ನೋಡಿದಂತಾಯಿತು. ದಿಟ್ಟಿಸಿನೋಡಿದಾಗ ಏನೂ ಕಾಣಲಿಲ್ಲ. ಹೋಗ ಬೇಕು ಎಂದು ಮತ್ತೆ ಸೂಚನೆ ಎಂದು ಅರ್ಥೈಸಿ ಅಲ್ಲಿಂದ ಕ್ಯಾಂಪಿಗೆ ಬಂದು ಸೇರಿಕೊಂಡರು. ಅಲ್ಲಿಗೆ ಬಂದ ಮೇಲೆ ಒಮ್ಮೆ ಸ್ವಪ್ನದಲ್ಲಿ ವಿಶ್ವರೂಪದರ್ಶನವಾದಾಗ ಮಾಡಿದಂಥ ಪದ ಹೀಗಿದೆ—

ಅಚಿಂತ್ಯಾದ್ಭುತ ಮಹಿಮ ಈ ಚರಾಚರದೊಳು
ವ್ಯಾಪ್ತನಾಗಿಹೆ ದೇವ—ಸುಜ್ಞಾನಾನಂದರೂಪ
ಅಚಲಭಕ್ತಿಯು ನಿನ್ನ ಚರಣದಿ
ಕಿಂಚಿತ್ತಾದರೂ ಪ್ರಚುರಪಡಿಸು ಅತಿ
ಚಂಚಲವು ಬಲುವಂಚಕವು ಹಾ ಆ
ನುಚಿತೋಚಿತ ಕರ್ಮವನರಿಯೆನೂ
ವಿಪಿನವಾಸದಿ ಎನಗೆ ವಿಪರೀತವನು ತೋರಿ
ಅಪರಾಧವೆಣಿಸದೆ ಪಾಲಿಸಿದೆ
ಕೃಪಣವತ್ಸಲ ನೀನೆ ಕೃಪೆ ಮಾಡಿ ಸ್ವಪನದಿ
ಅಪರಿಮಿತದ ವಿಶ್ವರೂಪವಾ ನೀ ತೋರ್ದೆ
ಅಪರಾಧಿನಾನಹುದೋ ಸ್ವಾಮಿ ಅಪವರ್ಗಪ್ರದ ನೀನು
ಸಫಲಗೊಳಿಸಿದೆ ಎನ್ನ ಮನದನು
ತಾಪವನು ಪರಿಹರಿಸಿ ಕಾಯ್ದೆ
ಈ ಪಯೋಜಾಂಬಕದೊಡೆಯ ಬಿಡದೆ ಅಡಿದಾವರೆಯ ನಂಬಿದೆನೊ
ಶ್ರೀ ಪರಮ ಹಂಸರಿಂದ ನುಡಿಸಿದ ರಹಸ್ಯಗಳು ಅದು ಏನೋ
ಶ್ರೀ ಪುರುಷೋತ್ತಮನೆ ನೀನೆನ್ನ ಭಯಹಸ್ತದಿ
ಕರೆದ ಪರಿಯೇನೋ ಅದನೊಂದನರಿಯೆನೋ

ಈ ಪರಿಯು ಕರಚರಣದಲಿ ಚರಿಸಿದ ಅ
ನುಪಮಕ್ರಿಯೆಯು ನೋಡಿ ಮನದೊಳು
ಸುಪುಳಕಾಲದಿ ತ್ರೈಜಸನೆ ನೀನೆನ್ನ
ಪುಳಕಾಂಕಿತನ ಮಾಡಿದೆ ಕ್ರಮ ಸಂಖ್ಯೆ 73.

ಲೋಕದಲ್ಲಿ ಎಂತಹವರಿಗೂ ಕಷ್ಟ–ದುಃಖ–ಚಿಂತೆ–ಪೀಡೆ–ಅಸಮಾಧಾನ ಅಷ್ಟೋ ಇಷ್ಟೋ ಎಷ್ಟೋ ಆಗ ಈಗ ಇದ್ದೇ ಇರುವುದು ಸಹಜ. ಪಂಚಭೂತಾತ್ಮಕವಾದ ಶರೀರವನ್ನು ಹೊಂದಿ ಕಷ್ಟಬೇಡ ಎನ್ನುವಂತಿಲ್ಲ; ದೈಹಿಕ ದೈವಿಕ ವ್ಯಾಧಿಗಳೇ ಮುಂತಾದುವುಗಳಿಂದ ಬಳಲದವರು ಯಾರಿದ್ದಾರೆ? ಈ ಕಂಡ ಅನುಭವಗಳ ಸೂಚನೆ ಅವರ ಕೃತಿಗಳಲ್ಲಿ ಕಾಣುತ್ತದೆ–ಉದಾಹರಣೆಗೆ

ಅರಿಷಡ್ವರ್ಗಗಳು ತುಂಬಿಕೊಂಡಿಹ ದೇಹ
ಪರಿಶುದ್ಧವಹುದೇನೊ ಅದಾಗಲೂ
ಪರಿಪರಿಯಿಂದಲಿ ಪರಿವಾರಜನಗಳು
ಪರಿಹಾಸ್ಯಮಾಡಿ ಅಘವ ಕಟ್ಟೊಯ್ವರಯ್ಯ
ಅಭಿಮಾನವೆಂಬುದು ನಭೋಮಂಡಲದವರೆಗಿಹುದು
ಶುಭವೆಂತೋ ಡಾಂಭಿಕದ ಹೇ ಮಾನವಾ
ನಾನು ನನ್ನದೆಂಬಭಿಮಾನದಿಂದನುದಿನ
ಹೀನಕರ್ಮದ ಸುಳಿಯೊಳು ನಾನೊಂದು ನಿಂದೆನೋ
ಬೋಧೆಯಿಲ್ಲದೆ ನಾನು ಬಾಧೆಪಡುವೆ ಘೋರ
ಬೋಧಕ ಮತತತ್ತ್ವ ಸಾಧಿಸಲಿಲ್ಲವೊ
ಬಾಧಿಪರೋ ಬಂಧುಗಳು ಪ್ರತಿದಿನ
ನಿಂದಿಪರೋ ಮನಬಂದ ತೆರದಲಿ ಊರೊಳಿತರಜನ
ಏನೂ ತೋರದೋ ಮುಂದೇನು ಗತಿಯೋ ದೇವಾ ?

ಗುಣತ್ರಯಗಳಿಂದ ನಿಬಿಡವಾಗಿರುವ ಈ ದೇಹ ಅದರ ಗುಣಕಾರ್ಯ ಮಾಡದೆ ಇರಲು ಸಾಧ್ಯವಿಲ್ಲ. ನಾನು ನನ್ನದು ಎಂಬ ಅಭಿಮಾನವೋ ನಭೋಮಂಡಲದವರೆಗೆ ಇರುವುದು! ಇಂತಹ ಡಾಂಭಿಕನಿಗೆ ಶುಭ ಹೇಗೆ ಆಗುವುದು ಶಕ್ಯ? ದುರಭಿಮಾನ ತುಂಬಿ ತುಳುಕುತ್ತಿದೆ. ಅದನ್ನು ತೊಲಗಿಸಿ ಇಂಬ ತೋರಯ್ಯ ವೇಂಕಟೇಶ. ಬಂಧುಗಳ ಬಾಧೆ, ನಿಂದಿಪರನುಡಿ, ಮತ್ಸರಿಸುವವರ ಬಗೆಯಂತೂ ಹೇಳಬೇಕಾದುದೇ ಇಲ್ಲ–ಎಂದು ಜೀವನದ ಹಲವು ಸನ್ನಿವೇಶಗಳನ್ನು ಮನಮುಟ್ಟ ಹೇಳಿದ್ದಾರೆ. ಶ್ರೀ ಉರಗಾದ್ರಿವಾಸ ವಿಠಲರ ಕೃತಿಗಳು ಹೆಚ್ಚಾಗಿ ಪ್ರಮೇಯ ಪುಂಜವಾಗಿವೆ. ಉದಾಹರಣೆಗೆ ಈ ಕೆಲವು ಕೃತಿಗಳನ್ನು ಗಮನಿಸಬಹುದು.

ಕಷ್ಟಹರಿಸೊ ಪರಮೇಷ್ಟಿಪಿತನೇ ಎಂಬ ಪದದಲ್ಲಿ ಕರ್ಮದ ಗಹನತೆ, ಅದರಿಂದಾಗುವ ಪರಿಣಾಮಗಳ ಸ್ಪಷ್ಟ ಚಿತ್ರಣ ಪ್ರಮೇಯಾತ್ಮಕವಾಗಿ ಬಂದಿದೆ.

ಸ್ವರ್ಗಸ್ತ್ರೀಯರ ಕರ್ಮ ತಾ ಶಿಕ್ಷಿಸಲರಿಯದು ನ್ಯಾಯ
ಧರ್ಮಾಧಿಪತಿ ಲೋಗರ ಫಲಕೊಟ್ಟು ಶಿಕ್ಷಿಪಂತೆ
ಧರ್ಮಮೂರುತಿ ಶುದ್ಧ ನಿಷಿದ್ಧ ಕರ್ಮಂಗಳಿಗೆ
ಪೂರ್ಣಫಲವನಿತ್ತು ಸಮಸ್ತೆಂದೆನಿಸಿರುವೆ
ಕರ್ಮಪ್ರೋಚಕನೀನೆ ಸಕಲ ಕರ್ಮಪ್ರದನೆಂದೆನಿಸಿ
ಪೂರ್ವ ಕರ್ಮಫಲ ಭೋಗಿಸಲು ಜನ್ಮವನಿತ್ತು
ಕರ್ಮಪ್ರವಹ ದೊಳಿಡುವೆ

ಲೋಕದಲ್ಲಿರುವ ಜನರ ಸ್ಥಿತಿ ಹೇಗೆಂದರೆ—ಉರಗಾದ್ರಿವಾಸರು ಹೇಳುತ್ತಾರೆ—

ವಿಮುಖನಾಗಿಹೆ ಶ್ರುತಿಸ್ಮೃತಿ ಶಾಸ್ತ್ರಧರ್ಮಕೆ
ಪ್ರಮುಖನಾಗಿಹೆ ದುಷ್ಕರ್ಮಮಾರ್ಗದಲ್ಲಿ
ಕರ್ಮಕಲಾಪದ ಧರ್ಮಮರ್ಮವನರಿಯೆ
ಹೆಮ್ಮೆಯಿಂದಲಿ ನಾನಾ ಕರ್ಮ ಕೂಪದಲಿರುವೆ
ಪೇರ್ಮೆಗೋಸುಗ ಅಧರ್ಮವೆಷ್ಟೋ ಮಾಡ್ದೆ
ಒಮ್ಮೆಗಾದರು ಸದ್ಧರ್ಮಾಚರಿಸಲಿಲ್ಲ...

ದಿಟ್ಟಭಕುತಿಯ ಕೊಟ್ಟು ರಕ್ಷಿಸು ಇಷ್ಟಮೂರುತಿಯೆ ಎಂದು ಬೇಡಿದಾ ನಿಂದಕರಿರಬೇಕಿರಬೇಕು—ಹಂದಿ ಇದ್ದರೆ ಕೇರಿಶುದ್ಧಿ ಎಂದು ಶ್ರೀ ಪುರಂದರದಾ ಹೇಳಿದಂತೆ ಉರಗಾದ್ರಿವಾಸರು ಹೊಟ್ಟೆಕಿಚ್ಚು ಪಡುವವರು ಸಮಾಜದಲ್ಲಿರಬೆ ಎನ್ನುತ್ತಾರೆ—

ಮತ್ಸರಿಸುವವರಲ್ಲಿ ಮಾನ್ಯವಿರಲಿ
ಬಚ್ಚಲಿಲ್ಲದ ಮನೆಯು ಸ್ವಚ್ಛ ತಾನಾಗಿಹುದೆ ?

ಹರಿದಾಸ ಸಾಹಿತ್ಯದಲ್ಲಿ ಶ್ರೀಹರಿಯ ದಶಾವತಾರ ವರ್ಣನೆಗೆ ಒಂದು ವಿ ಸ್ಥಾನವಿದೆ. ಶ್ರೀಹರಿ ಅನಂತಾವತಾರಿ ಎಂಬುದು ಪ್ರಮೇಯವಾದರೂ, ದಶಾ ತಾರಗಳು ಪ್ರಸಿದ್ಧವಾದುವು. ಇದನ್ನು ಹರಿದಾಸರು ವಿವಿಧ ರೀತಿಯಿಂದ ಬಗೆ ಯಾಗಿ ಬಣ್ಣಿಸಿದ್ದಾರೆ. ಅಲ್ಲಿ ಅನೇಕವು ಮೇಲ್ನೋಟಕ್ಕೆ ತಿಳಿಯುವುದೇ ಒಂದೇ ಕೃತಿಯ ವಿವಿಧ ನುಡಿಗಳಲ್ಲಿ ವಿವಿಧರೀತಿಗಳಲ್ಲಿ ದಶಾವತಾರ ವರ್ಣನೆಯ ನೋಡಬಹುದು.

ಇಂದಿರಾರಾಧ್ಯನೆ ಬಂದುನಿಲ್ಲೊ

ಎಂಬೊಂದು ಕೃತಿಯಲ್ಲಿ ಶ್ರೀ ಉರಗಾದ್ರಿವಾಸದಾಸರು ದಶಾವತಾರಗ ಸುಂದರವಾಗಿ ವರ್ಣಿಸಿದ್ದಾರೆ.

ಜಲದೊಳಾಡುವ ಕಲ್ಲುಹೊರುವ
ಎಲ್ಲಕಾಡಿನೊಳಾಡುವ ಭಳಿರೆ ಎರಡಂಗವತಳೆವ
ಇಳೆಯ ನಳೆಯುವ ಭಾರ್ಗವ ಖಳಕುಲವನಳಿವ ಗೋವನೆಕಾಯ್ವ
ಲಲನೆಯರ ವ್ರತವನಳಿವಾ ಅಶ್ವವನೇರಿಮೆರೆವಾ ನಿತ್ಯಯ ರೂಪವಾ

ಜಲದಲ್ಲಿ ಆಡುವ ಮತ್ಸ್ಯ–ಕಲ್ಲುಹೊರುವ ಕೂರ್ಮ–ಕಾಡಿನಲ್ಲಿ ಅಲೆದ ವರಾ
ಎರಡಂಗಗಳನ್ನು ತೋರಿದ ನರಸಿಂಹ–ಇಳೆಯನಳೆದ ವಾಮನ ಭಾರ್ಗವಪರಶುರಾ
ಖಳಕುಲವನಳಿದ ಶ್ರೀರಾಮ ಗೋವುಗಳನ್ನು ಕಾದ ಶ್ರೀಕೃಷ್ಣ–ಲಲನೆಯರ ವ್ರ
ಗಳನ್ನು ನಾಶಮಾಡಿದ ಬುದ್ಧ–ಕುದುರೆಯೇರಿ ಖಳರನ್ನು ಕಡಿದ ಕಲ್ಕಿ ಅವತಾ
ಗಳನ್ನು ಸರಳವಾದ ರೀತಿಯಲ್ಲಿ–ಮೇಲು ನೋಟಕ್ಕೆ ಗೊತ್ತಾಗದಂತೆ ವರ್ಣಿಸಲಾಗಿ

ಇದೇ ಕೃತಿಯ ಇದೇ ನುಡಿಯ ಎರಡನೆಯ ಭಾಗದಲ್ಲಿ ಇದೇ ದಶಾವತಾ
ಗಳನ್ನು ಮತ್ತೊಂದು ಬಗೆಯಲ್ಲಿ ಬಣ್ಣಿಸಿದ್ದಾರೆ–ಎರಡು ಮೂರನೆಯ ನುಡಿಗಳಲ್ಲಿಯ
ಬೇರೊಂದು ರೀತಿಯಲ್ಲಿ ದಶಾವತಾರಗಳನ್ನು ವರ್ಣಿಸಿದ್ದಾರೆ. ಮೂರು ನುಡಿ
ಒಂದೇ ಕೃತಿಯಲ್ಲಿ ಆರು ಬಗೆಗಳಲ್ಲಿ ದಶಾವತಾರ ವರ್ಣನೆ ಮಾಡಿರುವುದನ್ನು ಇ
ನೋಡಬಹುದು. ಓದುವರಿಗೆ ಭಕ್ತಿ ವೃದ್ಧಿ ಉದ್ಬೋಧ–ಉದ್ರೇಕವಾಗುವಂ
ಈ ಕೃತಿ. ಇದನ್ನು ಓದಿ ಹಾಡಿ ಕೇಳಿಯೇ ಸವಿಯಬೇಕು.

ಎಲ್ಲಿಗ್ಹೋಗುವಿಯೋ ಎಲೇ ಹರಿಯೆ–ಮನದಲ್ಲಿ
ನಿಲ್ಲೊಂದರಘಳಿಗೆ ಹೇ ದೊರೆಯೆ

ಎಂಬ ಕೃತಿಯಲ್ಲಿ ಮೂರು ನುಡಿಗಳಲ್ಲಿ ದಶಾವತಾರ ವರ್ಣನೆ ಇದೆ.

ಮತ್ತೊಂದು ಕೃತಿ "ಶ್ರೀನಿವಾಸ ಶ್ರೀನಿವಾಸ ದೀನರಕ್ಷಕ

ದಾನಿ ನೀನೆಂದು ನಂಬಿದೆ" ಎಂಬುವಲ್ಲಿ ಮಗದೊಂದು ರೀತಿಯಲ್ಲಿ ದಶಾವತಾ
ವರ್ಣನೆ ಬಂದಿದೆ;

ನಿಗಮವಿತ್ತೆ ನಗವಪೊತ್ತೆ ಬಗೆದು ಬೇರ ನರ
ಮೃಗಾಕಾರನೆ ತ್ಯಾಗಿಯೊಳು ಪೋಗಿ ನೃಪರ
ನೀಗಿಸಿ ವನವನವಾ ಚರಿಸಿದೆ
ಬಗೆಬಗೆ ಆಟದಿ ಬಾಲ್ಯದಿ ಹಗೆಗಳ ಮಡುಹಿದೆ
ಶೀಘ್ರದಿ ಅಗಮಾರ್ಗ ತೋರಿಸಿ ಜಗದೊಳು ತುರಗವನೇರ್ದೆ

"ಜಗದಾದಿ ವಂದ್ಯನಿಗೆ ಶರಣು" ಎಂಬ ಕೃತಿಯಂತೂ ಬಹು ಸೊಗಸಾ
ರೀತಿಯಲ್ಲಿ ರಚಿತವಾಗಿದೆ. ತಿರುಮಲದ ಏಳು ಬೆಟ್ಟಗಳನ್ನು ಭಕ್ತನೊಬ್ಬ ಮೆಟ್ಟ
ಹತ್ತಿ ಹೋಗುವಾಗ, ಮೊದಲ ಮೆಟ್ಟಿಲ ಮೇಲೆ ಕಾಲಿಟ್ಟಾಗ ಪ್ರಾರಂಭವಾದ ಶರಣ
ಬೆಟ್ಟ ಏರಿ ಹೋಗಿ, ಬೆಟ್ಟದೊಡೆಯನ ಗುಡಿ ಬಾಗಿಲುಗಳನ್ನು ವರ್ಣಿಸಿ, ನಮಿಸಿದಾ

ವೇಂಕಟೇಶನ ದರ್ಶನ–ಅಲಂಕಾರದ ವರ್ಣನೆಮಾಡಿರುವ ರೀತಿ ಅದ್ಭುತವಾಗಿದೆ. ಇಡೀ ದಾಸಸಾಹಿತ್ಯದ ಸಾವಿರಾರು ಕೃತಿಗಳಲ್ಲೀ ಇದಕ್ಕೆ ವಿಶಿಷ್ಟ ಸ್ಥಾನವಿದೆ. ಶಿಷ್ಯ ಕೊಟ್ಟರಿಗೆ–ಅವರು ಇದನ್ನು ಹಾಡಿಸಿ ಕೇಳಿ–ಇದೊಂದೇ ಕೃತಿ ನಿಮ್ಮ ಸಾಧನೆಗೆ ಸಾಕು ಎಂದು ಹೇಳುತ್ತಿದ್ದರು.

ಕನ್ನಗ ಗಿರಿಗೆ ಬುಡದಿಂದ ತುದಿತನಕ ಇರುವ ಮೆಟ್ಟಿಲುಗಳಿಗೆ ಶರಣು ಹೇಳಿದ್ದಾರೆ. ವೇಂಕಟೇಶನ ಅಡಿ ದರುಶನಕ್ಕೆಂದು ಭಕ್ತಿಯಿಂದ ಕಷ್ಟಪಟ್ಟು ಬರುವ ಭಕ್ತರಿಗೆ ಶರಣು. ಏರುವ ಕಷ್ಟ ಬೆಟ್ಟದ ಅಂದದಿಂದ ಪರಿಹಾರ–ಅದಕ್ಕೆ ಶರಣು ಹೇಳುತ್ತಾರೆ. ತರುಶಿಲಾ ಲತಾಕಾರದಲ್ಲಿರುವ ಸುರಕಿನ್ನರರಿಗೆ, ಶಂಖಪಟಹನಾದ ಝೇಂಕಾರ ಸರ್ವ ಶಬ್ದವಾಚ್ಯನಿಗೆ ಶರಣು. ದೇವದೇವನಿಗೆ ಕೈಮುಗಿದು ಇವರು ನನ್ನವರು – ದರುಶನ ವನ್ನು ನೀಡು ಎಂಬುವ ಪ್ರಾಣದೇವರಿಗೆ ಶರಣು. ವೈಕುಂಠಮಂದಿರದ ಸ್ವರ್ಣಮಯ ಸುವರ್ಣಸ್ತಂಭಕ್ಕೆ ಶರಣು; ಕಾಂಚನ ರೂಪಕ್ಕೆ ಶರಣು; ಕಾಂಚನ ವಿಮಾನದಲ್ಲಿ ಶೋಭಿಸುವ ಶ್ರೀನಿವಾಸನಿಗೆ ಶರಣು; ದಶಾವತಾರಿಗೆ ಶರಣು; ನಂದಸುನಂದನ ಜಯವಿಜಯಾದಿ ದ್ವಾರಪಾಲಕರಿಗೆ ಶರಣು; ಶ್ರೀನಿವಾಸಮೂರ್ತಿ ವರ್ಣನೆ–ಶರಣು ಸಮೇತ ನಡೆದಿದೆ–ಇದನ್ನು ಓದಿಯೇ ಆನಂದಿಸಬೇಕಾದ್ದು.

ಈ ಶರಣು ಪದದಲ್ಲಿಯೂ ಅನೇಕ ಪ್ರಮೇಯಗಳನ್ನು ಅಳವಡಿಸಲಾಗಿದೆ. ಅಪೂರ್ವ ಪ್ರಮೇಯ ವಿವರಣೆ ಇವರ ಕೃತಿಗಳ ವೈಶಿಷ್ಟ್ಯ.

1. ಸತ್ಯಸಂಕಲ್ಪ ತ್ವಚ್ಚಿತ್ತಾನುಸಾರ ತ್ವ–
2. ಚಿತ್ತವೃತ್ತಿಯು ನಿನಗೆ ಸರ್ವತ್ರದಿ
3. ಓಂ ನಮೋ ನಾರಾಯಣಾಯ
4. ಸ್ವಾತಂತ್ರ್ಯವೆನಗುಂಟೆ ಸರ್ವಾಂತರ್ಯಾಮಿ
5. ಏಕನೇವ ಅದ್ವಿತೀಯ ಅಪ್ರಾಕೃತಕಾಯ
6. ಶೇಷಾಚಲ ಮಂದಿರ ಇಂದಿರೇಶ
7. ಯಜನವಾಗಲಿ ನಾನು ಭುಜಿಸುವುದು ಎಲ್ಲ
8. ಪವಮಾನ–ಪಾವನ–ಜಗಜ್ಜೀವನ
9. ಮಾರುತೀ ಜ್ಞಾನಮೂರುತಿ
10. ಪ್ರಾಣಸಂಕರ್ಷಣ ಭವ ಜಗತ್ರಾಣ
11. ಸಹನೆ ಇನ್ನೆಷ್ಟಮ್ಮ ಶ್ರೀಭಾರ್ಗವೀ
12. ಸಪ್ತಕೋಟಿ ಮಹಾಮಂತ್ರಾರ್ಥ
13. ಏಕ ಪಂಚಾಶದ್ವರ್ಣವಾಚ್ಯ
14. ಅಚಿಂತ್ಯಾದ್ಭುತ ಮಹಿಮ
15. ಓಂಕಾರ ಪ್ರತಿಪಾದ್ಯ ಶ್ರೀಕಾಂತನೇ

ಈ ಕೃತಿಗಳಲ್ಲಿ ಅಡಗಿರುವ ಪ್ರಮೇಯಗಳು ಅಪೂರ್ವವಾಗಿವೆ; ತುಂಬ ಗಹನವಾಗಿವೆ. ಸರಳವೆನಿಸಿರುವ ಸುವಾಲಿಗಳಲ್ಲಿ ಸಹ ಅನೇಕ ಪ್ರಮೇಯಗಳನ್ನು ಅಡಗಿಸಿದ್ದಾರೆ.

ಉರಗಾದ್ರಿವಾಸರಿಗೆ ಅಂಕಿತ ದೊರೆಯುವ ಮುಂಚೆ ಸ್ವಪ್ನಸೂಚನೆಯಾದ ಅಂಕಿತ ವೇಂಕಟೇಶ ಎಂದು. ಆ ದೇವದೇವನ ಹೆಸರೇ ಉಳ್ಳ ಅಂಕಿತಬೇಕು ಎಂಬ ಅಪೇಕ್ಷೆ ಮನಸ್ಸಿನೊಳಗಿದ್ದರೂ, ಅದನ್ನು ಬಾಯಿಬಿಟ್ಟು ಹೇಳದಿದ್ದರೂ, ಗುರುಮುಖೇನ ಅವರಿಗೆ ದೊರೆತ ಅಂಕಿತ ವೇಂಕಟೇಶನ ಹೆಸರನ್ನೇ ಹೇಳುವ ಉರಗಾದ್ರಿವಾಸವಿಠಲ! ಅವರ ಕುಲದೈವ ಮನದೈವ, ಮನೆದೈವ ಇಷ್ಟದೈವ ಶ್ರೀನಿವಾಸ. ಅವರ ಹೆಸರೂ ಶ್ರೀನಿವಾಸ ಎಂದೇ. ಇದಕ್ಕೆಲ್ಲ ಅನುಗುಣವಾಗಿ ಅವರು ರಚಿಸಿರುವ ಕೃತಿಗಳಲ್ಲಿ ಬಹುಪಾಲು ವೇಂಕಟೇಶನನ್ನು ಕುರಿತದ್ದಾಗಿದೆ. ಆದ್ದರಿಂದಲೋ ಏನೋ ಅವರ ಕೃತಿಗಳ ಪ್ರಕಟಣೆ ಈಗ ತಿರುಮಲ ತಿರುಪತಿ ದೇವಸ್ಥಾನದ ವತಿಯಿಂದಲೇ ಆಗುತ್ತಿದೆ—ಇದೊಂದು ವಿಚಿತ್ರ ವಿಶಿಷ್ಟ ಸನ್ನಿವೇಶ. ಯೋಗಾಯೋಗ.

ಹೀಗೆ ಶ್ರೀ ಮ. ಶ್ರೀನಿವಾಸರಾಯರು ತೊಂಭತ್ತುಮೂರು ವರ್ಷಗಳ ಪೂರ್ಣಾಯುವಂತರಾಗಿ, ಹಿರಿಯ ಸಾಧನ ಜೀವಿಗಳಾಗಿ, ಆದರ್ಶ ಗೃಹಸ್ಥ–ಭಕ್ತ–ಹರಿದಾಸರಾಗಿ, ಎಲೆ ಮರೆ ಕಾಯಿಯಂತೆ ಗುಪ್ತರಾಗಿ, ಲೋಕಕ್ಕೆ ಹೆಚ್ಚಾಗಿ ಕಾಣಿಸಿಕೊಳ್ಳದೆ, ಸಾರ್ಥಕವಾದ ಜೀವನವನ್ನು ನಡೆಸಿ, ಹತ್ತಿರ ಬಂದವರನ್ನು ತಮ್ಮ ವ್ಯಕ್ತಿತ್ವದ ಪ್ರಭಾವದ ಮುದ್ರೆಯನ್ನೊತ್ತಿ ಆಕರ್ಷಿಸಿ, ಅವರ ಆತ್ಮೋದ್ಧಾರಕ್ಕೆ ದಾರಿದೀಪವಾದ ಮಹಾ ವ್ಯಕ್ತಿತ್ವವುಳ್ಳವರು – ಕ್ರಿ. ಶ. 30–11–1964 ಕಾರ್ತೀಕ ಬಹುಳ ದ್ವಾದಶಿಯಂದು ಶ್ರೀಹರಿ ಪದವನ್ನೈದಿದರು

ಸದಾ ನಗುಮೊಗದಿಂದಿದ್ದು ಯಾರಿಗೂ ಯಾವ ಬಗೆಯ ಕೆಡುಕನ್ನೂ ಮಾಡುವುದಿರಲಿ, ಮನಸ್ಸಿನಲ್ಲಿಯೂ ಸಹ ಯೋಚಿಸದೆ, ತಮ್ಮ ಪಾಡಿಗೆ ತಾವು ಉನ್ನತಾದರ್ಶವನ್ನು ಸಾಧಿಸುವುದರ ಕಡೆಗೆ ಮನಸ್ಸಿಟ್ಟು, ಬಹುದೊಡ್ಡ ಹಂತವನ್ನೇರಿದವರಾದರು. ಅವರ ಜೀವನದಲ್ಲಿ ಬಂದೊದಗಿದ ಕೆಲ ಸನ್ನಿವೇಶಗಳು, ದುಃಖಭರಿತ ದುರ್ಭರ ಪ್ರಸಂಗಗಳು. ಬೇರೊಬ್ಬರಿಗೆ ಎದುರಿದ್ದರೆ ಅವರು ನಾಸ್ತಿಕರೇ ಆಗುತ್ತಿದ್ದರೇನೋ! ಸದಾ ಸಿಡಿಮಿಡಿಗೊಳ್ಳುವ ಸಿಸಿ ಮುಖದವರಾಗುತ್ತಿದ್ದರು ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಅನೇಕ ಸಂಕಷ್ಟಗಳನ್ನು ಎದುರಿಸುತ್ತಿದ್ದರೂ ರಾಯರ ಮುಖವನ್ನು ನೋಡಿದರೆ, ಅವರಂತಹ ಸುಖಿಗಳೇ ಇಲ್ಲ ಎಂದೆನಿಸುತ್ತಿತ್ತು! ಅದಕ್ಕೆ ಕಾರಣ ಉಂಟು. ಅವರ ಮನೋ ಬಲವಾದ ಅಪೂರ್ವ ಸಾಧನ ಅಂತಹುದು. ಶ್ರೀಮದ್ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮನು ಅರ್ಜುನನನ್ನು ಕುರಿತು ಹೇಳಿದ "ತಿತಿಕ್ಷಸ್ವ" ಎಂದರೆ ಕಷ್ಟನಷ್ಟ ದುಃಖಗಳನ್ನು ಕೇವಲ ಸಹಿಸಿಕೊಳ್ಳುವುದಲ್ಲ–ಅವುಗಳ ಪರಿಣಾಮ ನಿನ್ನ ಮೇಲೆ ಆಗದಂತೆ ನೋಡಿಕೋ ಎಂದು ಸೂಚಿಸಿರುವಂತೆ – ರಾಯರು ಅದರ ರಹಸ್ಯವನ್ನರಿತು ಅನುಷ್ಠಾನದಲ್ಲಿಟ್ಟುಕೊಂಡಿದ್ದುದು ಅದಕ್ಕೆ ಮುಖ್ಯಕಾರಣ.

ಇಂತಹ ಎತ್ತರದ ವ್ಯಕ್ತಿತ್ವವುಳ್ಳವರು ಲೋಕದಲ್ಲಿ ವಿರಳ. ಅಂತಹ ವಿರ ಪಂಕ್ತಿಯಲ್ಲೂ ವಿರಳರಾದವರು ಶ್ರೀ ಉರಗಾದ್ರಿವಾಸ ವಿಠಲಾಂಕಿತರಾದ ಶ್ರೀ ವ ಶ್ರೀನಿವಾಸರಾಯರು.

ಯಾವುದೋ ಪುಣ್ಯ ವಿಶೇಷದಿಂದ, ಹಿರಿಯರ ಆಶೀರ್ವಾದದಿಂದ, ಶ್ರೀಹ ಗುರುಗಳ ವಿಶೇಷಾನುಗ್ರಹದಿಂದ, ಇಂತಹ ಮಹನೀಯರ ಸಂಪರ್ಕ ನನಗೆ ಒದ ಬಂದು, ಅವರ ಉಪದೇಶಾಮೃತಪಾನ ಮಾಡುವ ಸುಸಂದರ್ಭವೂ ಒದಗಿತು ಅನೇಕ ದಿನಗಳು ಅವರು ನನ್ನನ್ನು ಸಂಜೆವೇಳೆ ಚಿತ್ರದುರ್ಗದ ವೇಂಕಟೇಶ ದೇವ ಗುಡಿ, ಕೇಶವ ದೇವರ ಗುಡಿ, ಮುಂತಾದ ಪ್ರದೇಶಗಳಿಗೆ ಬಹುದೂರ ಕರೆದುಕೊಂ ಹೋಗುತ್ತ—ಆ ದಿವ್ಯಸನ್ನಿಧಾನದಲ್ಲಿ ಪ್ರಶಾಂತ ಸ್ಥಳದಲ್ಲಿ ಬಹು ಹೊತ್ತು ಕುಳಿ ಅನೇಕ ವಿಚಾರಗಳನ್ನು ತಿಳಿಯಹೇಳಿದ್ದು ನನ್ನ ಬಾಳಿನ ರಸ ನಿಮಿಷಗಳೆಂದು ಭಾ ಪರಿಗಣಿಸಿದ್ದೇನೆ. ಮೃದುಭಾಷಿಗಳು, ತುಂಬ ಮಿತಭಾಷಿಗಳೂ ಆದ ಅವರು ನ ಮೇಲೆ ಮಾಡಿದ ಅನುಗ್ರಹ ತುಂಬ ದೊಡ್ಡದು. ಅವರು ನನ್ನಿಂದ ಹೀಗೆ ಅನಿರೀಕ್ಷಿ ತವಾಗಿ ಸೇವೆಯನ್ನು ಸ್ವೀಕರಿಸುತ್ತಿರುವುದು ತುಂಬ ವಿಶೇಷವಾದದ್ದು. ಈ ಪುಸ್ತ ರಚನೆ ಮುಗಿಯುತ್ತಿರುವುದು ಕಾರ್ತಿಕ ಬಹುಳ ದ್ವಾದಶಿ ((9-12-1985) ಅ ಪುಣ್ಯದಿನದಂದೇ ಆಗಿರುವುದು ಇನ್ನೂ ವಿಶಿಷ್ಟವೆನಿಸುವುದು.

ಅವರ ಜೀವನ ಚರಿತ್ರೆಯನ್ನು ರಚಿಸಿ, ಅವರ ಕೃತಿಗಳನ್ನು ಪ್ರಕಟಿಸ ಹಂಬಲವೂ ನನಗೆ ಬಹು ದಿನಗಳಿಂದ ಇದ್ದಿತ್ತಾದರೂ, ಅದು ಕಾರ್ಯರೂಪ ಬರುವ ಮಾರ್ಗ ಮಾತ್ರ ಕಾಣದಾಗಿತ್ತು. ಎರಡು ವರ್ಷಗಳ ಹಿಂದೆ 19 ಸೆಪ್ಟೆಂಬರ್ ತಿಂಗಳಲ್ಲಿ ಚಿತ್ರದುರ್ಗಕ್ಕೆ ಶ್ರೀ ವಿಜಯದಾಸರನ್ನು ಕು ರಚಿತವಾದ ಕಾದಂಬರಿಯ ಮಂಗಳೋತ್ಸವಕ್ಕೆ ಮುಖ್ಯ ಅತಿಥಿಯ ಬರಬೇಕೆಂಬ, ಸತ್ಯಜ್ಯೋತಿ ಪತ್ರಿಕೆಯ ಸಂಪಾದಕರ ಶ್ರೀ ಕೆ. ಬಿ. ಶ್ರೀನಿವ ರಾಯರ ವಿಶ್ವಾಸದ ಕರೆಗೆ ಓಗೊಟ್ಟು, ಅಲ್ಲಿಗೆ ಹೋದಾಗ ಮಾನ್ಯ ಮಿತ್ರರ ಶ್ರೀ ಕೆ. ಅಪ್ಪಣ್ಣಾಚಾರ್ಯರು ತಮ್ಮ ಅಪೂರ್ವ ದಾಸಸಾಹಿತ್ಯ ಯೋಜನೆಯ ಅ ವಾಗಿ ತಯಾರಿಸಿದ ಚಿತ್ರಪಟಗಳೇ ಮುಂತಾದ ಅನರ್ಘ್ಯ ವಸ್ತುಪ್ರದರ್ಶನವ ಚಿತ್ರದುರ್ಗದಲ್ಲಿ ಏರ್ಪಡಿಸಿದ್ದರು. ಆ ಮೂರು ದಿನ ಚಿತ್ರದುರ್ಗ ಉತ್ಸವದಲ್ಲಿ ಭ ವಹಿಸಿ, ವೆಂಕಟೇಶನ ಮೆರವಣಿಗೆ ನಡೆಸಿ, ಪ್ರದರ್ಶನ ನೋಡಿ ಉತ್ಸಾಹ ಸಂತೋ ಗಳಿಂದ ನಲಿದಾಡಿದೆ. ಆ ಸಂದರ್ಭದಲ್ಲಿ ಅದೇ ಊರಿನಲ್ಲಿದ್ದ ಶ್ರೀ ಉರಗಾದ್ರಿವ ದಾಸರ ವಿಚಾರವನ್ನು ಕೇಳುವ, ಅವರ ಮನೆಯನ್ನು ನೋಡುವ, ಅವರ ಪ ಪುತ್ರಿಯರನ್ನು ನೋಡಿ ಮಾತನಾಡುವ, ಅವರು ಪೂಜಿಸಿದ ದೇವರುಗಳನ್ನು ದ ಸುವ ಸದವಕಾಶ ದಾಸಸಾಹಿತ್ಯ ಯೋಜನೆಯ ವಿಶೇಷಾಧಿಕಾರಿಗಳಾದ ಶ್ರೀ ಣ್ಣಾಚಾರ್ಯರಿಗೆ ದೊರೆಯಿತು. ಅದರ ಪರಿಣಾಮವಾಗಿ ಆ ಮಹನೀಯರ ಜೀ ಚರಿತ್ರೆ, ಕೃತಿಗಳನ್ನು ಪ್ರಕಟಿಸಬೇಕೆಂಬ ಅಪೇಕ್ಷೆ ಅವರಿಗುಂಟಾಯಿತು. ಅವರ

ಯಲ್ಲಿನ ಅನೇಕ ವಸ್ತುಗಳ, ವ್ಯಕ್ತಿಗಳ ಭಾವಚಿತ್ರಗಳನ್ನು ತೆಗೆಸಲಾಯಿತು. ಹೀಗೆ ಶ್ರೀ ಉರಗಾದ್ರಿವಾಸವಿಠಲರನ್ನು ದಾಸಸಾಹಿತ್ಯ ಯೋಜನೆಯ ಕಕ್ಷೆಗೆ ಅಪ್ಪಣಾಚಾರ್ಯರು ಸೇರಿಸಿದರು. ಕೆಲವು ದಿನಗಳ ತರುವಾಯ ಈ ಕಾರ್ಯದಲ್ಲಿ ನನ್ನನ್ನು ನಿಯೋಗಿಸಿ, ಪುಸ್ತಕರಚನೆ ಮಾಡಿ ಕೊಡಬೇಕೆಂದು ತಿ.ತಿ.ದೇ. ಯ ದಾಸಸಾಹಿತ್ಯಾಧಿಕಾರಿಗಳು ನನ್ನನ್ನು ಕೇಳಿದರು. ಇಷ್ಟೆಲ್ಲ ನಡೆದು ಒಂದು ವರ್ಷಕ್ಕೆ ಈಗ ಈ ಪುಸ್ತಕ ಸಿದ್ಧವಾಗಿದೆ.

ಆದ್ದರಿಂದ ನನ್ನ ಮೊದಲವಂದನೆ ತಿ.ತಿ.ದೇ. ಅಧಿಕಾರವರ್ಗದವರಿಗೂ, ಅದರ ಅಂಗವಾದ ದಾಸಸಾಹಿತ್ಯ ಯೋಜನೆಯ ವಿಶೇಷಾಧಿಕಾರಿಗಳಾದ ಶ್ರೀ ಅಪ್ಪಣಾಚಾರ್ಯರಿಗೂ ಸಲ್ಲುತ್ತದೆ.

ಶ್ರೀ ಮ. ಶ್ರೀನಿವಾಸರಾಯರ ಧರ್ಮಪತ್ನಿ ತುಂಗಮ್ಮನವರು ಈ ಕೃತಿಗಳನ್ನು ಪ್ರಕಟಿಸಲು ತಮ್ಮ ಅನುಮತಿಯನ್ನು ನೀಡಿ ಆಶೀರ್ವದಿಸಿದರು. ಅಲ್ಲದೆ ನಾನು ಅವರೊಂದಿಗೆ ಅನೇಕ ದಿನಗಳು ಕುಳಿತು ಕೇಳಿದ ಪ್ರಶ್ನೆಗಳಿಗೆಲ್ಲಾ ತಾಳ್ಮೆಯಿಂದ, ಅವರ ಸ್ವಾಭಾವಿಕವಾದ ಹಾಸ್ಯತುಂಬಿದ ಮಾತುಗಳಿಂದ ನಗುಮುಖದಿಂದ ಉತ್ತರಗಳನ್ನಿತ್ತು ರಾಯರ ಜೀವನ ಚರಿತ್ರೆಯ ಅನೇಕ ವಿಚಾರಗಳನ್ನು ತಿಳಿಸಿದರು. 95 ನೆಯ ವಯಸ್ಸಿನಲ್ಲಿಯೂ ಅವರು ಸ್ಮೃತಿಮಾತ್ರದಿಂದ ಒಂದೊಂದು ದೇವರನಾಮದ ನುಡಿಗಳನ್ನು ಉಲ್ಲೇಖಿಸುತ್ತಿದ್ದುದು ಆಶ್ಚರ್ಯವನ್ನುಂಟು ಮಾಡುತ್ತಿತ್ತು. ರಾಯರ ಅನೇಕ ಕೃತಿಗಳನ್ನು ಹಾಡಿ ಸರಿಯಾದ ಪಾಠಗಳನ್ನು ಗುರುತಿಸಿಕೊಳ್ಳಲು ನೆರವಾದರು. ಇದೆಲ್ಲಕ್ಕಾಗಿ ಮಾತೃಶ್ರೀ ಸಮಾನರಾದ ತುಂಗಮ್ಮನವರಿಗೆ ನನ್ನ ಕೃತಜ್ಞತಾಪೂರ್ವಕವಾದ ನಮಸ್ಕಾರಗಳು. ಆದರೆ ಒಂದು ದುಃಖದ ವಿಚಾರವೆಂದರೆ ಈ ಪುಸ್ತಕ ಅಚ್ಚಾಗಿ ಹೊರಬರುವ ತನಕ ಅವರು ಜೀವಂತರಾಗಿ ಉಳಿಯಲಿಲ್ಲ. 1984 ಡಿಸೆಂಬರ್ 13 ರಂದು ಅವರು ಪ್ರಯಾಣ ಮಾಡಿ ಬಿಟ್ಟರು.

ರಾಯರ ಮಗಳು ವನಜಾಬಾಯಿಯವರು ಈ ಪುಸ್ತಕ ನಿರ್ಮಾಣಕ್ಕೆ ತುಂಬ ಆದರದಿಂದ ಅನೇಕ ರೀತಿಗಳಲ್ಲಿ ಸಹಾಯಮಾಡಿದ್ದಾರೆ. ರಾಯರ ಅನೇಕ ಕೃತಿಗಳನ್ನು ಬರೆದಿಟ್ಟಿರುವ ಪುಸ್ತಕವನ್ನು ಕೊಟ್ಟುದಲ್ಲದೆ, ಅವುಗಳನ್ನು ಹಾಡಿ ಟೇಪ್ ಮಾಡಿಕೊಳ್ಳಲು ಸಹಕರಿಸಿದರು. ಅಲ್ಲದೆ ಈ ಕಾರ್ಯಕ್ಕಾಗಿ ಮೂರು ನಾಲ್ಕುಬಾರಿ ಚಿತ್ರದುರ್ಗಕ್ಕೆ ನಾನು ಹೋದಾಗಲೆಲ್ಲ, ಅವರ ಮನೆಯಲ್ಲೇ ಇರಿಸಿಕೊಂಡು ಊಟೋಪಚಾರಗಳನ್ನು ಸಹ ನಗುಮುಖದಿಂದ ಮಾಡಿ, ಉತ್ತೇಜನ ನೀಡಿದುದನ್ನು ಎಂದೂ ಮರೆಯುವಂತಿಲ್ಲ. ಇದಕ್ಕಾಗಿ ಸೋದರಿ ವನಜಾಬಾಯಿಯವರಿಗೆ ನನ್ನ ಹೃತ್ಪೂರ್ವಕ ವಂದನೆಗಳು.

ಚಿಕ್ಕಂದಿನಿಂದಲೂ ದೇವರನಾಮಗಳ ಸಂಗ್ರಹ-ಪಾಠ-ಹಾಡಿಕೆಗಳಲ್ಲಿ ವಿಶೇಷವಾದ ಆಸಕ್ತಿ ಹೊಂದಿದ್ದ ಶ್ರೀ ವೆಂಕಟೇಶ ಪಾರಿಜಾತ, ನಳಚರಿತ್ರೆ, ಪ್ರಹ್ಲಾದ

ಚರಿತ್ರೆ, ಜನಮನ್ವಿಲಾಸ, ಕುಚೇಲೋಪಾಖ್ಯಾನ, ಕಾಳೀಯಮರ್ದನ ಮೊದಲಾದ ದೊಡ್ಡ ದೊಡ್ಡ ಹಾಡುಗಳೂ ಸೇರಿದಂತೆ ಅನೇಕ ಹರಿದಾಸರ ಕೃತಿಗಳನ್ನು ಸಂಗ್ರಹಿಸಿ ಹಾಡಿ ಸಂತೋಷಪಟ್ಟು, ಜೀವನದಲ್ಲಿ ಅದರಿಂದ ವಿಶೇಷ ಸ್ಫೂರ್ತಿ–ಜ್ಞಾನಗಳನ್ನು ಪಡೆಯುವ ಸ್ವಭಾವವನ್ನೇ ರೂಢಿಸಿಕೊಂಡಿರುವ ಲೇಖಕನ ಧರ್ಮಪತ್ನಿ ಚಿ॥ ಕುಂ॥ ಕೋ॥ ಸೌ॥ ಕೆ. ಮಂಜುಳ ಈ ಪುಸ್ತಕ ರಚನೆಯ ಕಾರ್ಯದಲ್ಲಿ ವಿಶೇಷವಾಗಿ ಅನೇಕ ರೀತಿಗಳಲ್ಲಿ ನೆರವಾಗಿರುವುದು ಸ್ಮರಣೀಯವಾಗಿದೆ. ಶ್ರೀ ಉರಗಾದ್ರಿವಾಸ ವಿಠಲರ ಈಗ ಪ್ರಕಟವಾಗುತ್ತಿರುವ ಕೃತಿಗಳೆಲ್ಲಾ ಆಕೆಯ ಸಂಗ್ರಹದಲ್ಲಿ ಅನೇಕ ವರ್ಷಗಳಿಂದ ಇದ್ದು ಅವುಗಳನ್ನು ಹಾಡಿಕೊಳ್ಳುವ ರೂಢಿಯೂ ಇದೆ. ಅಲ್ಲದೆ ಈ ಪುಸ್ತಕ ರಚನೆಯ ವಿಚಾರದಲ್ಲಿ ವಿಶೇಷ ಆಸಕ್ತಿ ಉತ್ಸಾಹಗಳನ್ನು ತೋರಿ ಅನೇಕ ವಿಧಗಳಲ್ಲಿ ನೆರವೂ ಆಕೆಯಿಂದ ಆಗಿದೆ ಎಂಬುದನ್ನು ಸಂತೋಷದಿಂದ ನೆನೆಯುತ್ತೇನೆ.

ಕೆ. ಎಂ. ಕೃಷ್ಣರಾವ್,
(ನಿವೃತ್ತ) ಪ್ರಾಧ್ಯಾಪಕ
ಉಸ್ಮಾನಿಯಾ ವಿಶ್ವವಿದ್ಯಾಲಯ

9—12—1985
ಶ್ರೀ ಕ್ರೋಧನ ಕಾರ್ತೀಕ ಬಹುಳ ದ್ವಾದಶಿ

467, ಐದನೆಯ ಬ್ಲಾಕ್, ರಾಜಾಜಿ ನಗರ
ಬೆಂಗಳೂರು–569010.

# ಉರಗಾದ್ರಿವಾಸ ವಿಠಲದಾಸರ
# ಕೃತಿಗಳು

**ರಾಗ – ಶಂಕರಾಭರಣ** **ತಾಳ – ಅಟ**

ಪಾಲಿಸೋ ದಾಸರಾಯ – ಗುರುವೆ ನೀ
ಪಾಲಿಸೊ ಗುರುವೆ ॥ ಪ ॥

ಪಾಲಿಸು ನಾಗರಾಯಾಖ್ಯ – ದಾಸ
ಶೀಲವರ್ಯನೆ ನೀ ಮುಖ್ಯ ॥ಆಹಾ॥
ಶ್ರೀಲೋಲನ ಗುಣ ಲೀಲಾಜಾಲದಿ ಆ
ಬಾಲವೃದ್ಧರಿಗರುಹಿ ಮೆರೆದ ಗುರು ॥ ಅ ಪ ॥

ಬಂದೆ ದಯಾಂಬುಧೆ ಎನ್ನ – ಮನದ
ಕುಂದುಕೊರತೆಗಳನ್ನ – ಇನ್ನು
ಬಂದ ಸಂಶಯಗಳನ್ನ – ಹರಿಸಿ
ಇಂದು ತೋರಿದೆ ನಂದವನ್ನ ॥ಆಹಾ॥
ತಂದೆ ಮುದ್ದು ಮೋಹನ್ನ ವಿಠ್ಠಲನ್ನ ಹೃದಯಾರ
ವಿಂದದಿ ಮುದದಿ ನೋಡುವ ಗುರು ॥ ೧ ॥

ಮಾರ್ಗ ಮಾರ್ಗವನೆ ಚರಿಸುತ್ತಾ–ಬು
ಮಾರ್ಗರ ಎದೆ ಗೆಡಿಸುತ್ತಾ– ಸ
ನ್ಮಾರ್ಗಕ್ಕೆ ನೀನವರ ತರುತ್ತ – ಸಾರ್ದ
ಮಾರ್ಗದೊಳ್ ನೀ ಚರಿಸುತ್ತಾ ॥ಆಹಾ॥
ದುರ್ಗಮವಾದ ದುರಾಗ್ರಹ ನಿಗ್ರಹ
ಭೋಗರೆದು ಸುಖ ಸಂಸರ್ಗವ ತೋರ್ದ ಗುರು ॥ ೨ ॥

ಪರಮ ಕರುಣದಿ ಇಂದೆನ್ನಾ
ಪೊರೆದೆ ಶ್ರೀ ವೆಂಕಟೇಶಾಭಿನ್ನಾ
ಉರಗಾದ್ರಿ ವಾಸವಿಠ್ಠಲಾಖ್ಯನ್ನಾ
ತೊರಿಕೊಟ್ಟೆ ನೀನಂಕಿತವನ್ನಾ ॥ಆಹಾ॥

ಗುರು ನಿನ್ನ ಕರುಣಕ್ಕೆಣೆಯುಂಟೆ ಧರೆಯೊಳು
ಉರಗಾದ್ರಿ ವಾಸವಿಠ್ಠಲನ ನಿಜದಾಸ ॥ ೩ ॥

ರಾಗ – ಶಂಕರಾಭರಣ ತಾಳ – ಅಟ್ಟ

ರಕ್ಷಿಸೋ–ಜಗನ್ನಾಥದಾಸ್–ರಕ್ಷಿಸೋ
ರಕ್ಷಿಸು ಗುರು ಜಗನ್ನಾಥದಾಸ
ಪಕ್ಷಿವಾಹನನ ನಿಜದಾಸ–ಮು
ಮುಕ್ಷು ಮಾರ್ಗವ ತೋರ್ದಧೀಶ ನೀನೆ ಪ್ರ
ತ್ಯಕ್ಷ ಪ್ರಹ್ಲಾದನನುಜ – ॥ಆಹಾ॥
ಈ ಕ್ಷಿತಿಯೊಳು ಸುರಶ್ರೇಷ್ಠನೆನಿಸಿ ವಿ
ಶಿಷ್ಟರ ಮನೋಭೀಷ್ಟವನಿತ್ತ ಹರಿದಾಸ ॥ ೧ ॥

ವೇದವಂದ್ಯನ ನಿಜತತ್ತ್ವ – ನಿಜ
ಸಾಧುಜನರು ತಿಳಿಯೆ ನಿತ್ಯ (ಸತ್ಯ) – ಪೂರ್ಣ
ಬೋಧರ ಗ್ರಂಥ ತತ್ತ್ವ–ನೀತಿ ತ
ಪ್ಪದೆ ಪೇಳ್ದೆ ಮಹತ್ವ ॥ಆಹಾ॥
ವೋದ ಪಡಿಸಿ ವೋದ ತೀರ್ಥರ ಮತ ದು
ಗ್ಧಾಬ್ಧಿ ಸುಧೆಯನಿತ್ತ ಬಾದರಾಯಣನದಾಸ ॥ ೨ ॥

ಪ್ರಕೃತಿ ಬಂಧಕರಾದ ಜನರು ನಿನ್ನ
ಪ್ರಾಕೃತ ಗ್ರಂಥನೋಡಿ ಮೋದಿಪರು ಸತತಾ
ಪ್ರಾಕೃತನ ತಾ ವಂದಿಪರು ಜನ್ಮ
ಸುಕೃತಕ್ಕೆ ತಾವು ಸಾಧಿಪರು ॥ಆಹಾ॥
ಸಂಸ್ಕೃತ ಭಾಷೆಯ ಪ್ರಕರಣಗಳನೆಲ್ಲ ಪ
ರಿಷ್ಕೃತ ಪಡಿಸಿ ನೀ ಪ್ರಾಕೃತದೊಳು ತೋರ್ದೆ ॥ ೩ ॥

ವಿಪ್ರವರೇಣ್ಯನೆ ನೀನು ಜಗದಿ
ಅಪ್ರಮೇಯನ ಪ್ರಮೇಯವನ್ನೂ ಅದಕ್ಕೆ
ಸಪ್ರಮಾಣಗಳೆಲ್ಲವನ್ನೂ ತೋರಿ ದಿ
ಕ್ ಪ್ರದರ್ಶನ ಮಾಡಿ ಇನ್ನೂ ॥ಆಹಾ॥

ಸ್ವಪ್ರಯೋಜನ ರಹಿತ ಅಪ್ರಮೇಯನ ಮಹಿಮೆ
ಕ್ಷಿಪ್ರ ಬೋಧೆಯಾಗಲ್ ತ್ವತ್ಪ್ರಸಾದವನಿತ್ತೆ ॥ ೪ ॥

ನಿನ್ನುಪಕಾರದ ಪರಿಯಾ ನಾನು
ಜನ್ಮ ಜನ್ಮಾಂತರಕೆ ಮರೆಯೆ ನೀನೆ
ಧನ್ಯ ಶ್ರೀ ಹರಿದಾಸಾಗ್ರಣಿಯೇ ಇನ್ನು
ನಿನ್ನ ಹರಿಕಥಾಮೃತಸಾರಕ್ಕೆಣೆಯೇ ॥ಅಹಾ॥
ಇನ್ನಿಲ್ಲ ನಿನ್ನಂಥ ಧನ್ಯ ಕವಿಗಳ ಕಾಣೆ
ಪನ್ನಗಶಯನ ಶ್ರೀ ವೆಂಕಟೇಶನ ದಾಸಾ ॥ ೫ ॥

ರಾಗ – ಶಂಕರಾಭರಣ

ಭಜಿಸುವೆ ನಿನ್ನನು ವಿಜಯದಾಸಾರ್ಯನೆ ಪೊರೆಯೊ ॥ ಪ ॥

ಭಜಿಸುವೆ ನಿನ್ನ ಪಾದ ಭಜಕಜನರ ಪಾದ
ರಜದೊಳಿಟ್ಟು ಎನ್ನ ರಜತಮ ಹರಿಸೊ ॥ ಅ ಪ ॥

ವಿಜಯಸಾರಥಿಪ್ರಿಯ ನಿಜದಾಸ ನೀನೆಲೋ ಗುರುವೆ
ಅಜ ಪಿತನಜಸುತ ನಜ ಲೋಕಗಳೆಲ್ಲ
ಬಿಜಯ ಮಾಡಿ ನಿಜಗತಿಪ್ರದನಾರೆಂದು ನಿಜವನರಿತು
ಶ್ರೀ ಭುಜಗಶಯನ ಮೂರ್ಜಗಕೆ ದೈವಾವೆಂದರುಹಿದ ಭೃಗುಮುನಿ
॥ ೧ ॥

ರಕ್ಷಿಸಬೇಕೊ ಶ್ರೀ ಲಕ್ಷ್ಮೀಶ ದಾಸನೆ ಗುರುವೆ
ಪಕ್ಷಿವಾಹನನ ನೀ ವಕ್ಷತಾಡನ ಮಾಡೆ ತಕ್ಷಣ
ಈ ಕ್ಷಿತಿ ಗಿರಿಯೊಳು ನಿಂದಾ ಕುಕ್ಷಿಯೊಳು ಜಗದ್ರಕ್ಷಕನಾದ ಮು
ಮುಕ್ಷುಗಳೊಡೆಯನ ನೀಕ್ಷಿಸಿದಾ ಧೀರಾ ॥ ೨ ॥

ದ್ವಾಪರದಲ್ಲಿ ನಿಕಂಪನನೆಂದೆನಿಸಿದೆ ಮೆರೆದೆ
ಶಾಪತನದಿ ವ್ಯಾಧರೂಪದಿಂದ ಶ್ರೀ ಗೋಪಾಲಗೆ ಬಾಣ
ಶ್ರೀಪಾದದಲ್ಲಿಟ್ಟು ಸರ್ಪಗಿರಿಯ ಶ್ರೀ ವೆಂಕಟೇಶ ನ
ಮ್ಮಪ್ಪನೆಂದು ತ್ರಿಜಗಕೆ ತೋರ್ದೆ ॥ ೩ ॥

ಉದ್ಧರಿಸಲು ನೀನುದ್ಭವಿಸಿದೆಯೋ।
ಮಧ್ವಪತಿಯು ಅಭಿಧಾನದಿ ನೀನು
ಮಧ್ವಾಗಮ ಶೋಧಿಸಿ ಸುಧೆಯ ತಂದು
ಶುದ್ಧ ದುಗ್ಧರನೆಲ್ಲ ಉದ್ಧಾರಮಾಡಿ ಪ್ರ
ಸಿದ್ಧಿ ಪಡೆದ ಅನಿರುದ್ಧನ ದಾಸನೆ || ೪ ||

ಪುರಂದರದಾಸರ ವರ ಸುಕುಮಾರ ಧೀರಾ
ಉರಗಾದ್ರಿವಾಸ ವಿಠಲನ ದಾಸ ಭೂಸುರನಾಗಿ ಚಿಪ್ಪಗಿರಿಯೊಳು
ಮೆರೆಯುತಾ ನಿರುತ ಶ್ರೀಹರಿದಾಸರ ವೃಂದಗಳಿಂದ ಹರಿ
ಪರಿಪರಿ ಸಾಧನ ತೋರಿ ಮೆರೆವ ಗುರು || ೫ ||

***

ಗುರು ಪ್ರಜ್ಞಾನಿಧಿ ತೀರ್ಥ । ಚರಣಾಬ್ಜ ಸೇವೆಯ
ನಿರುತ ನೀಡಯ್ಯ । ಯತಿವರ್ಯ । ಯತಿವರ್ಯ
ಪೂರ್ಣ ಪ್ರಜ್ಞಾರ್ಯರ ತತ್ತ್ವ ವರುಹಯ್ಯ। ಅರುಹಯ್ಯ || ೧ ||

ಕರುಣಾನಿಧಿಯೆ ನಿನ್ನ ಕಾರುಣ್ಯಕಣೆಯೆ ಶ್ರೀ
ಕಾರುಣ್ಯ ವಿಠಲನಾ । ದಯಾಪಾತ್ರ ದಯಾಪಾತ್ರ
ಎನ್ನ ತಾಪತ್ರಯವ ಎನ್ನ ತಾಪತ್ರಯವ ಹರಿಸಿ ಸಲಹಯ್ಯ || ೨ ||

ಘೋರ ಸಂಸಾರದ ಶರಧಿ ದಾಟಿದ ಧೀರಾ
ಮಾರುತ ಮತಾಬ್ಧಿಯೊಳು ಚರಿಸುವೆ । ಚರಿಸುವೆ।
ಗುರುತೂರ್ಯ ಶ್ರಮವ ವಹಿಸಿ ಮೆರೆಯುವೆ ಮೆರೆಯುವೆ || ೩ ||

ಮಾರ್ಗದೊಳು ಬರುತಿಹ ದುರ್ಮಾರ್ಗವನು ಜರಿದು ಸ
ನ್ಮಾರ್ಗವನ್ನು ತೋರುವ ಯತಿವರ್ಯ ಯತಿವರ್ಯ। ಎನ್ನ ಭವ
ದುರ್ಗವನೆ ಹರಿಸಿ ಸಲಹಯ್ಯ ಸಲಹಯ್ಯ || ೪ ||

ಗುರುವೆ ನಿನ್ನಯ ಕರುಣ ಕವಚವನೆ ತೋರಿಸಯ್ಯ
ಕಾರುಣ್ಯ ವಿಠಲನ ಅರ್ಚಿಪೆ ಅರ್ಚಿಪಾ ನಿನ್ನೊಳು
ಕರುಣಾರಸಕೆ ಕುಂದುಂಟೆ ಕುಂದುಂಟೆ || ೫ ||

ಹಿಂದಿಲ್ಲ ಮುಂದಿಲ್ಲ ಒಂದು ಬೋಧಿಪ್ರೋರಿಲ್ಲ
ಮುಂದೆ ಬಾ ಎನ್ನುವರು ಮೊದಲಿಲ್ಲ ಮೊದಲಿಲ್ಲ
ಇಂದು ನಾ ಮಂದನಾಗಿಹೆ ಎನ್ನ ಕರುಣಿಸೋ ಕರುಣಿಸೋ ॥ ೬ ॥

ಬಂದುದಾಯಿತು ಜನ್ಮ ಸಂದು ಹೋಯಿತು ಆಯು
ಕುಂದಿತೆನ್ನಯ ಕರಣ ಇಂದಿನಾ ಇಂದಿನಾ ಪರಿ
ಯಂತಾಗಿರಲಿ ಮುಂದಿನಾ ಪಥವೆನಗೆ ತೋರಯ್ಯಾ ತೋರಯ್ಯಾ ॥೭॥

ಮಂಕು ಮಾನವನ ಮನ ಡೊಂಕವನೆ ತಿದ್ದಿ ಶ್ರೀ
ವೇಂಕಟೇಶನ ಭಕ್ತನೆನಿಸಯ್ಯಾ ಎನಿಸಯ್ಯಾ ನಿನ್ನಾ
ಕಿಂಕರರೊಳಗೆ ಕಿಂಕರನೆನಿಸಯ್ಯಾ ॥ ೮ ॥

ಕಾರುಣ್ಯವಿಠಲಾಭಿನ್ನ ಶ್ರೀ
ಉರಗಾದ್ರಿವಾಸವಿಠಲನ ನಿಜದಾಸ। ನಿಜದಾಸ ನೀ
ಪರಮೋದಾರ ಗುರುವರ್ಯ ಯತಿವರ್ಯ ॥ ೯ ॥

***

ತ್ರಾಹಿತ್ರಾಹಿ ಮಂತ್ರಾಲಯ ನಿಲಯ ॥ ಪ ॥

ತ್ರಾಹಿತ್ರಾಹಿ ಮಂತ್ರಾಲಯ ಗುರುವೆ
ಸೂತ್ರನ ಪಿತ ಕೃಪಾಪಾತ್ರ ನೀನಹುದೊ ॥ ಅ ಪ ॥

ಧ್ಯಾನ ಮೌನ ಸುಜ್ಞಾನ ವಿಲ್ಲದಿಹ
ದೀನ ಜನರುದ್ಧಾರ ಗಂಭೀರ ॥ ೧ ॥

ವಸುಧೆಯೊಳಗೆ ದಶ ಪ್ರಮತಿ ಸುಶಾಸ್ತ್ರವ
ಪ್ರಸರಿಸಿ ತೋರಿದ ಅಸಮ ಮಹಿಮನೆ ॥ ೨ ॥

ಮೂಕ ಬಧಿರ ಅಂಧಾದಿಗಳ ಕುಂದುಗಳ
ವ್ಯಾಕುಲ ಹರಿಪ ಕೃಪಾಕರ ಮೂರ್ತೇ ॥ ೩ ॥

ಕರುಣಶರಧಿ ಸಿರಿರಮಣನ ಭಕುತಾಗ್ರಣಿ
ಸುಗುಣಗಣಾಭರಣಕಣಿಯೆ ॥ ೪ ॥

ಬೇಡಿದಿಷ್ಟವ ನೀಡಿ ಕಾಪಾಡುವ
ಈಡುಗಾಣೆ ನಿನಗೀನಾಡೊಳು ಇನ್ನು ॥ ೫ ॥

ಇಂದು ಮುಂದು ಎನ್ನ ಕುಂದುಗಳೆಣಿಸದೆ
ಕಂದನೆಂದು ಎನ್ನ ಮುಂದಕೆ ಕರೆಯೊ ॥ ೬ ॥

ಕ್ಷೋಣಿಯೊಳಗೆ ನಿನಗಾರೆಣೆ ಕಾಣೆನೊ
ವೀಣೆ ವೆಂಕಟ ನೀ ಸಂಕಟ ಹರಿಸೊ ॥ ೭ ॥

ಪಾಲಿಸಯ್ಯ ಪ್ರಹ್ಲಾದ ವ್ಯಾಸ ಭೂ
ನಲ್ಲ ನೀನಹುದೋ ಬಾಹ್ಲೀಕ ಪ್ರಭುವೇ ॥ ೮ ॥

ಬಗೆಬಗೆ ಪಾಪೌಘಗಳನು ಕಳೆಯುವ
ರಘುಪತಿ ಕಿಂಕರ ಶ್ರೀ ರಾಘವೇಂದ್ರ ॥ ೯ ॥

ಪವನಾಂತರ ಶ್ರೀ ವೇಂಕಟೇಶ ಪದ
ಕುವಲಯಕೆ ನೀ ಕುಮುದ ಬಾಂಧವ ॥ ೧೦ ॥

ಮರುತಮತಾಬ್ಧಿಯ ಸಾರಸುಧೆಯನಿತ್ತೆ
ಉರಗಾದ್ರಿವಾಸ ವಿಠಲನದೂತ ॥ ೧೧ ॥

**ರಾಗ – ಬಿಲಹರಿ (ವಝಾಂಡ್)**

ಕರುಣಿಸೊ ಜಯರಾಯಾ । ಗುರುವರ್ಯ
ಚರಣವೆ ಗತಿಯಯ್ಯ ಹೇ ಜೀಯಾ ॥ ಪ ॥

ರಘುನಾಥನ ಪುತ್ರ ಪವಿತ್ರ
ರಾಘವನ ಪ್ರೀತಿಪಾತ್ರ ಚರಿತ್ರ
ಮಘವನಾ ನೀನಘದೂರ ಶ್ರೀ
ರಘುರಾಮನ ಕಿಂಕರನ ಅಮೋಘ ಸೇವಕನೊ ॥ ೧ ॥

ಕುಕರ್ಮಿಣಿಯಾ ತೀರಾ ಘೋರ ಕುವಾದಿಗಳ ಕು
ಲ ಕುಠಾರ ಗಂಭೀರ ಸಕಲ ಶಾಸ್ತ್ರ ಸತ್ಸಾರ ಟೀಕಕರ
ಕುಕವಿಶೃಗಾಲಕುಲಕಾಲಭಯಂಕರ ॥ ೨ ॥

ಎರಗೋಳಾದ್ರಿಯೊಳು ಗುಹೆಯೊಳು
ನಿರುತ ಪ್ರವಚನಗಳು ನಿತ್ಯದೊಳು
ಮರುತ ಮತಾಂಬುಧಿ ಚಂದಿರ ಸುಂದರ
ವರಸುಜ್ಞಾನ ಮಣಿಕಿರಣವ ತೋರಿದೆ ॥ ೩ ॥

ಗುರು ಮಧ್ವಮುನಿ ತತ್ವಗ್ರಂಥದ
ಕ್ಷೀರ ಶರಧಿಗೆ ಮಂಥಾ ಪುನ್ನಂಥಾ
ಮರುತನನುಗ್ರಹ ಪ್ರಗ್ರಹದಿಂದಲಿ
ವರಮಥನದಿ ಇತ್ತಿ ಅನೋಘವಸ್ತುಗಳೆಲ್ಲಾ ॥ ೪ ॥

ಉತ್ತಮ ಗ್ರಂಥ ವನಧೀ ಮಥನದಿ
ಉತ್ತಮ ವಸ್ತುಗಳನಿತ್ತೆಯೊ
ತತ್ವ ಪ್ರಕಾಶಿಕಾ ಮಹಾಲಕುಮಿಯು
ಚಂದಿರನೇ ಪ್ರಮೇಯ ದೀಪಿಕಾ
ಸುಧೆಯೇ ನ್ಯಾಯ ಸುಧಾಗ್ರಂಥ
ಶ್ರೀ ಕೌಸ್ತುಭ ದಂತಿಹ ನ್ಯಾಯದೀಪಿಕಾ ॥ ೫ ॥

ನ್ಯಾಯ ಕಲ್ಪಲತಾ ಅಪ್ಸರರು ದುರುಳ ಮಾಯಾಖಂಡ
ನಾಯುಧವೂ ಸರ್ವ ಜೇಯನ ಐರಾವತದಂತೆ ಋ
ಗ್ಭಾಷ್ಯಟೀಕಾ ನ್ಯಾಯವಿವರಣವು ಉಚ್ಚೈಶ್ರವಸ್ಸು ॥ ೬ ॥

ಕರ್ಮ ನಿರ್ಣಯ ಟೀಕಾ ವಜ್ರಾಯುಧ
ಆ ಮಹಾಪಾರಿಜಾತ ವಿಖ್ಯಾತಾ
ಶ್ರೀಮದ್ವಿಷ್ಣು ತತ್ವ ನಿರ್ಣಯ ಟೀಕೆಯು
ಕಲ್ಪವು ಉಪನಿಷತ್ ಭಾಷ್ಯ ಟೀಕೆಯು ॥ ೭ ॥

ಈಶಾವಾಸ್ಯ ಭಾಷ್ಯ ಟೀಕಾ ಸಂತಾನವೆಂಬೊ ಮಹಾವೃಕ್ಷಾ ಪ್ರ
ತ್ಯಕ್ಷಾ ಬಿಸಜ ಮಂದಾರ ಪ್ರಮಾಣ ಪದ್ಧತಿ ಹರಿಚಂದನಕೆ
ಸಮವಾದ ವಾದಾವಳಿ ॥ ೮ ॥

ಪಾಕಶಾಸನಾಂಶಾ ಕರುಣಿಸು
ಶ್ರೀಕರ ಪದ ಪಾಂಸ ಯತೀಶಾ

ನಾಕ ಪತಿಯೆ ಶ್ರೀ ಕಾಗಿನೀ ತೀರದಿ
ಏಕಾಂತದಿ ನಿಂದೇ ಲೋಕ ವಂದಿತ ದೇವಾ || ೯ ||

ಮಂದ ಭಾಗ್ಯಜನರಾ ಪರಮಾ
ನಂದದಿಂದಲಿ ನೋಡಿ ದಯಮಾಡಿ
ಬಂದ ಬಂಧಗಳ ಮಂದಿಸಿದಾಕ್ಷಣ
ತಂದೆಯಂದದಿ ಕಾಯ್ವಾನಂದವೀವೆ ನಿತ್ಯಾ || ೧೦ ||

ಪರಮ ಪಾತಕಿ ನಾನು ಗುರುವೆ ತವ ಪಾ
ದ ರಕ್ಷಕವಚವ ತೊಡಿಸೋ ಉಳಿಸೋ
ನಿರುತ ಶರಣರ ಕಾಯ್ವ ಶ್ರೀ ವೆಂಕಟೇಶನ ಪ್ರಿಯಾ
ಉರಗಾದ್ರಿವಾಸ ವಿಠಲನ ದಾಸಾ || ೧೧ ||

ರಾಗ – ಕಾಂಬೋದಿ

ಜಯತೀರ್ಥ ಗುರು ಹೃದ್ಗುಹಾಂತರವಾಸ || ಪ ||

ವಾಯುವಂತರ್ಗತ ಕೃಷ್ಣಯ್ಯ ಜೀಯ್ಯ || ಅ ಪ ||

ಕಾಯಯ್ಯನಿವ ನಿನ್ನವನೆಂದು ಅನುದಿನ
ಕಾಯ ವಾಚದಲಿ ನಿನ್ನ ನೆನವಿರಲಿ
ಜೀಯ ಶ್ರೀ ವಿಜಯರಾಯರ ಸೇವಾ
ಕಾರ್ಯಗಳಿಗಭಯವ ನೀಡಯ್ಯ || ೧ ||

ಲೌಕಿಕದಲ್ಲಿಹನೆಂದು ನಿರಾಕರಿಸದಲೆ ನಿನ್ನ
ಏಕಾಂತ ಭಕ್ತಿಯನಿತ್ತು ಸಲಹೋ
ಶ್ರೀ ಕಳತ್ರನೆ ಇವನ ವ್ಯಾಕುಲವ ಹರಿಸಿ ಕೃ
ಪಾ ಕಟಾಕ್ಷದಿ ನೋಡಿ ಕಾಯಬೇಕಯ್ಯ || ೨ ||

ಭಕ್ತ ವತ್ಸಲ ನಿನ್ನ ಭಕ್ತನಿವನೆಂದೆನಿಸೊ
ಭಕ್ತಿಬಲಜ್ಞಾನ ಸಾಧನವನಿತ್ತು
ಭಕ್ತವತ್ಸಲನೆಂಬೊ ಬಿರುದು ನಿನ್ನೊಳು ಇರಲಿ
ಮುಕುತರೊಡೆಯಾ ದೇವಾ ಶ್ರೀವೆಂಕಟೇಶ || ೩ ||

ರಾಗ – ಕಲ್ಯಾಣಿ

ಜಯತೀರ್ಥ ಮುನಿವರ ॥ ಪ ॥

ದಯತೋರಿ ಪೊರೆಯಯ್ಯ ವಿಜಯಸಾರಥಿಪ್ರಿಯ ॥ ಅ ಪ ॥

ಶ್ರೀಶ ಶಯನಾವೇಶ ಮಹೇಶ ಪ್ರತಿಬಿಂಬ ಸು
ರೇಶ ಯತಿಕುಲಾಧೀಶ ಪಾಲಿಸಯ್ಯ
ಏಸು ನಿನ್ನಯ ಕರುಣಾರಾಶಿ ಎಂತಿಹುದಯ್ಯ
ಆಸೆ ಸಲಿಸಲು ಮನೆಗೆ ಲೇಸಾಗಿ ನೀ ಬಂದೆ ॥ ೧ ॥

ಪಶುಪತಿಯ ಮತ ದಹಿಸಿ
ಅಸುಪತಿಯ ಮತ ಮೆರೆದೆ
ವಸುಮತಿಯ ಸುರನಾಗಿ ಬಂದುನಿಂದೆ
ಪಶುಪ್ರಾಯನೆಂದೆನ್ನ ಉದ್ಧರಿಸಲೋಸುಗದಿ
ಬಿಸಜ ತನಪಾದ ಪಾಂಸವನಿತ್ತೆ ॥ ೨ ॥

ಜಯಗುರುವೆ ಶ್ರೀ ವಿಜಯದಾಸರಲ್ಲೆನ್ನ ಮನೋ
ಜಯವು ಪುಟ್ಟಿಸಿದ ನಿನ್ನ ಕರುಣವೆಂತೋ
ಸೃಜಿಸಿ ತೋರಿದ ಸ್ವಪ್ನ ನಿಜವು ಆಗಲಿ ಎಂದು
ಬಿಜಯ ಮಾಡಿದೆ ನಿನ್ನ ನಿಜದಾಸರೊಡನೆ ॥ ೩ ॥

ಜಯಗುರವೆ ನಿಮ್ಮ ಹೃದ್ಗೃಹದಲ್ಲಿ ನಲಿಯುತಿಹ
ವಾಯುವಂತರ್ಗತ ಕೃಷ್ಣನ ತೋರೋ ।
ಜಯತು ಶ್ರೀ ವೇಣುಗೋಪಾಲ ಮೂರ್ತೇ
ಜಯತು ಶ್ರೀ ವೇಣುಗೋಪಾಲನೆಂದೆನಿಸಯ್ಯ ॥ ೪ ॥

ಸೃಷ್ಟಿಗೆ ಬಂದು ನಾನೆಷ್ಟು ಜನ್ಮವ ಕಳೆದೆ
ಪುಟ್ಟದೆನೋ ನಾನೀಗ ಈ ಜನ್ಮದಿ
ಪುಟ್ಟಲಿಲ್ಲವೋ ಜ್ಞಾನ ಹರಿ ಗುರುಸ್ಮರಣೆಗೆ
ಇಟ್ಟ ಕಡೆಗಣ್ಣಿನೋಳಿಷ್ಟು ನೋಡಯ್ಯ ॥ ೫ ॥

ವಾದಿಮಸ್ತಕ ಭೇದಿ ಮೋದತೀರ್ಥರ ತತ್ವ
ಸಾಧಿಸಿದ ಸಾಧುವೇ ಸುಧೆಯನುಣಿಸಿ ಛೇದಿಸಿ ವಾಕ್

ಯುದ್ಧ ಯೂಥಪಗಳನೆಲ್ಲ
ಗೆದ್ದು ಸತ್ತತ್ತ್ವದಾ ಸಿಂಹನಾದವ ಮಾಡ್ದೆ ॥ ೬ ॥

ಮಧ್ವರಾಯರಿಗೆ ನೀ ಮುದ್ದುಮೊಮ್ಮಗನಯ್ಯ
ಸದ್ವಿದ್ವದ್ಗ್ರಂಥ ಭಾರವನೆ ವಹಿಸಿ
ಮುದ್ದು ತೊತ್ತೆನಿಸಿ ಎತ್ತಾಗಿ ಸೇವಿಸಿ
ಯತಿಯಾಗಿ ನಿಂದ ತತ್ತ್ವಮುಕ್ತಿನ ಖಣಿಯೆ ॥ ೭ ॥

ಇಳೆಯೊಳಗೆ ನಿನ್ನಂಥ ಕರುಣಾಳುಗಳ ಕಾಣೆ
ಅಳವಲ್ಲ ವರ್ಣಿಸಲು ನಿನ್ನ ಗುಣಗಳನು
ಕಳವಳಿಪ ಹೃದ್ವ್ಯಾಕುಲಗಳನೆ ಕಳೆಯೋ
ಮಳಖೇಡವಾಸ ಯತಿಕುಲಾಧೀಶಾ ॥ ೮ ॥

ಗುರುವೆ ನಿನ್ನಯ ಕರುಣ ಕವಚ ತೊಟ್ಟವರ
ಚರಣಕಮಲದೊಳಿಹ ಮಧುಪನೆಂದೆನಿಸೋ
ನಿರುತ ದೃಢ ಭಕುತಿ ಶ್ರೀ ವೇಂಕಟೇಶನೊಳಿಟ್ಟು
ಪೊರೆಯೊ ಶ್ರೀ ಗುರುವರಾಗ್ರಣಿಯೆ ನಮೋ ಎಂಬೆ ॥ ೯ ॥

ರಾಗ – ಷಣ್ಮುಖಪ್ರಿಯ ತಾಳ – ಆದಿ

ಜಯರಾಯ ಜಯರಾಯ ॥ ಪ ॥

ಜಯರಾಯ ಯೋಗಿವರ್ಯ
ದಯಮಾಡಿ ಎನ್ನ ಮನೋ
ಜಯವಿತ್ತು ನಿನ್ನ ಪಾದಸೇವೆಯ ನೀಡಯ್ಯ ॥ ೧ ॥

ದೇಶ ಪಾಂಡ್ಯರೊಳು ಕೂಸಾಗಿ ಜನಿಸಿ
ಅಶೇಷ ಜನರಿಗೆ ಶೇಷಾವೇಶವ ತೋರಿದೆ ॥ ೨ ॥

ಹೊತ್ತು ತಿರುಗುತ ಸರ್ವೋತ್ತಮನಾ ಗುಣಗ್ರಂಥ
ಬಿತ್ತರಿಸಿದೆ ಪೂರ್ಣಬೋಧರ ದಯದಿ ॥ ೩ ॥

ಅಮರಾಧಿನಾಥನ ಪಾದಾಶ್ರಯವೆಂದು ತುರ್ಯಾ
ಶ್ರಮದೊಳು ನಿಂದು ಶ್ರೀಧರನ ಸೇವಿಸಿದೆಯೊ ॥ ೪ ॥

ಬುಧಜನರಿಗೆ ಪೂರ್ಣ ಬೋಧರ ಮತಾಗಮ
ಉದಧಿಮಥಿಸಿ ಸಾರ ಸುಧೆಯನುಣಿಸಿದೆ || ೫ ||

ಅಗಣಿತ ಮಹಿಮನ ಗುಣಗಳ ಸ್ತುತಿಸುತ ಎ
ರಗೋಳದೊಳು ನಿಂತಾಸುಗುಣ ಯತೀಶ || ೬ ||

ಮಹ ಮಹಿಮನೆ ನೀ ಮಹಿಯೊಳು ಜನಿಸಿ
ಮೋಹವ ಹರಿಸಿದ ಮಾಧವ ಪ್ರಿಯಾ || ೭ ||

ಬುಧಜನ ಮಂದಾರ ವಾದಿ ಭಯಂಕರ
ಬೋಧರ ಕಿಂಕರ ಸುಗುಣರತ್ನಾಕರ || ೮ ||

ಪರಮಪುರುಷ ಶ್ರೀ ವೇಂಕಟೇಶಾತ್ಮಕ
ಉರಗಾದ್ರಿ ವಾಸವಿಠಲನ ದಾಸ || ೯ ||

* * *

## ಅಶ್ವಧಾಟಿ

ಟೀಕಾಕೃತ್ಪಾದ ಕರುಣಾಕರ ಗುರು
ಶ್ರೀಕಾರ ಸರಿತ ಮಾಟಾ
ನಾಕಾಧಿಪನೆ ಮನ ಶೋಕಾ ಹರಿಸಿ
ನೀ ಕಾಪಾಡುವುದು ನಿತ್ಯ || ೧ ||

ಪೂರ್ಣ ಬೋಧರ ಮತಾರ್ಣವಚಂಡಿರ
ನಿರ್ಣಯಿಸಿದೆ ಟೀಕಾರ್ಣವದೊಳು ಸುಧ
ಉಣ್ಣಿಸಿದೆಯೊ ಗ್ರಂಥ ವರ್ಣಿಸಿರುವ ಸತ್ಯ || ೨ ||

ಮಿಥ್ಯಾವಾದಿಗಳ ಸತ್ಯ ತತ್ತ್ವವೆಲ್ಲ ಕತ್ತರಿಸಿದೆ ನಿತ್ಯ
ಎತ್ತ ನೋಡಲು ತಲೆ ಎತ್ತದಂತೆ
ದೈತ್ಯೋನ್ಮತ್ತರನೆಲ್ಲಾ ಸದೆದೆ || ೩ ||

ನಾಕಾಪತಿಗೆ ದೈತ್ಯಲೋಕಗಳಾ ಬಾಧೆ
ತಾ ಕಳೆಯಲು ನಿತ್ಯ
ಶ್ರೀಕಾರನಾದ ಮೃತವ ಶ್ರೀಕಾಂತನಿತ್ತಂತೆ
ನೀ ಸುಧೆಯನು ತಂದೆ || ೪ ||

ದಶ ಪ್ರಮತಿ ಸುಶಾಸ್ತ್ರ ಶರಧಿಯೊಳು
ಪಾಷಿಸುವೆಯೊ ನಿತ್ಯ
ವೀಸಲ ಮನಕೊಟ್ಟೆನ್ನಾಸೆಯು ಹ
ರಿಸಿ ಪದ ಸೇವೆಯು ಕೊಡೊ ನಿತ್ಯ ॥ ೫ ॥

ಪಾಕಶಾಸನ ಸುಖ ಬೇಕಾಗಿ ತೊರೆದು ನೀ
ನೇಕಾಂತದಲಿ ನಿಂತೇ
ಲೋಕ ಸುಖದಿ ಭವಶೋಕದಲ್ಲಿಹ ಎ
ನ್ನ ಕಾಪಾಡುವುದು ನಿತ್ಯ ॥ ೬ ॥

ಶೇಷಾವೇಶ ಆವೇಶಾವಹಿಸು ಎನ್ನ
ದೋಷ ರಾಶಿಯು ಕಳೆದು
ಶೋಷಿಸು ಮನ ಕಲ್ಮಷ ವಿಷವನೆಲ್ಲ ನಿ
ಶ್ಶೇಷವ ಮಾಡಿ ಸಲಹೊ ॥ ೭ ॥

ಹಲವು ವಿಷಯದ ಹಂಬಲದಿಂದ ಎನ್ನ ಜ್ಞಾನ
ಹೊಲಬುಗೆಟ್ಟಿದು ನಿತ್ಯ
ಅಲಪ ಬೋಧರ ತತ್ತ್ವ ಲವಮಾತ್ರವಾದರು
ನೀ ಎನಗೆ ಪಾಲಿಸೊ ॥ ೮ ॥

ಮುಕ್ತಿಮಾರ್ಗಕೆ ಜ್ಞಾನ ಭಕ್ತಿ ವೈರಾಗ್ಯ ಗುರು
ಭಕ್ತಿಯೆ ಮುಖ್ಯ ಕಾರಣ
ಯುಕ್ತಿಶಾಸ್ತ್ರ ಪ್ರಸಕ್ತಿ ಇಲ್ಲದ ತ್ವ
ದ್ಭಕ್ತನಾದೆನ್ನ ಸಲಹೊ ॥ ೯ ॥

ಅಕ್ಷೋಭ್ಯ ಕಟಾಕ್ಷದಿ ಯತಿ ಹ
ರ್‍ಯಕ್ಷನಾಗಿಹೆ ದೀಕ್ಷಾ
ಶಿಕ್ಷೆ ಮಾಡಿ ಪರಪಕ್ಷವಾದಿಗಳನ್ನು ಸ
ತ್ಸ್ವೀಕ್ಷಕನಾಗಿ ಮೆರೆದೆ ॥ ೧೦ ॥

ಮರುತಾಂತರ್ಗತ ಶ್ರೀ ವೇಂಕಟೇಶನ ಪಾದ
ಚರಣ ಕಮಲ ಮಧುಪ
ನಿರುತ ನೀ ಕರುಣಿಸು
ಉರಗಾದ್ರಿವಾಸವಿಠಲನ ನಿಜದಾಸ ॥ ೧೧ ॥

ರಾಗ – ಬೇಹಾಗ್ | ತಾಳ – ಆದಿ

ಭುಜಗಭೂಷಣ ಕರುಣಾ ಗಜಾನನಾ ॥ ಪ ॥

ಅಂಬರಕಭಿಮಾನಿ ಶಂಭುದೇವನ ಸುತ
ಇಂಬು ತೋರಿಸೊ ನೀ ವಿಶ್ವಂಭರನ ಸ್ಮರಣೆಗೆ ॥ ೧ ॥

ದಾಸವರ್ಯನೆ ವೇದವ್ಯಾಸರಿಗತಿಪ್ರಿಯ
ದಾಸನೆಂದೆನಿಸೆನ್ನ ಪೋಶಮಾರುತಿಯೆ ॥ ೨ ॥

ಮತಿಯ ಪಾಲಿಸು ಶ್ರೀಪತಿಯ ಸ್ತುತಿಗೆ ವಿಘ್ನ
ತತಿಯ ತಾರದೆ ಶುಭಮತಿ ಇತ್ತು ಸಲಹೊ ॥ ೩ ॥

ತತುವರೊಳಗೆ ಅತುಳ ಮಹಿಮನೆಂದು
ಪ್ರಥಮ ಕಾರ್ಯದಿ ನಿನ್ನ ನುತಿಸಿ ಬೇಡುವರೊ ॥ ೪ ॥

ಶ್ರುತಿಪ್ರತಿಪಾದ್ಯ ಶ್ರೀ ವೆಂಕಟೇಶನ ದೂತ
ಹಿತರೆನಗಿಲ್ಲ ನೀಗತಿ ಎಂದು ನಂಬಿದೆ ॥ ೫ ॥

ರಾಗ – ನಾಟಕುರಂಜಿ | ತಾಳ – ಆದಿ

ಗಂಗಾಧರ ಸ್ಮರತ್ರಿಪುರಹರದೇವ ॥ ಪ ॥

ಅಂಗಜಹರ ಭಸಿತಾಂಗ ಮಹಾಲಿಂಗ
ತುಂಗ ಮಹಿಮ ಮೃಗಾಂಕಮೌಳಿ ಶಿವ ॥ ಅ ಪ ॥

ಶ್ರದ್ಧಾ*ಮಾರುತಿ ಭೂತೇಶ–ಸದ್ಯೋಜಾತ
ಪ್ರದ್ಯುಮ್ನಸುತೆಯಸುತ ಮತಿಯ ಪ್ರದಾತ
ಸದಮಲ ಮಾರುತಿ ಹೃದಯ ಸದನದೊಳು
ವಿಧಿಪಿತನಂಘ್ರಿಯ ಸ್ಮರಣೆಯ ಕರುಣಿಸು ॥ ೧ ॥

ಪ್ರಮಥ ಶ್ರೇಷ್ಠರ ಸಂಸೇವಿತ ಸುಮನಕರ ಪ್ರೀತ
ಹೈಮವತಿಯ ಪ್ರೀತಾ ರಮಾರಮಣಗೆ ಅತಿಭಕುತಾ

---

* ಸಿದಾ.

ನೀ ಮನೋಭಿಮಾನಿಯು ಖ್ಯಾತಾ–ತಾಮಸರೊಳು
ತಮಸಾಧನ ಮಾಡಿಸಿ ನೀ ಮೋಹಿಪ ದೇವ ಶೂಲಿ ಕಪಾಲಿ ॥ ೨ ॥

ಶುಕ ದೂರ್ವಾಸ ಸ್ವರೂಪ ಜೈಗೀಷ ರೂಪ
ವೈಕಾರಿಕಾದಿ ತ್ರೈರೂಪ ಲೋಕನಾಥ ಶ್ರೀ ವೆಂ
ಕಟೇಶನ ಹೃತ್ಕಮಲದಿ ನಲಿಸುವ ಕಾಲನೇತ್ರ–ಶಿವ ॥ ೩ ॥

ರಾಗ – ಕಾಂಬೋದಿ ತಾಳ – ಝಂಪೆ

ಶಂಕರಾ ಪೊರೆಯಯ್ಯ ನಾ ನಿನ್ನ ಕಿಂಕರ ॥ ಪ ॥

ಪಂಕಜಾಸನ ಕುವರ ಮನದಾ
ಶಂಕ ನಾಶಗೈಸಿ ಶೇಷ ಪ
ರ್ಯಂಕಶಯನನ ಪಾದ
ಪಂಕಜದೇಕಭಕುತಿಯನಿತ್ತು ಸಲಹಯ್ಯ* ॥ ಅ ಪ ॥

ನಿಟಿಲನಯನ ಧೂರ್ಜಟಿಯೆ – ಸೋಮಧರಾ – ಜಟಾಜೂಟನೆ
ಕಠಿಣವೆನ್ನಯ ಕುಟಿಲಮತಿಯ
ಜಟಿಲಕಳೆದು ನಿಷ್ಕುಟಿಲ ಮನದೊಳು
ವಿಠಲ ಮೂರ್ತಿಯ ಧೇನಿಸಲು ಹೃ
ತ್ತಟದಿ ದಿಟಮನ ಕೊಟ್ಟು ರಕ್ಷಿಸಯ್ಯ ॥ ೧ ॥

ಘೋರ ದುರಿತಾಪಹಾರ ತ್ರಿಪುರಹರ–ಕರುಣಾಸಮುದ್ರನೆ
ನಿರುತ ಶ್ರೀಹರಿ ಚಾರುಚರಣಸ್ಮರಣೆ
ಕರುಣಿಸಿ ಪೊರೆಯೋ–ಗುರುವರ
ಸುರನದೀಧರ–ಪಾರ್ವತೀವರ
ಕರಿಗೊರಳ – ಕೈಲಾಸಮಂದಿರ ॥ ೨ ॥

ಸರ್ಪಭೂಷಣ ಶೂಲಿ ಡಮರುಧರ–ಕಂದರ್ಪಹರಶಿವ
ಸರ್ಪಗಿರಿ ಶ್ರೀ ವೆಂಕಟೇಶಗೆ
ಸರ್ವಭಕ್ತಿ ಸಮರ್ಪಿಸಯ್ಯ

* ಸಲಹೆಲೊ.

ಆಪತ್ತುಹರ–ಸಂಪತ್ತುಕರ
ಶಾರ್ವರೀಕರಧರ–ಶುಭಾಕರ ॥ ೩ ॥

ಶಂಬರಾಂತಕವೈರಿ–ಭಸಿತಧರ–ಬೆಂಬಿಡದೆ ಸಲಹೊ
ಶಂಭು–ಶಚಿಪತಿಬಿಂಬ–ಗುರುವರ
ಸಾಂಬ–ಕ್ರೊಂಬಸುರಕುವರ
ತ್ರ್ಯಂಬಕಾ–ತ್ರಿಪುರಾಂತಕಾ
ಅಂಧಕಾಸುರ ಧ್ವಂಸಕಾ–ಶುಕ ॥ ೪ ॥

ಗಿರಿಶ ಸುರವರ–ರುಂಡಮಾಲಾಧರ–ಕರಿಚರ್ಮಾಂಬರ
ನಿರುತ ಹೃದಯಸದನದೊಳನ
ವರತ ಉರಗಾದ್ರಿವಾಸ ವಿಠ್ಠಲನ
ಚರಣಸರಸಿಜ ಮಧುಪ–ನೀ ಸುಖ ಸವಿದು
ಸೇವಿಪ ವೈಷ್ಣವಾಗ್ರಣಿ ॥ ೫ ॥

ರಾಗ – ಕಾಂಬೋದಿ ತಾಳ – ಝಂಪೆ

ಕಂಟಕವ ಪರಿಹರಿಸೊ–ಶ್ರೀಕಂಠಮೂರುತಿಯೇ ॥ ಪ ॥

ಬಂಟನೆಂದೆನಿಸೆನ್ನ ವೈಕುಂಠಮೂರುತಿಗೇ ॥ ಅ. ಪ. ॥

ತಂಟೆಸಂಸಾರದ ಲಂಪಟದಲೆನ್ನ ಮನ
ಮರ್ಕಟನ ತೆರದಿ ಪರ್ಯಟನ ಮಾಡೆ
ಅಂಟಿಕೊಂಡಿಹ ಈ ಭವಾಟವಿಯು ದಾಂಟಿಸುವೆ
ನೆಂಟ ನೀನಹುದಯ್ಯ ಶಿತಕಂಠದೇವಾ ॥ ೧ ॥

ನಿರ್ಜರೇಶನ ಬಿಂಬ ಮೂರ್ಜಗದೊಳಗೆಲ್ಲ
ಧೂರ್ಜಟಿಯೆ ನೀನೆ ಭವವರ್ಜಿತನ ಮಾಡೋ
ದುರ್ಜಯವು ಎನ್ನ ಮನ ಆರ್ಜಿಸದೆ ಹರಿಭಕುತಿ
ಮೂರ್ಜಗದ ಪತಿ ಜನಾರ್ದನನೊಳ್ ಮನ ನಿಲ್ಲಿಸೋ ॥ ೨ ॥

ತ್ರ್ಯಂಬಕನೆ ಎನ್ನ ಮನದಂಬರದೊಳ್[1] ಹರಿಪಾದ
ಅಂಬುರುಹ ತೋರಯ್ಯ ಶಂಭೋ ಮಹಾದೇವಾ
ಕುಂಭಿಣಿಯೊಳು ಬಂದೆ ಇಂಬು ತೋರದು ಎನಗೆ
ಶಂಬರಾಂತಕ ವೈರಿ ಭವಭಯಹಾರೀ ॥ ೩

ವಾಮದೇವನೆ ಕಾಯೊ ತಾಮಸಮತಿ ಹರಿಸಿ
ಶ್ರೀ ಮನೋಹರನಲ್ಲಿ ಸನ್ಮನವ ನೀಡೋ
ಸೋಮಶೇಖರ ಸುರಸ್ತೋಮದಲಿ ನಿನ್ನಂಥ
ಪ್ರೇಮಿಗಳ ನಾಕಾಣೆ ಉಮೆಯರಸ ಸಲಹಯ್ಯ ॥ ೪

ಶಿಕ್ಷಕನು ನೀ ಜ್ಞಾನ ಚಕ್ಷುವ ನೀಡು ವಿರೂ
ಪಾಕ್ಷ ಮಾರುತಿ ಶ್ರೀ ವೇಂಕಟೇಶನ ಭಕ್ತ
ಈ ಕ್ಷಿತಿಯೊಳ್ ಉರಗಾದ್ರಿವಾಸವಿಠಲನ ಪ್ರ
ತ್ಯಕ್ಷದಲಿ ನೋಳ್ಪ ಶ್ರೀ ತ್ರ್ಯಕ್ಷಮಾರುತಿಯೇ ॥ ೫

ರಾಗ – ಸುರಟಿ　　　　ತಾಳ – ೧

ಪಾಲಿಸು ಭಾರತಿಯೆ ದೇವಿಯೆ
ಕಾಲಮಾನಿಯೆ ತಾಯೆ ॥ ಪ

ಶ್ರದ್ಧ[2]ಮಾರುತಿ ತಾಯೆ ಕಾಯೆ–ಪ್ರದ್ಯುಮ್ನ ಕುವರಿಯೆ
ಶ್ರದ್ಧಾನಾಮಕಳೆ ನೀ ಶ್ರದ್ಧಾಭಕುತಿ ಕೊಟ್ಟು
ಶುದ್ಧ ಮುಗ್ಧನೆನ್ನ ಉದ್ಧರಿಸುವುದೀಗಾ ॥ ೧

ಚಿತ್ತ ವೃತ್ತಿಯು ಬಲ್ಲೆ–ಎನಗೆ ನೀ ಉತ್ತಮಗತಿ ಈಯೆ
ಚಿತ್ತಶುದ್ಧ ಬುದ್ಧಿಯಿತ್ತು ನೀ ಪಾಲಿಸಿ
ಚಿತ್ತಜನಯ್ಯನಾ ಹತ್ತಿರಕೊಯ್ಯೆ ॥ ೨

ಪಂಕಜ ಭವನ ರಾಣಿ–ಗುಣಮಣಿ–ಶಂಕರನಾ ಜನನಿ
ಕಿಂಕರನೆಂದು ಮನಾ ಶಂಕೆಯ ಹರಿಸಿ ಶ್ರೀ
ವೆಂಕಟೇಶನ ಪಾದಪಂಕಜ ತೋರಿಸೆ ॥ ೩

---

1 ಡಂಬನದೊಳ್, 2. ಶುದ

ಸೂತ್ರನಾಮಕಪ್ರಾಣ ಜಗತ್ಪ್ರಾಣ
ಸೂತ್ರನಾಮಕ ಜಗಸೂತ್ರನೆ ಹರಿಕೃಪಾ
ಪಾತ್ರ ನೀನಹುದೋ ಸರ್ವತ್ರದಿ ನೀನೆ ॥ ಪ ॥

ದೇವಾ ನೀನಿಲ್ಲದಿರೆ ಜಗವೆಲ್ಲವು ತಾ ನಿರ್ಜೀವ
ಜೀವ ಕೋಟಿಗಳೆಲ್ಲ ಕಾವ
ಪಾವನಾತ್ಮಕ ಸಂಜೀವ
ಲವಕಾಲ ಬಿಡದೆ ಎವೊತ್ತಿರುವ ಭೋ ದೇವ ॥ ಅ. ಪ. ॥

ಸಾಟ ಯಾರೆಲಿ ತ್ರಿಕೋಟಿರೂಪನೆ ನಿಶಾಚರ ಕುಲಕೆ ಕುಠಾರಿ
ದಿಟ್ಟತನದಲಿ ಅಜಾಂಡ ಕರ್ಪರದಿ ಸೃಷ್ಟಿಯೊಳು ಸಂಚಾರಿ
ಪಟುತರ ತ್ರಿವಿಕ್ರಮ ಚಟುಲ ಮೂರುತಿ ಮನತಟದಲಿ ಭಜಿಸಿದ
ಶ್ರೇಷ್ಠನೆ ನಿಜಪರಮೇಷ್ಠಿ ಪದವನು ಕೊಟ್ಟು ಪಾಲಿಪೆ
ಮುಂದೂ ಹಿಂದೂ ಕೂರ್ಮನಾಗಿ ನಿಂದು ಬ್ರಹ್ಮಾಂಡ ಪೊತ್ತು
ಅಂದು ಜಗಭಾರ ಪರಿಹಿಸಿದೆಯೊ
ಅಂದು ಪ್ರಥಮಾಂಗ ಹರಿಗೆ ಬಂಧೂ ದಯಾಸಿಂಧು ಎಂದೆಂದೂ
॥ ೧ ॥

ವೀರನೀ ಈರ ಪಾದರ ಕುಲಕುಠಾರ ಸರುವ ತತುವೇಶರ ವ್ಯಾಪಾರ
ಧೀರ ನೀನಡೆಸೆ ಜಗಸಂಸಾರ ಕಾರಣನು ಜಗಕಾರ್ಯ ಕಾ
ಧಾರ ಸುಖವಿಚಾರ ಜ್ಞಾನ ಧರ್ಮ ವೈರಾಗ್ಯ ಐಶ್ವರ್ಯ ನಿನ್ನಯ ಗುಣ
ಸ್ವರೂಪತನುಕರಣೇಂದ್ರಿಯ ಕರ್ಮ ಫಲವನು ಜೀ
ವರುಗಳಿಗುಣಿಪ ಅನಿಲರೂಪನೆ ತನು ಗೋಳಕದಲಿ ನೀ ನೆಲ
ಸಿ ರೂಪದಿ ದೈವದೊಳಧ್ಯಾತ್ಮಾದಿ ಭೂತಾದಿ ದೈವನೆಂದು
ಅಂದು ಸೃಷ್ಟಿಯೊಳು ಬಂದೂ ಪೊಂದಿ
ಸರ್ವರೊಳು ನಿಂದೂ ಹಿಂದೂ ಇಂದೂ ಇನ್ನು ಮುಂದೂ
ಎಂದೆ ಜೀವೇಶ ನೀನೆ ಜಗಬಂಧೂ ಕರುಣಾಸಿಂಧು ಎಂದೆಂದೂ
॥ ೨ ॥

ಪ್ರಾಣಪ್ರಾತರ ಸಾಯಂಬೀತರ ಅಭಿಧಾನ
ಗುಣಸ್ತವನ ಮಾಳ್ಪರೆಲ್ಲ ಸುರ
ಗಣಾ ಮಣಿದು ಬೇಡುವರೆಲ್ಲ ಅನುದಿನಾ
ಎಣೆಯುಂಟೆ ನೀನಮಿತ ಗುಣಗಣಾ ಶ್ರೀಮುಖ್ಯ
ಪ್ರಾಣಾ ಜಗಬಂಧಕೆ ಮಹಾರಜ್ಜು ರೂಪ ನೀಚಿತ್ಸುಖಮಯ
ವಪುಷ ಖಗಪ ಶೇಷ ಶಿವ ಶಕ್ರಾದೀ ಜಗ ಬದ್ಧವು
ನಿನ್ನಿಂದೀಶಾ ಅಘದೂರ ಅನಂತಾನ ಕೇಶನಖಾಗ್ರ
ಪರ್ಯಂತ ಚಿತ್ಸುಖ
ಅಣುಘನ ಅವಯವ ಅವಯವಿಗಳಿಗಭೇದ ನೀ ಛಂದ ಶಾಸ್ತ್ರದಿ
ತನು ತ್ವಗ್ರೋಮ ಉಷ್ಣಿಕ್ ಗಾಯತ್ರಿ ನರ ಮಾಂಸನುಷ್ಟುಪ್
ಅನುಷ್ಟುಪ್ಪು ಅಸ್ತಿಮಜ್ಜಾ ಜಗತೀ ಪಂಕ್ತಿ ಬೃಹತಿನಾಮಕ
ಜೀವನಾತ್ಮ ಶ್ರೀ ವೇಂಕಟೇಶನಾ ಘನಾತ್ಮ ಉರಗಾದ್ರಿವಾಸ
ವಿಠಲನನ್ನ ||೬

ರಾಗ – ಖಡಕು ತಾಳ –

ಪವಮಾನ ಪಾವನ ಜಗಜ್ಜೀವನ ||ಪ

ಶಿವ ಖಗಪತಿ ಅಹಿಸುರ ವಂದಿತ ಪದ ||ಅ. ಪ

ರಾವಣನು ಪವನಾ ಭಂಜನಾ ।
ಸೇವಾ ಕೃಷ್ಣ ಸಾಧನಾ
ಮೂವತ್ತೇಳು ಗ್ರಂಥ ರಚನಾ ।
ಕಾವಕರುಣಿ ಕಿಂಪುರುಷ ಖಂಡಾಧಿಪ
ಕಾವಳದೊಳು ನಿನ್ನವರನು ಕಾಯ್ದು
ಭೂ ವಳಯದೊಳ ವಿದ್ಯೆಯನಳಿಸಿದ
ಸದ್ವೈಷ್ಣವನು ನೀನೆನ್ನನುದ್ಧರಿಸಯ್ಯ ||೧

ಭರದಿ – ಶರಧಿ – ಹಾರಿದೆ ।
ಕೌರವ ಕಲಿಯಾ ನೀ ಗದೆಯಿಂ ಭೇದಿಸಿದೆ
ಧಾರುಣಿಯೊಳು ಯತಿಪುಂಗವನೆಂದೆನಿಸಿದೆ
ನಿರುತದಿ ರಾಮರಕಾರ್ಯವ ಸಾಧಿಸಿ

ವಿರಥರ ಮಾಡಿದೆ ಅತಿರಥರುಗಳ
ಹರಿಸರ್ವೋತ್ತಮ ತರತಮ ಸತ್ಯತ್ವಗ
ಳರುಹಿದ ಸದ್ವರ್ತನು ನೀನೆ ॥ ೨ ॥

ರಾಮ ಪದಕುಮುದ ಸೋಮ
ಭೀಮಾರಿಪ್ರಕುಲ ಧೂಮ ನಿಸ್ಸೀಮ
ಶ್ರೀಮದಾನಂದ ಮುನಿ ಸಾರ್ವಭೌಮ
ಭೂಮಿಜೆ ಕುರುಹ ಶ್ರೀರಾಮರಿಗರ್ಪಿಸಿ
ಆ ಮಹ ಬಕ ಕೀಚಕರ ಸಂಹರಿಸಿ
ತಾಮಸ ಗ್ರಂಥವನಳಿಸಿ ಜನಕೆ ಸದ್ಬೋಧೆ
ಇತ್ತ ಗುರು ಪೂರ್ಣಬೋಧನೆ ॥ ೩ ॥

ದ್ರೋಣಾಚಲವ ತಂದ ಪ್ರಾಣ
ಎಣೆಯುಂಟೆ ಬಲದೊಳು ನೀನೆ ನಿಸ್ಸೀಮ
ಕಾಣೆನೊ ಜಗದಿ ಪರಮಹಂಸರ ಪ್ರಾಣ
ಪ್ರಾಣಿಗಳೊಳಗೆ ಮುಖ್ಯ ಪ್ರಾಣನೆಂದೆನಿಸಿದೆ
ಕ್ಷೋಣಿಯೊಳು ಕುರುಸೇನೆ ಸಂಹರಿಸಿ
ಕ್ಷೀಣವಾಗುತಲಿಹ ಸುಜನರ ಮನಕ
ತ್ರಾಣ ಮಾಡಿ ಸತ್ಪ್ರಮಾಣಗಳಿತ್ತೆ ॥ ೪ ॥

ಋಜುಪುಂಗವ ದೇವಾ ಹನುಮಾ
ಗಜ ಪುರಾಗ್ರಣಿ ಕೌರವನಿಗೆ ನೀ ಕಾಲಯಮ
ಕುಜನರ ಮತಿಗೆ ಕುಲಿಶ ನಿಸ್ಸೀಮ
ಅಜಪದ ಪಡೆವ ಶ್ರೀ ಆಂಜನೇಯನೆ
ವಿಜಯ ಸಾರಥಿ ನೊಲಿಸಿ ಪೂಜಿಸಿ
ಸೃಜಿಸಿ ಮೆರೆದೆ ಸಚ್ಛಾಸ್ತ್ರದಿಂದ
ಈ ಚತುರ್ದಶ ಭುವನಾಚಾರ್ಯನೆನಿಸಿದೆ ॥ ೫ ॥

ಖೂಳ ಅಕ್ಷಕುವರನ ಹರಿಸೆ
ಖಳರ ಕಾಳೋರಗ ಬಾಧೆ ಲೆಕ್ಕಿಸದೆ
ಖಳ ಭೂದೈತ್ಯರ ಬಾಧೆ ಹರಿಸಿದೆ

ಬಾಲತನದಲಿ ಭಾನು ಮಂಡಲ ಹಾರಿದೆ
ಕೋಲತನದಿ ಸತಿಗೆ ಪ್ರಾವಿತ್ತೆ
ಶ್ರೀಲ ಮಾರುತಿ ಮಾಯಾ
ಜಾಲ ಹರಿಸಿ ಜಗಖ್ಯಾತನಾದೆ ಯತಿದಶಪ್ರಮತಿಯೆ ॥ ೩ ॥

ಮಾರುತಿ ಧೀಮಂತ ಮಾರುತಿ
ಭಾರತದಿ ಭೂಭಾರನಿಳುಹಿದ ಖ್ಯಾತಿ
ಸಾರ ಶ್ರೀ ಬಾದರಾಯಣಗೆ ಅತಿ ಪ್ರೀತಿ
ಆರಿಪುರ ವೈಶ್ವಾನರನಗರ್ಪಿಸಿ
ವಾರಣಪುರದೊಳು ಅತಿರಥನೆನಿಸಿ
ದುರ್ವಾದಿ ಮತ್ತಗಜಸಿಂಹನಾಗಿ ನೀ
ನಿರ್ವ್ಯಾಜದ ಭಕ್ತಿಯ ಹರಿಗರ್ಪಿಸಿದೆಯೊ ॥ ೪ ॥

ಹನುಮಾ ಭೀಮಾ ಆನಂದ ಮುನಿಪಾ
ವಾನರಾಧಿಪಾ ಗಜಪುರಾಧಿಪ ಯತಿಪಾ
ಧ್ಯಾನನಿರತ ರಾಮ ಪದದಿ
ಮಾನಸದಲಿ ಯದುಪತಿಯ ಪೂಜಿಸಿ
ದೀನ ಜನರುದ್ಧಾರಮಾಡಿ ಸದ್ಬೋಧೆ
ಯನಿತ್ತ ಮಧ್ವಮುನಿಯೆ ॥ ೫ ॥

ರಾಮಾಲಿಂಗನ ಮಾಡಿದಾ
ರೋಮ ರೋಮಕೆ ಕೋಟಿಲಿಂಗವ ಸೃಜಿಸಿದಾ
ಶ್ರೀ ಮಧ್ಯಗೇಹಾರ್ಯಸೂನು ವೆಂದೆನಿಸಿದಾ
ಆ ಮಹಾರ್ಣವ ಲಂಘಿಸಿದಾ ಧೀರಾ
ಭೀಮ ಭಯಂಕರ ದ್ರೌಪದೀ ಪ್ರಿಯಕರ
ಈ ಮಹಿಮೆಯೊಳಾರೆಣೆಯೋ ನಿನಗೆ ನಿ
ಸ್ಸೀಮನಹುದೋ ಯತಿ ಸಾರ್ವಭೌಮನೆ ॥ ೬ ॥

ಸುರ ಜೇಷ್ಠಾನಸ್ತ್ರ ಮಾನಿಸಿದಾ ।
ಜರೆಯನ ಸೀಳಿ ನರಪರ ಸೆರೆಯ ಬಿಡಿಸಿದಾ
ಧರೆಯೊಳ್ ಸುರಶ್ರೇಷ್ಠನೆಂದೆನಿಸಿದಾ

ಧರದೊಳು ಭರತಗೆ ಕುಶಲವ ತಿಳಿಸಿ
ಕರುಳಮಾತಿನಿಂ ಸತಿಯು ಸಂತೈಸಿ
ದುರುಳ ಭಾಷ್ಯಂಗಳ ತತ್ತ್ವವನಳಿಸಿದಾ
ಪರಮ ದಯಾಂಬು ನಿಧಿ ಶ್ರೀ ಮುದಾನಂದ ॥ ೧೦ ॥

ರಕ್ಷಕನೀನೆ ಸಜೀವ
ಲಾಕ್ಷಾಗಾರದ ಬಾಧೆಯಿಂ ರಕ್ಷಿಸಿ ಮೆರೆದಯ್ಯ
ಈ ಕ್ಷಿತಿಯೊಳು ದೈತ್ಯ ಶಿಕ್ಷಕನೆನಿಸಿದೆ
ತಕ್ಷಣ ಸಿಂಹಿಕೆ ಕುಕ್ಷಿಯು ಸೀಳ್ದೆ
ಭಿಕ್ಷೆಯಿಂದ ನಿನ್ನವರನು ಕಾಯ್ದೆ
ದಕ್ಷನಹುದೊ ನೀನಚ್ಯುತ ಪ್ರೇಕ್ಷರಿಂ
ದೀಕ್ಷೆಯು ವಹಿಸಿ ಸತ್ಶಿಕ್ಷಕನಾದ್ಯೊ ॥ ೧೧ ॥

ನೀ ರಂಜಿಸಿ ಮೆರೆದೆಯೊ ಗುರು ಮಧ್ವಾರ್ಯ
ಧೀರ ಕೇಸರಿ ಕುವರ ಪುರುಷಾಮೃಗನ ಸಾಧಿಸಿತಂದ
ಶೂರ ಈ ಧರಾವಲಯದಿ ತೋರಿದೆ ತತ್ವಸಾರ
ತೋರಿ ಭಕ್ತಿ ಶ್ರೀರಾಮರ ಪದದಿ ಕಿಂ
ಸಾರಿಯು ಸೇವಿಸಿ ಭಾರವ ನಿಳುಹಿದೆ
ಸಾರಿದೆ ಹರಿಸರ್ವೋತ್ತಮನು
ತರತಮಭೇದವನರುಹಿದ ಪರಮುದಗಾಳಿಯೊ ॥ ೧೨ ॥

ಅಂಜನ ಕುವರಾ—ಧೀರಾ
ಕುಂಜರ ಪುರದ ಅರಿಗಳಂಜಿಸಿದ ಶೂರಾ
ಧರಣಿ ದುರ್ಮದಾಂಧರ ದುರ್ವಾದ
ಪಂಕಜೋದ್ಭವನ ಪದವ ಪಡೆವೆ ನೀ
ಅಂಜದೆ ಗದೆಯಿಂಕೊಂದೆ ಕುರುಪನ
ಮಂಜುಳವಾಣಿಯು ಜಗಕೆ ಇತ್ತು ನೀ
ರಂಜಿಸಿ ಮೆರೆದೆಯೊ ಗುರುಮಧ್ವಾರ್ಯ ॥ ೧೩ ॥

ರೋಚಕ ನಾಮಕನೆನಿಸಿ ವಿ
ರೋಚನನ ಕಾರ್ಯವನೆಲ್ಲಾ ಕೆಡಿಸಿ
ಪಾಜಕ ಕ್ಷೇತ್ರ ಪವಿತ್ರ ಮಾಡಿದೀ

ಖೇಚರರ ಮಾರ್ಗದಿ ನೆಗಹಿ ನಿ
ಶಾಚರನೆಲ್ಲರ ಸದೆದೆ ಗದೆಯಿಂ
ಸೂಚಿತ ಗ್ರಂಥಾ ವಿರಚಿಸಿ ಜಗಕೆ ನೀ
ಗೋಚರಿಸಿದೆಯೊ ತ್ರಿಜಗಾಚಾರ್ಯ || ೧೪ ||

ರಣದೊಳು ಫಣಿಪರೂಪಾನೆತ್ತಿದೆ
ಬಾಣಸಿಗನೆನಿಸಿ ಮತ್ಸ್ಯದೇಶವ ಸೇರ್ದೆ
ಕ್ಷೋಣಿಯೊಳು ಗುಣವಾರ್ಧಿ ಎನಿಸಿದೆ
ಗಣನೆ ಇಲ್ಲದೆ ಗಿರಿಯನೆಗಹಿದೆ
ಹಣಿದೆ ಹಿಡಿಂಬಾಸುರನ ಸೀಳಿದೆ
ಮಣಿಮಂತಾದಿ ದುರಾತ್ಮರಿಗೆ
ನೀನಂತಕನೆನಿಸಿದೆ ಶಾಂತಮೂರುತಿಯೆ || ೧೫ ||

ವಿಜಯರಥಕೆ ನೀ ಕೇತುನಾಥ
ವಿಜಯ ಸಾರಥಿಯಾ ದೂತ
ವಿಜಯದಶಮಿಯೊಳ್ ಜನಿತ
ಸೋಜಿಗ ತೋರಿ ಸಂಜೀವನ ತಂದೆ
ಆ ಜಗಜಟ್ಟಿಗಳೆಲ್ಲರ ಸದೆದೆ
ಈ ಜಗದೊಳು ಸರಿಗಾಣೆ ಜಗದೊ
ಳು ಜಗದ್ಗುರುವಹುದೆಲೋ ನೀ ಗುರುಪೀಳಿಗೆಗೆ || ೧೬ ||

ಮಂಗಳ ಮೂರುತಿ ಮಾರುತಿ
ಸೌಗಂಧಿಕ ನೆವದಿ ಮರುತನೊಳ್ ನೀ ಸೆಣಿಸಿದಿ
ಶೃಂಗಾರ ಗೋಪಿನಂದನನ ಸ್ಥಾಪಿಸಿದೆ
ಭಂಗಿಸಿ ವನವನು ಉಂಗುರವನು ತಂದೆ
ಸಂಗರ ಹನುಮನೊಳ್ ನೀಡಿ ಮೋಹ ತೋರ್ದೆ
ಅಂಗಜಪಿತನ ಇಂಗಿತವರಿತು
ಭಂಗಿಸಿದೆಯೊ ದುಶ್ಶಾಸ್ತ್ರಂಗಳನು || ೧೭ ||

ಕೇಸರಿ ಕ್ಷೇತ್ರ ಜನಿತಾಭೂಸು
ರ ಸುತನ ಭೀತಿಯಾ ನೀ ಬಿಡಿಸಿದೆ
ವಸುಮತಿಯೊಳು ಸುರಶ್ರೇಷ್ಠನೆಂದೆನಿಸಿದೆ

ಕೋಸಲ ನಗರಾಧೀಶನ ಪ್ರಿಯ
ವಾಸುದೇವಗರ್ಪಿಸಿದೆ ಅಧ್ವರ್ಯ
ಶ್ರೀಶನಾಜ್ಞೆಯ ತಾ ಶಿರದಿ ಧರಿಸಿ ಪ್ರ
ಕಾಶ ಮಾಡ್ದೆ ಸರ್ವಮೂಲಗ್ರಂಥವ ॥ ೧೮ ॥

ಶ್ವಾಸನಿಯಾಮಕನೆನಿಸಿದೆ ಪ್ರ
ಯಾಸವಿಲ್ಲದೆ ವನವಾಸಾಚರಿಸಿದೆ– ಶ್ರೀ
ವ್ಯಾಸರಿಗೆ ಅತಿಮೋದವ ಪಡಿಸಿದೆ
ಶ್ರೀಶನಾಜ್ಞೆಯಲಿ ಕೀಶನಾಗಿ ನಿಂದು
ನಿಶಾಚರನೆಲ್ಲರ ಸದೆದೆ ಗದೆಯಿಂದ
ಶ್ರೀಶನೆ ಸರ್ವೋತ್ತಮನೆಂಬ
ಸತ್ಸಿದ್ಧಾಂತವ ತೋರಿದ ಸದ್ಗುಣಪೂರ್ಣ ॥ ೧೯ ॥

ಸರ್ವಜೀವರ ತ್ರಾಣ– ಪ್ರಾಣ
ಗರ್ವಿಸಿದವರೊಳು ನೀ ಗರ್ವ ಹರಣ
ಸರ್ವಜ್ಞಾಚಾರ್ಯ ಗುರುವರೇಣ್ಯ
ಪೂರ್ವದೇವರ ಗರ್ವವನಿಳುಹಿ
ಸರ್ವ ಕೌರವರ ಪಡೆಯನು ಸವರಿದೆ
ಉರ್ವಿಯೊಳು ಜನಿಸಿದ ದುರ್ಮದಾಂಧರ
ಗರ್ವ ಹರಣಮಾಡಿ ಕರುಣವ ತೋರಿದೆ ॥ ೨೦ ॥

ಶ್ರೀರಾಮನೇಕಾಂತಭಕ್ತ
ತಾರಿಯ ಆಜ್ಞೆಯಿಂ ಸರ್ವಕಾರ್ಯಾಸಕ್ತ
ಧಾರುಣಿಯೊಳು ಸಚ್ಛಾಸ್ತ್ರಕರ್ತ
ಹಾರಿದೆ ಶರಧಿಯ ಅಣುಮಹದ್ರೂಪದಿ
ತೋರಿದೆ ಶಕ್ತಿಯ ಗಿರಿ ತರುತೃಣವತ್
ಸಾರಿದೆ ಧರಣಿಯ ಸುರಜನುಮದಿ ನೀ
ಬೀರಿದೆ ಸುಜನಕೆ ತತ್ವಾಮೃತವ ॥ ೨೧ ॥

ಕಾಶಿ ಕಂಚುಕವ ಧರಿಸಿದೆ
ಕಾಶಿಜಾರೂಪಳ ವರಿಸಿದೆ
ಕಾಶ್ಯಪಿಯೊಳು ಕಾವಿಶಾಟಿಯ ಧರಿಸಿದೆ

ಕೇಶತನದಿ ಹರಿಕಾರ್ಯವ ಸಾಧಿಸಿ ಜಗ
ದೀಶಕುಲದೊಳು ಜನಿಸಿ ಮೆರೆದ ವೇದ
ವ್ಯಾಸ ಪದಕಮಲ ಮಧುಪ ಜಗದ್ವಿಖ್ಯಾತನಾ
ದ ಶ್ರೀ ಮಧ್ವಸೂರ್ಯನೆ ॥ ೨೨ ॥

ಸುಗ್ರೀವಗಭಯ ಕೊಡಿಸಿದಾ- ಮ
ಹೋಗ್ರರಾದ ದ್ವೇಷಿಗಳ ಸವರಿದಾ- ಸ
ಮಗ್ರ ಸಿದ್ಧಾಂತ ರಚಿಸಿದಾ
ವಿಗ್ರಹದೊಳು ಧಾತಾಸ್ತ್ರವ ಮಾನಿಸಿ
ಆಗ್ರಹರಿಪುಕುಲ ಕಾಲನೆಂದೆನಿಸಿ
ಉಗ್ರವಾದಿಗಳ ದುರಾಗ್ರಹ ನಿಗ್ರಹ
ಶೀಘ್ರದಿಮಾಡಿ ಅನುಗ್ರಹವಿತ್ತೇ ॥ ೨೩ ॥

ಹೈಮಾಗಿರಿ ಶಿಖರದೊಳ್ ನಿಂತ
ಸೋಮ ಕುಲದೊಳು ನೀನೆ ಅತಿ ಬಲವಂತ
ಈ ಮಹಿಯೊಳು ರಾಷ್ಟ್ರಪ್ರೇಮದಿ ಜನಿತ
ರಾಮಾಂಗನೆಯು ಪ್ರೇಮದ ದೂತ
ಸೋಮಶೇಖರನ ಕೇದಾರಕಟ್ಟಿದ
ಸ್ವಾಮಿಗೆ ಪ್ರಕೃತಿಯು ಮಾಡುವ ಪೇಳ್ವ
ಗೋಪಾಯಿಗಳಿಗೆಲ್ಲಾ ಕೇಸರಿ ಎನಿಸಿದೆ ॥ ೨೪ ॥

ಮಾರ್ಜಾಲರೂಪವ ಧರಿಸಿದೆ- ನೀ
ನರ್ಜನಾಗ್ರಜಾದಿಗಳ ಪೊರೆದೇ- ನೀ
ಸರ್ಜಿಸಿ ತೋರ್ದೆ ಸತ್ತತ್ವಗಳೆಲ್ಲ
ಘರ್ಜಿಸಿ ಅರ್ಜುನನ ರಥದಲಿ ನೆಲಿಸಿದೆ
ಮೂರ್ಜಗಜೆಟ್ಟಿಗಳೆಲ್ಲರ ಸದೆದೆ
ವರ್ಜಿಸಿ ಅರಿಷಡ್ವರ್ಗಗಳೆಲ್ಲವ
ದುರ್ಜಯವಾದಕೆ ಘರ್ಜನೆ ಮಾಡಿದೆ ॥ ೨೫ ॥

ವಾಯುಕುವರ- ಅಸುಪರ
ಕಾಯಜನಯ್ಯನ ಅತಿಪ್ರಿಯನಾ- ತ್ರಿಜಗಾ

ಜೀಯಾ ನೀನಿತ್ತ ಸದ್ಗ್ರಂಥವಿಸ್ತಾರಾ
ಕಾಯಕಭಕುತಿ ಶ್ರೀರಾಮರಿಗರ್ಪಿಸಿ
ಮಾನಸದಲಿ ಯದುಪತಿಯ ಪೂಜಿಸಿ
ಮಾಯಮತವ ನಿರಾಕರಿಸಿ ನಾಜದಿ
ಶ್ರೀಯರಸನ ಮೆಚ್ಚಿಸಿದೆ ಯತೀಂದ್ರ || ೨೬ ||

ವಾತಜಾತ ಹನುಮಂತ
ಖ್ಯಾತ ದ್ವಾಪರದಿ ದ್ರೌಪದಿಕಾಂತ
ಭೂತಳದೊಳು ಯತಿನಾಥ– ಅತಿಶಾಂತ
ಧಾತಾಜನಕ ಶ್ರೀ ವೇಂಕಟೇಶನ
ಪ್ರೀತಿಪಾತ್ರ ಶ್ರೀಕೃಷ್ಣನಂಘ್ರಿಗೆ
ಖ್ಯಾತನಾದೆ ಸೂತ್ರಾರ್ಥಪೇಳಿ ಕೃಪಾ
ಪಾತ್ರನಾದೆ ಶ್ರೀ ಬಾದರಾಯಣಗೆ || ೨೭ ||

ರಾಗ – ಶಂಕರಾಭರಣ

ರಕ್ಷಿಸೋ! ಪವಮಾನ! ಸದ್ಗುರುವರಾ || ಪ ||

ಜೀವರ ಬಂಧಗಳಿಂದ ಎಲ್ಲ। ಪಾವನ ಮಾಳ್ಪುದರಿಂದ ದೇವ
ಪಾವನ ಮೂರ್ತಿಯು ನಿನ್ನ ಮುಖದಿ ಜಗ
ಪಾವನ ಮಾಳ್ಪುದರಿಂದ ಪವನನೆಂಬೋರೆ ನಿನ್ನ || ಅ. ಪ. ||

ಜ್ಞಾನೈಶ್ವರ್ಯ ವೈರಾಗ್ಯ ನಿನಗೆ
ಅನಾದಿಯಿಂದಲಿ ಅದು ಯೋಗ್ಯ (ವಾಗೀ)
ನಿನ್ನ ಸ್ವರೂಪ ಸ್ವಭಾವಕೆ ಯೋಗ್ಯ
ನಿಜ ಘನ್ನ ಮಹಿಮ ನಿನ್ನ ಭಾಗ್ಯ || ಅಹಾ ||
ತನು ಚತುಷ್ಟಯದೊಳಗನವರತ ವ್ಯಾಪ್ತನೋ
ಇನ್ನೂ ಮುನ್ನೂ ಜಗತ್ಕಾರ್ಯ ನಿನ್ನದೋ ದೇವಾ || ೧ ||

ಬೃಹತಿನಾಮಕ ಕಿರಣಾಳು ನಿನ್ನ ದೇಹದಿ
ಭಗವದ್ರೂಪಗಳೂ ನಿತ್ಯನೋಡುತ
ಬಹಿರಾಂತರದೊಳು ಇನ್ನು ಮಹಾಮಹಿಮೆ ಅನೇಕಂಗಳು || ಅಹಾ ||

ಬೃಹತಿ ಛಂದಸ್ಸು ಅನ್ನವ ಶ್ರೀಹರಿಗೆ
ಛಂದಸ್ಸಿನಿಂದಾ ಚ್ಛಾದಿತತ್ವದ್ಗಾತ್ರನೊ ॥ ೨ ॥

ಪ್ರಾಣಾಪಾನ ವ್ಯಾನೋದಾನ ಸಮಾನಾದಿ
ಪಂಚಪ್ರಾಣ ಜೀವ
ಶ್ರೇಣಿಗಳೊಳಗೆ ನೀಪ್ರವೀಣ ಜಗತ್ಪ್ರಾಣ
ನೀನಹುದೋ ಸದ್ಗುಣ ॥ ಅಹಾ ॥
ಪ್ರಾಣಾಪಾನದಿಂದ ದೇಹದ ಸ್ಥಿತಿ ಕಾರ್ಯಕ್ಷಣ |
ತಪ್ಪಲು ಹುಣಪನೆಂದಪರೋ ಈ ದೇಹಕೆ ॥ ೩ ॥

ಇಪ್ಪತ್ತೊಂದು ಸಾವಿರದಾರುನೂರು
ಶ್ವಾಸ ತಪ್ಪದೆ ಜೀವರು ಮಾಡಿ
ಅಹರ್ನಿಶಿ ದೇಹವಧರಿಪರೋ ನಿನ್ನ
ಒಪ್ಪಿಗೆಯಂತೆ ಸಾಧಿಪರೋ ॥ ಅಹಾ ॥
ಅಹೋರಾತ್ರಿ ಶ್ವಾಸನಿಯಾಮಕ ಜೀವರ್ಗೆ
ಆಯುಮಾನವ ನೀವ ಮಾತರಿಶ್ವದೇವಾ ॥ ೪ ॥

ಜೀವರ ಅವಸ್ಥಾತ್ರಯದಿ ಸರ್ವಜೀವರು
ನಿನ್ನಂತರದಿ । ಇಟ್ಟು |
ಅವರ ಯೋಗ್ಯತೆ ಇಹ ತೆರದಿ ತಳ್ಳ |
ಅವಸ್ಥಾಭೋಗ್ಯವನಿತ್ತು ತ್ವರದಿ ॥ ಅಹಾ ॥
ಪಾವನ ಮೂರ್ತಿಗೆ ಅರ್ಪಿಸುತ್ತ ಶ್ರೀಪತಿ
ಪಾದಗಳಿಗೆರಗಿ ಕರವ ಮುಗಿದು ನಿಂದಿಹೆ ॥ ೫ ॥

ಪರಿಶುದ್ಧ ಸತ್ವಾತ್ಮಕವಾಗಿ ಇನ್ನು |
ನಿರುತ ಪೂರ್ಣ ಪ್ರಜ್ಞನಾಗೀ ಜೀವ ಸ
ರ್ವರೊಳು ಶುಚಿತಮನಾಗಿ ಇರ್ಪ
ಮಾರುತ ನಿನ್ನೊಳು ಅನುವಾಗಿ ॥ ಅಹಾ ॥
ಹರಿಯು ನಿನ್ನ ಶುಚಿ ತನುವಿನೊಳಿದ್ದು
ಶುಚಿಹೃತ್ ಎಂದು ತಾನಿಂದು ನಲಿವನಯ್ಯ ॥ ೬ ॥

ಅಂತಾವರದ ಗುಣತ್ರಯ ಕಂಡಿಹೆ ವ್ಯಾಪ್ತ ಸದ್ಗುಣ ಉ
ದ್ದಂಡ ಮಹದ್ರೂಪಗೆ ಮಹಘನ್ನ ಇನ್ನು ಮೃಡನಾಪೇಕ್ಷ
ಶತಗುಣ ॥ ಅಹಾ ॥
ತನುರೂಪದೊಳೆಲ್ಲ ಅಣುರೂಪವಾಗಿಹೆ
ತೃಣಮೊದಲು ಸರ್ವ ಜೀವರೊಳು ವ್ಯಾಪ್ತನೊ ॥ ೭ ॥

ಅಂದು ತ್ರಿಕೋಟಿರೂಪದಲಿ ನಿಂತು
ನಿಂದ ತ್ರಿವಿಕ್ರಮಾವತಾರದಲೀ ಸೇವೇ ಆ
ನಂದದಿ ಸಲಿಸುತ್ತಲಿಲ್ಲಿ ಇನ್ನು ನಿಂದು ಅಂ
ಡದ ಬಹಿರ್ಭಾಗದಲಿ ॥ ಅಹಾ ॥
ಚಂದದಿ ತ್ರಿಕೋಟಿರೂಪದಿಂದ ಅಂಡ ಖರ್ಪರ
ಕಾಯ್ದ ಉದ್ದಂಡ ಮಾರುತಿಯೊ ॥ ೮ ॥

ವಾಯುಕೂರ್ಮನಾಗಿ ನಿಂದೇ
ಜಗದಾದ್ಯಭಾರವು ಎಲ್ಲ ನಿನ್ನಿಂದೇ
ಎಂದು ಕಾಯುಜಪಿತ ತರುವ ಮುಂದೇ ನಿನ್ನ
ಗಾಯತ್ರೀ ಪತಿಯು ಪಟ್ಟಕೆಂದೇ ॥ ಅಹಾ ॥
ಶ್ರೀಯರಸಾ ಶ್ರೀ ವೇಂಕಟೇಶಾತ್ಮಕ
ಉರಗಾದ್ರಿ ವಾಸವಿಠಲನನಿಜದಾಸ ॥ ೯ ॥

ರಾಗ – ಮಧ್ಯಮಾವತಿ ತಾಳ – ಆದಿ

ಪವಮಾನ–ಪಾವನಮೂರ್ತಿಯು ನೀನು ಕಾವುದೆಮ್ಮನು ॥ ಪ ॥

ಭುವನ ಚತುರ್ದಶದಲ್ಲಿಹ ಜೀವರ
ಜೀವನ ನಿನ್ನದೋ ದೇವವರೇಣ್ಯ ॥ ಅ. ಪ ॥

ತೃಣಜೀವಗಾದಿ ಸರ್ವರೊಳು ನಿಂತು
ಗುಣಕಾಲಕರ್ಮಕ್ಕನುಗುಣನಾಗಿಹ ಫಲವನೀನಿತ್ತು
ಕ್ಷಣಬಿಡದೆಲೆ ನೀನಗಣಿತ ಕಾರ್ಯವ
ದಣಿಯದೆ ಮಾಡಿಸಿ ಧಣಿಗರ್ಪಿಸುವಿಯೊ ॥ ೧ ॥

ಶ್ರೀ ಜಗದ್ಗುರುವರೇಣ್ಯನೆ ನೀನು–ಋಜುಸಾರ್ವಭೌಮ
ನಿಜ ಪಾದಾಂಬುಜವ ತೋರಿಸೊ ಇನ್ನು

ಈ ಜಗ ಕಾರ್ಯ ನಿರ್ವ್ಯಾಜದಿ ಮಾಡುತ
ನೀ ಜಯಾಪತಿಗರ್ಪಿಸಿ ಅಜಪದ ಪಡೆದೆಯೊ ||

ಕೋಟಿತ್ರಯರೂಪನೆ ಕಾಯುವುದಯ್ಯ–ದಾಟಿಸು ಭವಶರಧಿಯ
ಪಾಟುಪಟ್ಟದ್ದೆಲ್ಲ ನೀನರಿಯಾ
ಸಾಟಿಯುಂಟೆ ಲಲಾಟನೇತ್ರ ಬೆ
ನ್ನಟ್ಟಿ ಬರಲು ಕೇದಾರಕೆ ಅಟ್ಟಿದೆ ||

ಮರಣ ಜನುಮಂಗಳು ಬಂದರೆ ಬರಲಿ–ಹರಿಗುರುಗಳಲಿ
ಸ್ಮರಣೆಯು ತಪ್ಪದೆ ನಿಶ್ಚಲವಿರಲಿ
ಉರುತರ ಹರಿಸರ್ವೋತ್ತಮನೆಂಬುವ
ತರತಮ ಭೇದವು ನಿರುತವು ಇರಲಿ ||

ಶ್ರವಣ ಮನನಾದಿ ಭಕುತಿಯನ್ನು–ಪವಮಾನ
ನೀಕೊಡು ಅನುಮಾನಿಸಬೇಡವೋ–ನೀ ಇದಕ್ಕಿನ್ನು
ಭವಮೋಚಕ ಶ್ರೀ ವೇಂಕಟೇಶ
ಎನ್ನೊಳಹೊರಗಿಪ್ಪನೆಂಬುವುದನು ತೋರೋ ||

ರಾಗ – ಖಡಳು

ಹನುಮಂತ | ಹನುಮಂತ | ಹನುಮಂತ ||

ಹನುಮಂತ ಹರಿಯು ಮತ ನಿರುತ ಗುಣಯುತ
ಜನರ ಪೊರೆಯುತ ತತುವರೊಳು ಪ್ರೇರಿತ || ಅ.

ಪವಮಾನ | ಪವಮಾನ | ಪವಮಾನ | ಪವಮಾನ | ಪರಮ
ಪಾವನ ಅಣುಮಹದ್ರೂಪನ | ವನಧಿಲಂಘನ
ವೀತಿಹೋತ್ರನ ಪಡಿಸಿ ತೃಪ್ತಿ
ರಾಮವಂದನ ಮಾಡುತ ಮನದಿ | ಆನಂದ ಆನಂದ ಆನಂದ
ಆನಂದದಿಂದ ತ್ವರಿಯಾ | ಹಾರಿ ಶರಧಿಯಾ ಸೀತಾಕೃತಿಯಾ
ಕುಶಲವಾರ್ತೆಯ ಪೇಳಲು ಜೀಯಾ

ಹರುಷ ಅತಿಶಯು ಉಕ್ಕಲು । ಕೈಯು ।
ರಾಮನಾಲಿಂಗನದಿಂದ ಆನಂದ ತಾನಿಂದಾ ತಾನಿಂದ ತಾನಿಂದ
ತಾನಿಂದಾ ಕಪಿಗಳ ವೃಂದಾ । ನೆರಹಿ ಆನಂದ ರಣಮುಖಕೆಂದಾ
ಶಿಲೆಗಳತಂದು ಸೇತುಬಂಧನ ಮಾಡಿಸಿನಿಂದಾ ರಾವಣವಧೆಗೆಂದಾ ॥ ೧ ॥

ಶ್ರೀರಾಮ ಶ್ರೀರಾಮ ಶ್ರೀರಾಮ ಶ್ರೀರಾಮಾ ಪದ ಪ್ರೀತ ಪ್ರಖ್ಯಾತ ।
ಪ್ರಖ್ಯಾತ ಪ್ರಖ್ಯಾತ ವರಧೃತ । ತ್ರಿಜಗ ಖ್ಯಾತ ಅತಿ ಮಹಾರಥ
ಯದುಪತಿ ಪ್ರೀತಾ । ಸುರರ ಸೇವಿತಾ । ಗರಳಭುಂಜಿತಾ
ಸತಿಗೆ ಪೂವಿತ್ತ । ಭುಜಬಲಯುತಾ । ಧೀಮಂತಾ
ಧೀಮಂತಾ । ಧೀಮಂತಾ । ಧೀಮಂತಾ । ಭಾರತೀಕಾಂತಾ
ದುರುಳ ಮಣಿಮಂತಾ । ಸೆಣಸಿಬರೆ ನಿಂತಾ
ಹರಣಮಾಡಿ ಪಂಥಗೆಲಿದು ತಾನಿಂದಾ
ಪ್ರಣಯನಾಗಿ ನಿಂತಾ । ಕೀಚಕನ ಧ್ವಾಂತದೊಳು ತಾ
ನೋಡಿ । ತಾನೋಡಿ । ತಾನೋಡಿ । ತಾನೋಡಿ ಅವನೊಳು
ಕೂಡಿ ಕೈಯು ಹಿಡಿದಾಡಿ । ಕೇಳಿಯೊಳು ಕೂಡಿ ಉರದಿಶಿರ
ನೀಡಿ । ಮಾಂಸಮುದ್ದೆಮಾಡಿ ನೆಲಕೆ ಈಡಾಡಿ ನಲಿದುತೋರಿದಾ ॥ ೨ ॥

ಆನಂದ । ಆನಂದ । ಆನಂದ । ಆನಂದ ತಾನಿಂದ । ಶ್ರೀಮ
ದಾನಂದ । ಆನಂದ ಬುಧಜನಕ್ಲೇಶದಿಹ ಮನ । ನೋಡಿ ಜೀ
ವನ । ಸೂತ್ರ ವ್ಯಾಖ್ಯಾನ ಮಾಡಿ ಪಾವನ ವಾದಿಭಂಜನ
ಬಾದರಾಯಣ ಪ್ರೀತಿಪಾತ್ರ ಏಕಾಂತ ಭಕ್ತ ತಾನಿತ್ತ
ತಾನಿತ್ತ । ತಾನಿತ್ತ । ತಾನಿತ್ತ ಜಗಕತಿಮೋದ । ಶಾಸ್ತ್ರ -
ಸನ್ಮೃದ । ತೋರಿಸರ್ವದ । ಜೀವರು ತ್ರಿವಿಧ । ತರತಮಭೇದ
ಹರಿಯೆ ಸರ್ವದ । ಜಗತ್ವ್ಯಾಪ್ತದ । ಈಶವಾಸ್ಯದೀ ಜಗಸತ್ಯ
ಜಗ ಸತ್ಯ । ಜಗವು ಸತ್ಯ । ಜೀವರು ನಿತ್ಯ ಕಾರಣ ನಿತ್ಯ
ಕಾರ್ಯ ಅನಿತ್ಯ । ಪ್ರಕೃತಿ ಸತ್ಯ । ಸುಗುಣವೆ ನಿತ್ಯ
ಭೇದವು ನಿತ್ಯ । ದ್ವೈತವು ಸತ್ಯವೆಂದ ಶ್ರೀ
ವೇಂಕಟೇಶನ ನಿಜದೂತ ॥ ೩ ॥

ರಾಗ — ಅಠಾಣ ತಾಳ — ಆದಿ

ಅಮಮ-ಏನಿದದ್ಭುತಮಹಿಮೆ-ಪೊಗಳನು
ಪವಮ ದೇವ ಜೀವೋತ್ತಮ-ಸುರಸಾರ್ವಭೌಮ-ಹನುಮ ॥ ಪ ॥

ಭೀಮ ರಿಪುಕುಲಧೂಮ–ಯತಿಕುಲಸೋಮ
ಶ್ರೀಮದಾನಂದ ಮುನಿಮಹಿಮಾ || ಅ. ಪ.

ಜೀಯ–ಈ ಪಯೋಜಾಂಡದೊಳಿನ್ನಿಹೆಯಿಲ್ಲ–ಬಲದೊಳು
ಶೌರ್ಯ–ಕಾಯನೋಡಲು ಆ ಖಚಾಶ್ಮಸಮನು
ನಿನ್ನೊಳು ಹರಿಯರೂಪಗಳೆನಿತು ಇಹುದಯ್ಯ
ಶ್ರೀಯರಸನ ಪೂರ್ಣಕರುಣಾಕಟಾಕ್ಷ ನಿನ್ನಲ್ಲಿಹುದು ಇನ್ನೆಷ್ಟಯ್ಯ
ಶ್ರೀಯರಸ ಶ್ರೀ ಶಿಂಶುಮಾರನು ನಿನ್ನ ಮುಖಕಮಲದಲ್ಲಿಹನೋ
ವಾಯುಮೂರುತಿ ನಿನ್ನ ನಾಸಾಗ್ರದೊಳು ಶೋಭಿಪ
ಮತ್ಸ್ಯಮೂರುತಿಯು ಜೀಯ – ನಿನ್ನಯ ನಾಸಪೃಷ್ಠದಿ
ಕೂರ್ಮ ಮೂರುತಿಯು ಇಲ್ಲಿ ನೆಲೆಸಿಹನು ನಯನದ್ವಯದಿ
ಕಪಿಲವಿಷ್ಣು ಶ್ರವಣದ್ವಯಗಳೊಳು ಕೃಷ್ಣರಾಮರು
ಆರ್ಯ ಧನ್ವಂತ್ರಿಯು ಗ್ರೀವಲಲಾಟದೊಳು
ನಾರಾಯಣ ಇಹನು || ೧

ಅಹಹ ಬಾಹ ದುರಿತದ ರಾಶಿಗಳ ಕಾನನಕೆ ನೀನೆ ದಾವ
ಬಾಹುದ್ವಯಗಳೊಳ್ಕಲ್ಕಿ ಬುದ್ಧರೂಪಿರೆ
ಬಾಹುಬಲವಿನ್ನೆಷ್ಟಯ್ಯ–ಅಹುದು ಪವನ ಹಸ್ತದೊಳ್
ಪಾವನ್ನ ಶ್ರೀ ಬಾದರಾಯಣ ಕಂಗೊಳಿಪನಯ್ಯ
ಪಾಹಿ ಪವನನೆ–ಪಾದದ್ವಯದೊಳು ಹಂಸನಾಮಕ
ಶ್ರೀಹರಿಯು ನೆಲೆಸಿಹನ.
ಅಹುದಹುದು ಕೇಶವ ನಿನ್ನ ಪಾದ ಮಧ್ಯಸ್ಥಾನದಲಿ
ಸಲೆ ಬೆಳಗುತಿಹನು
ಮಹಮಹಿಯ ನಿನ್ನಯ ಪಾದಪೃಷ್ಠದಿ
ಹೃಷೀಕೇಶ ಹರಿಯುನಿಂತಿಹನು
ಇಹರಯ್ಯ ದಕ್ಷಿಣ ವಾಮಜಾನುಗಳಲಿ ಯಜ್ಞ ಶ್ರೀಧರರಿಹರು
ಮಹಿದಾಸವಾಮನ ಕಟಿ ಪ್ರದೇಶದಿ ದಿಟ್ಟರಾಗಿಹರು ||

ಪ್ರಾಣನೀ ಜಗತ್ಪ್ರಾಣ ವನಮಾಲಸ್ಕಂದನೊಳಿಂದ್ರ ಶೇಷರುಗಳ್
ಪ್ರಾಣವಾಯು ದಿಗ್ದೇವತೆ ನಿನ್ನ ದಕ್ಷಿಣದಲ್ಲಿಹ
ವನಮಾಲೆಯಲ್ಲಿಹರು

ಗುಣನಿಧಿಯೆ ತದುಪರಿ ಸೂರ್ಯವರುಣ ಅಶ್ವಿನಿಗಳೆಲ್ಲ
ನಿನ್ನಯವನ ಮಾಲಿಯಲಿಹರು
ಎಣಿಸೆ ದಕ್ಷ ಪ್ರಜಾಪತಿಯು ನಿನ್ನ
ವಾಮವನಮಾಲದೊಳಲ್ಲಿ ಇರುತಿಹನು
ಮಣಿದು ಸೇವಿಪ ಜಯಂತ ಮನುಯುಮ
ತದನಂತರ ವನಮಾಲೆಯಲ್ಲಿಹರು
ಜಾಣ ಬೃಹಸ್ಪತಿ ದಕ್ಷಿಣ ವನಮಾಲದೊಳು
ಆಶ್ರಯಿಸಿ ತಾನಿಹರು
ಪ್ರಾಣ ಅಪಾನ ವ್ಯಾನೋದಾನ ಸಮಾನ
ವನಮಾಲದಲ್ಲಿಹರು ॥ ೩ ॥

ಬೋಧ–ನಿನ್ನನಾಭೀಕಮಲದಿ ಪದುಮನಾಭನು ಸಲಿ ಬೆಳಗುತಿಹನು
ಮಾಧವ ಮಧುಸೂದನರು ನಿನ್ನೊಳು ವಾಮದಕ್ಷಿಣ
ಕುಕ್ಷಿಯೊಳಿಹರು
ಹೃದಯ ಮಧ್ಯದಿ ಪ್ರಾಜ್ಞನಾಮಕ ಹರಿಮೂರುತಿ
ನಿನ್ನಾಂತರದಿ ನಿಂತಿಹನು
ಪಾದಪಾರ್ಶ್ವಗಳಲ್ಲಿ ಋಷಭ ಗೋವಿಂದ ಮೂರುತಿ
ಅಲ್ಲಿ ಇರುತಿಹರು
ಮುದದಿ ನಿನ್ನಯ ವಕ್ಷದೊಳು ಶ್ರೀ ವರಹಮೂರುತಿ
ಅಲ್ಲೆ ನೆಲೆಸಿಹನು
ಎದುರಿಲ್ಲ ನಿನಗೆ ಕಪೋಲದೊಳು ಶ್ರೀ ವಾಸುದೇವನು ಇಹನು
ವಿಧಿವಾಯುಗಳು ನಿನ್ನಯ ವಾಮಭುಜದೊಳು
ಮುದದಿ ನಲಿಯುತಿಹರು*
ವಿಧಿ ವಾಯುಸತಿಯರು ದಕ್ಷಿಣಭುಜದೊಳು ನುತಿಸುತಿಹರು ॥ ೪ ॥

ಪರ್ವಶಕ್ತಿ ಹನ್ನೆರಡೆಲ್ಲ – ನಿನ್ನಯ ಹೃದಯದಾಭರಣ
ಸವನಿಸಿರ್ವದು ಕ್ರಮದಿ – ಶಕ್ತಿ ಪ್ರತಿಷ್ಠೆ ಸಂವಿತ್‌ಸ್ಫೂರ್ತಿ
ಪ್ರವೃತ್ತಿ ಭವಹಾರಿ ನಿನಗೆ ಕಲಾವಿದ್ಯಾಮತಿ ನಿಯತಿ
ಮಾಯಾಕಾಲ ಪುರುಷ ಈ ಪರಿಯು
ಜೀವೇಶ ನಿನ್ನಯ ಮಹಿಮೆ ಗುಣಗಳ ಪೊಗಲಳವೇ

* ನುತಿಸತಲಿಹರು.

ಹರಿಮುಖಾದ್ಯರಿಗೆ ಜೀವರೆಸಗುವ ಕಾರ್ಯಗಳು
ಲವಲೇಶ ನಿನ್ನ ಬಿಟ್ಟು ನಡೆಯುದೊ
ಪವಮಾನಮೂರುತಿ ಹರಿಯು ಕರುಣಾಕಟಾಕ್ಷ ನಿನ್ನೊಳು
ಇಟ್ಟು ಇರುವುದು ಇನ್ನೆಷ್ಟೊ
ದೇವ ನಿನ್ನಯ ಖ್ಯಾತಿ ಎಷ್ಟೋ—ಬಲದಿ ಶೇಷಶೈಲವ ತಂದೆ
ಕಾಪ್ಪುದಯ್ಯಾ ಶ್ರೀ ವೇಂಕಟೇಶನ ಪ್ರೇಮದ ದೂತ ||

ರಾಗ — ಪೂರ್ವಿ ತಾಳ

ಮಾರುತೀ ಜ್ಞಾನ ಮೂರುತೀ ||

ಬಾರಿಬಾರಿಗೆ ಬಹುದುರಿತ ಪರಿಹರಿಸಯ್ಯಾ || ಅ.

ಜೀವ ಕೃತಕರ್ಮ ಕ್ರಿಯೆಗಳೂ - ಹಗಲಿರುಳೊಳು
ಪವಮಾನ ನೀನೆ ನಡೆಸೆ ನಡೆಸೋರು ತತ್ತ್ವೇಶರು
ಭವಬಂಧ ಹರಿಸಿ ಕಾಪಾಡಯ್ಯಾ—ಬೇಡುವೆ ಜೀಯ
ತವಪಾದ ದಾಸ್ಯವ ಕೊಡಿಸಯ್ಯಾ—ಯಾಕೆ ನಿರ್ದಯ |

ಬಹು ಜನುಮವನೆತ್ತಿ ಬಂದೆನೊ—ಇಲ್ಲಿ ನಿಂದೆನೊ
ಅಹರಹರ ನೀ ನಡೆಸೆ ನಡಿವೆನೊ—ನುಡಿಸೆ ನುಡಿವೆನೊ
ಇಹಪರ ಸಾಧನ ನಿನ್ನಿಂದ—ಎನ್ನ ಕೃತಿಯಿಂದ
ಬಹುಪರಿ ಮಾಡಿಸಿ ಭವದಿಂದುದ್ಧರಿಸೆಂದೇ |

ಪಂಕಜೋದ್ಭವ ಪದವ ಪಡೆವಯ್ಯಾ— ಅರಿಕೆಯಯ್ಯಾ
ಕಿಂಕರರೊಳಗೇಕೆ ನಿರ್ದಯ—ನಂಬಿದೆನಯ್ಯಾ
ಶಂಕರಾನತ ಪೂಜಿತಾಂಘ್ರಿಯ — ದಯೆ ತೋರಯ್ಯಾ ಶ್ರೀ
ವೆಂಕಟೇಶನ ಮುಂದೆ ನಿಂದಿಹ — ಭಕ್ತಿಯಿಂದಿಹ

ರಾಗ — ಬೇಹಾಗ್ ತಾಳ

ಮಾರುತೀ ಕೊಡು ಭಕುತಿ — ನುಡಿಸು ಕೀರ್ತಿ |

ತೋರೊ ನಿನ್ನೊಳು ಇಹ— ನಿರ್ಮಲ ಮೂರುತಿಯ || ಅ.

ಶ್ರವಣಮಾಡಲು ಭಕುತಿ ಅವಕಾಲಕು ಇತ್ತು
ತವ ಪದ ದಾಸರ ದಾಸ್ಯ ಕೊಡಿಸೋ ದೇವ ॥ ೧ ॥

ಕೀರ್ತನದೊಳು ಹರಿಕೀರ್ತಿ ಕೊಂಡಾಡೆ ಸಂ
ಕೀರ್ತನ ಭಕುತಿಗೆ ಕರ್ತದಾತ ನೀನೆ ॥ ೨ ॥

ಸ್ಮರಣೆಯು ಹರಿಯಲ್ಲಿ ನಿರುತವು ನಿನ್ನಲ್ಲಿ
ಕರುಣಿಸಿ ಪೊರೆಯೊ ಗುರುವರ ಸುಂದರ ॥ ೩ ॥

ಪಾದ ಸೇವೆಯು ಕೊಡು ಸಾದರದಿಂದಲಿ
ಶ್ರೀಧರನಾ ಕೃಪಾಪಾತ್ರನೆಂದೆನಿಸಯ್ಯ ॥ ೪ ॥

ಅಚ್ಯುತನಿಗೆ ನೀನಚ್ಚುಮೆಚ್ಚಾಗಿಹೆ
ನಿಚ್ಚದಿ ಹರಿಪಾದಾರ್ಜನೆ ಮಾಡಿಸಯ್ಯ ॥ ೫ ॥

ವಂದನಾಭಕುತಿ ಎನ್ನಿಂದ ನೀಮಾಡಿಸಿ
ನಂದನಂದನಗಾನಂದ ಪಡಿಸೊ ದೇವ ॥ ೬ ॥

ದಾಸಭಕುತ್ಯಭಾಗ್ಯ ಆಶಿಸುವೆನು ನಿನ್ನ
ವಾಸುದೇವನ ನಿಜ ದಾಸನೆ ಸರ್ವದಾ ॥ ೭ ॥

ಸಖ್ಯಭಕುತಿ ಕೊಡೋ ಮುಖ್ಯಪ್ರಾಣೇಶನೆ
ಮುಖ್ಯಕಾರಣ ಹರಿಯು ಮುಖ್ಯ ಪ್ರೇಮಪಾತ್ರ ॥ ೮ ॥

ಆತ್ಮನಿವೇದನ ಭಕುತಿಯನ್ನು ಪರ
ಮಾತ್ಮನಲ್ಲಿತ್ತು ನಿರ್ಮಲಾತ್ಮನೆಂದೆನಿಸೊ ॥ ೯ ॥

ನವವಿಧ ಭಕುತಿಯ ಕೊಟ್ಟು ಸಲಹೊ ದೇವ
ಅವಕಾಲಕು ಪವಮಾನ ನೀನೆ ಗತಿ ॥ ೧೦ ॥

ಸಂಕಟ ಹರಿಪ ಶ್ರೀ ವೇಂಕಟೇಶನ ದೂತ
ಭಂಟನೆಂದೆನಿಸೆನ್ನ ಸಂಕಟ ಹರಿಸಯ್ಯ ॥ ೧೧ ॥

ರಾಗ – ಸುರಟಿ ತಾಳ – ಆದಿ

ಭಾರತೀಪತಿ ಮಾರುತಿ ಮಾರುತಿ ಕಾಯೊ ‖ ಪ ‖

ಘೋರದುರಿತೌಘ ಪರಿಹಾರ ಸುಸಮೀರ ಧೀರಾ ‖ ಅ.ಪ. ‖

ಸತ್ತ್ವ ಸತ್ತ್ವಾತ್ಮಕ ತತ್ತ್ವ ದೇವತೆಗಳ
ಕೃತ್ಯಗಳ್ ಪ್ರವೃತ್ತಿಗೆ ನೀ ನಿತ್ಯನಿಯಾಮಕ ಗುರು ‖ ೧ ‖

ಪಟುತರಾಂಗನೆ ಧೂರ್ಜಟಿಯು ಸೇವೆಗೆ ಮೆಚ್ಚಿ
ದಿಟ್ಟ ಶೇಷ ಪಟ್ಟಕೊಟ್ಟು* ತೊಟ್ಟೆ ಪರಮೇಷ್ಠಿ ಪದ ‖ ೨ ‖

ಸಂಜೀವನೆ ರಿಪುಕುಂಜರ ಮಸ್ತಕ ಭಂಜಿಸಿದ ಧ-
ನಂಜಯನಾಗ್ರಜನೆ ಮೂರ್ಜಗ ಗುರು ‖ ೩ ‖

ಶ್ರೇಷ್ಠ ಮಾರುತಿ ಜಗಚ್ಚೇಷ್ಟಾಪ್ರದಾಯಕ
ದಿಟ್ಟ ನೀ ಪ್ರವಿಷ್ಟ ಸರ್ವಸೃಷ್ಟಿಕಾರ್ಯ ತೊಟ್ಟಿರುವೆ ‖ ೪ ‖

ಮುಖ್ಯ ವಾಚ್ಯನು ದೇವ ಅಮುಖ್ಯ ವಾಚ್ಯನು ನೀನು
ಮುಖ್ಯ ಜೀವ ಕೋಟಿಯೊಳು ಪ್ರಮುಖನಯ್ಯ
ಮುಖ್ಯಪ್ರಾಣ ‖ ೫ ‖

ಶ್ವಾಸ ನಿಯಾಮಕ ನಿಶೆಯೊಳು ನಿದ್ರೆಯೊಳು
ಅಸುರಾದಿ ಜೀವರೊಳು ಶ್ವಾಸಭೂಭುರ್ವನೆನಿಸುವೆ ‖ ೬ ‖

ಸರ್ವನಿಯಾಮಕ ಶರ್ವವಂದಿತಪಾದ
ಸರ್ವೋತ್ತಮ ಶ್ರೀ ವೇಂಕಟೇಶನೋರ್ವನೆ ಮುಖ್ಯನೆಂದೆ ‖ ೭ ‖

ರಾಗ – ಆರಭಿ ತಾಳ – ಆದಿ

ಪ್ರಾಣಾ – ನೀ ಕಲ್ಯಾಣಗುಣ – ಗೀರ್ವಾಣಾಧ್ಯರ ಮಣಿ
ಜೀವಗಣ ಗುಣಕಾರ್ಯ ತತ್ರಾಣ ಅಗಣಿತ ಮಹಿಮ ‖ ಪ ‖

---

* ಪದವಿಯಕೊಟ್ಟು.

ಇನ್ನೆಣೆಯುಂಟೆ ತ್ರಿಭುವನ ತ್ರಾಣ ನಿನ್ನ
(ಅಣುತಿಯಂತೆ ಪಂಚಪ್ರಾಣ)
ಅಣುಘನತೃಣ ಮೊದಲು ಫಣೆಗಣ್ಣ-ಸುರ
ಗಣಾದ್ಯಮರರೊಳಗನವರತ ನೀ ಘನ್ನ
ಫಣಿರಾಜಗುರು ನಿನಗೆಣೆಯುಂಟೆ ನೀರಜಭ
ವಾಂಡದೊಳು ಶ್ರೀ ಮುಖ್ಯಪ್ರಾಣ ಬಾದರಾ
ಯಣನನುಗ ಆನಂದಗುಣಭರಿತ ಕೃತಿರ-
ಮಣನ ಸುತೆ ರಮಣ ನೀ ಕ-
ರುಣಿಸಿದರುಂಟು ಶ್ರೀ ಹರಿಯು ಕರುಣಾ || ಅ.ಪ. ||

ಮರುತಾ ಶ್ರೀ ಹರಿಯಿಂದಲನವರತ ಪ್ರೇರಿತನಾಗಿ
ನಿರುತಾ ಜಗಕಾರ್ಯದೊಳು ಸತತ ನೀ ಬಿಡದಿರೆಡರಿಲ್ಲ
ಮರುತಾ ಜಗಚೇಷ್ಟಪ್ರದ ನೀನಹುದೊ ಶಕ್ತಾ
ವರ ಮಂತ್ರಿಯಾಗಿ ನೀ ಹರಿಗೆ ಭಕ್ತಾಗ್ರಣಿಯೆ ಯಂತ್ರೋ-
ದ್ಧಾರ ಶ್ರೀಹನುಮಂತಾ ಬಲಭೀಮ ಗುರುಮಧ್ವ ಶಾಂತಾ ತ್ರಿಕೋ
ಟಿರೂಪಧರ ಖ್ಯಾತಾ ಸುರಾಸುರನರೋರಗಗಳನವರತ
ಸರ್ವವ್ಯಾಪಾರ ನೀನಡೆಸಿ ಪೊರೆವ ಸದ್ಗುರುವರ ಸುಸಮೀರಾ
ನೀರಜಾಂಡವ ಕೂರ್ಮರೂಪದೊಳು ನಿಂದು ನೀ
ಭಾರವಹಿಸಿ ಮೆರೆದೆ ಶ್ರೀ ವಾಯು ಕುವರಾ || ೧

ಸೃಷ್ಟಿಗೊಡೆಯನಿಗೆ ನೀನಿಷ್ಟಪುತ್ರ
ನಿನ್ನಷ್ಟುಜ್ಞಾನ ಪರಮೇಷ್ಠಿಗಲ್ಲದೆ
ಎಷ್ಟು ನೋಡಿದರು ಇತರರಲಿ ಎಳ್ಳಷ್ಟರೆಣೆಯಿಲ್ಲ
ತುಷ್ಟಿಪಡಿಸುವೆ ಹರಿಯ ಚೇಷ್ಟದಾಯಕ
ಶ್ರೇಷ್ಠ ಮಾರುತಿ ಕಪಿಶ್ರೇಷ್ಠ ನೀನೆನಿಸಿ ಲಂಕಾ
ಶ್ರೇಷ್ಠನೆನಿಸಿದ ದುಷ್ಟದೈತ್ಯನಾ ಮದವನ್ನ
ಹುಟ್ಟ ನಡಗಿಸಿ ಸುಟ್ಟು ಲಂಕಪಟ್ಟಣವನ್ನು
ಪುಟ್ಟದಾಗಲಿ ಬೆಟ್ಟ ಹಿಟ್ಟನು ಮಾಡಿ ಆ

ದುಷ್ಟಭಾಷ್ಯಗಳ ಕಷ್ಟಹರಿಸಿ ನಿ –
ರ್ದುಷ್ಟತತ್ವವ ತೋರ್ದೆ ಎಷ್ಟು ಶಕ್ತನು ಜೀವ –
ಶ್ರೇಷ್ಠ ಮಾರುತಿ ಸರ್ವ ಕಷ್ಟ ಹರಿಸಿ ನಿನ್ನ
ಇಷ್ಟ ಭಕುತರ ಸೇವೆ ಕೊಟ್ಟು ಶ್ರೀ ಹರಿಯ
ಶ್ರೇಷ್ಠ. ಮಾರುತಿ ತೋರೋ ಇಷ್ಟದಾಯಕ ಗುರು
ಶ್ರೇಷ್ಠ ಮಾರುತಿಯೆ || ೨

ಈಶ ಪ್ರೇರಣೆಯಿಂದ ಈ ನಶ್ವರ ದೇಹದೊಳು
ಆ ಸಮಯದಲಿ ಅಪಾನನಿಂದೊಡಗೂಡಿ
ಪ್ರಾಣೇಶ ನಿನ್ನಿಂದ ಎಲ್ಲ ಚೇತನವಹುದೋ
ವಾಸವಾಗಿರುವನಕ ಈ ಶರೀರ ಕಾರ್ಯ
ಶಾಶ್ವತ ನಡೆವುದೋ ಕಲ್ಪಾವಸಾನ ಮೋಕ್ಷಪರಿಯಂತ
ಲೇಶಬಿಡದಲೆ ಬಪ್ಪ ಜಡದೇಹದೊಳು
ನೀ ವಾಸವಾಗಿಹೆ ದೇವ ಶಾಶ್ವತನಾಗಿ
ಆಯಾಸವಿಲ್ಲದಲೆ ಊರ್ಧ್ವಗಮನದಿ ಪ್ರಾಣ
ಅಪಾನನಿಂದಗಲಲೀ ದೇಹ
ಭೂಶಯನ ವಾಸ ಜಡವೆಂದೆನಿಸಿ
ಆ ಶರೀರವು ಭೂತಪಂಚಕದಿ ಸೇರುವುದು
ಪ್ರಾಣೇಶ ನಿನಾಗ ಹೇಯನ್ನು ಸೇರುವೆ
ಏನು ಚರಿತೆಯೊ ಅನಿಲ ಶಾಶ್ವತನು ನೀನು
ಅಶಾಶ್ವತ ದೇಹಗಳ ಮಾಳ್ಪ ನಿನ್ನಯ್ಯ ಕಾರ್ಯ
ಏನುಕಾಲಕು ದೇಹದಿಂ ಮೃತರೈಯ್ಯ ಜೀವರು
ಶ್ರೀಶನಾತ್ಮಜ ನೀನಮೃತನೆನಿಸೀ ಮೆರೆವೆ
ಈಶ ಪ್ರೇರಣೆ ನಿನಗೆ – ನಿನ್ನ ಪ್ರೇರಣೆ ಎಮಗೆ
ಅಸುಪತಿಯೆ ನಿನಗಿದು ಹೊಸ ಪರಿಯಲ್ಲವೊ
ವಿಶಾಸಲಾಗಿರುಸು ಶ್ರೀ ವೇಂಕಟೇಶನ ಪಾದ
ದಾಸನೆನಿಸೊ ಪವನೇಶ ಉರಗಾದ್ರಿವಾಸ ವಿಠ್ಠಲನ

ದಾಸ – ಎನ್ನ ಮನದಾಸೆ ನೀ ಸಲಿಸಿ ನಿಜ
ದಾಸಜನ ಸಹವಾಸವಿತ್ತು ಅನಿಶ ಭವ
ಪಾಶ ಸಡಿಲಿಸಿ ಸುಖವಾಸವೀಯೊ – ಗುರುಮಾತಪಿತೃ | ೩

ರಾಗ – ಮಧ್ಯಮಾವತಿ ತಾಳ – ಆದಿ

ಪ್ರಾಣರಾಯನೆ ನಿನ ಗೆಣೆಯುಂಟೆ ಪಾಲಿಪ ಕ
ರುಣಾಶಾಲಿಗಳನ್ನು ಫಣಿಗಣ್ಣ ಮೊದಲಾದವರ
ಗಣದೊಳು ಇನ್ನು ನಾ ಕಾಣೆ ಮುನ್ನ || ಪ ||

ಗುಣನಿಧಿಯೆ ಎಣೆಯಿಲ್ಲ ನಿನ್ನಯ
ಅಣು ಮಹಘನರೂಪ ಕ್ರಿಯೆಗಳು
ಕ್ಷಣಬಿಡದೆ ನೀನಖಿಳಜೀವರ ತ್ರಿ-
ಗುಣ ಕಾರ್ಯವ ಗೈವೆ – ಮುಖ್ಯ || ಅ. ಪ. ||

ಅನುಚಿತೋಚಿತ ಕರ್ಮ – ಜೀವರೊಳು
ನೀನೆಸಗಿ ತೋರ್ಪುದೆ ಧರ್ಮ–ನಾನರಿಯೆ ಪ್ರತಿ
ಕ್ಷಣದಿ ಮಾಡುವ ಕರ್ಮ – ಎನ್ನನುಭವಕೆ
ತಂದಿಡುವುದೇ ನಿನ್ನ ಧರ್ಮ – ನಾ ಕಾಣೆ ಮರ್ಮ
ಜನುಮ ಕೋಟಿಗಳಿಂದಲಿ ಅನುಸರಿಸಿ ಬಂದಿಹ
ಎನ್ನ ಕರ್ಮವ ಅನಿಲದೇವ ನಿನ್ನಿಂದ ಅಲ್ಲದೆ
ಎನಿತು ಇತರನಿಮಿಷರು ಮಾಳ್ಪರು
ಜ್ಞಾನದಾಯಕ ನೀನೆ ಎನ್ನಯ
ಮನದಲಿಹ ಜಂಜಡವ ಕಳೆದು
ಹೀನ ಕರ್ತನು ತಾನು ಅಲ್ಲದೆ
ನೀನೆ ಸರ್ವದ ಕರ್ತನೆಂಬುವ
ಜ್ಞಾನ ಧ್ಯಾನ ಸ್ಮರಣೆಯನು ಸಾನುರಾಗದಿ ಇತ್ತು
ನಿನ್ನ ಮತಾನುಗರಲ್ಲನವರತ ಇಡು
ಅನೇಕ ಜನುಮ ಜನುಮಾಂತರದೊಳು || ೧ ||

ಶ್ವಾಸನಾಮಕ ನೀನು – ಜಗದೀಶ ನೀ ಜೀ –
ವೇಶ ಸರ್ವಶಕ್ತನು – ನೀ ತಾಸಿಗೊಂಭೈನೂರು
ಶ್ವಾಸಗಳನ್ನು – ಈ ಶರೀರದಿ ಜೀವರಿಂ
ದೆಸಗುವೆಯೊ ನೀನು – ಉಸುರಲೇನಿನ್ನು
ವಾಸುದೇವಗೆ ಪ್ರೀತನಾಗಿ ಅ –
ಶೇಷತತ್ತ್ವಕ್ಕೀಶನಾಗಿಹೆ
ವಾಸವಾದಿಗಳೆಲ್ಲರೊಳು ಇನ್ನು
ಈ ಸುಭಾಗ್ಯವು ಕಾಣಲಿಲ್ಲ
ಏಸುಕಾಲಕು ನೀನೇ ಗತಿಯೆಂದು
ಈಶ ಶೇಷ ಖಗೇಶ ಪ್ರಮುಖರು
ದಾಸರಾಗಿಹರಯ್ಯ ಬಿಡದೆ
ದೇಶಕಾಲಗಳಲ್ಲಿ ನಿನ್ನೊಳು
ಸೂಸುವಾ ಅತಿಭಕುತಿಯಿಂದಲಿ
ಈಶ ತಪದಲಿ ನಿನ್ನ ಮೆಚ್ಚಿಸೆ
ಶೇಷ ಪದವಿಯು ಕೊಟ್ಟು ಶ್ರೀಶ –
ನ ಶಯನಸೇವೆ ಸಂಪದವನಿತ್ತು ||೨||

ಭಕುತ ಜನರ ಬಂಧೂ – ಶ್ರೀಹರಿಗೆ ನೀ ಪ್ರಥ –
ಮಾಂಗನಹುದೆಂದೂ ಈ ಸಕಲ
ಜಗದಾ ಚೇಷ್ಟಪ್ರದನೆಂತೆಂದೂ ನೀನೆ
ಭಗವತ್ಕಾರ್ಯ ಸಾಧಕನೆಂದೂ ಸಾರುತಿದೆ ಶ್ರುತಿ ಇಂದೂ
ಲೋಕಮಾತೆಗೆ ನಮಿಸಿ ದಶಶಿರ
ನಂದನನ ಸಂಹರಿಸಿ ಮುದಿದಾನಂದ
ನಾ ಭಂಗಿಸಿ ರಘುನಂದನಗೆ
ಮುದದಿಂದ ವಂದಿಸಿ ನೊಂದ ದ್ರು –
ಪದನಂದನೇಯುಳಾ –

* ಸೇವಕ.

ನಂದಪಡಿಸಲು ಕೊಂಬೆ ಕೌರವ
ವೃಂದವೆಲ್ಲವ ಸವರಿ
ನಂದನಂದನಗಾನಂದ ಪಡಿಸಿದೆ
ಇಂದಿರೇಶ ಶ್ರೀ ವೇಂಕಟೇಶನೆ
ಎಂದಿಗೂ ಪರದೈವವೆಂದು
ಬಂದು ಬೋಧೆಯನಿತ್ತ ಆ –
ನಂದತೀರ್ಥ ನೀ ಸಮರ್ಥ ॥ ೩ ॥

ರಾಗ – ಶಂಕರಾಭರಣ ತಾಳ – ಅಟ

ಪಾವನಾ ಗುರ ಪವಮಾನಾ ॥ ಪ ॥

ಪಾವನ ಗುರು ಪವಮಾನ ದೇವ
ಜೀವಕೋಟಿಗಳ ಸಾಧನ ॥ ಆಹ ॥
ಆವಾವ ಕಾಲದಿ ಸಲಹುವ* ಕರುಣೆ ಕೃಪಾ
ಪಾವಲೋಕನದಿಂದ ಕಾವುದೆಮ್ಮನು ಗುರು ॥ ಅ. ಪ. ॥

ಪರಮ ಮಹಿಮ ಶ್ರೀ ಮುಕುಂದಾ – ನಿಂದ
ಕರುಣಾದಿಂದ ಜನಿಸಿ ಬಂದ– ಬಂದು
ಸರ್ವಜೀವರೊಳಾನಂದ – ದಿಂದ
ಕರಣದೊಳುನಿಂತಜಂದಾ ॥ ಆಹ ॥
ನಿರುತದಿ ಹರಿ ಪ್ರೇರಣೆಯಿಂದ ಕಾರ್ಯವ
ಪರಿಪರಿಮಾಡಿ ಶ್ರೀ ಹರಿಗರ್ಪಿಸುವ ದೇವ ॥ ೧ ॥

ತರುಚ್ಛಾಯೆಯಂತೆ ಶ್ರೀಹರಿಗೆ – ನೀನೆ
ಪರಮಪ್ರತಿಬಿಂಬನಾಗೆ– ಸರ್ವ
ಚರಾಚರಾದಿಗಳೊಳಗೆ – ಅದರ
ದರ ಯೋಗ್ಯತೆಗನುವಾಗೇ– ॥ ಆಹ ॥
ನಿರುತ ಕಾರ್ಯವ ಮಾಳ್ಪೆ ಅಣುಮಹದ್ರೂಪನೆ
ಪರಿಪರಿ ಪ್ರಾಣಾದಿಗಳ ಕಾರ್ಯ ನಿನ್ನಿಂದ ॥ ೨ ॥

---

* ಎಸಗುವ.

ಚಕ್ರವರ್ತೀ ಆಜ್ಞೆಯಂತೇ – ಪುರದ–
ಧಿಕಾರಿ ನಿಯಮದಂತೇ – ಅದಕ–
ಧಿಕೃತರಿರುವಾರಂತೆ – ಅಂತೆ ತ–
ತ್ತ್ವ ಕಾರ್ಯವು ನಿನ್ನಿಚ್ಛೆಯಂತೇ ॥ ಆಹ ॥
ಏಕಾಕ್ಷದ ತತ್ತ್ವರಿಗೆ ತಕ್ಕ ಕಾರ್ಯವನಿತ್ತು ನಿ–
ಯಾಂಕ್ತರ ಮಾಡುವೆ ಹರಿ ಉಕ್ತಿಯ ಮೀರದೆ

ಇಭರಾಜವರದನ ಪ್ರಿಯ – ನೀನೆ
ಪ್ರಭುವಾಗಿರುವೆ ಸರ್ವಕಾಯ – ದೊಳು
ಶುಭಾಶುಭಂಗಳ ಕಾರ್ಯ – ನಿತ್ಯ
ನಿಬಿಡ ನಿನ್ನಿಂದಲೆ ಜೀಯಾ ॥ ಆಹ ॥
ಅಬುಜಾಂಡದೊಳಗೆಲ್ಲ ಪ್ರಬಲ ನಿನ್ನಯ ಶೌರ್ಯ
ಅಬುಜಭವನ ಪದ ಪಡೆವ ಪ್ರಭುವೆ ನೀನು

ಪ್ರಾಣದೇವ ನಿನ್ನಿಂದ – ಪಂಚ–
ಪ್ರಾಣಾದಿ ರೂಪಗಳಿಂದ – ತನು
ಸ್ಥಾನದಿ ಭೇದಗಳಿಂದ – ಜಡ
ಪ್ರಾಣಭೂತ ಪಂಚದಿಂದಾ ॥ ಆಹ ॥
ಕಾಣಿಸಿಕೊಳ್ಳದೆ ಜಾಣತನದಿ ಪುಣ್ಯ
ಪಾಪವಜೀವಗೆ ಉಣಿಸುತಲಿರುವೆಯೊ

ಪಾಯೂಪಸ್ಥದಿ ಅಪಾನ – ಮುಖ
ನಯನ ನಾಸಿಕ ಶ್ರೋತ್ರ ಪ್ರಾಣಾ – ನಾಭಿ
ಅಯನವಾಗಿರುವ ಸಮಾನಾ – ಇನ್ನು
ಪಯಣವು ನಾಡಿಯೊಳು ವ್ಯಾನಾ ॥ ಆಹ ॥
ಒಯ್ದು ಕೊಡುವ ಫಲಕಾರ್ಯವೆಲ್ಲ
ಉದಾನನಿಂದ ಕೂಡಿ ಜೀಯ ನೀ ನಡೆಸುವೆ

ಸೃಷ್ಟಿಯೊಳು ನೀ ಪ್ರವಿಷ್ಟನಾಗಿ
ಸೃಷ್ಟಿಕಾರ್ಯದೊಳು ಚೇಷ್ಟಾ – ಮಾಡಿ
ಸೃಷ್ಟೀಶನೊಲಿಸಿ ಪ್ರತಿಷ್ಠಾ – ತತ್ತ್ವ

ಶ್ರೇಷ್ಠರೆಲ್ಲರ ಮನೋಭೀಷ್ಠ ॥ ಅಹ ॥
ತುಷ್ಟಿಪಡಿಸಿ ಪರಮೇಷ್ಠಿಯಾಗುವ ಕಪಿ
ಶ್ರೇಷ್ಠನೆ ಉರಗಾದ್ರಿವಾಸ ವಿಠ್ಠಲನ ದೂತ ॥ ೭ ॥

(ಶ್ರೀ ವೇಂಕಟೇಶಸಿಷ್ಟಭಕ್ತಾ)

ರಾಗ – ಮಧ್ಯಮಾವತಿ ತಾಳ – ಆದಿ

ಪ್ರಾಣ - ಸಂಕರುಷಣಭವ – ಜಗತ್ಪ್ರಾಣ
ಅಣುಮಹದ್ರೂಪ ಗುಣಗಣ ನೀನೆ ಮುಖ್ಯಪ್ರಾಣ ॥ ಪ ।

ತೃಣಜೀವರಾದಿ ಜಂಗಮಜಡದೊಳು
ಪೂರ್ಣನಹುದೊ ಶ್ರೀಹರಿ ಪ್ರೇರಣೆಯಿಂದ ॥ ಅ. ಪ.

ಪ್ರಾಣ ನಿನ್ನಿಂದಲೆ ಸರ್ವರ ತ್ರಾಣ[1]-ಪ್ರವೃತ್ತಿಯೂ ನಿನ್ನಯ
ಅಣತಿಯಂತಿಪ್ಪುದಯ್ಯಾ – ಮುಖ್ಯ
ಪ್ರಾಣನೆ ತ್ರಿವಿಧಜೀವರೊಳನವರತದಿ ನೀನೆಲಿಸಿ
ಏನೇನು ಮಾಳ್ಪ ಕರ್ಮಂಗಳೆಲ್ಲವು ನಿನ್ನಿಂದೈಯ್ಯಾ
ಪ್ರಾಣೋಪಾನ ವ್ಯಾನೋದಾನ ಸಮಾನರ
ತ್ರಾಣ ನಿನ್ನದೊ ಮುಖ್ಯಪ್ರಾಣದೇವನೆ
ಪ್ರಾಣಿಗಳಲಿ ಪಂಚಪ್ರಾಣರೂಪದಲಿಹೆ
ಪ್ರಾಣಿಕಾರ್ಯಕೆಲ್ಲ ನೀನಾಧಾರನೋ ॥ ೧

ಸ್ಥೂಲ ಶರೀರದೊಳು – ಪಾಯೂಪಸ್ಥದಿ – ಸ
ಕಲ ಮಲಗಳಾದ್ಯಪಸರಣಾದಿಗಳಿಂದ – ರಕ್ಷಣೆ
ಎಲ್ಲ ಅಪಾನನಿಂದಲಿ ಮಾಡಿಸಬಲ್ಲೆ
ಮುಖನಾಸಿಕ ನೇತ್ರದಿ ಎಲ್ಲ ಶ್ವಾಸಾದಿಗಳಾಡಿಸಬಲ್ಲೆ
ಕಾಲಕಾಲಕು ಶ್ವಾಸಪ್ರಣಯದಿಂದಲಿ
ಎಲ್ಲ ಕಾಲದೊಳು ಪ್ರಾಣನೆಂಬರೋ
ಎಲ್ಲ ಜೀವದೊಳು ನಿಂತು ನಡೆವೆ[2] ಶ್ರೀ –
ನಲ್ಲನಾಜ್ಞೆಯಂತನುವರ್ತಿಸುವೆಯೋ ॥ ೨

1. ಪ್ರಾಣ, 2. ಪೊರೆವೆ.

ಎಪ್ಪತ್ತೆರಡುಸಾವಿರವಿಹ ನಾಡಿ ಹಿಡಗೂಡಿ ಅನುದಿನ
ಇಪ್ಪ ಈ ಜಡದೇಹವನೇ ನೋಡಿ ವ್ಯಾಪಿಸಿ ವ್ಯಾನನಿಂದ
ರಸಗಳಾನಾಡಿಗೆ ಕೊಂಡೋಡಿ
ತಪ್ಪಾದೆ ನಾಡಿಕಾರ್ಯವನೆಲ್ಲ ಕ್ರಮದಿ ಮಾಡಿ
ಒಪ್ಪೆ ಉದಾನ ಸುಷುಮ್ನ ನಾಡಿಯೊಳು
ಒಪ್ಪಿಸುವೆ ಸುಖ ದುಃಖಫಲವನು
ಪಾಪ ಪುಣ್ಯದಂತೆ ಜೀವರಿಗೆ ಲೋಕವ
ಪ್ರಾಪಿಸಿ ಕೊಡುವೆಯೊ ಶ್ರೀಪತಿ ಆಜ್ಞೆಯಿಂ || ೩ ||

ಭುಕ್ತವಾದನ್ನವೆ ಮೊದಲಾದ್ದೆಲ್ಲ
ತತ್ತಸ್ಥಳಗಳಿಗೆಯ್ವ ಪ್ರಯುಕ್ತ
ಪ್ರಾಣಾಪಾನರ ಮಧ್ಯ ಪ್ರಾದೇಶವಾದ ಉಕ್ತ
ನಾಭಿಯಲಿದ್ದ ಸಮಾನವಾಯುವಿಂ ಶಕ್ತಿಯು ಸಕಲಾವಯವಕೀವ
ಶಕ್ತಿಯಿಲ್ಲದತ್ಯಲ್ಪ ಜೀವರಿಗೆ
ಶಕ್ತಿಯಿತ್ತು ಜ್ಞಾನೇಂದ್ರಿಯ ವೃತ್ತಿಯ
ವ್ಯಕ್ತಮಾಡಿ ಫಲವಿತ್ತು ಪೊರೆವೆಯೋ
ಮುಕ್ತರೊಡೆಯನಿಗೆ ಅತ್ಯಂತ ಹಿತಕರ || ೪

ಪ್ರಾಣ–ನೀ ಬಾಹ್ಯಾದಿತ್ಯನೊಳಿದ್ದು ಅಧ್ಯಾತ್ಮ ನೆನಿಸಿ
ಕಣ್ಣಿನೊಳಾದಿತ್ಯನಲಿ ಬಂದು ಅಧಿಭೂತನೆನಿಸಿ
ಕಣ್ಣಿನಭಿಮಾನಿ ಪ್ರಾಣನಸೇರಿ – ಅಧಿದೈವನೆಂದು
ಎಣಿಪರೊ ಈ ವಿಧ ತ್ರಯುಗತನೆಂದು
ತೃಣ ಮೊದಲಾದ ಸರ್ವಜೀವರ
ಪ್ರಾಣಪಂಜರೊಳು ಮುಖ್ಯ ಪ್ರಾಣನೆ
ಫಣಿಗಿರೀಶ ಶ್ರೀ ವೇಂಕಟೇಶನ–
ಪ್ರಣಿಯಂತೆ ನೀನಿಯಾಮಕನಾಗಿಹೆ || ೫

ಕಮಲೆ ಕಮಲಾಲಯೇ || ಪ

ಕಮಲಭವಾದಿಸುರವಂದಿತ ಪದೆ || ಅ ಪ.

ತ್ರಿಗುಣಾಭಿಮಾನಿಯೇ ನೀ – ಅಗಣಿತಗುಣಶ್ರೇಣಿಯೇ
ಖಗವಾಹನನ ರಾಣಿಯೇ
ಹಗಲು ಇರುಳು ಹರಿಪದಯುಗ ತೋರಿಸೇ ॥ ೧ ॥

ಲಿಂಗ ಶರೀರವ ಭಂಗವ ಗೈಯಲು ನಿ–
ನ್ನಂಗದಲ್ಲಿನಾ ಚಿವರಿನಾ
ಸಂಗವಾಗಲು ಭವಭಂಗ ಹಿಂಗುವುದು ॥ ೨ ॥

ಧಾಮತ್ರಯ ರೂಪಿಣೀ–ಕಮಲಭವಾಂಡಕಾರಿಣೀ ॥ ೩ ॥
ವಿಮಲಪದುಮಸರೋವಾಸಿನೀ
ಸ್ವಾಮಿ ತೀರ್ಥದಿ ನಿಂತ ಶ್ರೀ ವೇಂಕಟೇಶನ ರಾಣಿ

**ರಾಗ – ಹಂಸಧ್ವನಿ** **ತಾಳ – ಆದಿ**

ಕ್ಷೀರಸಾಗರ ತನಯೆ ಮುರಹರಹರಿಯು
ಉರಮಂದಿರೆಯೆ – ಇಂದಿರೆಯೆ – ಪರಿಪಾಲಿಸನುದಿನ ॥ ಪ ॥

ಸತ್ಯಶಾಶ್ವತನಚ್ಯುತನ ನೀ – ನಿತ್ಯಸೇವಿಸಿ ಸ್ತುತ್ಯಳಾಗಿ
ನಿತ್ಯಪ್ರಕೃತಿಯು ಕೃತ್ಯನಡೆಸಿ – ನಿರ್ಲಿಪ್ತಳಾಗಿಹೆ ನಿತ್ಯಮುಕ್ತಳೆ ॥ ೧ ॥

ಅಕ್ಷರಳೆ ಪಕ್ಷಿವಾಹನನ ವಕ್ಷದೊಳು ಕ್ಷಣಬಿಡದೆ ನಲಿದು
ಮೋಕ್ಷದನ ಗುಣ ಈಕ್ಷಿಪಳೆ – ಜಗರಕ್ಷಕಳೆ ಕಮಲಾಕ್ಷನಾ ಪ್ರಿಯೆ ॥ ೨ ॥

ಭರದಿ ಕರವೀರ ಪುರದಿ ನಿಂದೆ – ಉರಗಗಿರಿ ಶ್ರೀವೇಂಕಟೇಶನ
ಪರಮಪ್ರಿಯೆ ನಿತ್ಯಾವಿಯೋಗಿನಿ ಪದುಮ ಸರೋ ನಿವಾಸಿನಿ ॥ ೩ |

ಮುಕ್ತನಾಥಗೆ ಪ್ರಿಯಳು – ನೀ ಅವ್ಯಕ್ತತತ್ವಾಭಿಮಾನಿಯೆ
ವ್ಯಕ್ತಗೊಳಿಸೆನ್ನ ಚಿತ್ತದಲಿ ವೇದೋಕ್ತನ ನೀ ನಿತ್ಯದಲ್ಲಿ ॥ ೪

ಪುರುಷಸೂಕ್ತಸುಮೇಯ ಶ್ರೀ ಉರಗಾದ್ರಿವಾಸವಿಠಲನ
ನಿರುತ ಗುಣರೂಪ ಕ್ರಿಯತರಧಿಯೊಳು ಹರುಷದಲಿ
ನಲಿದಾಡಿ ಸುಖಿಸುವ ॥ ೫

ರಾಗ – ಕೇದಾರಗೌಳ ತಾಳ – ಆ

ಸಹನೆ ಇನ್ನೆಷ್ಟವ್ವ ಶ್ರೀ ಭಾರ್ಗವೀ || ಪ

ಮಹಾಲಕುಮಿ ಶ್ರೀಪತಿಗೆ ಸಮಾಸಮಳೆನಿಸಿರಲು || ಅ. ಪ

ಮಡುವ ಸೇರಿದ ಒಡೆಯ ಬಿಡದೆ ಮಂದರಗಿರಿಯ
ಪೊಡವಿಬಗೆದು ಒಡನೆ ಕಡು ಕ್ರೂರನಾದ
ಬಡವನಂತೆ ಬೇಡಿ ಕೊಡಲಿ ಪಿಡಿದಿಹ ಕಡುಕ
ಮಡದಿಯಾ ಕಳಕೊಂಡು ಕಡಹನೇರಿದ ಕ್ರಿಯಕೆ || ೧

ಮುಗುಧರನ ಮಾಡಿದ ಶುದ್ಧ ಸ್ತ್ರೀಯರನೆಲ್ಲಾ
ಖಗಗಮನ ತಾ ತುರುಗವನು ಹತ್ತಿದಾಯೋಗ
ಭೃಗುಮುನಿಯ ಅಪಜಯಕೆ ಕರವೀರಪುರದಲಿರೆ
ನಾಗಗಿರಿಗಿಳಿದ ಪತಿಯು ಪರಿಣಯವನೆಸಗಿದೆ || ೨

ನಾಗರಾಜನ ಕೂಗ ಕೇಳಿದಾಗ್ಗ್ಯೋಳದೆಲಿ
ಬೇಗಸಾಗಿಬಂದಾ ಸರಸಿನಾ ಬಳಿಗೇ
ಅಂಗಜನವೈರಿಯ ಇಂಗಿತವನರಿತು
ಹೆಂಗಳಾರೂಪದಲಿ ಮೋಹಿಸಿದ ಮಾಯಕ್ಕೆ || ೩

ಕ್ಷಮೆಯ ಸಾಗರಳೆ – ನಿನ್ನ ಅನುಪಮಸನ್ಮಹಿಮೆ
ಅಮಿತವಾಗಿಹುದು ಜಗಕಾರ್ಯದಿ
ಅಮಮ ನೀನಿರಲು ನಾಭಿಕಮಲದಲಿ ಬ್ರಹ್ಮನ ಜ –
ನುಮ ತೋರಿದ ಹರಿಯ ಸ್ಮರಮಣನ ಕಾರ್ಯಕೆ || ೪

ಗುಣತ್ರಯಂಗಳಮಾನಿ ಶ್ರೀ ವೇಂಕಟೇಶನ ರಾಣಿ
ಎಣೆಯುಂಟೆ ಹರಿ ಗುಣವನೆಣಿಸುವ ಪ್ರವೀಣೆ
ಘನ್ನ ಉರಗಾದ್ರಿವಾಸ ವಿಠಲನ ಕರುಣ
ಪೂರ್ಣಪಾತ್ರಳೆ ಹರಿಯ ವಕ್ಷಸ್ಥಳನಿವಾಸಿನಿಯೇ ||

ರಾಗ – ತೋಡಿ ತಾಳ – ಆದಿ

ಇನ್ನೆಂದಿಗೋ ನಿನ್ನ ದರುಶನ ಶೇಷಾದ್ರಿವಾಸ | ಪ ||

ಪನ್ನಂಗಶಯನ ಪ್ರಸನ್ನರ ಪಾಲಿಪ
ಘನ್ನಮಹಿಮ ನೀನೆನ್ನನುದ್ಧರಿಸೊ |ಅ. ಪ. ||

ಪರಶುರಮುನಿಗಳ ವೃಂದನೆರಹಿದ ಯಾಗಗಳಿಂದ
ಪರಮಾದರದಿಂದಿರುವ ಸಮಯದಿ
ನಾರದಮುನಿ ಬಂದೊದಗಿ ನಿಂದ ಇ –
ದಾರಿಗರ್ಪಿತವೆಂದರುಹಿ ಮರಳೀತೆರಳಿದ
ಸುರಮುನಿವಚನದಿ ಭೃಗುಮುನಿವರ ಪೋಗಿ
ಹರವಿರಿಂಚಿಯರ ನೋಡಿದಾ ಉರುತರ ಕೋಪದಿ ನಿಲ್ಲುತ
ಪರಮಪುರುಷರಲ್ಲೆಂದೆನ್ನುತ–ವೈಕುಂಠವನ್ನೇ ಸಾರುತ
ಹರುಷದಿ ಶ್ರೀಹರಿ ಉರಗಶಯನನಾಗಿ
ಪರಮ ಯೋಗನಿದ್ರೆ ಮಾಡುತಾ–ಅರಿಯದಂತೆ ತಾನಟಿಸುತ
ಇರೆ ಮುನಿ ಪದದಿಂದೊದೆಯುತ–ತ್ವರಿತದಿಂದ ತಾನೇಳುತ
ಹರುಷದಿ ಮುನಿಪಾದ ಕರದಲಿ ಒತ್ತುತ
ಕರುಣದಿ ಸಲಹಿದೆ ದುರಿತವ ಹರಿಸಿ
ಹರಿಭಕುತರ ಅಘ ಹರಿಸಿ ಕಾಯುವಂಥ
ಕರುಣೆಗಳುಂಟೇ ಶ್ರೀಹರಿ ಸರ್ವೋತ್ತಮಾ ||೧||

ಸ್ವಾಮಿ ನೀ ನಿಜಧಾಮವನೆ ತೊರೆದೂ
ಸ್ವಾಮಿಕಾಸಾರ ತೀರದಿನಿಂದೂ ಧಾಮವನರಸಿ
ವಲ್ಮೀಕವನೆ ನೋಡಿ
ವಿಮಲಸ್ಥಳವಿದೆಂದು ಮನದಲಿ ಆನಂದದಿಂದಲಿ ಬಂದುನಿಂದೆ
ಸನ್ಮೋದವನ್ನೆ ತೋರುತ
ಕಮಲಭವ ಶಿವ ತುರುಕರು ರೂಪದಿ
ಈ ಮಹಗಿರಿಯನ್ನು ಅರಸುತ–ಸ್ವಾಮಿ ನೀನಿಲ್ಲಿಹನೆಂದೆನ್ನುತ
ಕಾಮಧೇನು ಪಾಲ್ಗರೆಯುತಾ–ಈ ಮಹಿಮೆಯನ್ನೇ ಬೀರುತಾ
ಭೂಮಿಗೊಡೆಯ ಚೋಳನೃಪ ಸೇವಕನು
ಧೇನುವನು ತಾ ಹೊಡೆಯಲು

ಕಾಮನಯ್ಯ ನೀನೇಳಲು–ಭೀಮವಿಕ್ರಮವ ತೋರಲು
ಕ್ಷಮಿಸಿದೆ ನೃಪನ ದಯಾಳು
ಅಮಿತ ಸುಗುಣಪೂರ್ಣ ಅಜರಾಮರಣ
ನೀ ಮಸ್ತಕಸ್ಫೋಟನ ವ್ಯಾಜವ ತೋರಿ
ಪ್ರೇಮದಿ ಗುರು ಪೇಳ್ದೌಷಧ
ಕಾಮಿನೀ ಮೋಹವ ತೋರಿದೇ ವಿಡಂಬನ ಮೂರ್ತಿ ॥ ೨ ॥

ಮಾಯಾರಮಣನೆ ಜೀಯಾ ಕಾಯುವೆ ಜೀವನಿಕಾಯಾ
ತೋಯಜಾಂಬಕ ಹಯವನೇರಿ ಭರದಿ ತಿರುಗಿ ತಿರುಗೀ
ವನವನೆಲ್ಲ ಮೃಗನೆವನದಿ ನಿಂದು ನೋಡಿದೇ
ಪ್ರಿಯಸಖಿಯರ ಕೂಡಿ ಪದುಮಾವತಿಯು ತಾ
ಹಯದಿ ಕುಳಿತ ನಿನ್ನ ನೋಡಲು
ಪ್ರಿಯಳಿವಳೆನಗೆಂದು ಯೋಚಿಸಿ
ಕಾಯಜಪಿತ ನಿನ್ನ ಹಯವನೆ ಕಳಕೊಂಡು
ಮಾಯದಿಂದ ನೀ ಮಲಗಿದೆ
ತಾಯಿ ಬಕುಳೆಯೊಳು ಪೇಳಿದೇ
ತೋಯಜ ಮುಖಿಯಳ ಬೇಡಿದೇ
ಆ ಯುವತಿಯನ್ನೇ ಸ್ಮರಿಸುತಾ
ಶ್ರೀಯರಸನೆ ನೀನು ಸ್ತ್ರೀರೂಪದಿ ಪೋಗಿ
ಶ್ರೀಯಾಗಿಹಳಿನ್ನು ಶ್ರೀಹರಿಗೀಯಲು
ಶ್ರೇಯವೆಂದು ಆಕಾಶನನೊಪ್ಪಿಸಿ
ತಾಯಿಯಭೀಷ್ಟವನಿತ್ತೆ ಸ್ವರಮಣಾ ॥ ೩ ॥

ಸಕಲ ಲೋಕೈಕ ನಾಥಾ–ಭಕುತರ ಭೀಷ್ಟಪ್ರದಾತಾ
ಭಕುತನಾದ ಆಕಾಶನೃಪತಿಯು ಬಕುಳೆ ಮಾ–
ತ ಕೇಳಿ ಅಭಯವಿತ್ತು ಮನ್ನಿಸಿ ಪದುಮಾವತಿಯ ಪರಿಣಯ
ಶುಕರ ಸನ್ಮುಖದಲ್ಲಿ ಅಕಳಂಕ ಮಹಿಮ–
ಗೆ ಕೊಟ್ಟನು ತಾ ಲಗ್ನಪತ್ರಿಕಾ
ಸ್ವೀಕರಿಸುವುದೀಕನ್ನಿಕಾ ಈ ಕಾರ್ಯಕೆ ನೀನೆ ಪ್ರೇ
ರಕಾ ತಾ ಕಳುಹಿದ ಪುಣ್ಯ

ಶ್ಲೋಕನು ಶೋಕರಹಿತ ಜಗ_
ದೀಶವಂದ್ಯ ಅವಲೋಕಿಸಿ ಪತ್ರಿಕವನ್ನು
ಸಕಲ ಸಾಧನವಿಲ್ಲಿನ್ನು
ಲೋಕೇಶ ಗರುಡ ಬೇಕಿನ್ನು
ಏಕಾಂಗಿ ನಾನು ಎನ್ನಲು
ಲೋಕಪತಿಯು ಸುರಕೋಟಿಗಳಿಂದಲಿ
ಈ ಕುವಲಯದಿ ನಿನ್ನಯ ಪರಿಣಯವೆಸಗಲು
ಲೋಕ ಜನಕೆ ಕಲ್ಯಾಣವ ತೋರಿದೆ
ಭಕುತ ಜನಪ್ರಿಯ ಶ್ರೀವತ್ಸಾಂಕಿತ || ೪ ||

ಖಗವರವಾಹನ ದೇವಾ
ತ್ರಿಗುಣರಹಿತ ಜಗಕಾವಾ
ಅಗಣಿತ ಮಹಿಮ ಗೋಮಯನೆನಿಸಿ
ಬಗೆಬಗೆ ರೂಪವಧರಿಸಿ ಪರಮಾದರದಲಿ ಸುದರ ಪೊರೆಯುತಾ
ನಗಧರ ಸೀನೀಗಿರಿಯೊಳು ನೆಲೆಸಿಹೆ
ಅಗಣಿತ ಸುರಗಣಕಿನ್ನರರು ಸಾಧ್ಯರು ತರುಫಲ
ಖಗಮೃಗರೂಪವ ಬಗೆಬಗೆ ಇಹೆ
ಪೊಗಳಲಳವೇ ಗಿರೀವರವು
ಹಗಲು ಇರುಳು ಭಗವಂತನೆ ನಿನ್ನನ್ನು
ಪೊಗಳುತಿಹರು ನಿನ್ನ ಭಕುತರು
ನಿಗಮವ ಪಠಿಸುತ ನಡೆವರು ನಗೆ
ಮೊಗದಲಿ ನಿನ್ನ ದಾಸರು ಗೋವಿಂದ ಮುಕುಂದ ಎನ್ನುತಾ
ಯುಗ ಯುಗದೊಳು ನೀನಗದೊಳು ನೆಲೆಸಿಹೆ
ಜಗದದೇವ ರಾಜಿಸುವವನಾಗಿಹೆ
ಮಿಗಿಲೆನಿಸಿದ ಶ್ರೀ ವೇಂಕಟೇಶ
ಸದ್ಗುಣ ಸಚ್ಚಿದಾನಂದ ಮುಕುಂದ ಗೋವಿಂದಾ || ೫ ||

**ಮಧ್ಯಮಾವತಿ** **ತಾಳ – ಆದಿ**

ಎಂದು ಕಾಂಬೆನೊ ನಾನು ಗೋ –
ವಿಂದ ನಿನ್ನಯ ಪಾವನ್ನ ಪಾದವನ್ನು ನಾ
ಪೊಂದಿಸೇವಿಸಿ ಆನಂದ ಪಡುವುದಕಿನ್ನು ಕರುಣಿಸೈ ಮುನ್ನ || ಪ ||

ಎಂದಿಗಾದರು ನಿನ್ನ ಪದಯುಗ
ಪೊಂದಿ ಮಹದಾನಂದ ಪಡೆಯಲು
ಕಂದಿ ಕುಂದಿತು ತನುಮನೇಂದ್ರಿಯ
ಇಂದೆ ತೋರಿಸೊ ಪಾದಕಮಲವ || ಅ.ಪ ||

ಬಾಲತನದಲಿ ನಾನು – ಶ್ರೀ ಲೋಲ ನಿನ್ನಿಂದ
ಪಾಲಿತನಾದೆನೊ ಬೆಲೆಯುಳ್ಳ ಆಯುವನೆಲ್ಲ
ಕಳೆದುಬಿಟ್ಟೆನು ನಾನು – ಕೆಲಕಾಲದಲಿ ನಾ
ಕಲುಷ ಕ್ರಿಯೆಗಳನ್ನು - ಫಲವಿಲ್ಲದೆಸಗಿದೆನು
ಎಲ್ಲರೊಳು ನೀನೆಲೆಸಿ ಜೀವರ – ಎಲ್ಲ ಕರ್ಮವ ಮಾಡಿಸಿ
ಫಲವೆಲ್ಲ ಅವರಿಗೆ ಇತ್ತು – ನೀ ನಿರ್ಲಿಪ್ತನೆಂದು ತಿಳಿಯದಲಿ
ಖುಲ್ಲ ಮಾನವರೊಡನೆ ಬೆರೆದು
ಫುಲ್ಲಲೋಚನ ನಿನ್ನ ಮರೆದು
ಇಲ್ಲ ಎನಗೆ ಎಣೆಯೆನುತ ನಾ
ಬಲುಹೆಮ್ಮೆಯಿಂದಲಿ ದಿನಗಳ ಕಳೆದೇ
ಇಲ್ಲ ನಿನಗೆ ಸರಿಯಿಲ್ಲ – ನೀ
ನಿಲ್ಲದಾಸ್ಥಳವಿಲ್ಲ – ಜಗದಾ ಎಲ್ಲ
ಕಾಲಗಳಲ್ಲಿ ಇಹ ಶ್ರೀನಲ್ಲನೀನೆಲ್ಲ ಬಲ್ಲೆಯೊ || ೧ ||

ಬರಿದೇ – ಕಾಲವ – ಕಳೆದೇ – ಶ್ರೀ ಹರಿಯೆ ನಿನ್ನಯ
ಸ್ಮರಣೆಯನ್ನು ಮಾಡದೇ–
ಪರಿಪರಿಯ ತನುಮನಕ್ಲೇಶಗಳಿಗೊಳಗಾದೇ–
ಪರಿಹರಕೆ ನಿನ್ನಯ ನಾಮಸ್ಮರಣೆಯೊಂದಲ್ಲದೇ–ಇನ್ನಿಲ್ಲಾ ಬರಿದೇ
ಪರಮ ಕರುಣಾಕರಧಿ ಎಂಬುವ
ಕರಿಧ್ರುವ ಬಲಿ ಮುಖ್ಯರೆಲ್ಲರ
ಪೊರೆದ ಕೀರುತಿ ಕೇಳಿ ನಂಬಿದೆ
ಶರಣಜನ ಮಂದಾರನೆಂದು
ಅರಿಯೆ ನಾನವರಂತೆ - ಸಾಧನ
ಅರಿತು ಮಾಡುವ ಪರಿಯ ತಿಳಿಯದು
ಬಿರುದು ಭಕ್ತಾಧೀನನೆಂದು

ಹರಿಯೆ ನಿನ್ನಯ ಮೊರೆಯ ಹೊಕ್ಕೆನು
ದುರಿತ ಶರಧಿಯೊಳಾಡುತಿರುವನ ಉ-
ತ್ತರಿಸಲೊಂದೇ ನಾವೆಯಂತಿಹ
ಚರಣಸ್ಮರಣೆಯ ಕೊಟ್ಟು ರಕ್ಷಿಸು
ಪುರುಷಸೂಕ್ತ ಸುಮೇಯ ಜೀಯಾ ॥ ೨ ॥

ಶೇಷಗಿರಿಯಾವಾಸ ಶ್ರೀ ಶ್ರೀನಿವಾಸ
ದೋಷರಹಿತ ಸರ್ವೇಶ ಮನೋ-
ಕಾಶದಲಿ ಅನವರತ ನಿಲ್ಲೊ
ಶ್ರೀಶಾ ಬಿಡಿಸೆನ್ನ ಭವಬಂಧ ಗ್ರಂಥಿಯ
ಪಾಶಾ ಹರಿಸುವುದು ಕ್ಲೇಶಾ
ಶ್ರೀಶ ನಿನಗತಿಶಯುವೆ ಎನ್ನಯ
ವಿಷಯದಭಿಲಾಷೆಗಳ ಬಿಡಿಸೀ
ದೋಷರಹಿತನ ಮಾಡಿಸೀ ಎನ್ನ
ಪೋಷಿಸೋ ನಿನ್ನ ಸ್ಮರಣೆಯಿತ್ತು ದ್ವಾತ್ರಿಸುಪ-
ರ್ಣ ಶ್ರುತಿಗಳಿಂದಲಿ
ಈಶ ದಾಸರ ಭಾವ ತಿಳಿಯದೆ
ಮೋಸಹೋದೆನೊ ಬೋಧೆ ಇಲ್ಲದೆ
ವಾಸುದೇವನೆ ರಕ್ಷಿಸೆನ್ನನು
ಏಸುಕಾಲಕು ನೀನೆ ಗತಿ ಎಂದು
ಆಸೆಮಾಡುವೆ ನಿನ್ನ ಕರುಣಕೆ
ಬೇಸರದಲೆ ಮೊರೆಯಲಾಲಿಸಿ
ಶ್ರೀಶ ಶ್ರೀವೇಂಕಟೇಶನೆ ॥ ೩ ॥

ರಾಗ – ಕಾಪಿ

ಎಲ್ಲಿಗ್ಹೋಗುವೆ ಎಲೊ ಹರಿಯೇ ಮನದಲ್ಲಿ
ನಿಲ್ಲೋ ಹಿಂದರಘುಳಿಗೆ ಹೇ ದೊರೆಯೆ ॥ ಪ ॥

ವಾರಿವಿಹಾರದಿ ನಿಂದು – ಗಿರಿಭಾರತಳೆದು ನೀನಡಗಿದೆ ಅಂದು
ದಾರುಣಿಯನೆ ಬಗೆದು ನಿಂದು – ಧೀರಪೋರನ
ಮಾತನ ಸಲಹಬೇಕೆಂದು ॥ ೧ ॥

ವರವಟುವೇಷವ ಧರಿಸಿ - ದುಷ್ಟ ನರಪರ ಕುಲಗೇಡಿಗನೆಂದೆನಿಸಿ
ನಾರಿಯನಟವಿಯೊಳಿರಿಸಿ – ಪುರನಾರಿಯರ
ಮನವನ್ನು ಅಪಹರಿಸಿ ॥ ೨ ॥

ವರವಸನವ ಬಿಟ್ಟು ನಿಂದು - ಘೋರ ತುರಗವನೇರಿ
ಓಡುವೆಯೊ ಮುಂದು
ದೊರೆ ಶ್ರೀ ವೇಂಕಟೇಶನೆಂದೂ – ನೀನೆ ಉರಗಾದ್ರಿವಾಸ
ವಿಠ್ಠಲ ದಯಾಸಿಂಧು ॥ ೩ ॥

ಇಂದಿರಾರಾಧ್ಯನೆ ಬಂದು ನಿಲ್ಲೊ ॥ ಪ ॥

ಇಂದೆನ್ನ ಸಲಹೊ ಮಂದನಾನೊಂದನರಿಯೆ ಏ-
ನೆಂದು ಕರೆಯಲೋ ಗೋವಿಂದಾ ॥ ಅ. ಪ ॥

ಜಲದೊಳಾಡುವ ಕಲ್ಲ ಹೊರುವ
ಎಲ್ಲ ಕಾಡಿನೊಳಾಡುವ ಭಳಿರೆ ಎರಡಂಗವ ತಳೆವ
ಇಳೆಯನಳೆಯುವ ಭಾರ್ಗವ ಖಳಕುಲವನಳಿವ ಗೊವನೆ ಕಾಯ್ವ
ಲಲನೆಯರ ವ್ರತವನಳಿವ ಅಶ್ವವನೇರಿ ಮೆರೆವ ನಿನ್ನಯ ರೂಪವಾ
ಸಲಿಲ ಪೊಕ್ಕು ಅಸುರನ ಸಂಹರಿಸಿ
ಕಲಕಿ ಶರಧಿಯ ಸುಧೆಯನು ತರಿಸಿ
ನೆಲಗಳ್ಳನ ಮದವನೆ ಮರ್ದಿಸಿ
ಚೆಲುವ ಚೆಳ್ಳುಗುರಿನಿಂದುದರವ ಭೇದಿಸಿ
ಸುಲಭದಿಂದ ಶುಕ್ರನ ಕಣ್ಣರಿಸಿ
ಬಲುಕೊಬ್ಬಿದ ಕ್ಷತ್ರಿಯರನೊರೆಸಿ
ಶಿಲೆಯ ಮೆಟ್ಟಿ ಮುನಿಸತಿಯರನುದ್ಧರಿಸಿ
ಲೀಲೆಯಿಂದ ವ್ರಜನಾರಿಯರೊಲಿಸಿ
ಸಲೆದಿಗಂಬರರೂಪವ ಧರಿಸಿ
ಇಳೆಯೊಳು ರಾವುತನಾಗಿ ಮೆರೆವ–ನಿನ್ನಯ ರೂಪವ
ಬಲ್ಲವರಾರೊ ಮಾಧವಾ ॥ ೧ ॥

ಜಲದೊಳು ನಿಂದು ಕಣ್ಣುಬಿಡುವ ಶೈಲವ ತಳೆವಾ
ಕಲಕೀ ಮಣ್ಣು ಮೆಲುವ ಕಲ್ಲಕಂಭವ ಒಡೆವಾ
ಬಲಿಯನೆ ಬೇಡುವ ಪರಶುವ ತಳೆದು ವನವನಗಳ ಚರಿಸುವ
ಬಾಲೆಯರನಾಳ್ವ ಎಲ್ಲ ನಾಚಿಕೆಯ ಬಿಡುವ
ಸಲ್ಲುವ ಹಯವೇರಿ ಮೆರೆವಾ ನಿನ್ನಯ ರೂಪವಾ
ಎಲ್ಲ ವೇದವನುದ್ಧರಿಸಿ ವಾರಿಧಿಯಲಿ
ತಳೆದು ಅಮೃತಮಥನಕೆ ಶಿಲೆಯ
ಝಲಿಸಿ ನಿಲಿಸಿದೆ ಸಿಜಕೆ ಧರಣಿಯ
ಬಲ್ಲಿದ ಬಲಿಯ ಬಂಧಿಸಿ ಭಕ್ತಿಯ
ಸಲ್ಲಿಸಿದೆ ಪಿತ ಪೇಳ್ದ ಆಜ್ಞೆಯ
ಬಿಲ್ಲಸೆತ್ತಿ ವರಿಸಿದೆ ಸೀತೆಯ
ಮಲ್ಲರ ಮಡುಹಿ ತೋರಿದೆ ಚರಿಯ
ಜಳ್ಳುಮಾಡಿತೋರ್ದೆ ಧರ್ಮಕೆ ಮಾಯ
ಹಲ್ಲಣಿಸುವ ಹಯವೇರಿ ಮೆರೆದ ಶ್ರೀ
ವಲ್ಲಭ ನಿನ್ನಯ ರೂಪವ ಸೊಲ್ಲಿಪಗಾರೋ ಶ್ರೀಧವಾ || ೨

ನಿಗಮ ತಂದಿತ್ತ ನಗವಾನೆ ನೆಗೆವಾ
ಮೊಗದೊಳು ಭೂಮಿಯ ಬಗೆವಾ ಉಗುರಿಂದುದರವ ಸೀಳ್ವ
ತ್ಯಾಗಿಯನ್ಯಾಚಿಸುವ ಭೃಗುವಿಗೆ ಮುದವ ತೋರ್ವ
ಸಾಗರಕೆ ಸೇತುಕಟ್ಟುವ ನೆನೆದಮೃತವ ಮೆಲುವ
ನಿಗಮ ಮೋಹಿಸಿ ತೋರ್ವ ಜಗದಿ ಕಲ್ಕಿ ಎಂದೆನಿಸಿ ಮೆರೆವ
ನಿನ್ನಯ ರೂಪ

ಪೊಗಲಳವೇ ಭೂಧವ
ನಿಗಮಕಾಗಿ ನೀ ತಮನ ಮರ್ದಿಸಿ
ನಗವ ಬೆನ್ನಲಿಪೊತ್ತು ಸುಧೆಯನು ಸಾಧಿಸಿ
ಹಗೆಯ ಹಿರಣ್ಯನ ಅಸುವನೆ ಹರಿಸಿ
ಮಗುವಿನ ಭಕ್ತಿಗೆ ವ್ಯಾಪ್ತಿಯ ತೋರಿಸಿ
ಬಾಗಿಲ ಕಾಯ್ದು ನೀ ಬಲಿಯ ರಕ್ಷಿಸಿ
ಆ ಗರ್ವಿಸಿದರಸರ ಪರಶುವಿಂದ ವಧಿಸಿ
ಯಾಗ ರಕ್ಷಣೆಗೆ ನೀ ರಕ್ಷಕನೆನಿಸಿ

ನೀಗಲು ಕುರುಕುಲಕಲಹ ವೆಬ್ಬಿಸಿ
ಆಗಮಶಾಸ್ತ್ರಕೆ ಮಾಯವ ಕಲ್ಪಿಸಿ
ಬೇಗ ಬಂದು ಹಯವೇರಿ ಮೆರೆವ–ಶ್ರೀವೇಂಕಟೇಶ ನಿನ್ನಯ ರೂಪ
ಬೇಗದಿ ತೋರೋ ಶ್ರೀಪಾದವಾ || ೩

ಬಂದು ನಿಲ್ಲೋ ಶ್ರೀಹರೇ – ಬಂದು ನಿಲ್ಲೋ || ಪ

ಇಂದು ಹಿಂದು ನೀನೆಂದಿಗು ತಂದೆ ಗೋ–
ವಿಂದ ಅನಿಮಿತ್ತಬಂಧು ಕಣ್ಣಮುಂದ || ಅ.ಪ.

ಸ್ವಾಂಶದಿಂದ ಅಭಿವ್ಯಕ್ತಿಯಾದೆ ಪಂ–
ಚಾಂಶ ತೋರಿ ಸರಸ ಜನನ ಮಾಡಿದೆ
ಸ್ವಾಂಶನಾಗಿ ಅವತರಿಸಿ ಮೆರೆವ ಸ–
ರ್ವಾಂಶದಿಂದಿಹ ತ್ರಿಂಶರೂಪನೇ || ೧

ಸ್ವಗತ ಭೇದವಿವರ್ಜಿತನೆನಿಸಿ
ತ್ರಿಗುಣಮಯದಿ ಬ್ರಹ್ಮಾಂಡ ನಿರ್ಮಿಸಿ
ಅಗಣಿತ ಮಹಿಮಾಧಾರನಾಗಿ ನಿಂದು
ಮಿಗೆ ಶೋಭಿಸುವ ವಿರಾಟಮೂರುತಿಯೆ || ೨

ಕಾರಣವೆನಿಸಿದ ಕರ್ಮನಿವೃತ್ತಿಗೆ
ಸಾರವಾದ ಜ್ಞಾನಯೋಗಮಾರ್ಗವ
ನಾರದಾದಿ ಮಹಾಮುನಿಗಳಿಗರುಹಿದ
ನರನಾರಾಯಣ ಬದರಿ ಆಶ್ರಯನೇ || ೩

ಹಂಸ ಕಪಿಲ ದತ್ತಾತ್ರೇಯ ರೂಪನೆ
ಹರಿ ಸರಹಸ್ಯಗಳೆಲ್ಲವ ಪೇಳಿ
ಸಂಶಯ ಬಿಡಿಸಿದೆ–ಜೀವಪರಮಾತ್ಮರ
ಅಂಶಗಳರುಹಿದ ಹಂಸಮೂರುತಿಯೆ || ೪

ಅಜಪಿತ ನೀ ಗಜರಾಜನ ಸಲಹಿದೆ
ಭಜಿಸಿದ ವಾಲಖಿಲ್ಯರ ಕಾಯ್ದೆ

ಅಜಹತ್ಯವು ವೃತ್ರವಧೆಯಿಂದ ಕಾಯ್ದು ಬಿ–
ಡೌಜನ ಸಲಹಿದ–ಗಜರಾಜವರದಾ ‖ ೫ ‖

ಪುರುಹೂತನ ಅಹಂಕಾರ ಖಂಡಿಸಿ
ಕಿರುಬೆರಳಲಿ ಗೋವರ್ಧನಗಿರಿ ಎತ್ತಿ
ಪರಿಪಾಲಿಸಿ ಗೋಬೃಂದವನೆಲ್ಲವ
ಸುರರಿಂದ ಪೊಗಳಿಸಿಕೊಂಡೆ ಗೋವಿಂದ ‖ ೬ ‖

ಬುಧರರಿಯಲು ಆವೇದವಿಭಾಗಿಸೆ
ಸದನುಲಮೂರುತಿ ಸತ್ಯವತಿಯೊಳು
ಉದಯಿಸಿ ಮುದದಿಂದ ಬದರಿಯು
ಸದನದಿ ಬೋಧಿಸುತ್ತಲಿಹ ಬಾದರಾಯಣನೇ ‖ ೭ ‖

ಅಖಿಳಾಂಡ ಕೋಟಿ ಬ್ರಹ್ಮಾಂಡನಾಯ
ವಿಕುಂಠಳೆಂಬೊ ಉದರದಿ ಜನಿಸಿ
ಲಕುಮಿರೂಪಿಯಾದ ಸುಂದರಿಯ ಕೂಡ ಭೂ–
ವೈಕುಂಠ ನಿರ್ಮಿಸಿದ ವೈಕುಂಠಮೂರುತಿಯೆ ‖ ೮ ‖

ಸತ್ಯವ್ರತನೆಂಬೊ ಮನುವಿನುದ್ಧರಿಸಿ
ಉತ್ತಮ ಔಷಧಿಗಳೆಲ್ಲವ ಸಲಹಿದೆ
ದೈತ್ಯನಾದ ಉನ್ಮತ್ತನ ಕೊಂದು
ಶ್ರುತಿಯ ತಂದಿತ್ತ ಮತ್ಸ್ಯಮೂರುತಿಯೆ ‖ ೯ ‖

ಸುರಭಿ ನೆವನದಿ ಶರಧಿಮಥಿಸೆ ತಾ
ಭರದಿ ಬೆನ್ನೊಳು ಧರಿಸಿದೆ ಮಂದರ
ಸುರರಿಗಭಯವ ಕರುಣಿಸು ಸಲಹಿದ
ಗಿರಿಧರನೆನಿಸಿದೆ ಕಮಠರೂಪನೆ ‖ ೧೦ ‖

ಪ್ರಳಯಜಲಧಿಯೊಳು ಇಳೆಯನು ಕದ್ದ
ಖಳ ಹಿರಣ್ಯನಾ ಶಿರವ ಚೆಂಡಾಡಿ
ಜಲಧಿಯ ಶೋಧಿಸಿ ಇಳೆಯನು ತಂದು
ಜಲಜಸಂಭವಗಿತ್ತ ಕ್ರೋಢರೂಪನೆ ‖ ೧೧ ‖

ದುರುಳತನದಿ ತನ್ನ ತರಳಕನ ಬಾಧಿಪ
ಹಿರಣ್ಯಕಶಿಪುವಿನ ಉದರವ ಬಗೆದು
ಶರಣನಿಗಭಯವ ಕರುಣಿಸಿ ತೋರಿದ
ಸರ್ವವ್ಯಾಪ್ತನೆಂದರುಹಿದ ನರಹರಿಯೆ || ೧೨

ಬಲಿಯಿಂದಪಹೃತವಾದ ಸಾಮ್ರಾಜ್ಯವ
ಸುಲಭದಿಂದಲಿ ಪುರಂದರಗಿತ್ತು
ಸಲಹಿದೆ ಒಲಿದು ಬಲಿಯ ಭಕ್ತಿಗೆ ನೀ ಬಾ-
ಗಿಲ ಕಾಯ್ದ ವಟುವಾಮನನೆ || ೧೩

ದುರುಳತನದಿ ಆ ಹೈಹಯರೆಂಬ
ನರಪರ ದುರ್ಮದ ಮರ್ದಿಸಲೋಸುಗ
ಪರಶು ಪಿಡಿದು ಕ್ರೂರ ನೃಪರ ಶಿರವನೆಲ್ಲ
ತರಿದು ನಿಗ್ರಹಿಸಿದ ಭಾರ್ಗವಮೂರ್ತೆ || ೧೪

ಶರಧಿ ಬಂಧಿಸಿ ಸೇತು ಕಟ್ಟಿ ಕಪಿ-
ವೀರರೊಡನೆ ಆ ರಾವಣನಡಗಿಸಿ ಭೂ
ಭಾರವನಿಳುಹಿ ಭೂಮಿಜೆಯನು ತಂದ ಅ-
ಸುರಮರ್ದನ ದಾಶರಥಿರಾಘವ || ೧೫

ವಸುಮತಿ ಭಾರವ ನಿಳುಹ ಲೋಸುಗ
ವಸುದೇವಸುತ ಶ್ರೀಕೃಷ್ಣನೆನುತಲಿ
ಶಿಶುಪಾಲಾದಿಗಳಂತಕನೆನಿಸಿದ
ಶಶಿಮುಖಿ ರುಕ್ಮಿಣಿಸಹಿತ ಶ್ರೀಕೃಷ್ಣ || ೧೬

ವೇದಕರ್ಮಗಳಿಗನರ್ಹರೆಲ್ಲರು
ಸಾದರದಿಂದಲಿ ಅಧಮರೆಸಗುತಿರೆ
ವೇದವಿರುದ್ಧ ವಾದಗಳಿಂದಲೇ
ಮೋಹವ ತೋರಿದೆ ಬುದ್ಧಸ್ವರೂಪನೆ || ೧೭ |

ದುರುಳತನದಿ ಇಳೆಯಾಣ್ಮರುಗಳು
ಕ್ರೂರತನದಿ ಪರಪೀಡಕರಾಗಿರೆ

ಪರಿಹರಿಸಲು ಭೂಭಾರಕ್ಕಾಗಿ ಅವ-
ತರಿಸಿ ಮೆರೆಯುವ ಕಲ್ಕಿರೂಪನೆ ॥ ೧೮ ॥

ಏಕರೂಪ ಅನೇಕರೂಪನೆ
ಏಕಮೇವ ನೀ ಪ್ರಕಟಮಾಡುವೆ
ಶ್ರೀಕಮಲಭವ ಪಿನಾಕಿಪ್ರಮುಖರು
ಏಕದೇಶದಿ ಸಾಕಲ್ಯವ ತಿಳಿಯರೊ ॥ ೧೯ ॥

ದೋಷದೂರ ಶೇಷಾಚಲವಾಸ
ಘೋಷಿಸೊ ನಿನ್ನಯ ದಾಸಜನರ ಸರ್ವ-
ದೋಷಕಳೆದು ಮನೋಕಾಶದಲಿ ನಿಲ್ಲೊ
ಶೇಷಗಿರೀಶ ಶ್ರೀ ವೇಂಕಟೇಶನೆ ॥ ೨೦ ॥

ಗ – ಅಠಾಣ ತಾಳ – ಆದಿತಾಳ

ಶರಣಾಗತರಕ್ಷಕ ಬೇಗದಿ ಬಂದು
ಮನಮಂದಿರದಿ ನಿಲ್ಲೋ ॥ ಪ ॥

ಈ ಕರೆಕರೆ ಸಂಸಾರ ಶರಧಿಯೊಳು ನಿಂದೆ
ಹರಿಯೆ ನಿಲ್ಲೊಂದರಘಳಿಗೆಯಾದರೂ ಮನದೀ ॥ ಅ ಪ. ॥

ತೋಯಜಾಂಬಕ ನಿನ್ನ ನಾನೆಂದಿಗೆ
ಕಾಯದೊಳು ಕಾಂಬೆನೊ
ಮಾಯಾರಮಣನೆ ನೀ ಮಾಯವ ಹರಿಸಯ್ಯ
ಆಯಾಸಗೊಳಿಸದೆ ಕಾಯುವುದೀಗಲೆ ॥ ೧ ॥

ನಾನಾಯೋನಿಗಳಲ್ಲಿ ನಾ ಬರಲಂಜೆನೋ
ಶ್ವಾನಸೂಕರಜನ್ಮದಿ ನೀನಿಟ್ಟಿರಾದರು
ಶ್ರೀನಿಧಿಯೆ ನಿನ್ನಯ ಸ್ಮ-
ರಣೆ ಒಂದಿದ್ದರೆ ನಾ ಧನ್ಯ ಧನ್ಯನೋ ॥ ೨ ॥

ಲೋಕಾಲೋಕೋದ್ಧಾರನೆ ನಿನ್ನಾಜ್ಞೆಯಿಂ
ಏಕಾದಶೇಂದ್ರಿಯಾದಿ ನಾಕೇಶಮೊದಲಾದ ಪಿ-

ನಾಕಿ ಪ್ರಮುಖರು ಅನೇಕ ಕಾರ್ಯವೆಸಗಿ
ಶೋಕ ಪಡಿಸುವರಯ್ಯ ||

ದುರ್ಗಾಶ್ರೀರಮಣ ಎನ್ನ ಸಂಸ್ಕೃತಿಯೆಲ್ಲ
ದುರ್ಗಮವಾಗಿಹುದೊ ಸ್ವರ್ಗ ಅಪ-
ವರ್ಗ ಪ್ರದನೆ ಎನ್ನಯ ಭವ-
ದುರ್ಗ ಕಡಿದು ಸನ್ಮಾರ್ಗ ಕರುಣಿಸೊ ||

ಸ್ವಾಮಿತೀರ್ಥದಿ ವಾಸ ಶ್ರೀಜಗದೀಶ
ಸ್ವಾಮಿ ಶ್ರೀವೇಂಕಟೇಶ ಪಾಮರನಾದೆನ್ನ
ತಾಮಸ ಹರಿಸಿ ಹೃತ್ಕಮಲದಲ್ಲಿ ನಿಲ್ಲೊ
ಕಮಲಾಪತಿಯೆ ದೇವ ||

ಮಂಪರೋದ್ಧರಾ–ಬಂದು ಕಣ್ಣಮುಂದೆ ನಿಲ್ಲೋ ||

ಬಡವರೊಡೆಯನೆಂದು ನಿನ್ನ
ಅಡಿಯಬಿಡದೆ ನಂಬಿದೆನೊ
ಕಡುದಯಾನಿಧೆ ಬಡಕುಚೇಲನ
ಪಿಡಿಯವಲಿಗೆ ಒಲಿದು ಪೊರೆದೆ |

ಸರ್ವಸಾರಭೋಕ್ತ ನೀನೆ
ತೋರ್ವದಿಲ್ಲ ಕೊಡಲು ನಿನಗೆ
ಸರ್ವದೇವ ಸಾರ್ವಭೌಮ ನೀ-
ನೋರ್ವ ಸರ್ವವ್ಯಾಪ್ತ ನಿರ್ಲಿಪ್ತ ||

ಪ್ರಣತಕಾಮದನೆಂದು ಅಂದು
ಅಣುಗ ಧ್ರುವನಾಕ್ಷಣದಿ ಪೊರೆದೆ
ಪ್ರಣತಾರ್ಥಿಹರನೆಂದು ನಂಬಿದೆ
ದಣಿಸಲಾಗದೋ ದೀನರಕ್ಷಕ ||

ಮುಕುತರೊಡೆಯ ಭಕುತವತ್ಸಲ
ಯುಕುತಿ ತೋರದೋ ನಿನ್ನ ಧ್ಯಾನಕೆ

ಶಕುತಿಯಿತ್ತು ಸಲಹೊ ಎನ್ನನು
ಸಕಲ ಲೋಕೋದ್ಧಾರ ಧೀರ ॥ ೪ ॥

ಎಲ್ಲ ಜನರ ಪೊರೆಯಲು ಶ್ರೀ-
ನಲ್ಲ ನಿಂತೆಯೊ ಶ್ರೀಶ ಶೈಲದಿ
ವಲ್ಲಭಾ ಶ್ರೀ ವೇಂಕಟೇಶ ನೀ-
ನೆಲ್ಲ ಬಲ್ಲೆನ್ನ ಸೊಲ್ಲ ಲಾಲಿಸೊ ॥ ೫ ॥

– ಬಿಲಹರಿ ತಾಳ – ಆದಿ

ಭಕುತವತ್ಸಲ ಶೀಲಾ – ಶೇಷಗಿರಿಯ ಲೋಲ ॥ ಪ ॥

ನೀರುಕಣಿಸೊ ಎನ್ನಾ – ಕುಲಸ್ವಾಮಿ ಘನ್ನಾ ॥ ಅ ಪ. ॥
ಮಂದಭಾಗ್ಯನು ನಾನು ವೃಂದಾರಕ ವಂದ್ಯ
ತಂದೆ ಎನಗೆಂದೆಂದು ಅನಿಮಿತ್ತ ಬಂಧೂ
ವಂದಿಪೆ ನಿನ್ನಯ ದ್ವಂದ್ವಪಾದದ ಧ್ಯಾನ ಅ-
ದೊಂದನಾದರು ಇತ್ತು ಬಂಧವ ಪರಿಹರಿಸೊ
ಹಿಂದೆ ನಿನ್ನಯ ನಾಮ ಹಿಂದೇ
ಬಂಧ ಹರಿಸಿತು ಭಕುತವೃಂದಕೆ
ಅಂದು ಅವಲೇನೆಂದು ಕರೆದರೋ
ಮಂದರೋದ್ಧರ ಬಂಧಮೋಚಕ ॥ ೧ ॥

ಪಾಲಿಸೋ ಗೋಪಾಲ ಸೌಶೀಲ್ಯಗುಣಮಾಲಾ (ಭರಿತ)
ಓಲೈಪರೋ ಮುಕ್ತಜಾಲ ನಿನ್ನ
ಕಾಲನಾಮಕ ಆಪತ್ಕಾಲ ಬಾಂಧವನೆಂದು
ಕಾಲಿಗೆರಗುವೆ ಕೃಪಾಳೊ ನೀನಲ್ಲವೆ
ಸೊಲ್ಲಲಾಲಿಸೊ ಲಕುಮಿನಲ್ಲ ನೀ
ನಲ್ಲದಲೆ ಇನ್ನಿಲ್ಲವೆಂದಿಗು
ಬಲ್ಲಿದರಿಗತಿ ಬಲ್ಲಿದನು ಅ-
ವಲ್ಲಿ ನೆನೆದರೆ ಅಲ್ಲೇ ಪೊರೆವೆ ॥ ೨ ॥

ಪುರಾಣಪುರುಷನೇ ಪರಮಕರುಣಿ ಎಂದು
ಪುರಾಣದೊಳು ನೀನೆ ಪ್ರತಿಪಾದ್ಯನೊ
ಕರಿ ಧ್ರುವ ಭೃಗು ಭೀಷ್ಮರ ಚರಿತೆಯು ನೋಡಲು
ಹರಿ ನಿನ್ನ ಸರಿಯುಂಟೆ ದುರಿತಾಪಹಾರದಿ
ಸ್ಮರಿಪರಘ ಪರಿಹರಿಪ ಶ್ರೀಪ
ಸುರಪ ಹರಮುಖ ವಿಬುಧವಂದ್ಯ
ದರ ಸುದರ್ಶನಧಾರಿ ಶ್ರೀವೇಂಕಟೇಶ
ಉರಗಾದ್ರಿವಾಸವಿಠ್ಠಲಾ ॥ ೩ ॥

**ರಾಗ – ಧನ್ಯಾಸಿ** **ತಾಳ – ಆದಿ**

ಮುನಿಯುವರೇ ಕೃಷ್ಣ ಮುನಿಯುವರೆ ॥ ಪ ॥

ಮುನಿಗಳೆಲ್ಲರು ನಿನ್ನ ಮನೆಯವರೇನೊ
ದಣಿಸಲಾಗದೊ ನಿನ್ನ ನೆನೆವಭಕುತರೊಳು ॥ ಅ.ಪ. ॥

ಮುನಿಗಳು ಮನದೊಳು ಕ್ಷಣಬಿಡದಲೆ ನಿನ್ನ
ದಣಿಸಿ ಕುಣಿಸುವರೊ ಮೌನದಿಂದಲಿ ನಾ
ಮಣಿದು ಬೇಡುವೆ ಬರಿದೆ ಹಣಿದು ಬಿಸುಡುವರೆ
ಕೆಣಕಿದವರ ನೀ ಕ್ಷಣದಿ ಕಾಪಾಡಿದೆ ॥ ೧ ॥

ಬಲಿಯು ಯಾಚಿಸಿ ಭಕ್ತಿಬಲಿಗೆ ನೀ ಸಿಲುಕಿದೆ
ಶಿಲೆಯುನೊತ್ತಿ ಸುಶೀಲೆಯ ಪೊರೆದೆ
ಜಲಧಿಶಯನಾ ನೀ ರಥಕೆ ಸಾರಥಿಯಾದೆ
ಛಲವೇತಕೆನ್ನೊಳು ನೀನೆಗತಿ ಎಂದರೆ ॥ ೨ ॥

ಎಂಜಲಾಸೆಗೆ ಸೋತು ಶಬರಿಯು ಪೊರೆದೆ
ಸಂಜೆಹಗಲೆನ್ನದೆ ಎಂಜಲ ಬಳಿದೆ
ಅಂಜದೆ ಅಜಾಮಿಳಗೊಲಿದೆಯೊ ದೇವ
ಅಂಜೆನೊ ಎಂದಿಗೂ ಕುಂಜರವರದಾ ॥ ೩ ॥

ಶಪಥಮಾಡಿ ನಿನ್ನ ಪಂಥವ ಕೆಡಿಸಲು
ಕುಪಿತನಾಗಲಿಲ್ಲ ಕುರುಪಿತಾಮಹನೊಳು
ಆಪ್ತ ಅನಿಮಿತ್ತ ಬಾಂಧವನೆಂದು ನಿನ್ನ
ಪ್ರಾಪ್ತಿಯ ಬೇಡಲು ಬಂದುದಕೆ ಈಗ ॥ ೪ ॥

ಶಂಕಿಸಿ ಈ ಪರಿ ಅಂಕಿತ ಪೇಳದೆ
ಬಿಂಕ ತನದಲಿ ಕಾಲವ ಕಳೆದೆ
ಶಂಕರನುತ ಶ್ರೀವೇಂಕಟೇಶ ನಿನ್ನ
ಕಿಂಕರನೆನಿಸೆನ್ನ ಸಂಕಟ ಹರಿಸೊ ॥ ೫ ॥

ರಾಗ – ಕಾನಡ

ಧನ್ಯನಾದೆನೊ ಇಂದು – ನಿನ್ನ ಪಾದ–
ಸನ್ನಿಧಿಯ ಘನ್ನದರುಶನದಿಂದಲಿ ॥ ಪ ॥

ಮುನ್ನ ದುರಿತಗಳೆಲ್ಲ ಛಿನ್ನಭಿನ್ನವು ಮಾಡಿ
ಬನ್ನಬಡಿಸದೆ ಎಮ್ಮ ಸಲಹುವ ಸ್ವಾಮಿ ॥ ಅ. ಪ. ॥

ಸುಮನಸಾರೊಡೆಯ ಕಾಲನಾಮಕನಾಗಿಪ್ಪ ಮೋದ–
ನಾಮವತ್ಸರದಿ ವಿಮಲ ಚೈತ್ರಕೃಷ್ಣಪಕ್ಷದಶಮಿ
ಸೌಮ್ಯವಾಸರದಿ ದ್ಯುಮಣಿ ಉದಯಕಾಲದಲಿ
ಮಮ ಕುಲಸ್ವಾಮಿಯೆ ಎನ್ನ ವಂಶಜಾಪ್ತರ
ಅಮಿತಶ್ರಮ ಪರಿಹರಿಸಿ ಈಗ
ಶ್ರೀಮನೋಹರ ನಿನ್ನ ವಿಶ್ವರೂಪವ ತೋರ್ದೆ
ಪ್ರೇಮ ಇಂದಿಗೆ ಆಯಿತೆ ಅಮಿತ ಜನಬಂಧು ॥ ೧ ॥

ನಿನ್ನ ದರುಶನವೆಂದಿಗಂದಿಗಾಗಲಿ ಎಂದು
ನಿನ್ನ ಧ್ಯಾನವನೆ ಮಾಡಲು ಸನ್ನುತಾಂಗನೆ ನೀನೆ
ಘನ್ನಕರುಣವು ಮಾಡಿ ಎನ್ನ ಯತ್ನವು ಇಲ್ಲದೆ
ನಿನ್ನ ದರುಶನಕ್ಕಾಗಿ ಅನ್ಯರಿಂದ ಪ್ರೇರಿಸಿ
ಎನ್ನಲ್ಲಿ ಮನವ ಪುಟ್ಟಿಸಿದೆ ಪನ್ನಗಾಚಲನಿಲಯ

ನಿನ್ನ ಮಹಿಮೆ ಎಂತುಂಟೋ ಎನ್ನನಿಲ್ಲಿಗೆ ತಂದು
ಘನ್ನ ದರುಶನವಿತ್ತೆ ॥ ೨ ॥

ಪಂಕಜೋದ್ಭವನಯ್ಯ ಮಂಕುಕವಿಸಿದೆ ಪಯಣ
ಶಂಕೆಯ ಪರಿಹರಿಸಿ ಸಂಕಟಹರಿಸಿ ನಿನ್ನ
ಕಿಂಕರರೊಳು ಸೇರಿಸಿ ಬಿಂಕದಲಿ ಗಿರಿಯನೇರಿಸಿ
ಪಂಕಜನಾಭ ಮುಕುಂದ ಗೋವಿಂದ
ಶಂಕರಾನುತ ಪೂಜಿತ
ಶಂಖತೂರ್ಯಾದಿ ವಾದ್ಯಗಳಿಂದಲಿ ಶ್ರೀ
ವೇಂಕಟೇಶ ನಿನ್ನ ನೋಡಿದೆ ಬಿಡದೇ ॥ ೩ ॥

ಕಂಡೆನಾ ಕಣ್ಣಪುರಲಿ ಕೃಷ್ಣನಾ ॥ ಪ ॥

ಕಂಡೆ ನಾನೀಗ ಬ್ರಹ್ಮಾಂಡದೊಡೆಯ ತಾ
ತಾಂಡವಾಡಿ ಭೂಖಂಡದಿ ಮೆರೆದನ ॥ ಅ.ಪ. ॥

ಜಯಮುನಿ ಹೃತ್ಕುಮುದಾಲಯದಿ ಸುಲೀ-
ಲೆಯಾಡುತಿಹ ವಾಯ್ವಂತರ್ಗತ ಕೃಷ್ಣ
ಜಯಜಯ ಜಯ ಶ್ರೀವಿಜಯಸಾರಥಿ ಭವ-
ಭಯಹಾರಿ ಭಕ್ತರಭಯ ಪ್ರದಾಯಕ
ದಯವನಧಿಯೆ ಮನದಾಮಯ ಕಳೆದು ನಿ-
ರ್ಭಯದೊಳು ಕಾಯುವ ಜಗದೊಡೆಯ
ಧೇಯವು ನಿನಗಿದು ಸದ್ಭಕುತರಾಶ್ರಯ
ತಟಿತಕೋಟಿ ನಿಭಕಾಯ ಶ್ರೀಭೂಕಾಂತ
ದೈತ್ಯಕೃತಾಂತ ಜಗದಾದ್ಯಂತ
ನಿಂತು ಜೀವರಾದ್ಯಂತ ಕೃತ್ಯಗಳ್
ಸಂತತ ನಡೆಸುವ ಕಂತುಪಿತನ ನಾ ॥ ೧ ॥

ಶ್ರೀಕಳತ್ರ ಪರಲೋಕೈಕನಾಥ ಜಗ-
ದೀಶ ವಂದ್ಯನೆ ನರಲೋಕದ ಕ್ರೀಡೆಯೊಳ್
ಭೀಕರಿಲ್ಲದೆ ಬಕ ಶಕಟಾ ಕಂಸಾದಿಗಳ
ಏಕ ಘಳಿಗೆಯೊಳು ನೀಕೊಂದು ನಲಿದು ನಿಂದೆ

ಪಾಕಶಾಸನ ದಿವಾಕರವಂದ್ಯ
ಪ್ರಕಟನಹುದೊ ನಿಷ್ಕುಟೀ
ದಿಟ್ಟತನದಿ ಹೃತ್ತಟದಲಿ
ತಕಿಟತದಂದದಲಿ ಒಳಗೇ ಭ
ಕಂಟಕದೆಡರಾಕಟಕ ಪರಿಹ
ದಿಟ್ಟ ಕರುಣಕಟಾಕ್ಷದಿಂದ
ದಿಟ್ಟು ನಟಿಸುವಾ ಸೃಷ್ಟಿಕ

ರಂಗಾ ನಿನ್ನವರುಗಳಿಂಗಿತ
ತಂಗವರದ ನಿನ್ನಾಂಗೆ ನಡೆ
ಪಾಂಗ ಮಂಗಳಾಂಗ ತುಂ
ಪ್ರಾಂಗ ಏಕೋನವಿಂಶತಿ
ಕಂಗಳಲಿದ್ದು ಜಗಂಗಳ ಕಾ
ಹಿಂಗಿಸಿ ಅಂಗದ ಕಾರ್ಯ
ಕಂಗಳಿಗಿತ್ತು ಎಂದಿಗು ಕೊ
ಮಂಗಳ ಪ್ರಾಜ್ಞ ಭೋಗ
ರಂಗನಾಥ ಹೃದ್ರಂಗದಿ ನ
ರಾಂಗೆ ನಿಂದಿಹ ಈ ಶ್ರೀ ವ

## ೯ — ಸಾವೇರಿ

೩೪೪ – ೦೮

ಕಂಡೆ ನಾ ಬ್ರಹ್ಮಾಂಡದೊಡೆಯ ಶ್ರೀವೇಂಕಟೇಶನ ‖ ಪ ‖

ಕಂಡೆ ನಾ ಭಕುತರ ಹಿಂಡುಗಳು ನೆರೆ
ಕೊಂಡಾಡುತಲಿದೆ ಪದಪುಂಡರೀಕವನಾ ‖ ಅ. ಪ. ‖

ತುಂಗಮಹಿಮ ಸತ್ಸಂಗವಿತ್ತು ಮನದಂತರವರಿ–
ಆಂಗೀರಸದೀ ಮಂಗಳ ಪೌರ್ಣಿಮೆ ಭಾರ್ಗವಾಸರದಿ
ಭಾರ್ಗವಿಪತಿ ನಿನ್ನನುಗ್ರಹದಿ ನಗದೊಡೆಯ ಭಕ್ತ–
ರಘುಹರಿಸುತ ಪನ್ನಗಗಿರಿಯೊಡೆಯ ನಿನ್ನಯ ಗುಡಿಯನ್ನು
ಬಗೆಬಗೆ ಸುತ್ತಿಪರ ಹಿಂಡನ್ನು ನಾ ಕಂಡೆನೋ

ಜಾಗುಮಾಡದೆ ಬಾಯಿಬೀಗವ ಕೈಕೊಂಡು
ಸಾಗಿ ಕಾಸಾರದಿ ಸ್ನಾನ ಮಾಡಿಕೊಂಡು
ಬಾಗಿ ವರಹಾದೇವರ ಮಂದಿಸಿ
ಬೇಗದಿ ಹರಕೆ ಕೈಕೊಂಡಿಹ ದೇವನ || ೧ ||

ಮುಕ್ತರೊಡೆಯ ಪುರುಷೋತ್ತಮ ನಿನ್ನಯ
ಭಕ್ತರ ವಿಪತ್ತುಗಳೆಲ್ಲ ಹರಿಸಿ ಶಕ್ತ್ಯನುಸಾರ ತ್ವ-
ದ್ಭಕ್ತರೆಸಗುವ ಅತ್ಯಲ್ಪಭಕ್ತಿಯ ಸ್ವೀಕರಿಸಿ
ಭಕ್ತಿಯಿಂದ ಪ್ರಾಕಾರದಿ ಸುತಲು ಹೊತ್ತಗಂಡದೀಪ ಸಾರುತಲೀ
ನಿತ್ಯನೂತನ ನಿನ್ನ ಸ್ತುತಿಸುತಲೀ ಮತ್ತೆ ಉರುಳುತಲೀ
ಉತ್ತಮಗತಿಪ್ರದ ವ್ಯಕ್ತನಹುದೊ ತ್ವ-
ದ್ಭಕ್ತರ ಮನೋರಥ ಪೂರ್ತಿಮಾಡುವ
ಭಕ್ತವತ್ಸಲನೆಂಬ ಬಿರುದು ಪೊತ್ತ ಸ-
ರ್ವೋತ್ತಮ ಶ್ರೀಪುರುಷೋತ್ತಮ ನಿನ್ನನು || ೨ ||

ಬೊಮ್ಮ ಜನಕ ಪರಬೊಮ್ಮನೆ ನಿನ್ನಯ
ಸನ್ಮಹಿಮೆಯ ನಾ ಒಮ್ಮನದೀ
ಒಮ್ಮೆಯಾದರು ಮನ್ಮನದಲಿ ನಿನ್ನಯ
ಸನ್ಮಂಗಳರೂಪವ ನಿಲ್ಲಿಸದೆ ಸುಮ್ಮನೆ ಕುಳಿತು
ಇಮ್ಮನನಾಗಿರೆ ಘಮ್ಮನೆ ಎನ್ನನು ಒಳಕ್ವೈದೆ
ಕಣ್ಮನದೆದುರಲಿ ನೀನಿಂದೆ ನೀನೆನ್ನಯತಂದೆ ಸನ್ಮುದದಿಂದೆ
ಪಾಮರನೆಂದೆನ್ನ ಪ್ರೇಮದಿ ಕರುಣಿಸಿ
ಸನ್ಮಹಿಮೆಯ ತೋರ್ದೆ ಜಗದೀಶ
ಕಾಮಿತಜನರ ಕಲ್ಪದ್ರುಮ ನೀನೆಲೊ
ಈ ಮೇಲುಗಿರೀಶ ಶ್ರೀವೇಂಕಟೇಶಾ ನಿನ್ನ || ೩ ||

ರಾಗ – ಪೂರ್ವೀ ತಾಳ – ಆದಿ

ವೆಂಕಟಾಚಲ ನಿವಾಸಾ-ಜಗದೀಶ
ಸಂಕಟಾ ಹರಿಸೊ ಶ್ರೀಶಾ || ಪ ||

ಪಂಕಜಾಸನ ಪ್ರಮುಖ ಶಶಾಂಕಸುರವರ ಪೂಜಿತ
ಅಕಳಂಕ ಮಹಿಮ ಖಗಾಂಕ ಚಕ್ರಗದಾ
ಶಂಖ ಶ್ರೀಕರ ಕಂಜಧರ ಪಾಣೀ ‖ ಅ.ಪ ‖

ಲೋಕನಾಥ ಲೋಕಬಂಧು-ದಯಾಸಿಂಧು
ಭಕುತರನಿಮಿತ್ತ ಬಂಧು-ಎಂದೆಂದೂ
ಭಕುತರ ಬೆಂಬಲನು ಎಂದೂ-ಇಂತೆಂದೂ
ಪಾಕಶಾಸನ ಪೂಜ್ಯ ಪಿನಾಕಿಪಿತ ಸುರಜ್ಯೇಷ್ಠ ವಂದ್ಯ
ಏಕಮೇವ ನೀ ಕೈಬಿಡದೆ ಕರ್ಮ-
ಪಾಕಮಾಡಿಸೋ-ಕಾಲನಾಮಕ ‖ ೧ ‖

ಬಂಧಕಗಳಕಂಡೊಪ್ಪೀ-ಭಕುತರ ಮನ
ಒದೊಂದುಪರಿ ದೃಢಮಾಡಿ-ಪರಿಯು ನೋಡಿ
ಬಂದ ಬಂಧವ ಹರಿಸಿ-ಹೃದ್ವಾಸೀ
ಹಿಂದುಮುಂದೂ ಕಾಣದ ಮಹ-
ಅಂಧಕಾರಣ್ಯದಲಿ ಸಲಹಿದೆ
ಬಂಧಮೋಚಕನಹುದೋ ಅನಾಥ-
ಬಂಧು ನೀನೆಂದು ನಂಬಿದೇ ‖ ೨ ‖

ಕರುಣಾಸಾಗರನೇ ನಿನ್ನ-ನಾನಂಬಿದೆ
ಸ್ಮರಣೆಯೊಂದನೆ ಪಾಲಿಸೋ ಈ ಜನುಮದೀ
ಪರಮಸಾಧನ ಕಾಣದೇ-ಪರಿತಪಿಸುವೇ
ನಿರುತ ಭವ ಸಂಕೋಲೆಯಾ ಕಡಿದು
ಪೊರೆಯುವುದೋ ಶ್ರೀವೇಂಕಟೇಶನೆ
ಸ್ಮರಿಪರಘ ಸಂಹರಿಪ ಶ್ರೀ-
ಉರಗಾದ್ರಿವಾಸವಿಠ್ಠಲ ಪ್ರಭೋ ‖ ೩ ‖

ಗ – ತೋಡಿ ತಾಳ – ಆದಿ

ಶ್ರೀನಿವಾಸ-ಶ್ರೀನಿವಾಸ-ದೀನರಕ್ಷಕ
ದಾನಿ ನೀನೆಂದು ನಂಬಿದೆ ‖ ಪ ‖

ಜ್ಞಾನಗಮ್ಯನೆ ವಾಙ್ಮನೋಮಯ
ಮಾನಿಮಾನಸ ರಾಜಹಂಸ ॥ ಅ.ಪ ॥

ಲೋಕಧರಿತ ಶ್ರೀಕಳತ್ರ-ತ್ರಿಕಕುದ್ಧಾಮದಧಿನಾಥ
ಶ್ರೀಕಮಲಭವಾದಿ ವಂದಿತ
ಮುಕುತಾಮುಕುತ ಜನ ಸಂಸೇವಿತ
ಅಖಿಳಾಗಮಕೆ ಅತೀತ-ಶ್ರೀಕರಪಲ್ಲವ ಪೂಜಿತ
ಅಖಿಳಾಜಾಂಡದಿವ್ಯಾಪ್ತ-ಭಕುತರ ಗತಿಯು ಪ್ರದಾತ ॥ ೧ ॥

ನಿಗಮವಿತ್ತ-ನಗವಪೊತ್ತ-ಬಗೆದು ಬೇರ ನರ-
ಮೃಗಾಂಗನೇ-ತ್ಯಾಗಿಯೊಳು ಪೋಗಿ-ನೃಪರ
ನೀಗಿಸಿ-ವನವನವಾ ಚರಿಸಿದೆ
ಬಗೆಬಗೆ ಆಟದಿ ಬಾಲ್ಯದಿ ಹಗೆಗಳ ಮಡುಹಿದೆ ಕಾರ್ಯದಿ
ಆಗಮಕರ್ಥ ಮೋಹಿಸಿ-ಜಗದೊಳು ತುರಗವನೇರ್ದೆ ॥ ೨ ॥

ಅಂತರಾತ್ಮ ಪರಮಾತ್ಮ ಅನಂತಾನಂತರೂಪಾತ್ಮ
ಪ್ರಾಂತಗಾಣದೆ ನಿರಂತರದಿ ನಿಂತು
ಸಿರಿ ನಿತ್ಯ ಮುಕ್ತಳಾದಳೋ
ಕಂತುಪಿತ ಎನ್ನಂತರದಿ ನಿಂತಿಹೆ ನಿರಂತರದಿ
ಕಾಂತ ಶ್ರೀ ವೇಂಕಟೇಶನೆ-ಅಂತರ್ಬಹಿರದಿ ನಿಂತಿಹ ಪ್ರಭೋ ॥ ೩ ॥

ಅಪ್ರಮೇಯ ಸ್ವಪ್ರಕಾಶ-ಅಪ್ರಾಕೃತಗುಣಗಣಾರ್ಣವ
ಸ್ವಪ್ರಯೋಜನರಹಿತ ಸತತ-
ತ್ವತ್ಪ್ರಸಾದದಿಂದ ಜಗವು
ಕ್ಷಿಪ್ರದಿ ನೃಪಸಂಸ್ತುತಿಸೆ ವಿಪ್ರ ನಮನ ಸಂತೈಸಿದೆ
ಅಪ್ರತಿಹತ ಮಹಿಮನು ಸುಪ್ರೀತನು ಜನರ್ಗೆ ॥ ೪ ॥

ಪರಮಪುರುಷ-ಪೂರ್ಣಾನಂದ ಪರಮಕರುಣಾಶರಧಿಯೆ
ಉರಗಾದ್ರಿವಾಸವಿಠ್ಠಲ ಕರಾವಲಂಬನವಿತ್ತು ಸಲಹೆಲೋ
ಪರಿಪರಿ ಎನ್ನಪರಾಧನೋಳ್ವರಿ ಭೋ ಜನದೊಡೆಯ
ಕರುಣವು ತೋರದೆ ನೀನಿರೆ ನರಪಶು ನಾನೆಂತು ಬಾಳ್ವೆನೊ ॥ ೫

ರಾಗ – ಮುಖಾರಿ ತಾಳ – ಆದಿ

ಭಕುತಿಯಾ ಬೇಡುವೆ । ॥ ಪ ॥

ಮುಕುತರೊಡೆಯ ನಿನ್ನ ಪದಪಂಕಜದೊಳು ॥ ಅ.ಪ. ॥

ಬಾರಿಬಾರಿಗೆ ನಿನ್ನ ನಾಮವ ನಾ
ಸ್ಮರಿಸಲು ದಾರಿಯ ಕಾಣೆನೊ
ಮಾರಮಣನೆ ದಯ ತೋರದಿರಲು ಇ-
ನ್ನ್ಯಾರಿಗೆ ಮೊರೆಯಿಡಲಯ್ಯ ಶ್ರೀಹರೇ ॥ ೧ ॥

ಘನ್ನ ದುರಿತಗಳಿಂದ ಹಿಂದೆ ನಾ
ಬನ್ನಬಟ್ಟು ಬಹು ಖಿನ್ನನಾಗಿಹೆ
ಸನ್ನುತಾಂಗ ಶ್ರೀನಲ್ಲನೆ ನೀ
ಇನ್ನು ಮನ್ನಿಸದಿರೆ ಇನ್ನ್ಯಾರಿಗೆ ಪೇಳಲೊ ॥ ೨ ॥

ಪಂಕುಮತಿಯಾಗಿದ್ದರೆನ್ನ ಹೃ-
ತ್ಪಂಕಜದೊಳಗೆ ಅಕಳಂಕನಾಗಿಹೆ
ಶಂಕೆ ಏಕೋ ನಿನ್ನ ಕಿಂಕರನಲ್ಲವೇ
ಸಂಕಟಹರಿಸೋ ಶ್ರೀವೇಂಕಟೇಶನೆ ॥ ೩ ॥

ರಾಗ – ಶಂಕರಾಭರಣ ತಾಳ – ಆದಿ

ಜಯ ಜಯಾ ಶ್ರೀ ವೇಂಕಟೇಶ ಜೀಯ ॥ ಪ ॥

ಜಯ ಶ್ರೀವೇಂಕಟೇಶ ಜೀಯ–ನೀನ–
ಭಯಪ್ರದಾಯಕನಯ್ಯ– ॥ಆಹಾ॥
ಭಯಕೃದ್ಭಯನಾಶನ ನೀ ಎನ್ನ ಕೈ ಬಿಡದೆ
ಕಾಯೊ ಎನ್ನೊಡೆಯನೆ ವೇಂಕಟರಾಯ ॥ ಅ.ಪ. ॥

ಮಂಕುಮಾನವನಾದ ಎನ್ನ ಮನದ
ಡೊಂಕುತಿದ್ದಿದಿ ಸ್ವಪನವನ್ನ–ನಿನ್ನ

ಅಂಕಿತದಂತೆ ನುಡಿಸೆನ್ನ–ಇನ್ನು
ಮಂಕು ಹರಿಸಿದೆ ಪ್ರಸನ್ನ–॥ಆಹಾ॥
ಬಿಂಕದಿಂದ ಇಹ ಶಂಕೆ ಹರಿಸಿ ನಿನ್ನ
ಕಿಂಕರ ಕಿಂಕರ ಕಿಂಕರನೆನಿಸಿದೆ ॥ ೧ ॥

ಹಿಂದನೇಕ ಪರಿಯಿಂದ ಮನ–
ಬಂದಂತೆ ನುಡಿಸಿದ್ದರಿಂದ–ತಂದೆ
ಮುದ್ದುಮೋಹನ ವಿಠ್ಠಲಾನಂದ–ಪೊಂದಿ
ಸಂದೇಹ ಹರಿಸಿದ ಚಂದ–॥ಆಹಾ॥
ಇಂದು ಮುಂದು ಎಂದೆಂದಿಗೂ ನೀ ಭವ
ಬಂಧ ಹರಿಸಿ ಕಾಯಬೇಕು ಇಂದಿರೆರಮಣ ॥ ೨ ॥

ತ್ವರಿತಾದಿ ದಯಮಾಡೊ ಹರಿಯೇ–ನೀನೆ
ನಿರುತ ಎನ್ನಯ ಕುಲದ ದೊರೆಯೇ–ಭಕ್ತ
ಪರಿಪಾಲ ಮೋಕ್ಷದ ಹರಿಯೇ–ನಿನ್ನ
ಹೊರತು ರಕ್ಷಕರ ನಾನರಿಯೆ–॥ಆಹಾ॥
ಪರಮಕರುಣಿ ಶ್ರೀ ವೇಂಕಟೇಶಾಭಿನ್ನ
ಉರಗಾದ್ರಿವಾಸವಿಠ್ಠಲ ಜಗದೀಶನೆ ॥ ೩ ॥

**ರಾಗ – ಸಾದಸಾವಃಕ್ರಿಯೆ** **ತಾಳ – ಆದಿ**

**ಕೇಶವನಾಮ**

ನಾರಾಯಣ ಪರಿಪಾಹಿ – ನರಹರಿಯೆ ॥ ಪ ॥

ನಿನ್ನೊಳು ನಿರುತ ನಾನಪರಾಧಿ ನಾರಾಯಣ ॥ ಅ.ಪ. ॥

ಹೇಸಿಕೆಯಿಂದ ಮನ ಕಾಸುವೀಸಕೆ ಸೋತು
ಮೋಸ ಹೋದೆ ನಿನ್ನ ನೆನೆಯದೆ ಕೇಶವ ॥ ೧ ॥

ನಿರುತ ನಿನ್ನಯ ನಾಮಸ್ಮರಣೆಯ ಬಿಟ್ಟು
ಘೋರನರಕಕ್ಕೆ ಗುರಿಯಾದೆ ಪೊರೆಯೊ ನಾರಾಯಣ ॥ ೨ ॥

ಮುದದಿಂದ ನಾ ಹದಿಬದೆಯರ ಮುಖ ನೋಡಿ
ಮದದಿಂದ ನಿನ್ನನು ಮರೆದೆನೊ ಮಾಧವಾ || ೩ ||

ಸವನತ್ರಯದಿ ಅವ್ಯವಹಿತ ಕಾರ್ಯವ
ಲವಲೇಶ ಬಿಡದೆ ನಾನೆಸಗಿದೆನೋ ಗೋವಿಂದ || ೪ ||

ಕ್ಷಣಬಿಡದಲೆ ದುಷ್ಕರ್ಮದಿಂದಲಿ ದಣಿದು
ತೃಣಕೆಣೆಯಾಗಿ ನಿರ್ವಿಣ್ಣನಾದೆ ಹೇ ವಿಷ್ಣು || ೫ ||

ಹೃದಯದೊಳಿಲ್ಲದ ಮಧುರ ನುಡಿಗಳ
ಮುದದಿ ನುಡಿದೆನೋ ಮಧುಸೂದನನೇ || ೬ ||

ಅವನಿಯೊಳಗೆ ಎನಗೆಣೆಯಿಲ್ಲವೆನುತ
ಅವಗುಣಪ್ರತಿಮೆ ನಾನಾದೆ ತ್ರಿವಿಕ್ರಮ || ೭ ||

ಸುಮನಸರುಗಳ ನಾ ಅನುದಿನ ನಿಂದಿಸಿ
ಯಮನ ಮಂದಿರದಿ ನಾನಿಂದೆನೊ ವಾಮನಾ || ೮ ||

ಬುಧನೆಂದು ಮರೆದು ನಾ ಅಧಮರ ಸೇವಿಸಿ
ಅಂಧಂತಮಕೆ ಗುರಿಯಾದೆನೋ ಶ್ರೀಧರ || ೯ ||

ವಿಷಯವೆ ಜೀವನದ ಕೃಷಿಯಾಯಿತೆನಗೆ
ತೃಷೆಯು ಮೀರದೆ ನಿನ್ನ ಮರೆದೆನೊ ಹೃಷೀಕೇಶನೆ || ೧೦ ||

ಉದುಭವಿಸಿದೆ ಈ ವಸುಧೆ ಭಾರಕ್ಕಾಗಿ
ಬಾಧಕನಾದೆನೊ ಪದುಮನಾಭನೆ || ೧೧ ||

ತಾಮಸಕೃತ್ಯದಿಂದುದರ ಪೋಷಣೆಗಾಗಿ
ಪ್ರೇಮದಿ ತಿರುಗಿದೆ ದಾಮೋದರ ದೇವ || ೧೨ ||

ಶಂಕೆಯಿಲ್ಲದ ದುರುಳ ಕಿಂಕರ ಸೇವೆಯಿಂದ
ಸಂಕಟ ಪಟ್ಟೆನೊ ಸಂಕರುಷಣ ದೇವ || ೧೩ ||

ಕಾಶಿನಾಶೆಗೆ ನಾ ಹೇಸಿಕಿಲ್ಲದೆ ಮನ
ಹೇಸದೆ ಯಾಚಿಸಿದೆ ವಾಸುದೇವನೇ || ೧೪ ||

ಸದ್ಯ ಫಲವೆ ಮುಖ್ಯವು ಉದ್ಯೋಗವೆಂದು ಉಬ್ಬಿ
ಹಿದ್ಯಾಡುತಿಹೆ ಪ್ರದ್ಯುಮ್ನ ದೇವನೆ ॥ ೧೫ ॥

ಅನುಜ ತನುಜರು ಸತಿ ಅನುಗಾಲ ಬಂಧು ಎಂದು
ಅನವರತ ನಂಬಿದೆನು ಅನಿರುದ್ಧ ದೇವನೆ ॥ ೧೬ ॥

ಪರಿ ಪರಿ ಕ್ರೀಡೆಯಿಂ ಪರಪೀಡಕನಾಗಿ
ಪರರನು ಸ್ತುತಿಸಿ ಬೆಳೆದೆ ಪುರುಷೋತ್ತಮ ॥ ೧೭ ॥

ಸಾಧುಸಜ್ಜನರೊಳು ಭೇದ ವಂಚನೆ ಮಾಡಿ
ಖೇದಕ್ಕೆ ಹೊಳಗಾದೆ ಅಧೋಕ್ಷಜಮೂರ್ತೇ ॥ ೧೮ ॥

ಬಾರಿ ಬಾರಿಗೆ ಪರಾನ್ನವನುಂಡು ಘೋರ
ದುರಿತಕ್ಕೆ ಗುರಿಯಾದೆ ಶ್ರೀನರಸಿಂಹನೇ ॥ ೧೯ ॥

ಕೆಚ್ಚೆದೆಯಿಂದ ನಾನು ಸ್ವೇಚ್ಛೆಯಿಂದಲಿ ಚರಿಸಿ
ಹುಚ್ಚು ಹಿಡಿದಂತಾದೆ ಅಚ್ಯುತಮೂರ್ತೇ ॥ ೨೦ ॥

ಮಾನಿಗಳಿಗೆ ಅವಮಾನಮಾಡಿ ನಾ
ಜ್ಞಾನಿ ಎಂದೆನಿಸಿದೇ ಜನಾರ್ದನನೇ ಕಾಯೊ ॥ ೨೧ ॥

ಕೋಪ ಪಾಪಗಳಿಂ ಪಾಪಕೃತ್ಯವನೆಸಗಿ
ತಾಪ ಪಡುತಲಿಪ್ಪೆನಯ್ಯ ಉಪೇಂದ್ರನೆ ॥ ೨೨ ॥

ಕರಚರಣಗಳಿಂದ ಕಳ್ಳನಾಗಿಹೆನು ತೋರಿದೆನೊ
ಹರಿ ಗುರು ಯಾತ್ರೆಯ ಶ್ರೀಹರೇ ॥ ೨೩ ॥

ಶಿಷ್ಟರನೆಲ್ಲ ನಿಕೃಷ್ಟತನದಿ ನೋಡಿ
ಭ್ರಷ್ಟನಾಗೀಜಗದಿ ಮರೆದೆ ಶ್ರೀಕೃಷ್ಣನೇ ॥ ೨೪ ॥

ಸಂಕಟ ಪಡುತಿಹ ಕಿಂಕರನೊಳಿಹ
ಮಂಕು ಹರಿಸಿ ಕಾಯೋ ಶ್ರೀವೇಂಕಟೇಶನೇ ॥ ೨೫ ॥

ಸಲಹೊ ನಿನ್ನ ನವನೀತ ನೆಂದೆಲ್ಲ-
ಕಾಲ ಹೃತ್ಕಮಲದಲ್ಲಿ ನಿಲ್ಲೋ ॥ ಪ ॥

ಸೊಲ್ಲು ಸೊಲ್ಲಿಗೆ ಶ್ರೀ ವೇಣುಗೋಪಾಲನೆಂದೆಲ್ಲ
ಕಾಲದಿ ನುಡಿಸೊ ನಲಿಸೊ ॥ ಅ. ಪ. ॥

ಕರಣತ್ರಯಗಳಿಂದ ಮಾಡಿದ ಕಾರ್ಯವು
ಕರುಣಾಕರನೆ ನಿನ್ನದೊ ಕರಣನಿಯಾಮಕ ನೀನಲ್ಲದಿಲ್ಲವೊ
ಕರುಣಿಸೊ ಸತತ ಶ್ರೀಹರಿ ಗುರು ಭಕುತಿಯ ॥ ೧ ॥

ಪಂಚಭೇದ ತಾರತಮ್ಯ ತಿಳಿದು ಜ್ಞಾನ
ಪಂಚಕಗಳಿಂದಲಿ ಪಂಚಾತ್ಮಕ ವಿ-
ರಿಂಚಿ ಪವನರೊಳು ನಿರ್ವಂಚನೆ ಭಕುತಿಯಾ
ಕಿಂಚಿತ್ತಾದರು ಕೆಡದೆ ॥ ೨ ॥

ಮಾಕಳತ್ರನೆ ನಿನ್ನ ಅ-
ನೇಕ ಮಹಿಮನೆಂದು ಏಕಮನಸಿನಿಂದ ಅ-
ನೇಕ ಕಾಲವು ಪಾಡಿ ದಾಸನೆಂದೆನಿಸಿ
ಸ್ವೀಕರಿಸುವುದು ಈಗ ಶ್ರೀ ವೇಂಕಟೇಶನೆ ॥ ೩ ॥

ಾಗ – ಮೋಹನ ತಾಳ – ಆದಿ

ಪಾಲಿಸೋ ಪರಿಪಾಲಿಸೋ ॥ ಪ ॥

ಪಾಲಿಸೊ ನೀ ಕಾಲನಾಮಕ–ಶ್ರೀಲೋಲ
ಕಾಲಕರ್ಮದಲೆನ್ನ ಕರುಣಿಸಿ ನೀನೀಗ ॥ ಅ.ಪ ॥

ದುಷ್ಟಜನರ ಸಂಹಾರಕ–ಸರ್ವ
ಶಿಷ್ಟಜನರ ಪರಿಪಾಲಕ–ದೇವ
ಸೃಷ್ಟ್ಯಾದ್ಯಷ್ಟಕರ್ತೃಕ–ತ್ವದ್ಭಕ್ತರಾ-
ಭೀಷ್ಟದಾಯಕಾ ॥ ೧ ॥

ಜಗದ್ಭರಿತ ಜಗದಂತರ್ಯಾಮಿ-ಸರ್ವ
ಜಗದಾದ್ಯಂತಭಿನ್ನ ನೀನೆ-ನೀನೆ
ಸ್ವಗತಭೇದಶೂನ್ಯಮಹಿಮಾ ಇನ್ನು
ಜಗದ್ಭೃಕು ಮಮ ಕುಲಸ್ವಾಮಿ ॥ ೨

ಪರಮೇಷ್ಟಿ ಭವ ಇಂದ್ರ ವಂದಿತ-ಕ್ಷರಾ-
ಕ್ಷರ ಪುರುಷಪೂಜಿತ-ಪಾದ
ನಿರವಧಿಕ ಗುಣಗಣಾನ್ವಿತ ನೀನೆ
ಜರಾಮರಣನಾಶ ವರ್ಜಿತ ॥ ೩

ಮುಕ್ತಾಮುಕ್ತಾಶ್ರಯ ದೇವನೆ-ಸರ್ವ
ಭಕ್ತಿಮುಕ್ತಿಪ್ರದಾತನೆ-ವ್ಯಕ್ತಾ
ವ್ಯಕ್ತ ಪುರುಷ ದೇವನೆ ಪುರುಷ-
ಸೂಕ್ತ ಸುಮೇಯ ಅಪ್ರಮೇಯನೆ ॥ ೪

ಸ್ವರವರ್ಣ ಶಬ್ದವಾಚ್ಯನೆ-ದೇವ
ಸುರಾಸುರಾರ್ಚಿತ ಪಾದನೆ ಓಂ-
ಕಾರಪ್ರಣವ ಪ್ರತಿಪಾದ್ಯನೆ ನಿತ್ಯ
ನಿಖಿಳಾಗಮದೊಳು ಸಂಚಾರನೆ ॥ ೫

ಅಚಿಂತ್ಯಾನಂತ ರೂಪಾತ್ಮಕ-ನಿನ್ನ
ಭಜಕರ ಭವಬಂಧಮೋಚಕ-ಸರ್ವ
ಅಬುಜಾಂಡಕೋಟಿನಾಯಕ ನೀನೆ
ಜಗದಾದ್ಯಂತ ವ್ಯಾಪಕ ॥ ೬

ವೇದವೇದಾಂತವೇದ್ಯನೆ-ನೀನೆ
ಆದಿ ಮಧ್ಯಾಂತದೊಳ್ ಖ್ಯಾತನೆ ಗುರು
ಮೋದತೀರ್ಥರ ಹೃತ್ಕಾಂತನೆ
ಶ್ರೀ ವೇಂಕಟೇಶ ಉರಗಾದ್ರಿವಾಸ ವಿಠ್ಠಲನೆ ॥ ೭

ನಾರಸಿಂಹ ಶ್ರೀ ನಾರಸಿಂಹಾ
ಪಾರುಗಾಣಿಸಿ ದುರಿತಾಘ ಹರಿಸಿ ಕಾಯೊ ॥ ಪ ॥

ನರಹರಿ ಜ್ವರಹರ ಘೋರವ್ಯಾಧಿಯ
ಪರಿಹಾರಗೈಸಿ ಪರಿಪಾಲಿಸಬೇಕಯ್ಯ ॥ ಅ.ಪ. ॥

ಘುಡಿಘುಡಿಸುತ ಪಲ್ಕಡಿದು ಚೆಂಡಾಡುತ
ಮೃಡನೆ ಪರನು ಎಂದು ನುಡಿದ ಕಶಿಪುವಿನ
ಒಡನೆ ಕಂಬದಿ ಬಂದು ಒಡಲ ಬಗೆದು ನಿನ್ನ
ದೃಢಭಕುತಗೆ ಬಂದೆಡರ ಬಿಡಿಸಿದೆ ॥ ೧ ॥

ತುಷ್ಟಿ ಪಡಿಸೊ ಪರಮೇಷ್ಟಿಯಪಿತ ನಿನ್ನ
ದೃಷ್ಟಿಯಿಂದ ಅನಿಷ್ಟನಿವಾರಣ
ಅಷ್ಟಕರ್ತೃತ್ವದ ಪ್ರಭೋ ಕಷ್ಟ ಹರಿಸಿ ಭಕ್ತ-
ರಿಷ್ಟಪಾಲಿಪ ಸರ್ವಸೃಷ್ಟಿಗೊಡೆಯ ದೇವ ॥ ೨ ॥

ಸಂಕಟ ಬಿಡಿಸೊ ಭವಸಂಕಟದಿಂದ ಶ್ರೀ
ವೇಂಕಟೇಶಾತ್ಮಕ ಭೀಕರರೂಪ
ಶಂಕರಾಂತರ್ಗತ ಸಂಕರುಷಣಮೂರ್ತೆ
ಪಂಕಹರಿಸಿ ಪಾದಪಂಕಜ ತೋರಯ್ಯ ॥ ೩ ॥

- ಜಂಜೂಟಿ ತಾಳ – ಝಂಪೆ

ಸಚ್ಚಿದಾನಂದಾತ್ಮ-ಪರಿಪಾಹಿ ಪಾಹಿ ಪರಮಾತ್ಮ ॥ ಪ ॥

ಸಚ್ಚಿದಾನಂದಾತ್ಮ ಮುಕುಂದ
ಅಚ್ಯುತಾನಂತ ಗೋವಿಂದ ಆನಂದಾ ॥ ಅ.ಪ. ॥

ಧೀರ ಧೀರಾ ಧೀರಾ ಧೀರಾ-ದೀನಜನರುದ್ಧಾರ-ನೀರಜಾಂಡ-
ಚರ ಬಾಹಿರಾಂತರ-ನಿರುತ ಚರಾಚರದೊಳಗೆ ಸಂಚಾರಾ
ತತ್ವದಾಕಾರದಿಂದ ಸುವಿಹಾರ-ಗಂಭೀರ ಗಂಭೀರ-ಗಂಭೀರ-
ಗಂಭೀರಾ

ವಾರಿ ವಿಹಾರ ಮಂದರೋದ್ಧಾರ
ಧರಣಿಸೂಕರ ನರಮೃಗಾಕಾರ ಯಾಜಕಧೀರ
ನರಪರ ಶಿರ ತರಿದೆತ್ತಿ ಬಿಲ್ಲನು ದಶಕತ್ತನು ಕ್ಷಣದೊಳು ಕ-
ತ್ತರಿಸಿ ತುರುಗಳ ಕಾಯ್ದು ಬತ್ತಲಿ ಇಂದ
ತುರಗವ ಹತ್ತಿ ಮೆರೆದ ಆನಂದ ನಿಜಧಾಮ
ತೊರೆಯುತ ಬಂದ ಗೋವಿಂದಾ ಈ ಭೂ-
ಧರದೊಳು ನಲವಿಂದ ಕ್ರೀಡಿಪ ಪರಿಪರಿಯಿಂದ
ಸುರಮುನಿ ಗಣ ಸಂಸ್ತುತಿಯಿಂದ ಗೋವಿಂದ ಗೋವಿಂದ ॥ ೮

ಕಾಂತಾ-ಕಾಂತಾ ಕಾಂತ-ಕಾಂತ ಜಗದಾ-
ದ್ಯಂತ ನಿರುತ ನಿಶ್ಚಿಂತ ಗುಣಗಣಭರಿತ
ಸಂತತ ನಿನ್ನ ವಾಕ್‌ತಂತಿನಾಮ ಧಾಮದಿ ಈ ಜಗ
ಬಂಧಿಸಿಹುದು ಆದ್ಯಂತ ಶ್ರೀಕಾಂತ-ಶ್ರೀಕಾಂತ-ಶ್ರೀಕಾಂತ-
ಶ್ರೀಕಾಂ
ಶ್ರೀಕರಾರ್ಚಿತ ತ್ರಿಗುಣವರ್ಜಿತ
ಅನುಪಮಚರಿತ ಆದ್ಯಂತರಹಿತ
ಸ್ವರಸಸುಭೋಕ್ತ-ಸ್ವಗತಭೇದವಿವರ್ಜಿತ
ಅಚ್ಯುತ ಮತ್ಸ್ಯ ಕಚ್ಛಪಾದ್ಯಜಿತಾದಿರೂಪ ನಿ-
ನ್ನಿಚ್ಛೆಯಂತೆ ಸಿರಿ ಮೆಚ್ಚಿಸಿ ನಿನ್ನ ವಿಚಿತ್ರಕರ್ಮಗಳ
ನಿಚ್ಚದಿ ನೋಡಿ ನಲವಿಂದ ಈ ಸೃಷ್ಟಿಲೀಲೆ-
ಯ ಚಂದಾ ಚತುಷ್ಪ್ರಾತು ನಿನ್ನಯ ದಯದಿಂದ
ಈ ಜಗಬಂಧಕ ಶಕುತಿ ನಿನ್ನಿಂದ ಗೋವಿಂದ ॥ .

ದೇವ-ದೇವ-ದೇವ-ದೇವಾದಿ ವಿಜಯವಂದ್ಯ ಸ್ವಭಾವ
ದೇವ ನಿಜಸದ್ಭಾವ-ಭಜಕರ ಕಾವ ಅಭಯವ-
ನೀವ ವಿಶ್ವಾದಿ ರೂಪದಿಂದ-ಜೀವರ ಭೋ-
ಗಾವಸ್ಥಾತ್ರಯದಲಿ ನಡೆಸುತ್ತಿರುವ ಭೋದೇವ ಶ್ರೀ-
ದೇವಾ ಭೂದೇವ ದುರ್ಗಾಧವ-ದುರ್ಗಾಧವಾ
ನೀ ವ್ಯಾಪ್ತನು ಸರ್ವ - ತತುವರ ಕ್ರಿ
ಯವಾ ಪ್ರೇರಿಸಿ ನಡೆವ ದೇವ ವ್ಯಾಪಾ-

ರವ ಮಾಡಿ ಮಾಡಿಸಿ ಎತ್ತಲು ಚೇತನ ಚಿ–
ತ್ತವಿತ್ತು* ಪ್ರವೃತ್ತಿ ಗೈಸಿ ಫಲವಿತ್ತು ಜನು–
ಮವ ಸುತ್ತಿಸುತ್ತಿಸಿ ತಂದಿತ್ತಪೆ ಶ್ರೀ ಪುರುಷೋತ್ತಮನು
ನೀ ನಿರ್ಲಿಪ್ತನೀನಂಚಿತ್ಯ ಅನಂತ ಶ್ರೀವೇಂಕಟೇಶ ನಿನ್ನಂಥ ಪೊ–
ರೆವರ ಕಾಣೆ ಉನ್ನಂತ ಉರಗಾದ್ರಿವಾಸವಿಠ್ಠಲ
ಶಾಂತ ಮಹಂತ ॥ ೩ ॥

ರಾಗ – ಕಾಂಬೋಧಿ ತಾಳ – ಝಂಪೆ

ಈ ಭಾಗ್ಯವೆ ನಿನ್ನದೊ ವರಭೋಗಿ ಶಯನಾ ॥ ಪ ॥

ಸೌಭಾಗ್ಯವೇ ನಿನ್ನ ಮಹಿಮೆ ತಿಳಿಯುವ ಯೋಗ ॥ ಅ.ಪ. ॥

ನೀನಿಲ್ಲದಾಸ್ಥಾನ ಈ ನಳಿನಜಾಂಡದೊಳಿಲ್ಲ
ನೀನೆಲ್ಲವನು ಬಲ್ಲೆ ನಿನ್ನ ತಿಳಿಯಗೊಡದೆ
ಹೀನ ಮಾನವ ನಾನು ನಿನ್ನನವರತ ಮರೆತರು ನೀ
ಎನ್ನ ಮರೆಯದಲೆ ಎನ್ನೊಳಗೆ ಇಹೆ ಎಂಬ ॥ ೧ ॥

ನಿಲ್ಲಿಸಲು ನಿಲ್ಲುವೆನು ಮಲಗಿಸಲು ಮಲಗುವೆನು
ತಿಳಿಸಿದರೆ ನಾ ತಿಳಿವೆ ತಿಳುವಳಿಕೆ ನೀನೆ
ತಿಳಿಯ ಗೊಡಿಸೊ ಎನ್ನ ಕ್ರಿಯೆಗಳನು ದೇಹದ
ನೆಳಲಂತೆ ನಿನಗೆ ನಾನಿಹೆನಯ್ಯ ದೇವಾ ॥ ೨ ॥

ಈ ಜಗತ್ತಿನೊಳಗೆಲ್ಲ ಪೂಜ್ಯಪೂಜಕ ಪೂಜ್ಯ
ಪೂಜೋಪಕರಣದೊಳು ನೀನೆ ನಿಂತು
ಮೂರ್ಜಗತ್ಪ್ರತಿಯೆ ನಿನ್ನನರ್ಚಿಸುವ ಭಜಕರಿಗೆ
ನೈಜಸುಖವ್ಯಕ್ತಿಯನು ಮಾಡುತಲಿ ಪೊರೆವೇ ॥ ೩ ॥

ನೀರು ತೃಣವನು ಕೊಡಲು ಹರುಷದಿಂದಲಿ ಗೋವು
ಕ್ಷೀರವನು ಕರೆದು ಜನರ ಪೊರೆವಂತೆ

---

* ಚಿತ್ತವಿತ್ತು ಎಂದೂ ಪಾಠವುದುಂಟು.

ಸೂರಿಗಳು ಮಾಳ್ಪ ಅಪರಾಧಗಳೆಣಿಸದಲೆ
ಕರುಣದಿಂದಲಿ ಅವರ ಪೊರೆವ ಶ್ರೀಹರಿಯೆ ॥ ೪ ॥

ಪನ್ನಗಾಚಲನಿಲಯ ನೀನೆ ಎನ್ನೊಳಗಿರಲು
ಬನ್ನಬಡಲ್ಯಾತಕೆ ಚಿನ್ಮಯರೂಪ
ಎನ್ನಂಥ ಜೀವರಿನ್ನೆಷ್ಟೊ ಬ್ರಹ್ಮಾಂಡದೊಳು
ಘನ್ನಭಕುತಿಯ ನೀಡೊ ಶ್ರೀ ಉರಗಾದ್ರಿವಿಠಲ ॥ ೫ ॥

ರಾಗ – ಬಿಲಹರಿ ತಾಳ – ಆದಿ

ಭಯ ಕೃಚ್ಛಯನಾಶನ ಮಾಯಾರಮಣ
ಭವಭಯಹರಣ ॥ ಪ ॥

ಜೀಯ ಕಾಯುವುದಯ್ಯ ಪರಿಹರಿಸಯ್ಯ ತಾಪ–
ತ್ರಯ ದಯೆ ತೋರಯ್ಯ ಎನ್ನೊಡೆಯಾ ॥ ಅ. ಪ. ॥

ನಾನರಿಯೆ ನಿನ್ನಯ ಗುಣಗಣಾದಿಗಳ
ಅನುದಿನದಿ ನಾ ಅನುಭವಿಸಿ ಭವಚಕ್ರದಾಲಗಳ
ಜನುಮ ಜನುಮಾಂತರದಿ ಬಂದ ವಾಸನಾದಿಗಳ
ದೀನವತ್ಸಲ ದೂರ ನೋಡುವೆಯ ನೀನರಿಯ
ಎನ್ನನು ಉಳುಹುವ ಪರಿಯ ಎನಗ್ಯಾರಿಹರೊ
ನಿನ್ಹೊರತು ಪೊರೆವರಯ್ಯ ವನಜಸಂಭವನಯ್ಯ ಜೀಯ ॥ ೧ ॥

ಆಕರಿ ಮಕರಿ ಪಿಡಿಯಲು ಬಂದ ಪರಿಯೇನು
ನಿಖಿಳ ಖಳಕುಲವೈರಿ ಶ್ರೀಹರಿ ಸಿರಿಗೆ ಹೇಳದ್ದೇನು
ಭಕುತ ನಾರ್ತಧ್ವನಿಯ ಕೇಳಿ ಬಂದೆಯಾ ಏನು
ನಾನು ಅಸಾಧನವನರಿಯೇನು
ಘನ್ನಮಹಿಮ ನಿನ್ನಯ ಕೀರ್ತಿಯನು ಕೇಳಿ ಬಂದೇನು
ಇನ್ನೇನು ನಿನಗೆ ಏನು ತೋರಿದರಂತೆ ಮಾಡಿನ್ನು
ಎನ್ನೊಡೆಯ ನೀನೆಂದಡಿಗೆ ಬಿದ್ದಿಹೆನೊ ಇನ್ನು ॥ ೨ ॥

ಈಸಲಾರೆನು ಸಾರಿ ಈ ಭವಸಾಗರದೊಳಗೆ
ಶ್ರೀಶ ನಿನಗತಿಶಯವೆ ಕರುಣವಿಲಾಸ ತೋರೆನಗೆ
ದಾಸ ದಾಸ ದಾಸರ ದಾಸ್ಯ ಕೊಡಿಸೆನಗೆ
ಶ್ರೀಶ ಎನ್ನಯ ಮನದ ಕ್ಲೇಶವನು
ನಾಶವಗೈಸು – ನಿರಾಶ್ರಯನಾಗಿಹೆನು
ಏಸುಬಲ್ಲೆನು ಕಾಸಿನಾನವನು
ಬೇಸರಿಸದಿರು ಇನ್ನೂ–ಮುನ್ನೂ ॥ ೨ ॥

ತಾಪತ್ರಯಗಳಿಂದನುದಿನದಿ ನಾನೊಂದೆ
ಶ್ರೀಪತಿಯೆ ಹೃತ್ತಾಪ ಕಳೆದು ಪೊರೆಯ ಬೇಕೆಂದೆ
ಗೋಪ ನಿನ್ನಯ ಶ್ರೀಪಾದದೊಳು ಮನವ ನೀಡೆಂದೆ
ಕುಪಿತವೇ ನಿನ್ನವನು ನಾನೆಂದೆ
ಭೂಪ ಆಪತ್ತೋದ್ಧಾರಕನೆಂದೆ
ಪಾಪಿ ಮಾನವ ಜನುಮದಲಿ ಬಂದೆ
ಕಾಪಾಡುವುದು ಎಂದೇ–ತಂದೆ ॥ ೪ ॥

ಭೂಸ್ಥಳದಿ ನಿಂತ ಶ್ರೀವೇಂಕಟೇಶ ಹರೇ
ತ್ರಿಸ್ಥಳ ದೊಳು ಈ ಸ್ಥಳವೆ ವೈಕುಂಠ ದೊರೆಯೆ
ವಿಸ್ತರದಿ ಮಹಿಮೆಯ ಪಾಡಿ ಪೊಗಳಲು ನಾವು ಶಕ್ತರೆ
ಸ್ವ ಸ್ಥಚಿತ್ತವಿಲ್ಲ ಶ್ರೀ ಹರೇ
ಈ ಸ್ಥಿತಿಯಲ್ಲಿ ಎನ್ನ ನೋಡುವರೆ
ದುಸ್ಥಿತಿಯ ಬಡವನ ಕೈಯ ಬಿಡುವರೆ–ಶೌರೆ ॥ ೫ ॥

ರಾಗ – ಕಾಂಬೋದಿ ತಾಳ – ಝಂಪೆ

ಮತ್ಸರಿಸುವವರಲ್ಲಿ ಮಾನ್ಯವಿರಲೀ ॥ ಪ ॥

ಬಚ್ಚಲಿಲ್ಲದ ಮನೆಯು–ಸ್ವಚ್ಛತಾನಾಗಿಹುದೆ ॥ ಅ. ಪ. ॥

ಅರಿಷಡ್ವರ್ಗಗಳು ತುಂಬಿಕೊಂಡಿಹ ದೇಹ
ಪರಿಶುದ್ಧವಹುದೇನೊ ಅವಾಗಲೂ

ಪರಿಪರಿಯಿಂದಲಿ ಪರಿವಾರಜನಗಳು
ಪರಿಹಾಸ್ಯಮಾಡಿ ಅಘವ ಕದ್ದೊಯ್ವರಯ್ಯ ॥ ೮

ಗುಣತ್ರಯಗಳಿಂದಲಿ ನಿಬಿಡವಾದೀದೇಹ
ಗುಣಕಾರ್ಯ ಮಾಡದೇ ಬಿಡದೆಂದಿಗೂ
ಅಣಿಯಾಗಿ ದುರ್ಗುಣಗಳೊಕ್ಕಣಿಸಿ ಪೇಳುವಡೆ
ಗುಣವ ತಿದ್ದಲು ತಾವು ಖಣಿಯಾಗುವರಯ್ಯ ॥

ಅಭಿಮಾನವೆಂಬುದು ನಭೋಮಂಡಲವರೆಗಿಹುದು
ಶುಭವೆಂತೊ ಡಾಂಭಿಕದ ಹೇ ಮಾನವಾ
ತುಂಬಿತುಳುಕುವ ದುರಭಿಮಾನವನೆ ತೊಲಗಿಸಿ
ಇಂಬು ತೋರುವರಯ್ಯ ಮನಸ್ಥೈರ್ಯಕೇ ॥

ಮಕ್ಕಳಪರಾಧಕೆ ಕಕುಲತೆ ಪಡದೆ
ನಕ್ಕುಸಂತೈಸಿ ಲಾಲಿಸುವ ತೆರದಿ
ಅಕ್ಕರದಿ ತನ್ನ ಅಪರಾಧಗಳನೆಲ್ಲ
ಲೆಕ್ಕಿಸದೆ ಪೇಳ್ವುದದು ಉಪಕಾರವಯ್ಯ ॥

ಮಚ್ಚರದಿ ನಿಂದಿಸೆ ಅಚ್ಚುತನ ಭಕುತರಿಗೆ
ನಿಚ್ಚದಲಿ ಸ್ವಚ್ಛಭಕುತಿ ಇಹುದು
ಮಚ್ಚರಕೆ ಸ್ವೇಚ್ಛೆಯಿಂದೆದುರು ಉಚ್ಚರಿಸದಿರೆ
ಮೆಚ್ಚಿಕಾಯುವನಯ್ಯ ಶ್ರೀವೇಂಕಟೇಶ ॥

ರಾಗ – ಭೈರವಿ ತಾಳ –

ಕಷ್ಟ ಹರಿಸೊ ಪರಮೇಷ್ಟಿಪಿತನೆ ನೀ ಕೈ
ಬಿಟ್ಟರೆ ಸೃಷ್ಟಿಯೊಳು ಪಾರುಗಾಣುವುದೆಂತೊ ॥

ಇಷ್ಟದಿಂದಲೋ ಅನಿಷ್ಟದಿಂದಲೋ ನಾನೇ
ಹುಟ್ಟಿ ಬಂದೆನೆ ದೇವ–ನಿನ್ನಿಷ್ಟದಿಂದಲ್ಲವೇ ॥ ಅ.

ಬಿಂಬನೆನಿಸಿದೆ ಎನಗೆ ಪ್ರತಿಬಿಂಬ ನಾ ನಿನಗೆ
ಬಿಂಬ ಪ್ರತಿಬಿಂಬಕೆ ಉಪಾಧಿಯುನಿತ್ಯ-
ವೆಂಬನ್ವಯಕೆ ಗುಣತ್ರಯ ಬದ್ಧವೇ ಕಾರಣ-
ವೆಂಬ ಗುಣ ಜೀವಸ್ವರೂಪೋಪಾಧಿಯು
ಬೆಂಬಲ ನೀನಿದ್ದೂ ಗುಣಕಾರ್ಯಗಳನುವಾಗಿ
ಇಂಬು ಕೊಡುವೆ ಫಲವ ಭೋಗಿಸಲೀವೇ
ಎಂಬನುಡಿ ಶ್ರುತಿ ಶಾಸ್ತ್ರಸಿದ್ಧವು
ನಂಬಿಹುದು ಜಗವೆಲ್ಲ ಸತ್ಯವು
ಶಂಬರಾಂತಕ ಪಿತನೆ ಎನ್ನ ಹೃದ-
ಯಾಂಬರದಿ ನಿನ್ನ ಬಿಂಬ ತೋರೈ ॥ ೧ ॥

ಕಾಲಕರ್ಮಾದೃಷ್ಟಗುಣಗಳೆಲ್ಲವು ನಿಜ-
ವೆಲ್ಲ ಜಡಗಳು ಮತ್ತು ಅಚೇತನಂ ಗಳೈ
ಶೀಲಮೂರುತಿ ನೀ ಪರಮಚೇತನನಾಗಿ
ಎಲ್ಲಕಾಲದಿ ನಿನ್ನ ನಿಯಮನಂಗಳೈ
ಕಾಲಕರ್ಮ ಗುಣಂಗಳೇನಿಹುದೆಲ್ಲ
ಫಲಪ್ರದಾನವ ಮಾಡೆ ಶಕ್ತಿ ಜಡಕೆಂತಿಹುದಯ್ಯ
ಕಾಲನಾಮಕ ನೀನೆ ಸರ್ವ-
ಕಾಲದಲಿ ಸ್ವಾತಂತ್ರ್ಯ ನಿನ್ನದೋ
ಇಲ್ಲ ಘನ ಸಮರಿಲ್ಲ ಸರ್ವ ಕರ್ಮ
ಫಲವೆಲ್ಲ ನೀನೆ ದಾತೃವೋ ॥ ೨ ॥

ಮರ್ಮವರಿಯೆನೋ ದೇವ ಧರ್ಮಭ್ರಷ್ಟನಾದೆ
ಕರ್ಮಫಲಾನುಭವ ಮಾಡಿ ಬೆಂಡಾದೆನು
ಸ್ವರ್ಣಸ್ತೇಯದ ಕರ್ಮ ತಾಸಿಕ್ಷಿಸಲರಿಯದು ನ್ಯಾಯ
ಧರ್ಮಾಧಿಪತಿ ಭೀಕರ ಫಲಕೊಟ್ಟು ಶಿಕ್ಷಿಪಂತೆ
ಧರ್ಮಮೂರುತಿ ಶುದ್ಧ ನಿಷಿದ್ಧಕರ್ಮಂಗಳಿಗೆ
ಪೂರ್ಣಫಲವಿತ್ತು ಸಮನೆಂದೆನಿಸಿರುವೆ
ಕರ್ಮಯೋಜಕ ನೀನೆ ಸಕಲ
ಕರ್ಮಪ್ರದನೆಂದೆನಿಸಿ ಪೂರ್ವ-

ಕರ್ಮಫಲ ಭೋಗಿಸಲು ಜನ್ಮವನಿತ್ತು
ಕರ್ಮಪ್ರವಹ ದೋಡುವೇ ॥ ೩

ವಿಮುಖನಾಗಿಹೆ ಶ್ರುತಿಸ್ಮೃತಿ ಶಾಸ್ತ್ರ ಧರ್ಮಕೆ
ಪ್ರಮುಖನಾಗಿಹೆ ದುಷ್ಕರ್ಮ ಮಾರ್ಗದಲ್ಲಿ
ಕರ್ಮ ಕಲಾಪದ ಧರ್ಮ ಮರ್ಮವನರಿಯೆ
ಹೆಮ್ಮೆಯಿಂದಲಿ ನಾನಾ ಕರ್ಮ ಕೂಪದಲಿರುವೆ
ಪೇರ್ಮೆಗೋಸುಗ ಅಧರ್ಮವೆಷ್ಟೋ ಮಾಡ್ದೆ
ಒಮ್ಮೆಗಾದರು ಸದ್ಧರ್ಮಾಚರಿಸಲಿಲ್ಲ
ಕರ್ಮ ಅಕರ್ಮ ವಿಕರ್ಮ ಪರಿಚಯವಿಲ್ಲ ಜನ್ಮಕೆ
ಧರ್ಮಪುತ್ರನೆ ದ್ವಂದ್ವಕರ್ಮ ಸಮರ್ಪಿಸಲು
ಸನ್ಮತಿಯ ಕೊಟ್ಟೆನ್ನ ॥ ೪

ಬೆಟ್ಟದೊಡೆಯನೆ ಶ್ರೀ ವೇಂಕಟೇಶ ನೀ
ತುಷ್ಟಿಯಿಂದರೆ ನಿನ್ನಿಷ್ಟದಂತೆ ಫಲವು
ಸೃಷ್ಟಿಯೊಳು ಪುಟ್ಟಿಸಿ ದುಷ್ಟಕರ್ಮದ ಪಾಶ
ಕಟ್ಟನೋಟ್ಟೆನ್ನ ಕಷ್ಟ ಪಡಿಸುವರೇ
ಸೃಷ್ಟೀಶ ಉರಗಾದ್ರಿವಾಸವಿಠ್ಠಲ ಎನ್ನ
ನೀ ನಿಟ್ಟಿರುವಷ್ಟುಕಾಲ ದಿಟ್ಟಭಕುತಿಯ ಕೊಟ್ಟು
ದಿಟ್ಟರಕ್ಷಿಸು ಇಷ್ಟಮೂರುತಿಯೆ
ಇಷ್ಟದಾಯಕನೆಂದು ನಾನಿಷ್ಟು ನುಡಿದೆನೋ ನಿನ್ನ
ಎನ್ನ ಮನೋಭೀಷ್ಟ ಸಲಿಸೆ ನಿನ್ನಿಷ್ಟವಯ್ಯ ॥ ೫

ರಾಗ – ಪುನ್ನಾಗವರಾಳಿ ತಾಳ – [illegible]

ಶರಣರ ಶರಣ್ಯ ನಾರಾಯಣ ಭಕುತರ
ಸಂರಕ್ಷಣಾ ನಾರಾಯಣ* ॥ ಪ

ಖಗಪನ ಸ್ಕಂಧರೋಹ ಅಘದೂರ ಅಭಯಹಸ್ತ
ಸ್ವಗತ ಭೇದ ಶೂನ್ಯ ಸರ್ವಾವಸ್ಥೆಯೊಳೆನ್ನ

---

* ಶ್ರೀಮದ್ಭಾಗವತದಲ್ಲಿ ಬರುವ ನಾರಾಯಣ ಕವಚದ ಸಾರ ಇಲ್ಲಿದೆ.

ವಿಗತ ಕ್ಲೇಶನ ಮಾಡಿ ಸತತ ಕಾಪಾಡಲಿ
ನಿಗಮವಿನುತ ಜಗದಾದಿ ವಂದ್ಯನೆ ದೇವಾ ॥ ೧ ॥

ವರುಣ ಪಾಶಗಳಿಂ ಜಲಚರ ಜಂತುತಳಿಂ ಮತ್ಸ್ಯ ತಿ
ಮೂರುತಿ ತಾ ರಕ್ಷಕನಾಗಿರಲಿ
ಧಾರುಣಿ ನೆಲದೊಳು ಶ್ರೀ ವಾಮನ ಕಾಯಲಿ
ಸರ್ವಾಕಾಶದೊಳು ತ್ರಿವಿಕ್ರಮ ಕಾಯಲಿ ॥ ೨ ॥

ದುರ್ಗ ರಣಾಗ್ರ ವನ ಅರಿವರ್ಗಗಳಲಿ
ನರಹರಿದೇವ ಸಂರಕ್ಷಕನಾಗಿರಲಿ
ಮಾರ್ಗಗಳಲ್ಲಿ ಹಿರಣ್ಯಾಕ್ಷ ವೈರಿಯು ಕಾಯಲಿ
ದುರ್ಗಮ ಶೈಲದೊಳು ಶ್ರೀಭಾರ್ಗವ ರಕ್ಷಿಸಲಿ ॥ ೩ ॥

ದಾಶರಥಿ ಪ್ರವಾಸದಲ್ಲಿ ನಿತ್ಯ
ದೇಶಾಂತರಗಳಲ್ಲಿದ್ದರು ಕಾಯಲಿ
ಈಶ ಶ್ರೀಮನ್ನಾರಾಯಣ ಎನ್ನ
ಕ್ರೂರ ಕರ್ಮಗಳಿಂದ ರಕ್ಷಿಸಲನುದಿನ
ನರಾವತಾರ ಎನ್ನ ಗರುವಿನಿಂ ರಕ್ಷಿಸಲಿ ॥ ೪ ॥

ವಿರೋಧಿ ವರ್ಗದಿ ದತ್ತಾತ್ರೇಯ ಕಾಯಲಿ
ಸರ್ವಕರ್ಮ ಬಂಧ ಜ್ಞಾನದಿಂದ ಕಪಿಲಾ
ಮೂರುತಿ ರಕ್ಷಿಸಲಿ ಅನುದಿನದಲಿ ಎನ್ನ ಸನತ್ಕು-
ಮಾರನು ಎನ್ನ ಕಾಯಲಿ ಕಾಮದಲ್ಲಿ ॥ ೫ ॥

ದಾನವ ಮಧುಕೈಟಭ ಹರ ಹಯವದನ
ಘನ್ನಸರಾಧದಿ ರಕ್ಷಕನಾಗಿರಲಿ
ಮನ್ನಿಸಿ ದೇವತೆಗಳು ಸಾಧನವೀಯಲಿ
ಸನ್ನುತಾಂಗ ಧನ್ವಂತ್ರಿ ಮೂರುತಿ ಹರಿ ಎ-
ನ್ನರಕ್ಷಕನಾಗಿರಲಿ ರುಜೆಯೊಳು ॥ ೬ ॥

ಜ್ಞಾನರೂಪಿ ವೃಷಭ ಶೀತಾತಪದಿಂದ ಎ-
ನ್ನ ನುದಿನ ಈ ದ್ವಂದ್ವದಿ ಕಾಯಲಿ

ಯಜ್ಞಮೂರುತಿ ಲೋಕಾಪವಾದದಿ ಕಾಯಲಿ
ಸುಜ್ಞ ಬಲರಾಮನು ದುರ್ಜನರ ಭಯದಿಂ
ಅಜ್ಞಾನಿಯಿಂದೆನ್ನ ಅನುದಿನ ರಕ್ಷಿಸಲಿ

ಘನ್ನ ಮಹಿಮ ಶೇಷಸರ್ಪ ಬಾಧೆಗಳಿಂದ
ಜ್ಞಾನ ದಾತೃ ಹರಿಸೇವೆಗೆ ಬರುತಿಹ ನಾನಾ
ವಿಘ್ನಗಳಿಂದ ರಕ್ಷಿಸುತಿರಲಿ ಘನ್ನ ಮ–
ಹಾನರಕ ಭಾಧೆಯಿಂ ತಪ್ಪಿಸಲಿ ಕೂರ್ಮ ಮೂರುತಿ
ಕಾಪಾಡಲಿ ನಿತ್ಯದಿ

ವೇದವ್ಯಾಸನು ಶುದ್ಧ ಜ್ಞಾನವನೀಯಲಿ
ಬುದ್ಧಿಮೋಹದಿಂದ ಬುದ್ಧನುದ್ಧರಿಸಲಿ
ಹೃದಯದ ಕಲಿಬಾಧೆ ಕಲ್ಕಿ ತಾ ಹರಿಸಲಿ

ಉದಯಕಾಲದಿ ಶ್ರೀಕೇಶವ ರಕ್ಷಿಸಲಿ ವೇಣು–
ಹಸ್ತ ಗೋವಿಂದ ಸಂಗಮದಲ್ಲಿ ಪೂರ್ಣಕರುಣೆ
ಯಿಂದ ಎನ್ನ ಕಾಪಾಡಲಿ ಪೂರ್ವಾಹ್ಣದಲಿ
–ನಾರಾಯಣ ರಕ್ಷಿಸಲಿ

ವಿಷ್ಣುಮೂರುತಿ ಮಧ್ಯಾಹ್ನದಿ ಕಾಯಲಿ ಮಾಧವ
ರಾಹ್ನದಲೆನ್ನ ರಕ್ಷಿಸಲಿ ಬಾಧೆಯಿಂ ಸಾಯಂಕಾಲದಿ

ಪ್ರದೋಷದಲ್ಲಿ ಹೃಷೀಕೇಶ ರಕ್ಷಿಸಲೆನ್ನ
ಪದುಮನಾಭ ಅರ್ಧರಾತ್ರಿಯೊಳು ಸಲಹಲಿ
ಶ್ರೀಧರನೆನ್ನ ಪರರಾತ್ರಿಯೊಳು ಸಲಹಲಿ

ಜನಾರ್ದನನು ಎನ್ನನು ಉಷಃಕಾಲದಲ್ಲಿ
ಸಂಧ್ಯಾಕಾಲದಿ ದಾಮೋದರ ರಕ್ಷಿಸಲಿ
ಕಾಲನಾಮಕ ಬೆಳಗಿನ ಝಾವದಿ ಕಾಯಲಿ

ನಕ್ರನ ಹರಿಸಿದ ಚಕ್ರಾಯುಧವ ಎನ್ನ
ಶತೃಬಾಧೆಗಳಿಂದ ರಕ್ಷಿಸುತಿರಲಿ

ವಿಶ್ರವು ಗದೆಯು ಆಶ್ರಿತರುಪದ್ರವು-
ರಾಗ್ರಹ ನಿಗ್ರಹ ಮಾಡಲಿ ಅನುದಿನ ॥ ೧೪ ॥

ಪ್ರಮಥ ಭೂತ ಪಿಶಾಚ ಪ್ರೇತ ಭಯದಿ
ಪಾಂಚಜನ್ಯ ಶಂಖರಾಜ ರಕ್ಷಿಸಲಿ
ದುಮ್ಕ್ರನ ಶತೃಬಾಧೆಗಳಿಂದ ಖಡ್ಗವು
ಖೇಟವು ಸರ್ವ ಅನಿಷ್ಟದಿಂ ರಕ್ಷಿಸಲಿ ॥ ೧೫ ॥

ಅವನ ನಾಮರೂಪ ದಿವ್ಯಾಯುಧದ ಸ್ಮರಣೆ
ಸರ್ವ ಬಂಧಗಳೆಲ್ಲ ತಕ್ಷಣದಲ್ಲಿ ನಿವಾರಣೆಯಾಗಿ
ನಿವೃತ್ತಿಮಾರ್ಗಕ್ಕೆ ಶುದ್ಧಭಾವ ಭಕುತಿಗೆ ಕಾರಣವು ಸತ್ಯ
ಗರುಡ ವಿಷ್ವಕ್ಸೇನ ಕಷ್ಟದಿಂದ ರಕ್ಷಿಸಲಿ ॥ ೧೬ ॥

ಹರಿಯು ವಾಹನಾದಿಗಳು ವಿಪತ್ತುಗಳ ಹರಿಸಲಿ
ಸರ್ವರಂತರ್ಯಾಮಿ ನಿನ್ನ ನಂಬಿರಲು
ಸರ್ವಬಾಧೆಗಳೆಲ್ಲ ಪರಿಹಾರವಾಗಲಿ ॥ ೧೭ ॥

ಸರ್ವ ದೇಶ ಕಾಲ ಸರ್ವಾವಸ್ಥೆಯೊಳಿನ್ನ
ಸರ್ವೋತ್ತಮದೇವ ಸರ್ವದಾ ರಕ್ಷಿಸಲಿ
ಸರ್ವರೊಡೆಯ ಶ್ರೀಮನ್ನಾರಾಯಣ ನಿನ್ನ
ಕರುಣಕವಚವು ಎನಗಿರಲನುದಿನ ॥ ೧೮ ॥

ಬಹಿರಾಂತರದಿ ಮೇಲ್ ಕೆಳಗು ಮಧ್ಯದಲ್ಲಿ ದಿಕ್ಕುವಿದಿಕ್ಕಿನೊಳು
ನಿರುತ ರಕ್ಷಕ ನಂಹರಿಯೆ ನೀ ಪೊರೆ ಶ್ರೀವೇಂಕ-
ಟೇಶಾಭಿನ್ನ ಉರಗಾದ್ರಿವಾಸವಿಠಲಸ್ವಾಮಿ

ಶ್ರೀಧರಾ ನೀನೆ ಎನ್ನ ಹೃದಯಕಮಲದೊಳಿದ್ದು
ಮಾಡಿಸಿದ್ದು ನಾ ಮಾಡಿದೆನೊ ॥ ಪ ॥

ಹಿಂದೆ ಮಾಡಿದ್ದೇನು ಇಂದು ಮಾಡುವುದೇನು
ಮುಂದೆ ಮಾಡತಕ್ಕದ್ದೇನು ತಂದೆ ॥ ಅ. ಪ. ॥

ಹಿಂದೆ ನಿನ್ನಯ ಜನರ ವಂದಿಸದೆ ಭವ-
ಬಂಧನದಿ ನಾನೊಂದೆನೋ
ಇಂದು ತೀರಿತು ಅದಕೆ ತಕ್ಕವುಯ್ಯುವು ಎನಗೆ ಆ-
ನಂದವಾಯಿತು ನಿನ್ನ ಕರುಣಾರಸಕೆ
ಮಂದಭಾಗ್ಯನಿಗೆ ನೀ ತಂದಂಥ ಬಂಧನವ
ಬಂಧಿಸೀ ಎನ್ನಿಂದ ವಂದನೆಯ ಕೊಂಡೆ ॥ ೧ ॥

ಮೂರುದಿನದಲಿ ಹಿಂದೆ ತೋರಿದಂದದಿ ಎನ್ನ ಅ-
ಪರಾಧಗಳ ಎಣಿಸಲಿಲ್ಲ
ಬಾರಿಬಾರಿಗಿ ಗುರುಗಳ್ ಕಾದಿಹರು ಎಂದೆನ್ನ
ಎಚ್ಚರಿಸಿದುದಕೆ ನಾ ವ್ಯೈಮರೆದೆನೊ
ಮಾರರಮಣನೇ ನೀ ಗುರುವಾಸರದಿ
ತ್ವರಿತದೊಳು ಹರಿ ಗುರು ಪೂಜೆಗೆ ಕಾತರಪನಿತ್ತೆ ॥ ೨ ॥

ಸರ್ವಸೇವೆಯ ನೀನು ಕರುಣದಿ ಸ್ವೀಕರಿಸು
ಶರಣರಕ್ಷಕನಹುದೊ ನೀನು
ಉರಗಗಿರಿವಾಸ ಶ್ರೀವೇಂಕಟೇಶನೆ ಎನ್ನ
ಸರ್ವಾಪರಾಧಗಳ ಕ್ಷಮಿಸೋ
ಅರಿತವನು ನಾನಲ್ಲವೆಂದೆನ್ನ ಕೈ ಬಿಡದೆ
ದುರಿತ ಪರಿಹರಿಸಿ ಕಾಯೊ ಶೌರೀ ॥ ೩

ರಾಗ – ಜಂಜೂಟಿ ತಾಳ – ಆ

ಗುಂಜಾ ನರಸಿಂಹಾ–ಪಾಹಿ ಮಾಂ ಪಾಹಿ ॥ ಪ

ಅಜ ಭವ ಫಣಿ ದ್ವಿಜರಾಜ ಸುಪೂಜಿತ
ತ್ರಿಜಗದೊಡೆಯ ನರಹರಿಯೆ–ದುರಿತ ಹರಾ ॥ ಅ. ಪ.

ಪಟುತರ ಬಾಧೆ ಸಂಕಟಪಡುತಲಿ ಸುರ–
ಕಟಕ ನುತಿಸೆ ಕೋಟಿತಟಿತ್ಕಾಯನೆ
ಕೋಟಿ ಖಳರೆದೆ ಕುಟ್ಟಿ ಯಮಪುರ
ಕಟ್ಟಿ ಧಿಟ್ಟತನದಲಿ ನಿಶಾಚರನಳುಹಿದ ॥ ೧

ಸಿಡಿಲೋಪವು ಘುಡುಘುಡಿಸುತ ಕಿಡಿಯು
ಕಡೆಗಣ್ಣಿಂದಲಡಿಗಡಿಗುಗುಳುತ
ಕೂಡಿ—ನಖಗಳ ನೀಡಿ—ಶಿರ ವನ—
ಲ್ಲಾಡಿಸಿ ಜಡ ಜಂಗಮರನಡುಕ ಬಿಡಿಸಿದೆಯೊ ॥ ೨ ॥

ಅಡಿಗಡಿಗೆಡರನು ಪಡುತಿಹ ಹುಡುಗನ
ದೃಢತರ ಭಕುತಿಯ ನುಡಿಯನು ಕೇಳುತ
ನೋಡಿ—ಅಭಯವ ನೀಡಿ—ನೀ—ದಯ
ಮಾಡಿ—ಬಿಡುಗಣ್ಣರನು ಬಿಡದೆ ಸಲಹಿದೆಯೊ ॥ ೩ ॥

ಕಾಳರಕ್ಕಸರ ಬಾಧೆಗಳಿಂದ ಗೋಳಾಡುತ ನಿನ್ನಡಿ—
ಗಳ ಸ್ತುತಿಸೆ ಕೇಳೀ—ಹರುಷವ ತಾಳೀ—ದನುಜರ
ಧೂಳೀಪಟ ಮಾಡಿ ನಲಿದು ನಿಂದಾಡಿದೆ ॥ ೪ ॥

ಸಿಂಧು ಶಯನ ಭವ ಬಂಧ ವಿಮೋಚಕ
ಇಂದಿರೆಯರಸ ಶ್ರೀ ವೇಂಕಟೇಶ ನೀ
ಬಂದೂ—ಸ್ತಂಭದಿ ನಿಂದೂ—ಭಕುತರ
ಬಂಧೂ—ಸುರವೃಂದಕೆ ಆನಂದವ ನೀಡಿದ ॥ ೫ ॥

ಕದಲುಗಳೀಳಡಿಗಡಿಗುಕ್ಕ
ಉಡುಗಡಣಗಳು ಪಥತಪ್ಪೀ ಬೀಳುತಿರೆ
ದಾಡೀ—ಕುಣಿದಾಡೀ—ಶತ್ರುಗಳ
ತೀಡೀ—ಬಡಬಾನಲಲ್ಲಾಡಿಸಿ ನಿಂದ ॥ ೬ ॥

ಪರಿಪರಿ ಸುರರವಯವಗಳನು ಧರಿಸಿ
ಉರುತರ ಕ್ರೀಡೆಯ ಮಾಡಿ ಪ್ರಳಯದಿ
ತೋರೀ—ಧಿಕ್ಕರಿಸಿ ತಾಳೀ—ಹರುಷದಿ
ಕೇಳಿಯೊಳು ಉರಗಾದ್ರಿವಾಸ ವಿಠ್ಠಲ ನೀನಿಂದೆಯೊ ॥ ೭ ॥

ಗ — ಮೋಹನ ತಾಳ — ಆದಿ

ಸತ್ಯ ಸಂಕಲ್ಪ ತ್ವಚಿತ್ತಾನುಸಾರ ತ್ವ—
ಚಿತ್ತ ವೃತ್ತಿಯು ನಿನಗೆ ಸರ್ವತ್ರದಿ ॥ ಪ ॥

ಉತ್ತಮೋತ್ತಮ ನೀನೇ ಗತಿ ಎಂ-
ದೆತ್ತಿ ಶ್ರುತಿ ಸ್ಮೃತಿ ಸಾರುತಿಹುದು
ಉತ್ತರಿಸು ಭವ ಶರಧಿಯಿಂದಲಿ
ಎತ್ತ ಕಡೆ ಹಾಯಿಸುವುದೀಗಲೇ ॥ ಅ. ಪ. ॥

ಜಗದಾಖ್ಯ ವೃಕ್ಷಕ್ಕೆ ಆದಿಕಾರಣನಾಗಿ
ಜಗದೀಶ ವಂದ್ಯ ನೀನಾಧಾರನೋ
ಜಗತರುವಿಗೆ ಸತ್ವರಜತಮವೆಂಬೀ ಗುಣತ್ರಯಗಳು ಪ್ರಮುಖ ಬೇರುಗಳು
ತ್ವಗಾದಿ ಜ್ಞಾನೇಂದ್ರಿಯಗಳೆಂಬೀ ಐದು ಬಿಳಲುಗಳೂ
ಬಗೆಬಗೆ ಜರೆ ಹುಟ್ಟು ಮರಣ ವೃದ್ಧಿ ಹ್ರಾಸಾದಿ ಷಡೂರ್ಮಿಗಳೂ
ಬಿಗಿದಿಹುದು ಮೇಧ ಮಜ್ಜಾದಿ ಸಪ್ತಧಾತುಗಳೆಲ್ಲ ಹೊದಿಕೆಗಳು ಪಂ-
ಟೆಗಳು ಎಂಟು ಆಗಸಾದಿ ಭೂತ ಪಂಚಕ ಬುದ್ಧಿ ಮನ ಅಹಂಕಾರವೆಂದು
ಆಗಿಹುದು ನೇತ್ರ ಶ್ರೋತ್ರಾದಿಗಳಾದಿ ನವಗೋಳಕಗಳೇ ಪೊಟ್ಟರೆಗಳು ॥ ೧ ॥

ಪ್ರಾಣಾಪಾನಾ ವ್ಯಾನೋದಾನ ಸಮಾನವೆಂಬೀ ಪ್ರಾಣಾದಿಪಂಚಕವು
ಪ್ರಾಣರಿಗೆ ಉಪ ಪ್ರಾಣನಾಗಿಹ ನಾಗಕೂರ್ಮ ಕೃಕಳಾದೀಪಂಚವಾಯುಗಳು॥
ಪರ್ಣಗಳು ಹತ್ತೆನಿಸಿ ವೃಕ್ಷಕೆ ದುಃಖಸುಖವೆಂಬೆರಡು
ಹಣ್ಣುಗಳು ಹಣ್ಣನೊಳು ಧರ್ಮಾರ್ಥಕಾಮ ಮೋಕ್ಷಗಳೆಂಬೊ ರಸಗಳು
ಕಾಣುತಿದೆ ವೃಕ್ಷದಿ ಜೀವ ಪರಮಾತ್ಮರೆಂಬೆರಡು ಪಕ್ಷಿಗಳು ವಿಹರಿಸುತಲಿಹವು
ತಿಪ್ರಾಣವಿಲ್ಲದೆ ಜೀವ ಖಗಫಲಉಣುತಲಿರುವುದು ಕರ್ಮ ಫಲವನು
ಪ್ರಾಣಪತಿಯನು ಕಾಣದಾತನು ಪೂರ್ಣ ಕರುಣಾಕಟಾಕ್ಷ ವಿಲ್ಲದೆ ॥ ೨ ॥

ಅಡಿ ಮೇಲಾಗಿಹ ಗಿಡದೊಡೆಯ ನೀಗಿಡದೊಳು
ಕಡೆಮೊದಲು ಬಿಡದೆ ನೀ ವ್ಯಾಪಿಸಿಹೆ
ಅಡಿಗಡಿಗೆ ಜೀವರೊಡಗೂಡಿ ಬಂದವರನು
ಗಿಡದ ಗೂಡೊಳು ಅಡಗಿಸಿರುವೆಯೊ ನಿನ್ನೊಡಗೂಡಿ ಹಿಂದೇ-
ಕಡೆಯಾಡುತಿಹ ಬಡಜೀವಿ ನಾನಯ್ಯ
ಪಡೆದ ಫಲವನು ಬೆಂಬಿಡದೆ ಭೋಗಕೆ ಬರುತಲಿಹುದಯ್ಯ
ದೃಢಮನದಿ ಅದನು ಬಿಡಲು ಯೋಚಿಸೆ ಬಡಿದು ಉಣಿಸುವೆಯೊ
ಬಿಡದಿರುವೆ ಎನ್ನೊಡೆಯಾ ಒಡೆಯ ನಿನ್ನೆದುರಿನಲಿ ನಾ
ಬಿಡದೆ ನಿನ್ನ ನೆಳಲಿಸಂತಿಹೆ ಜಡಮತಿಯ ಪರಿಹರಿಸಿ ರಕ್ಷಿಸೊ
ಮೃಡನುತ ಶ್ರೀ ವೇಂಕಟೇಶಾ || ೩ ||

ಗೋವಿಂದ ನಿನ್ನಾನಂದಲ್ಲಿಡೊ ಗೋವಿಂದ || ಪ ||

ಗೋವಿಂದ ಹೃದಯಾರವಿಂದದಲ್ಲಿ
ಇಂದು ಮುಂದು ಚರಣಾರವಿಂದವ ತೋರೊ || ಅ.ಪ ||

ಬೆಟ್ಟದ ದರುಶನ ಲಾಭವು ಕಷ್ಟ
ಪಟ್ಟರು ದೊರೆಯಲಸಾಧ್ಯವು ನೋಡೆ
ಸುಟ್ಟು ಹೋಗುವುದಘ ರಾಶಿಯು
ಪಟ್ಟ ಶ್ರಮವು ಇಷ್ಟಾರ್ಥವು
ದಿಟ್ಟ ಮನವ ಕೊಟ್ಟು ಅಟ್ಟುಳಿಯ ಕಳೆದು
ಮೆಟ್ಟುಮೆಟ್ಟಿಲನೇರಿ ದಿಟ್ಟಿಪರೊ ನಿನ್ನ || ೧ ||

ಪದುಮಜಾಂಡ ಕೋಟಿ ನಾಯಕ ದೇವ
ಶ್ರೀದ ಸೃಷ್ಟ್ಯಾದ್ಯಷ್ಟ ಕರ್ತೃಕ ನೀನೆ
ಆದ್ಯಂತ ಜಗದಾಧಾರಕ ಅಂತರಾತ್ಮಕ ವಿಶ್ವವ್ಯಾಪಕ
ಆದಿಮೂಲ ಚತುಷ್ಪಾತು ಎಂದೆನಿಸಿ ತ್ರಿ-
ಪಾದ ಊರ್ಧ್ವಗ ಒಂದು ಪಾದ ಇಳೆಯೊಳಿಟ್ಟೆ || ೨ ||

ಸದಮಲಾತ್ಮಕನೆ ದೇವ ಸರ್ವದಾ ಎಲ್ಲ
ಹದಿನಾಲ್ಕು ಲೋಕವ ಧರಿಸಿದೆ ದಿವ್ಯ

ಸುಂದರ ವಿರಾಟನೆನಿಸಿದೆ ಬಂದು ನೆಲೆಸಿದೆ ಸರ್ವರ ಹೃದಯದ
ಪದುಮದಲಿ ಪೊಳೆದು ತ್ರಿಜಗ ವಂದಿತನಾಗಿ
ಮೇದಿನಿಯೊಳು ಮೆರೆಯುತಿಹೆ ॥ ೩ ॥

ಧ್ವಜವಜ್ರಾಂಕುಶ ಯುಕ್ತಲಾಂಛನ ದೇವ
ಅಬ್ಜಭವಾರಾಧ್ಯ ಚರಣ ದಿವ್ಯ-
ಅಬ್ಜ ಸಖಕೋಟಿ ಕಿರಣ
ಪಾದಾಭರಣದಿಂದ ಕಿರಣಾ
ತಾ ಝುಗಿಝುಗಿಸುತ್ತ ನೂಪುರ ಕಾಲಂದಿಗೆ
ಗೆಜ್ಜೆ ಸಜ್ಜುಗೊಂಡಿಹ ಮೂರ್ಜಗದೊಡೆಯನೆ ಹರಿ ॥ ೪ ॥

ತಟಿತ ಕೋಟಿ ನಿಭಸಮ ಕಾಯ
ಕಟಿಯ ದಿವ್ಯ ರತ್ನ ಖಚಿತ ದಟ್ಟಿಯಾ
ತೊಟ್ಟ ಪಟ್ಟೆಪೀತಾಂಬರ ಬಟ್ಟೆಯಾ
ಸೊಂಟ ಪಟ್ಟೆಯಾ ಇಟ್ಟ ಪರಿಯಾ
ಅಟ್ಟಹಾಸದಿ ನಿಂದ ಸೃಷ್ಟಿಗೊಡೆಯ ಮನೋ-
ಭೀಷ್ಟದಾಯಕ ಬೆಟ್ಟದೊಡೆಯನೆ ॥ ೫ ॥

ಕರಚತುಷ್ಟಯದಲ್ಲಿ ಮೆರೆಯುವಾ ಶ್ರೀಸು-
ದರ್ಶನ ಶಂಖದಿಂದಿರುವಾ ದೀನ
ಶರಣ ಜನರಿಗಭಯಹಸ್ತವಾ
ಕರೆದು ನೀಡುವಾ ಕಾಮಿತಾರ್ಥವ
ಪರಿಪರಿ ಭಾಪುರಿ ಭುಜಗಾಭರಣಾದಿಗಳ
ಧರಿಸಿರುತ ಭಕ್ತಜನರಘಹರಿಸುವ ॥ ೬ ॥

ವಕ್ಷಸ್ಥಳದಲ್ಲಿ ಶ್ರೀ ವತ್ಸವೂ ಕಂಠ
ದಕ್ಷಿಣದಲ್ಲಿ ಘೋರ ನಕ್ಷತ್ರದಂತಿಹ ಹಾರವೂ
ಕುಕ್ಷಿ ಅಂದವು ಮೋಕ್ಷದಾತೃವೂ
ಅಕ್ಷರವಾಚ್ಯ ತ್ರ್ಯಕ್ಷಾದಿ ಸುರವಂದ್ಯ
ಈ ಕ್ಷಿತಿಗಿಳಿದು ಪ್ರತ್ಯಕ್ಷನಾಗಿ ನಿಂದೆ ॥ ೭

ಮಂದಹಾಸ ಮುಖ ಅರವಿಂದ ದಂತ
ಚಂದ ಕರ್ಣಕುಂಡಲದಿಂದ
ನಿಂದೆ ಕಸ್ತೂರಿ ತಿಲಕವು ಫಣೆಯಿಂದ ಕೆಂದುಟಿಯಿಂದ ಹಿಪ್ಪ್ರವ
ಚೆಂದ
ಪೊಂದಿ ಮುಕುಟ ಸರ್ವಾಲಂಕಾರ ಪರಿಪೂರ್ಣ
ಬಂಧ ಮೋಚನ ಹರಿ ಶ್ರೀ ವೇಂಕಟೇಶನೆ || ೮ ||

ಪರಿಪರಿ ಮುಕ್ತಜೀವರುಗಳು ಇಲ್ಲಿ
ಪರಿವಾರ ತರುಲತೆ ಶಿಲೆಗಳು ಇನ್ನು
ವಿರಜೆ ಮೊದಲಾದ ಸರ್ವತೀರ್ಥವೂ ಸ್ವಾಮಿ-
ತೀರ್ಥವು ಮೋಕ್ಷದಾತ್ರವೂ
ಸಿರಿ ವಿರಿಂಚಿ ಈರ ಭವ ಶಕ್ರಾದಿನುತ
ಉರಗಾದ್ರಿವಾಸ ವಿಠ್ಠಲ ಜಗದೀಶನೆ || ೯ ||

– ಕಾಂಬೋಧಿ ತಾಳ – ಆದಿ

ವಾಕ್ ಪಂಚಾಶದ್ವರ್ಣವಾಚ್ಯ
ಶ್ರೀಕಳತ್ರನೆ ಸರ್ವ ಶಬ್ದ ಗೋಚರನಯ್ಯ || ಪ ||

ಈ ಕಾಯ ಕಾರ್ಯ ಕಾರಣವನನುಸರಿಸಿ
ತ್ರಿಕರಣದೊಳಗಿದ್ದೂ ಕ್ರಿಯವ ನಡೆಸುವ ದೇವ || ಅ. ಪ. ||

ಅಜಾನಂದೇಂದ್ರೇಶ ಶಿರ ಮುಖ ನೇತ್ರದೊಳು
ನಿಜರೂಪ ಉಗ್ರ ಊರ್ಜ ಕರ್ಣದೊಳು
ನಿಜ ಋತುಂಭರ ಋಘನಾಸದಲ್ಲಿ
ಲೃಶಾಲ್ಯಾಜ ವರ್ಣವಾಚ್ಯಗಂಡಸ್ಥಲದಲ್ಲಿಪ್ಪ || ೧ ||

ಏಕಾತ್ಮ ಐರಸ ಓಷ್ಠದಲಿ ನೀನಿದ್ದು
ಪೊರೆಯಯ್ಯ ಓಜೋಭೃತೌರಸ
ಜೋಕೆಯಿಂದಲಿ ದಂತ ಪಂಕ್ತಿಯಲ್ಲಿಹೆ ದೇವ
ಅನಂತಾರ್ಥಗರ್ಭನೆ ನೀ ವಾಚಿಯಲ್ಲಿ || ೨ ||

ಕಪಿಲ ಖಪತಿ ಗರುಡಘ ರ್ಘ ದಕ್ಷಿಣಭುಜಮೂಲ
ಅವಿಚ್ಛಿನ್ನನೇ ನೀನು ಸಂಧಿಗಳಲಿ
ಸುಫಲ ದಾತನೆ ಜಸಾರನಾಮದಲ್ಲಿದ್ದು
ಅಂಗುಲ್ಯಾಗ್ರದಲ್ಲ ನೀ ನಿಲುತಡಲಿ ನೆಲೆಸಿರ್ಪೆ

ಚಾವಾರ್ಂಗ ಛಂದೋಗಪ್ರಿಯ ಜನಾರ್ದನ
ಝೂಟಿಕಾರ ವರ್ಣವಾಚ್ಯವ ಮಾಡಿ ನಿರುತದಲಿ
ವಾಮಭುಜ ಸಂಧಿಗಳಲ್ಲಿರುವೆ ಬೆರಳ ಅಗ್ರದಿ
ಞಾಮನಾಮದಲಿ ನೆಲೆಸಿರುವೆ

ಟಂಕಿ ಠಲಕ ಡರಕ ಢರಣಿ ಣಾತ್ಮಕನೀ ನಾ-
ಟಂಕರಹಿತ ದಕ್ಷಿಣಪಾದದಲ್ಲಿ
ಬಿಂಕವಿಲ್ಲದೆ ತಾರ ಥಪತಿ ದಂಡಿ ಧ್ವನಿ
ನಮ್ರ ನಾಮನೆ ವಾಮಪಾದ ಸಂಧಿಗಳಲ್ಲಿ

ಪರ ಫಲಿ ವರ್ಣವಾಚ್ಯ ದೇಹದ ಪಾರ್ಶ್ವ
ಬಲಿ ಭಗನಾಮ ಪೃಷ್ಟಗುಹ್ಯದಲಿ
ನಿರುತ ಮನ ವರ್ಣವಾಚ್ಯನೆನಿಸಿಹೆ
ದೇವ ತುಂದಿಸ್ಥಾನದಲಿ ಎಂದೆಂದು ನಿಂದೆ

ಯಜ್ಞ ಹೃದಯದಿ ರಾಮ ತ್ವಕ್ ಲಕ್ಷ್ಮೀಪತಿ
ಚರ್ಮ ವರಹ ರುಧಿರ ಶಾಂತಸಂವಿತ್ ಮಾಂಸದಲ್ಲಿ
ಸುಜ್ಞ ಷಡ್ಗುಣ ಮಜ್ಜ ಸಾರಾತ್ಮ ಅಸ್ಥಿಯು
ಹಂಸ ಸ್ನಾಯು ಳಾಳುಕಾ ನೀಪ್ರಾಣದಲ್ಲಿ

ಕ್ಷಕಾರವಾಚ್ಯ ಶ್ರೀ ಲಕ್ಷ್ಮೀನರಸಿಂಹ
ಕ್ಷರಜೀವರಾ ದೇಹ ಸರ್ವಸ್ಥಳದಲ್ಲಿಪ್ಪೆ
ಶ್ರೀಕರಾರ್ಚಿತ ನಿನ್ನ ವಾಕ್ ಮನೋರೂಪಗಳು
ಸಕಲ ಸಚ್ಛಾಸ್ತ್ರಾಗಮಗಳಾಗಿಹವೋ

ಸ್ವರವರ್ಣ ಸಂಯುಕ್ತ ಶಬ್ದ ವಾಕ್ಯಾದಿ ಸಕಲ
ಪುರಾಣಾಗಮ ಶಾಸ್ತ್ರ ಸರ್ವಾದಿ ನಿತ್ಯ

[illegible] ಶಬ್ದಗಳು
ರುತ ನಿನ್ನನುದಿನದಿ ಪೊಗಳುತಿಹವೋ || ೯

ಪ್ರಯೋಜನಕಾಗಿ ವರ್ಣಭೇದದಿ ವಾಕ್ಯ
ಪ್ರಕೃತವಾಗೆಷ್ಟೋ ನಾನುಚ್ಚರಿಸಿದೆ
ಪ್ರಯೋಜನರಹಿತ ಶ್ರೀವೇಂಕಟೇಶ ಶ್ರೀ
ರಗಾದ್ರಿವಾಸ ವಿರಲ ಜಗದೀಶ || ೧೦ |

## ಚೂರ್ಣಿಕೆ

ಗದಾದಿ ವಂದ್ಯನಿಗೆ ಶರಣು || ಪ |

ರಣು ಜಗದೊಡೆಯ ಶರಣು
ಸ್ವಗಾ ನಗದೊಡೆಯ ಶರಣು || ೧

ಗಪ ನಖಾಗ್ರದಲಿ ಮಿಗೆ ಶೋಭಿಸುವ
ವ ಪದನಖಾಗ್ರಕ್ಕೆ ಶರಣು || ೨ |

ೂಡಲಾಗಿರಿಗೆ ಶರಣು
ಯ ಅಡಿದಾವರೆಗಳಿಗೆ ಶರಣು || ೩

ಥಮನದಿ ನಿನ್ನ ಅಡಿದರುಶನಕೆ
ಕೆವರಡಿಗಳಿಗೆ ಶರಣು || ೪

ಟ್ಟುಮೆಟ್ಟಲಿಗೆ ಶರಣು
ನ ಮುಟ್ಟಿ ನೆಟ್ಟನೇರುತಿಹ
ಷ್ಟ ಭಕುತರಿಗೆ ಶರಣು || ೫ |

ಕು ಕಷ್ಟಹರಿಸಿ ಮನತುಷ್ಟಿಯನು ತೋರ್ವ
ಟ್ಟದಂಡಕ್ಕೆಲ್ಲ ಶರಣು || ೬

ರಕಿನ್ನರರ ಕರುಶಿಲಾಲತಾಕಾರ ಕವ
ವಾರಕ್ಕೆಲ್ಲ ಶರಣು || ೭

[illegible]
ಸ್ವರ ಶಬ್ದ ವಾಚ್ಯ ತವ ಶರಣು

ಮೆಲ್ಲ ಮೆಲ್ಲನೆ ಭಕ್ತರುಲ್ಲಾಸವನೆ ತೋರ್ವ
ಚಲ್ವ ಗಾಳಿಗೋಪುರ ದ್ವಾರಕ್ಕೆ ಶರಣು ।

ಲೀಲೆಯಿಂದಲಿ ನಿನ್ನನೋಲೈಪ
ಭಕ್ತರ ಪಾದಪಲ್ಲವಂಗಳಿಗೆ ಶರಣು ॥

ಗೋವಿಂದ ಸಚ್ಚಿದಾನಂದ ಮುಕುಂದನೆಂದು-
ಚ್ಚರಿಪ ಭಕುತರಿಗೆ ಶರಣು ॥

ಹರಿ ಹರೀ ಹರಿ ಎಂದು ಹರಿದಾರಿ ಹಿಡಿದ
ವರ ಅಡಿದಾವರೆಗಳಿಗೆ ಶರಣು ॥

ಪರಿಪರಿ ಬಾಧೆಯಿಂ ತರಳನ್ನ ಕಾಯ್ದ ಶ್ರೀ
ನರಹರಿಯ ಚರಣಾರವಿಂದಕ್ಕೆ ಶರಣು ॥

ತಿರುತಿರುಗಿ ತುರುವನು ಕರುವು ಅರಸುವಂತೆ
ತಿರುದಾರಿ ಮೊಣಕಾಲಮುರಿಗೆ ಶರಣು ॥

ಭಕ್ತರಾಪತ್ತಳಿವ ಶಕ್ತಿಸಂಪತ್ತೀವ ಉತ್ತಮೋತ್ತಮ
ಭಕ್ತರಾ ಮಂಟಪಕ್ಕೆ ಶರಣು ॥ ೯

ಭಕ್ತಿಯಿಂದಲಿ ಸಪ್ತಗಿರಿಯ ದಾಟಿದ ಹರಿ-
ಭಕ್ತ ಜನಸಂದೋಹಗಳಿಗೆ ಶರಣು ॥ ೧

ಶಕ್ತಿ ರಹಿತರಾಗಿ ರಿಕ್ತಹಸ್ತದಿ ಬಂದ
ಭಕ್ತರುದ್ಧರಿಸಲು ನಿಂದ ಸಮೀರನಿಗೆ ಶರಣು ॥ ೧

ಜೀವರಿವರೆನ್ನವರು ದರುಶನವನೀಯೆಂದು ಕ-
ರವ ಮುಗಿದು ಹರಿಯ ಸ್ತುತಿಸುವಗೆ ಶರಣು ॥ ೧

ಪಾವನಾ ಮೂರ್ತಿಗಳನು ಮಾನಸದಿ ಧೇನಿಸಲು
ಭಾವ ಶುದ್ಧಿಯನೀವ ಜೀವೇಶನಿಗೆ ಶರಣು ॥ ೧

[illegible]
ನೆಯ ಮಹಾದ್ವಾರಕ್ಕೆ ಶರಣು ॥ ೨೦ ॥

ನ ರಾಣಿ ಸಿರಿ ಪೆಚ್ಚಿ ತುತಿಸುವ
ಕೃತಾಕಾಶಾವರಣಕ್ಕೆ ಶರಣು ॥ ೨೧ ॥

ಮಹಿಮೋಪೇತ ಸ್ವಾಮಿ ಪುಷ್ಕರಣೀ-
ರಾಜಿತ ಅಶ್ವತ್ಥವೃಕ್ಷರಾಜನಿಗೆ ಶರಣು ॥ ೨೨ ॥

ಪಿಯಾರವಣ ಆದಿ ಶ್ರೀ ಭೂವರಹ
ಯ ಶ್ರೀಪಾದಯುಗ್ಮಕ್ಕೆ ಶರಣು ॥ ೨೩ ॥

ಂಡವೊಡೆಯನ ದಿವ್ಯನಿಲಯದೊಳಿರುವ
ವರಣಕ್ಕೆ ಶರಣು ॥ ೨೪ ॥

ಣ ಸಂಪೂರ್ಣ ವೈಕುಂಠ ಮಂದಿರನ
ಮಯ ಸುವರ್ಣ ಸ್ತಂಭಕ್ಕೆ ಶರಣು ॥ ೨೫ ॥

ಸಂದರ್ಶನಕ್ಕೆ ಗಮನ ನಿರ್ಗಮನವುಳ್ಳ
ಸುರ ಭಕ್ತಜನ ಸಂಘಕ್ಕೆ ಶರಣು ॥ ೨೬ ॥

ವರಣಕ್ಕೆ ಶರಣು ॥ ೨೭ ॥

ರೂಪ ಸುವರ್ಣಮುಖರೀ ನದಿ ವಿ-
ಕೋಟ್ಯತೀರ್ಥ ಸಮಸ್ತ ತೀರ್ಥಗಳಿಗೆ ಶರಣು ॥ ೨೮ ॥

ಸಗು ಹೃನ್ಮನದಿ ಧೇನಿಸುವ ಕಾಂಚನ
ದಲಿ ಬೆಳಗುತಿಹ ಶ್ರೀಶ್ರೀನಿವಾಸನಿಗೆ ಶರಣು ॥ ೨೯ ॥

ಭಕ್ತರಪರಾಧಗಳ ಹರಿಸೆ
ಯ ಸೇರಿದ ಶ್ರೀಹರಿಗೆ ಶರಣು ॥ ೩೦ ॥

ಳ ಗ್ಗೋಲಾಡಿ ಶ್ರೀಶೈಲದೊಳು ನಿಂ-
ತೋಲ ನಾಗಿರ್ಪಗೆ ಶರಣು ॥ ೩೧ ॥

ತಿಟ್ಟ ಬೆನ್ನಿಲಿ ಹೊತ್ತು ನೆಟ್ಟ ಈ ಗಿರಿಯನು
ಶ್ರೇಷ್ಠನೆನಿಸಿದ ದಿಟ್ಟ ಮೂರುತಿಗೆ ಶರಣು ॥ ೩೨

ನರೆಯು ಕೆಗರೀ ಬಂದು ಗಿರಿಯ ವರಹನ ಬೇಡಿ
ಮರುಳುಮಾಡಿದ ಮಾಯಾರಮಣಗೆ ಶರಣು ॥ ೩೩

ಕರಳರೂಪವ ಕೆಡಿಸಿ ಗಿರಿಯ ಹುದರದೊಳಡಗಿ
ಸುರಜ್ಯೇಷ್ಠನೆಂದೀಗ ಪೂಜೆಗೊಂಬುವಗೆ ಶರಣು ॥ ೩೪

ವಟಪತ್ರಶಾಯಿ ನೀ ವಟುವಾಗಿ ಬೇಡಿ ಭ-
ವಾಟವಿಯ ದಾಟಿಸಲು ನಿಂದವಗೆ ಶರಣು ॥ ೩೫

ರಕ್ತ ಮಾತೆಯ ಹರಿಸಿ ಮಿತ್ರನಿಲ್ಲಿಗೆ ಬಂದು
ಉತ್ತಮಗತಿ ಪ್ರದ ಸರ್ವೋತ್ತಮಂಗೆ ಶರಣು ॥ ೩೬

ಕ್ಷಿತಿಸುತೆಯ ಮಾತನು ಹಿತದಿ ಪಾಲಿಸೆ ವೇದ-
ವತಿಯ ಪತಿಯಾಗಿ ನಿಂದವಗೆ ಶರಣು ॥ ೩೭

ಗುಟ್ಟಾಗಿ ಪಾಲ್ಕುಡಿದು ಪೆಟ್ಟಿನಾ ನೆಪದಲ್ಲಿ
ದೃಷ್ಟಿಗೋಚರನಾದ ಬೆಟ್ಟದೊಡೆಯನಿಗೆ ಶರಣು ॥ ೩೮

ಉತ್ತಮಾ ಸ್ತ್ರೀಯರಿಗೆ ನಾಚಿ ಬತ್ತಲೆಯಾಗಿ
ಹುತ್ತದೊಳು ಅಡಗಿ ಮೆರೆದವಗೆ ಶರಣು ॥ ೩೯

ಸಿರಿಯ ಹಯವನು ಮಾಡಿ ಚರಿಸಿ
ಗಿರಿಯೊಳು ಹಯವ ಅರಸಿಯಿಂದ ಹರಿಸಿಕೊಂಡವಗೆ ಶರಣು

॥ ೪೦

ಹಿರಣ್ಯಗರ್ಭನ ಜನಕ ಸನ್ಮಹಿಮ ಸನ್ನಿಧಿಯ
ಕನಕಮಯ ಕವಾಟಕ್ಕೆ ಶರಣು ॥ ೪೧

ತಟಿತ್ಕೋಟಿನಿಭ ಪೂರ್ಣ ಸಂಪೂರ್ಣ ಲಕ್ಷಣ
ಸನ್ಮಂಗಳಾ ಸುಂದರ ಮೂರ್ತೇ ತವ ಶರಣು ॥ ೪೨

ಪ್ರಹ್ಲಾದ ನಾರದ ವಸು ಋಷಿ ಗಂಧರ್ವಾದಿ
ಮುಕ್ತಾಮುಕ್ತಗಣ ವಂದಿತಾ ತವ ಶರಣು ॥ ೪೩

ನಂದ ಸುನಂದನ ಜಯ ವಿಜಯಾದಿ ಪಾ-
ರ್ಷದ ಯುಕ್ತ ಶ್ರೀವಿರಿಂಚಿ ಶೇಷ ಶಕ್ರಾದಿ ಸಂಸೇವ್ಯಮಾನ
ತವ ಶರಣು ॥ ೪೪

ಸರ್ವಾಂಗುಳ್ಯಂಗುಷ್ಠ ದಳವಿಲಸಿತ ಸತ್ಪಾದ-
ಪಂಕಜ ಧ್ವಜ ವಜ್ರಾಂಕುಶಾದಿ ಸುಚಿಹ್ನ ಚಿಹ್ನಿತ
ತವ ಶರಣು ॥ ೪೫

ಚಾರು ಜಾನುಯುಗ ಜಂಘೆಯುಗಳ ಸಂಯುಕ್ತ ತುಂಗ
ಗುಲ್ಫಾರುಣನಖ ಧೃತಾ ದೀಧಿತಿಯುಕ್ತ ತವ ಶರಣು ॥ ೪೬

ಕಂಬುಕಂಠ ನಿಮ್ನನಾಭಿವಳಿ ಮತ್ ಪಲ್ಲವೋದರ
ಬೃಹತ್ ಕಟಿ ತಟ ಶ್ರೋಣಿ ಕರಭೋರು ದ್ವಯಾನ್ವಿತ
ತವ ಶರಣು ॥ ೪೭

ವಿಭ್ರಾಜಮಾನ ಶ್ರೀವತ್ಸವಕ್ಷ ಕೌಸ್ತುಭ
ವೈಜಯಂತಿ ವನಮಾಲ ತವ ಶರಣು ॥ ೪೮

ಪ್ರಲಯ ಪೀವರ ಭುಜ ತುಂಗಾಂಶೋರಸ್ಥ
ಲಾಶ್ರಯ ತವ ಶರಣು ॥ ೪೯

ಅನರ್ಘ್ಯ ರತ್ನ ಮೌಕ್ತಿಕ ವ್ರಾತ ಕಿರೀಟ ಕಟಕಾಂಗದ
ಕಟಿಸೂತ್ರ ಬ್ರಹ್ಮಸೂತ್ರ ಹಾರ ನೂಪುರ ಕುಂಡಲಾನ್ವಿತ
ತವ ಶರಣು ॥ ೫೦

ಚಾರುಪ್ರಸನ್ನವದನ ಮಂದಹಾಸ ನಿರೀಕ್ಷಣ ಸು-
ಭದ್ರ ನಾಸ ಚಾರುಸುಕರ್ಣ ಸುಕಪೋಲ ಅರುಣ ತವ ಶರಣು
॥ ೫೧

ಸಹಸ್ರ ಫಣ ಶಿರೋಮಣಿ ಪ್ರಭಾನ್ವಿತ ಶೇಷಶೈಲಸ್ಥ
ಘನಶ್ಯಾಮ ಪೀತಕೌಶೇಯವಾಸ ಶ್ರೀಪರಮ ಪುರುಷ
ಶಾಂತ ಪದ್ಮಪತ್ರಾಯತೇಕ್ಷಣ ತವ ಶರಣು ॥ ೫೨

ಅನಂತ ವೇದೋಕ್ತ ಮಹಿಮೋಪೇತ ಸರ್ವ ಸ್ವರವರ್ಣ
ಸರ್ವ ಶಬ್ದವಾಚ್ಯ ಪ್ರತಿಪಾದ್ಯ ಶರಣು ||

ಸಚ್ಚಿದಾನಂದಾತ್ಮ ಸರ್ವಸ ಗುಣೋಪೇತ ಸರ್ವ
ಹೃತ್ಪದ್ಮಲಕ್ಷಿತ ತವ ಶರಣು ||

ಅಣು ತ್ರುಣು ತೃಟಿ ಲವ ಕ್ಷಣಾದಿಕಾಲ ಮಹ-
ತ್ಕಾಲಾತ್ಮಕ ನಿತ್ಯನಿರ್ಮಲ ಮೂರ್ತೇ ತವ ಶರಣು ||

ಸೃಷ್ಟ್ಯಾದ್ಯಷ್ಟಕರ್ತೃಕ ಸ್ರಷ್ಟ ಶ್ರೀ ಪರ-
ಮೇಷ್ಠಿವಂದಿತ ತವ ಶರಣು ||

ವಿಶ್ವ ತೈಜಸ ಪ್ರಾಜ್ಞ ತುರ್ಯ
ದೃಷ್ಟ ರೂಪಾತ್ಮಕ ತವ ಶರಣು ||

ಭಯಕೃತ್ ಭಯಹಾರಿ ಭಕ್ತಜನಕಾಧಾರಿ
ಕಂಸಾರಿ ಮುರಾರಿ ಶ್ರೀಹರಿಯೆ ಶರಣು ||

ಭವರೋಗ ಭೇಷಜ ಭಕ್ತಜನಬಂಧೋ
ಮುಕುಂದ ವರದ ಗೋವಿಂದ ಶರಣು ||

ಮುಕ್ತಾಮುಕ್ತಾಶ್ರಯ ಭಕ್ತಜನ ಸಂರಕ್ಷಣಾ
ವ್ಯಕ್ತಾವ್ಯಕ್ತ ಮಹಿಮ ತವ ಶರಣು ||

ವ್ಯಾಪ್ತ ಜಗದಾದ್ಯಂತ ನಿರ್ಲಿಪ್ತ
ಚಿತ್ತದಾಕಾರ ಜಗದಾಪ್ತ ಶರಣು ||

ಚೇತನಾಚೇತನ ವಿಲಕ್ಷಣ ಸ್ವಗತ ಭೇದ ವಿವ-
ರ್ಜಿತ ಪತಿತಪಾವನ ಮೂರ್ತೇ ತವ ಶರಣು ||

ಕ್ಷರಾಕ್ಷರಪುರುಷಪೂಜಿತಪಾದ
ಪುರಾಣಪುರುಷೋತ್ತಮನೆ ತವ ಶರಣು ||

ರವಿಕೋಟಿಕಿರಣ ರತ್ನಕನಕಮಯ ಮಕು-
ಟಾನ್ವಿತ ತವ ಶಿರಸಿಗೆ ಶರಣು ||

ಮಂಡಲಭಾಸ ಮಂದಸ್ಮಿತ
ರಾನಂದ ಆನನಕೆ ಶರಣು ॥ ೧೫ ॥

ವಿಶಾಲಫಾಲ ಕಸ್ತೂರೀ ತಿಲಕಾಂಕಿತ
ೀಲ ಶರಣು ॥ ೧೬ ॥

ನಾಬಿಲ್ಲ ಪೋಲ್ವ ಹುಬ್ಬು ಕಂಜ-
ೀಲ್ ಚಂಪಕಾಮುಗುಳಿಗೆಣೆನಾಸಿಕಕೆ ಶರಣು ॥ ೧೭ ॥

ತುನ ಮಣಿಖಚಿತ ಮಕರ
ುಂಡಲಾನ್ವಿತ ತವ ಕರ್ಣಕ್ಕೆ ಶರಣು ॥ ೧೮ ॥

ಲರ ನಿಷ್ಕಂಟಕ ಶ್ರೀ ವೇಂಕಟೇಶಾ ನಿನ್ನ
ರದ ಕೌಸ್ತುಭಾಭರಣಯುಕ್ತ ಕಂರಕ್ಕೆ ಶರಣು ॥ ೧೯ ॥

ಾದಿಗಳ ಭುಜಬಲನು ನೀನು
ಭೂಷಣ ಬಾಹು ಪರಿಯುಕ್ತ ತವ
ಭುಜಯುಗಕ್ಕೆ ಶರಣು ॥ ೨೦ ॥

ಹಾರಿ ಜಗಚ್ಚಕ್ರ ನಿನ್ನದು ತ್ರಿ-
ನೆ ಕರಗತ ಚಕ್ರ ಶಂಖಕ್ಕೆ ಶರಣು ॥ ೨೧ ॥

ಳು ಬ್ರಹ್ಮಾಂಡ ಕೋಟಿಯನು ಇಟ್ಟಿಂಥಾ
ವಕ್ಷಸ್ಥಳ ಶ್ರೀವತ್ಸಕ್ಕೆ ಶರಣು ॥ ೨೨ ॥

ತ್ನದಹಾರ ಪದಕ ಮೌಕ್ತಿಕಾಹಾರ
ಪುಷ್ಪ ಮಾಲಾಯುಕ್ತ ತವ ಕುಕ್ಷಿಗೆ ಶರಣು ॥ ೨೩ ॥

ೀತಾಂಬರ ಉತ್ತರಿಯವು ಕೋರ ನೀಳ
ಕಾರ ಭಾವಕ್ಕೆ ಶರಣು ॥ ೨೪ ॥

ಪದಕಾಯುಕ್ತ ಬ್ರಹ್ಮಸೂತ್ರ ನಿ-
ದ್ಮಸಂಭವ ಬಂದ ಪದ್ಮನಾಭಿಗೆ ಶರಣು ॥ ೨೫ ॥

ಇಟ್ಟ ರತ್ನಪಟ್ಟ ತೊಟ್ಟ ಗೆಜ್ಜೆಯ ಪಟ್ಟೆ
ಇಟ್ಟ ವೆರೆಯುವ ಬಟ್ಟಕಟಿಯ ಭಾಗಕ್ಕೆ ಶರಣು ॥ ೭

ಉಟ್ಟ ಪೀತಾಂಬರ ನೆರಿಗೆ ತಿದ್ದಿದ ತೆರ ನೆಟ್ಟನಿಂತಿಹ
ಬಟ್ಟ ಜಾನುಜಂಘೆ ಕಟಿಗೆ ಶರಣು ॥ ೭

ಝಗ ಝಗಿಪ ರತುನ ವೈಜಂತಿಯು ಧೃತ ಕ-
ಟಕ ರತ್ನಾಭರಣಯುಕ್ತ ಕರಯುಗ್ಮಕ್ಕೆ ಶರಣು ॥ ೭

ಪರಿಪರಿ ಅಭಯವ ಭಕ್ತರಿಗೆ ಕೊಡುವ ಕನಕರತ್ನಾ-
ಭರಣಯುಕ್ತ ಹಸ್ತಕ್ಕೆ ಶರಣು ॥ ೭

ಗೆಜ್ಜೆ ಕಾಲಂದಿಗೆ ಸಜ್ಜುಗೊಂಡಿಹ ನಿನ್ನ
ಅಬ್ಜಭವಾರಾಧ್ಯ ತವ ಪಾದಕ್ಕೆ ಶರಣು ॥ ೯

ಧ್ವಜ ವಜ್ರಾಂಕುಶಯುಕ್ತ ಅಬುಜಾಂಡ ಕಟಿಹ
ಭೇದಿಸಿದ ರವಿಕೋಟಿ ಭಾಸ ತವ ಪಾದನಖಕ್ಕೆ ಶರಣು ॥ ೮

ಜಲದೊಳು ಹೋರಾಡಿ ಭವಜಲದಲ್ಲಿ ಬಿದ್ದವರ
ಸುಲಭದಿಂದೆತ್ತಲು ನಿಂದ ಸಿರಿವಲ್ಲಭಗೆ ಶರಣು ॥ ೧

ಕಮಠರೂಪದಿ ಭೂಮಿ ತಂದು ಭಕುತರ
ಕರ್ಮಭಾರ ಹರಿಸಿ ಪೊರೆವ ಧರ್ಮಮೂರುತಿಗೆ ಶರಣು ॥

ವರಹಮೂರುತಿ ನಿನ್ನ ಇರವನ್ನು ಮರೆ ಮಾಡಿ
ವರಹ ಕೊಟ್ಟವರಿಗೆ ದರುಶನವ ಕೊಡುವವಗೆ ಶರಣು ॥

ನಂಬಿಹರ ಬೆಂಬಲನು ಎಂತೆಂದು ಸ್ಥಂಭದಲಿ
ಬಂದು ಗಿರಿಯಲಿ ನಿಂದ ಗೋವಿಂದಗೆ ಶರಣು ॥ ೯

ಬೇಡುವರ ಕಷ್ಟ ನೋಡಿ ಅಭಯವ ನೀಡಿ
ಬಿಡದೆ ರಕ್ಷಿಪ ಬಡವರಾಧಾರಿ ಶರಣು ॥ ೯

ದುಷ್ಟ ಭೂಪರುಗಳ ಅಟ್ಟಳಿಯ ಹರಿಸಿ ನಿ-
[illegible] ಗಡೆಯವಿಗೆ ಶರಣು ॥

ಶರಧಿಗೆ ಸೇತುವೆಯ ಕಟ್ಟಿ ದಶಶಿರನ ವಧಿಸಿದ
ಕಾವೇರಪುರ ಲಕ್ಷ್ಮಿಪ್ರಿಯರಸನಿಗೆ ಶರಣು ॥ ೮೮

ಗೋಕುಲದ ಕ್ರೀಡ ಸಾಕಾಗದಲೆ ಬಂದು ಈ
ಶಕಾಕರಾಜನ ಜಾಮಾತನಾದವಗೆ ಶರಣು ॥ ೮೯

ಬುದ್ಧ ಜನರ ಅಪಬುದ್ಧರನೆ ಮಾಡಿ ಜಗ
ದುದ್ಧರಿಸಲು ನಿಂದ ಶುದ್ಧಮೂರುತಿಗೆ ಶರಣು ॥ ೯೦

ಧರಿಯ ಬೆನ್ನೇರಿ ಭೂಭಾರವನ ಹರಿಸಿ ಮೇಲು-
ಗಿರಿಯಲಿ ನಿಂದ ಶ್ರೀಹರಿಗೆ ಶರಣು ॥ ೯೧

ವಾಸುಕೀ ಶ್ವೇತಾದಿ ಸರ್ಪಜಾತಿಗಳುಳ್ಳ ಪಾತಾಳಲೋಕ-
ದಾಶ್ರಯ ತವ ಪಾದಮೂಲಕ್ಕೆ ಶರಣು ॥ ೯೨

ಅಶ್ವ ಗಜ ಉಷ್ಟ್ರಾದಿ ಪ್ರಾಣಿಗಳಿಗಾಗಾರ
ರಸಾತಳ ಲೋಕಕಾಶ್ರಯ ತವ ಪಾದಾಗ್ರಕ್ಕೆ ಶರಣು ॥ ೯೩

ತಕ್ಷಕ ಕಾಳಿ ಸುಷೇಣಾದಿ ಉರಗಾಧಿಪರು ವಿಹರಿಸುವ
ಮಹಾತಳ ಲೋಕಕಾಶ್ರಯ ತವ ಪಾದಗುಲ್ಫಕ್ಕೆ ಶರಣು ॥ ೯೪

ಅನಲಾಕ್ಷವೈರಿ ತ್ರಿಪುರರು ವಿಹರಿಸುವ ತಳಾ-
ತಳ ಲೋಕಕಾಶ್ರಯ ತವ ಜಂಘಾದ್ವಯಕ್ಕೆ ಶರಣು ॥ ೯೫

ವಾಮನನ ಪೂಜಿಸಿ ಕೃಷ್ಣಂಗ ಮಸ್ತಕವಿತ್ತ ಧನ್ಯ
ಬಲೀಂದ್ರ ನಿಂತ ಸುತಳ ಲೋಕಕಾಶ್ರಯ ತವ ಜಾನುಗಳಿಗೆ ಶರ
॥ ೯೬

ಬಲನೆಂಬ ದನುಜನಿಂ ಪುಟ್ಟಿದ ಮಾಯ್ಗಳು ಕ್ರೀಡಿಪ ವಿ-
ತಳ ಲೋಕಕಾಶ್ರಯ ತವ ಊರುದ್ವಯಗಳಿಗೆ ಶರಣು ॥ ೯೭

ಮೃಗಪಶುಜಾತಿ ದೈತ್ಯದಾನವ ಕದ್ರು ತಂ-
ಬಿಕೊಂಡಿಹ ಅತಳಲೋಕಕಾಶ್ರಯ ತವ ಶ್ರೋಣಿ
ದೇಶಕೆ ಶರಣು ॥ ೯೮

ರ್ಗಸಾಧನ ಮಾಳ್ಪ ದಿವಿಜ ದಾನವ ಮನುಜ ನವಖಂಡ
ಶರಧಿ ಗಿರಿ ನದಿಯುಕ್ತ ಜಂಬೂದ್ವೀಪ
ದಿಂದಾಕಾರ ಅವನಿ ಉತ್ಪಾದಕ ತವ ಮಧ್ಯಕ್ಕೆ ಶರಣು || ೯೯ ||

ವ ದಿಕ್ಪಾಲಕರು ಋಷಿಸಪ್ತ ನವಗ್ರಹರು ಸರ್ವರೊಳೈಪ
ವರ್ಲೋಕಕಾಶ್ರಯ ತವ ನಾಭಿಕಮಲಕ್ಕೆ ಶರಣು || ೧೦೦ ||

ನಿಕರಾದಿ ಪುರುಹೂತ ಕರಿಐರಾವತ ಶಚಿ ಸೂತ
ಕಲಿ ನಂದನವನ ಸುಶೋಭಿತ ಸುರಲೋಕಕಾಶ್ರಯ
ತವ ಉದರ ಭಾಗಕ್ಕೆ ಶರಣು || ೧೦೧ ||

ಗವೇದೋಚ್ಚಾರ ಗುಣಗಾನಮಾಳ್ಪ ಋಷಿಗಣಯುಕ್ತ
ೃದಿ ದೇವತೆಗಳು ಚಿತ್ರವಿಚಿತ್ರ
ಕಾದಿ ಮುನಿಗಳ ಮಹರ್ಲೋಕಕಾಶ್ರಯ ತವ ಕೌಸ್ತುಭ
ಭೂಷಿತ ಕಂಠಕ್ಕೆ ಶರಣು || ೧೦೨ ||

ಮಲಾನಂದ ಸಾಧನದಿಂದ ಸರ್ವಗುಣಗಣ
ಕ ನುತಿಪ ಮುಕ್ತ ಜೀವರ ಭರಿತ ಜನ–
ರ್ಲೋಕಕಾಶ್ರಯ ತವ ದಿವ್ಯ ವದನಕ್ಕೆ ಶರಣು || ೧೦೩ ||

ಲನೇತ್ರ ನಿರುಕ ಸಕಲ ಋಷಿಗಣಯುಕ್ತ
ಮೂರುತಿಯನು ಸ್ತುತಿಸುವ ತಪಲೋಕಾ–
ಶ್ರಯ ತವ ಲಲಾಟಕ್ಕೆ ಶರಣು || ೧೦೪ ||

ರಾನನು ಚತುರ ಮೂರುತಿಯನ್ನು ಸ್ತುತಿಸುತ್ತ
ರದಶ ಲೋಕಾಧಿಪತ್ಯವನ್ನು ಮಾಳ್ಪ ಸತ್ಯ–
ಲೋಕಕಾಶ್ರಯ ತವ ಶಿರಸ್ಸಿಗೆ ಶರಣು || ೧೦೫ ||

ಗ ಮೊದಲು ಪಾದಮೂಲ ಮಧ್ಯದ
ಮಂಗಳಾಂಗೋಪಾಂಗಕ್ಕೆಲ್ಲ ಶರಣು || ೧೦೬ ||

ವಂಗಾಶ್ರಿತ ತತ್ತ್ವರಂತರ್ಯಾಮಿ ತತ್ತ್ವಾತ್
ಶ್ಚರ್ಯ ಕಾರಣರೂಪಕ್ಕೆ ಶರಣು || ೧೦೭ ||

ಖ ಶ್ರೀ ವೇಣುಗೋಪಾಲ ಕೃಷ್ಣ ತವ ಶರಣು || ೧೦೮ ||

ಹಿ ಶ್ರೀ ಜಯತೀರ್ಥ ವಾಯುವಂತರ್ಗತ
ಜ್ಞಾತ್ಮಕ ನವನೀತಧರ ಪಾಂಡುರಂಗ ಕೃಷ್ಣ ವಿಠಲ ತವ ಶರಣು
|| ೧೦೯ ||

ಖ ಶ್ರೀ ವೇಂಕಟೇಶಾತ್ಮಕ ಸಿರಿ ಉರಗಾದ್ರಿ
ವಾಸ ವಿಠಲ ತವ ಶರಣು || ೧೧೦ ||

ನಮಾಂ ಪಾಹಿ ಶ್ರೀ ವೇಂಕಟೇಶಾಭಿನ್ನ
ಗಾದ್ರಿವಾಸ ವಿಠಲ ತವ ಶರಣು ಶರಣೂ || ೧೧೧ ||

ಬೋಧಿ ತಾಳ – ಆದಿ

ನಮೋ ನಾರಾಯಣಾಯ
ನಮೋ ನಮೋ ನಮೋ || ಪ ||

ನಮೋ ಓಂಕಾರದಿ ನೀ ಘನ
ಮ ಅಷ್ಟಾಕ್ಷರಾತ್ಮಕನೆ || ಅ ಪ. ||

ವ ಪ್ರತಿಪಾದ್ಯ ನೀನಷ್ಟಾಕ್ಷರದೊಳು ವಿಶ್ವ ತೈಜಸ
ಜ್ಞ ತುರ್ಯಾತ್ಮ ಅಂತರಾತ್ಮ ಪರಮಾತ್ಮ ಜ್ಞಾನಾತ್ಮ
ರ್ಣಾತ್ಮಕ ನೀ ಓಂಕಾರದೊಳು ಅ ಉ
ನಾದ ಬಿಂದು ಘೋಷ ಶಾಂತಾ
ಅಂತದೊಳು ಪ್ರತಿಪಾದ್ಯ ಮೂರುತಿ ಹರೇ || ೧ ||

ವದೊಳು ಆದಿವರ್ಣದಿಂದಭಿವ್ಯಕ್ತಿ
ದಶ ಸುಸ್ವರಗಳ್ ಅನಂತ ವೇದಗಳು ಕಾಲಗಳ್ ವ್ಯಕ್ತವೊ
ಲಕುಮಿಯರಭಿಮಾನಿಗಳನಂತ ವೇದಗಳಿಂ–
ರತ ನಿನ್ನಾ ಗುಣಗಳ ನುತಿಪರೊ ವಿಶ್ವಮೂರುತಿ ಹರೇ || ೨ ||

ದ್ವಿತೀಯದೊಳು ನೀ ಪ್ರತಿಪಾದ್ಯ ಅಭಿವ್ಯಕ್ತವಾದ–
ಕವರ್ಗ ವರ್ಗ ಮೈದು ಪಂಚಭೂತಗಳು

ವರ್ಣ ದೊಳಭಿಮಾನಿಗಳ್ ಭೂತಕೆ ಗಣಪ ಪ್ರವಹ ಪಾಂ
ವಹ್ನಿ ಶಚಿಯು ವರುಣರು ಗುಣಗಳ ನುತಿಪರೊ ತ್ರಿಜಗ

ಪ್ರತಿಪಾದ್ಯನೆ ಮಕಾರವಾಚ್ಯ ಶ್ರೀಪ್ರಾಜ್ಞ ನಿನ್ನಿಂದಭಿ-
ವ್ಯಕ್ತಿ ಚವರ್ಗ ಪಂಚಕ ಜ್ಞಾನೇಂದ್ರಿಯ ವೈದು
ತತ್ತದಭಿಮಾನಿ ಅಶ್ವಿನಿ ವರುಣ ಸೂರ್ಯ ಪ್ರಾಣ ದಿಗ್ದೇ
ವತೆಗಳಿಹರು ಪ್ರತಿಗಾಣೆನೊ ಶ್ರೀಪ್ರಾಜ್ಞ ಮಾರುತೀ ಹರೆ

ನಾದವಾಚ್ಯ ಪ್ರತಿಪಾದ್ಯ ತುರ್ಯನೆ ಅಭಿವ್ಯಕ್ತಿ
ಪಂಚವರ್ಣ ಟವರ್ಗ ಕರ್ಮೇಂದ್ರಿಯಗಳ್
ತದಭಿಮಾನಿಗಳು ಅದರು ಸ್ವಯಂಭುವಮನು ಜಯಂತ
ದಕ್ಷ ವಹ್ನಿ ದೇವತೆಗಳು ಅದುಭುತ ಮಹಿಮ
ಶ್ರೀ ತುರ್ಯ ಮೂರುತೀ

ಬಿಂದುವಾಚ್ಯ ಪ್ರತಿಪಾದ್ಯ ನೀನಾತ್ಮ ಬಿಂದು ವಿಂದ ತವ
ಪೊಂದಿಕೊಂಬುದು ತನ್ಮಾತ್ರ ಪಂಚಕ
ಗಂಧ ರಸ ರೂಪ ಸ್ಪರ್ಶ ಶಬ್ದಗಳಿಗೆ ಪಂಚವಾಯುಗಳ
ಬಂಧಮೋಚಕ ನೀ ಕಾರಣ ಹರೇ

ಘೋಷದಿಂದಲಭಿವ್ಯಕ್ತಿ ಪಂಚಮನೋವೃತ್ತಿಗಳದರಭಿಮಾ
ಓಷಧೀಶಧರ ಖಗಪ ಶೇಷೇಂದ್ರ ಕಾಮರು
ಘೋಷವಾಚ್ಯ ಅನಂತರಾತ್ಮ ಪ್ರತಿಪಾದ್ಯನಹುದೊ
ಪಕಾರ ಪಂಚಕ
ದೋಷರಹಿತ ಮನೋಧಾಮದಿ ನೀ ಮೆರೆ

ಪರಮಾತ್ಮನೆ ನೀ ಶಾಂತವಾಚ್ಯ ಪ್ರತಿಪಾದ್ಯನಹುದೊ
ಅಭಿವ್ಯಕ್ತಿ
ಕಾರಾದಿ ಸಪ್ತವರ್ಣ ಸಪ್ತಧಾತುಗಳಲ್ಲಿ
ನಿರುತದಿ ಋಜು ರಾಮ ಲಕುಮಿಪತಿಯು ವರಹ ಶೇ
ಷಡ್ಗುಣ
ಇರು ಸರಿವರ ಪರಿ ಅರಿಯೆನೊ ಹರಿಯೆ

ಂತದೊಳು ಪ್ರತಿಪಾದ್ಯನಾಗಿಹೆ ಜಾಜ್ಞನಾತ್ಮ
ಾದಿ ತ್ರೈವರ್ಣ ಅದರಿಂದ ಗ ಣತ್ರಯವೊ
್ರಯ ಜಾಗ್ರತ ್ವಪ್ನಸುಷುಪ್ತಿ ವಿಶ್ವಾದಿರೂಪದಿಂ
ಎವ ಶ್ರೀ ವೇಂಕಟೇಶ ಉರಗಾದ್ರಿವಾಸ ವಿಠ್ಠಲ ಮೂರುತಿ
|| ೯ ||

೦ ತಾಳ – ಆದಿ

ಕೊ ಶ್ರೀನಿವಾಸ ಜಗದೀಶ || ಅ ||

ಎಗಿರೀಶ ಹೃತ್ಕಮಲದ ನಿವಾಸ
ಶ ನೀನೆ ಅವಿನಾಶನೆ ಅನಿಶ || ಅ.ಪ. ||

ಾತ್ತ ಬಂಧು ನೀ ನಿನ್ನೊರತು ಅನ್ಯರುಂಟೇ
ೀಕ್ಷನು ನೀ ದೀನರಕ್ಷನ
ನರ್ಪಿಸಬಲ್ಲೆ ನೀಬಲ್ಲೆ ಅನುದಿನ
ೀವಾಜಕಾರ್ಯಾದಿ ನಾನೆಸಗುವುದ ಬಲ್ಲೇ ಅಲ್ಲಲ್ಲೇ
ಹಿಮನೆ ಎನ್ನ ಮನದಲ್ಲಿ ಅನುದಿನ
ನೆನೆಯುವುದನೆ ಇತ್ತು ಕೊನೆಗಾಣಿಸು ಇನ್ನು || ೧ ||

ಕಲ್ಪ ನೀ ನಿತ್ಯನೂತನ ಪ್ರಭುವೇ
ಕದಿ ಭಕ್ತೋತ್ತಮರು
ೀವಿಸುತಿಹರೋ ಅಪರ ಭೃತ್ಯನನಿವ ಸಂ–
ತ್ತು ಆಪತ್ತು ಹರಿಸಿ ಭಕ್ತಿಯು ನೀಡಯ್ಯ
ಕರ್ಮ ಬೆನ್ಹತ್ತಿ ಹತ್ತಿ ಅನಿ
್ತ ಕೊನೆಗೆ ನಾ ಉನ್ಮತ್ತನಾದೆ || ೨ ||

ವನ್ನೆ ದೇವಾ ನೀ ಪ್ರಣತಕಲ್ಪದ ಠಾವಾ
ತಿ ಜನರ ಮುಖ್ಯಪ್ರಾಣಾಂತರ್ಗತ
ಾಜಕಯ್ಯ ಹೇ ಜೀಯ ಗುಣಮಣಿ ಶ್ರೀವೇಂಕಟೇಶ ಶ–
ಕರ ಇನ್ನೂ ನಿನಗೆಣೆಯೆ ದೊರೆಯೆ
ಬೇಡುವ ನಿನ್ನ ದಣಿಸಲಾಗದು ಇನ್ನು
ಮು ನೀ ಉರಗಾದ್ರಿವಾಸ ವಿಠ್ಠಲ || ೩ ||

ರಾಗ – ಕಾಂಬೋಧಿ

ಆರಿಗೆ ಆರಾಗರಯ್ಯ–ಶ್ರೀವಾಸುದೇವ ನೀನೊಬ್ಬನಲ್ಲದೇ

ಮಾತೆ ಇದ್ದರು ದೃಢವ್ರತನಾದ ಧ್ರುವಗೆ ಶ್ರೀ–
ಪತಿ ನೀನೆ ಗತಿಯಾದೆ ಆರಾದರಯ್ಯ
ಪಿತನು ಹಿತನೆನ್ನೆ ಪ್ರಹ್ಲಾದಗಾದಂಥ
ಗತಿ ನೋಡಿ ನರಹರಿ ಗತಿಪ್ರದ ನೀನಾದೆ

ಭ್ರಾತರಾವಣನ ಸಹಜಾತ ವಿಭೀಷಣನ ನಿ–
ರ್ಭೀತನಮಾಡಿ ಕಾಯ್ದವರಾರಯ್ಯ
ಪತಿಗಳೈವರು ಸತಿಯಾ ಅತಿಖೇದ ಹರಿಸಿದರೆ?
ಸಂತೈಸಿದಾನಾಥರಕ್ಷಕ ಹರಿಯಲ್ಲವೇ

ಬಂಧುಗಳಿರೆ ಗಜರಾಜನ ನಕ್ರವು
ಬಂದು ಬಾಧಿಸೆ ಬಂಧ ಬಂದು ಹರಿಸಿದರ್ಯಾರೊ
ಅಂದು ಇಂದು ಎಂದನಿಮಿತ್ತ ಬಂಧು ನೀ
ಬಂಧುವಲ್ಲನೆ ಎಲ್ಲರು ಬಂಧಕರಯ್ಯ

ಸತಿಯಿಂದ ದಶರಥಪತಿಯು ಸುತನನಟ್ಟೆ
ಗತಿಕಾಣವೆ ತಾನೇನಾದನೊ–ಸತತ ಕುರುಪತಿ
ಅತಿ ಹಿತನಾದನೆ ಭೀಷ್ಮಗೆ
ಪತಿತಪಾವನ ನೀನಂತ್ಯಕಾಲಕಾಯ್ವೇ

ಸುತರು ರಕ್ಷಕರೇನೊ–ಶತಸೂನುಗಳಿಗೆ ಪಿತ
ಧೃತರಾಷ್ಟ್ರಗೆ ಕೊನೆಗಾರಾದರಯ್ಯ
ಇತರರ ಪಾಡೇನೊ ಶ್ರೀ ವೇಂಕಟೇಶನೆ
ಗತಿ ಎಮಗೆ ಉರಗಾದ್ರಿವಾಸ ವಿಠ್ಠಲನಲ್ಲವೆ

ರಮೆಯರಸಾ ರಕ್ಷಿಸೋ
ನಮಿತ ಜನರ ಕಲ್ಪದ್ರುಮ ಸುಮನೋಹರ

ಮಿತ ಸುಗುಣಪೂರ್ಣ-ಶಮಲವರ್ಜಿತ ಹೃ-
ತ್ಕಮಲ ದ್ಯುಮಣಿ ನಿಸ್ಸೀಮಮಹಿಮ ಸಂಪೂರ್ಣಕಾಮ ಹರಿ
|| ೧

ಸೃಷ್ಟಿಗೊಡೆಯ ಪರಮೇಷ್ಟಿಜನಕ ನಿನ್ನಿಷ್ಟರ ಅಘಸಂ-
ಕಷ್ಟ ಹರಿಸಿ ಸಂತುಷ್ಟಿಯನೀವ ನಿರ್ದಿಷ್ಟ ಫಲಪ್ರದ || ೨

ಉರಗಾದ್ರಿವಾಸ ವಿರಲ ದೇವ ಹರೇ ಕರೆ ನಿನ್ನ ಬಳಿ
ರಿ ವೇಂಕಟೇಶನೆ ದೊರೆ-ಪೊರೆ ನಿನ್ಹೊರತು ನಾನರಿಯೆ || ೩

ಬಿಲಹರಿ — ತಾಳ –

ವೇಂಕಟೇಶನೆ ಎನ್ನ ಪಾಲಿಪುದೊ
ಸಂಕಟಾರ್ತಿ ಹರಣಾ ||

ಪಂಕಜೋದ್ಭವ ಹರ ವಂದ್ಯ ಪರಾತ್ಪರ
ನಿಖಿಲಾಗಮೈಕ ವಿಜ್ಞೇಯ ಲೋಕೋದ್ಧಾರ || ಅ.

ಇಂದು ಮಂದವಾರ ಚೈತ್ರ ವತ್ಸರ ಬ-
ಹುಧಾನ್ಯ ನಂದ ಶುಕ್ಲ ದ್ವಿತೀಯ
ಸಂಧ್ಯಾಸವನ ಬಂದು ಕೀರ್ತನ ಸೇವಾ-
ನಂತರದಿ ಎನ್ನ ಮಂದಿರದೊಳು ಸುಪ್ತಾವಸ್ಥೆ
ಇಂದಿರಲಾಗ ಅಂದು ಕಡೆಯ ಯಾ-
ಮದಿ ತೈಜಸನೆ ನೀ ಹಂಸರಿಂದೆನ್ನ ಮನಸಂಶಯ ಹರಿಸಿದೆ ||

ಅರುಣೋದಯದಲೆದ್ದು ಮುದದಿ
ಕರಣ ಶುದ್ಧನಾಗಿ ತ್ವರಿತದಿ ಸ್ವಪನದ ವಿ-
ವರವಾಗಿ ಹರುಷದಿ ಹರಿಪೂಜಾ ಕಾಲದಿ
ಅರುಹಿದ ಮರುತಮೂರುತಿಯಾ
ಉರುತರ ಚರಿತೆಯ ನಿರುತ ಪೊಗಳಲಾಯುತವಿತ್ತ
ತಿರುಪತಿ ಶೈಲಾಧಿಪ ಮಮ ಕುಲಸ್ವಾಮಿ ||

ಸಾರ ಸಚ್ಛಕಾಂತಿಯನು ಕರುಣಿಸೋ
ಹರಿಗುರು ಸೇವೆಯನು ಸರ್ವ ಸದ್ಯೋಗ್ಯ ಸಾಧನವನ್ನು
ಪರಮಹಂಸರು ಇತ್ತ ಶ್ರೀವೇಂಕಟೇಶಾಂಕಿತ
ಗುರುತಿಯ ನುತಿಪಾ ನಿಜಭಕುತರ
ಚರಣಕಮಲ ಬಂಡುಣಿಯೆನಿಸಿ ಇವನ
ನಿರುತ ರಕ್ಷಿಸೋ ಉರಗಾದ್ರಿವಾಸವಿಠಲಾ ॥ ೬

ಶಾರದಾವ ಟ್ಸ್ ತಾಳ –

ಪನ್ನಗಾಚಲವಾಸ–ಪ್ರಸನ್ನರ ಪಾಲಿಪ ಶ್ರೀಶಾ–ಸರ್ವೇಶ
ಕನಕ ರತನ ಮಯ ಮುಕುಟಾಧಾರ
ಘನ ನವ ಮಣಿಮಯ ಕುಂಡಲಧರ
ಇನಕೋಟಿಪ್ರಭ ಕೌಸ್ತುಭಹಾರ
ಮನಸಿಜ ಧನುಸುಮ ಭ್ರೂಸಮಾಕಾರ
ಘನ ಚಂಪಕ ಗೆಣೆನಾಸ ಗಂಭೀರ
ವನಜದಳಾಯತೇಕ್ಷಣಾಕರ
ವನರುಹಾಘನಸ್ಮಿತ ಸುಗಂಭೀರ
ಮುನಿಮಾನಸ ಮಂದಿರ ಸುವಿಹಾರ
ಚಿನುಮನ ಅಪ್ರಾಕೃತ ಶರೀರ
ತನುಮನ ವಚನದಿ ಅನವರತದಿ
ನಿನ್ನಡಿ ಬಿಡದಲೆ ಕಿನ್ನರ ಸುರ ಮುನಿಗಣ
ತನು ಸದನದಿ ಹೃದ್ವನಜದಿ ಘನಪದ
ವನರುಹ ಧೇನಿಸಿ ದೃಢಸ್ನೇಹದಿಂದಿರುವ
ತನು ಮನ ಧನ ಅರ್ಪಿಸುವ ದಿನದಿನ ಕರ್ಮ ವೊಪ್ಪಿಸುವ
ಘನಮೋದದಿಂದಲಿರುವಾ ನುತಿಸುವಾ ಬೇಡುವಾ
ಜನುಮ ಸ್ಥಿತಿ ಮೃತಿಗೆ ಜಿದರದಿರುವಾ
ನಿನ್ನವರೊಳು ತನ್ನಿರವ ತೋರಿ ಮಯ
ಘನ್ನ ಪಾತಕ ಕಳೆದ ನ್ನತ ಸಾಧನವನ್ನ ಕೊಟ್ಟು
ಸನ್ನಿಯಿಂದಲಿ ಪೊಗಿಪಾ ತನ್ನ ಧಾಮದಿ ಕಾಪಿಡುವಾ ॥ ೧

ಉತ್ತಮ ಮೌಕ್ತಿಕ ಸರಿಗೆ ಲಕ್ಷ್ಯಗಳ
ಕ್ರೋತ್ತಾಗಿಹ ತ್ರಿವಳಿಯು ಪಾಲಾ
ತುನ ಪದಕದಾ ಸರದ ವಿಹಾರ
ತಿಮನೋಹರ ಹೃದಯು ವಿಶಾಲ
ಶ್ರೀ ಸಿರಿವತ್ಸ ವಕ್ಷದಿ ಲೋಲ
ಯಕ್ತಿದ ಭಾಪುರಿ ಭುಜದ ಪುಷ್ಕರ
ತಾ ಸಿಂತ ಉಪವೀತದಿ ಲೋಲ
ಶೋಭಿತ ತವ ನಾಭಿಯು ಕಮಲ
ಉತ್ತಮ ಕಮಲ ಕಲ್ಹಾರದ ಮಾಲ
ಸ್ತಾಭರಣದಿ ಮೆರೆಯುತ ಪೊಕ್ತಿದ
ಕಪ್ರದಾಯುಧಕತ್ತಿ ದುರುಳರೋಸ್ತತ್ತರ ಸದೆದು
ದ್ಭಕ್ತರ ಮನೋರಥ ಪೂರ್ತಿಗೈವ
ರುಷೋತ್ತಮ ಭವಭಯ ಹಾರೀ
ಕ್ಷನೂತನ ವಿಹಾರೀ—ಪ್ರಣವಸ್ಥನೆ ನೀ ಕಂಸಾರೀ
ಪ್ರಥಕ್ ಪೃಥಕ್ ತದಾಕಾರೀ—ನರಹರೀ—ಶ್ರೀಹರೀ
ಪ್ರತ್ಪುಷ್ಕರ ದಳ ವಿಹಾರೀ
ಕ್ತವತ್ಸಲ ಅವ್ಯಕ್ತನೆ ಜಗದುತ್ಪತ್ತಿ ಸ್ಥಿತಿ ಲಯು
ರ್ತ ವ್ಯಾಪ್ತ ನಿರ್ಲಿಪ್ತ ಸತ್ಯ ಸ—
ಪ್ರತ್ತಮ ನೀನೆ ಮುರಾರೀ ಉತ್ತಮ ಸಂಗ ರಹಿತ ಶೌರೀ ॥ ೨

ಕ್ಷಿಧ್ವಜ ಸುಖಭರಿತ ವಿಹಾರ
ಕ್ಷಿಯೊಳು ಅಬ್ಜಾಂಡಕೋಟಿಗಾಧಾರ
ಶ್ರೀಕ್ಷ್ಯಾದ್ಯಮರನುತ ಗುಣಾಧಾರ
ಲಕ್ಷ್ಮಿಮೂರುತಿ ಸರ್ವಕಾಲಾಧಾರ
ಕ್ಷದೊಳು ಶ್ರೀವತ್ಸ ಗಂಭೀರಾ ಮು—
ಲಕ್ಷ್ಮಗಳೊಡೆಯನೆ ವೈಕುಂಠಾಗಾರ
ಕ್ಷರಕ್ಷರದ ವಿಲಕ್ಷಣ ಧೀರ
ಕ್ಷಕ ಭಕ್ತಜನರುದ್ಧಾರ
ಕ್ಷಿಣಾಕ್ಷಿ ಕಂಠ ಹೃದಯವಿಹಾರ
ಕ್ಷಕ ತ್ರಿಜಗದಾಧ್ಯಕ್ಷ ಕರುಣಾಕಟಾಕ್ಷದಿ ಈ ಜಗ

ವೃಕ್ಷದೊಳು ನಿರಪೇಕ್ಷನಾಗಿ ಫಲಭಕ್ಷಿಪ ಜೀವರ
ಲಕ್ಷಕೋಟಿ ನೀ ಸಾಕ್ಷಿಯಾಗಿಹೆ ನೀ ರಕ್ಷ ಕಮಲಾಕ್ಷ
ಪಕ್ಷಿವಾಹನ ನಿನ್ನ ಪರೋಕ್ಷಾಪೇಕ್ಷಿಗಳಿಗೆ ನಿನ್ನ ಕ-
ಟಾಕ್ಷ ವೀಕ್ಷಣದಿಂದ ಪ್ರತ್ಯಕ್ಷ ರಿಪುಶಿಕ್ಷ ಅಧ್ಯಕ್ಷ
ಧಾಕ್ಷಿಯಾಗಿಹೆ ನೀ ರಕ್ಷಾ ಮೋಕ್ಷ ಜೀವರಿಗಪೇಕ್ಷವಿತ್ತು ನಿ-
ಷ್ಪಕ್ಷನಾಗಿ ಜಗ ರಕ್ಷಿಸುತ್ತ ಸುರಪ ದಕ್ಷ ಚತು-
ರಾಕ್ಷರಸ್ಥ-ನರಹರ್ಯಕ್ಷ ಶರಣ ಜನರ ಕಲ್ಪವೃಕ್ಷ ॥ ೩

ಪಟುತರಾಂಗ ಸುಕಟಿಯು ವಿಸ್ತಾರ
ಕೊಟ್ಟಿಹ ರತುನದ ಪಟ್ಟಿ ವಿಹಾರ
ಉಟ್ಟಿಹ ಪಟ್ಟೆ ಪೀತಾಂಬರ ಧಾರಾ
ಬಟ್ಟಜಾನುದ್ವಯ ಜಂಘಾ ಶೂರ
ಇಟ್ಟಿಹ ಸಾಲಿಗ್ರಾಮದ ಹಾರ
ದಿಟ್ಟವಾಗಿಹೆ ಕಾಲಂದಿಗೆಯ ವಿಹಾರ
ಇಟ್ಟಿಹ ಬೆರಳಲಿ ರತ್ನದುಂಗುರ
ಶ್ರೇಷ್ಠ ಪದದಿ ಧ್ವಜಚಿಹ್ನಾಕಾರ
ದಿಟ್ಟನಖಾಗ್ರದಿ ತಟಿತಪ್ರಭಾಕರ
ಪಟುತರ ತವ ಪಾದ ಚಟುಲರೂಪ ಮನ-
ತಟದಿ ಇಟ್ಟು ಲವ ತೃಟಿಯು ಬಿಡದೆ ಸುರ-
ಕಟಕ ನಿತ್ಯ ಕರಪುಟದಿ ನಮಿಸಿ ಉತ್ಕಟದಿ ಗುಣಗಳ
ಪಠಣದಿಂದಿರೆ ಮುದದಿ ಪಟುತರ ಭಕುತಿಯ ಭರದೀ
ನಟಿಸುತ ತನು ಮರೆದಾತುರದೀ ಉ-
ತ್ಕಟದಲಿ ನುತಿಸುತ ಭರದೀ
ನಟಿಸುವಾ ಸ್ಮರಿಸುವಾ ಭಕುತಜನರ ಕಂಟಕವಾ ಅ
ಧಿಟರು ನೀತ ಭಟರೆಂದು ನಿಜಜರರಾಲಯದಿ ಇಂ-
ಬಿಟ್ಟು ಭಕುತರ ಕಟಕ ಪೊರೆದು ಭವಾಬ್ಧಿಯ
ದಾಟಿಸುವ ಅಧ್ಯಕ್ಷ ಕುಟಿಲರ ಕಟಂಕ ಜಗಶಿಕ್ಷಾ ॥ ೪

ಸ್ವಗತಭೇದ ವಿವರ್ಜಿತ ಶೂನ್ಯ

ಗೆ ಬಗೆ ಸ್ವರಶಬ್ದವಾಚ್ಯವರೇಣ್ಯ
ಗಣಿತಗುಣಗಣಪೂರ್ಣ ಸಂಪೂರ್ಣ
ೋಗಿಗಳ್ ಪೊಗಳುವ ಸವಿತೃವರೇಣ್ಯ
ಗೆಗಾಣರೋ ಸಾಕಲ್ಯದಿ ನಿನ್ನ
,ಗುಣ ವಿರಹಿತನಾಗಿಹನ್ನ
ಜಾಧವ ಪಿತನುತ ಪಾವನ್ನ
ಗರ್ಣ ಶ್ರೀ ಭೂದೇವಿಯರ ರಮಣ
ುಗಯುಗದೊಳು ಜಗಕಾರ್ಯದಿ ಧರ್ಮ ಪ್ರಘಟ-
ೋಸುರ' ಸ್ವಗತರೂಪ ತಾ ನೆರಹಿ ಕ್ರೂರ ಪಾ-
ಘೋರ ಮಡುಹಿ ಜಗದೇಕವೀರ ಮಿಗೆ ಜನಿಸಿದೆ ಜಗದೀಶಾ
ಗುಣ ಸಾಕಾರ ಸರ್ವೋತ್ತಮ ಶ್ರೀಶಾ
ಜ್ಜಾಲ ಲೀಲಾವಿಲಾಸ ಜಗವೆಲ್ಲ ಈಶಾವಾಸ್ಯ
ಜಿಸೀ ನೆಲಿಸೀ ಸ್ವಪ್ರಯೋಜನರಹಿತನೆನಿಸೀ
ಗವರೂಢ ಶ್ರೀ ವೇಂಕಟೇಶ ಪನ್ನಗಗಿರಿಯೊಳು ನೆಲಿಸಿ
ಪರ ಯೋಗ್ಯಸಾಧನೆ ಇತ್ತು ಮನೋಭೀ-
ಪನ್ನ ಸಲಿಸಿ ಉರಗಾದ್ರಿವಾಸ ವಿಠ್ಠಲ ನೆನಿಸೀ ॥ ೫ ॥

ತ್ರಿಕೋಟಿ ಮಹಾಮಂತ್ರಾರ್ಥ ಹೃದಯಾಬ್ಜ
್ರಮಂಡಲದೊಳು ಪ್ರತಿಪಾದ್ಯ* ॥ ಪ ॥

ದಯಾಬ್ಜ ಮಿತ್ರ ಘೃಣೀ ಎಂದು ಸ್ತೋತ್ರ
ಕೋಣದೊಳು ಹ್ರೀಂ ಶ್ರೀಂ ಕ್ಲೀಂ ಮಾತ್ರ
ದದಿಂದ ಜ್ಞಾನೇಚ್ಛಾಕ್ರಿಯಾ ಶಕ್ತಿತ್ರಯಗಳು
ಭಿಮಾನಿಗಳ ನೆನೆದು ದಳದಿ ಸೂರ್ಯ
ೀಮಾಗ್ನಿಗಳ್ಮೇಲೆ ಹರಿ ಅಜ ರಥವೀಥಿಗಳಧಿಕರಿಸಿ
ರಮೇಲೊಂದು ಮಂಡಲ ನಿರ್ಮಿಸಿ ಷಟ್ಸರೋ-
ಳಗಳನೆ ರಚಿಸಿ ಇದರೊಳು ಪೂರ್ಣಜ್ಞಾನೈಶ್ವರ್ಯ
ನಾನಂದ ತೇಜ ಸತ್ಯಮೂರ್ತಿಗಳ್ನಿಂತಿಸೀ

---

ಯಲ್ಲಿ ಹೃದಯಾಬ್ಜ ಚಕ್ರ ಮಂಡಲದ ವಿವರಗಳನ್ನು ತಿಳಿಯಬಹುದು

೦ ಖು ಕು ಪಾಪ ಆರಾ ರಾಶಿಗಳ ಗಣಿಸಿ
ಮಲಿ ಏಕಪಂಚಾಶದ್ವರ್ಣ ತಿಳಿಯೆಂದಿದು ವ್ಯಾಪ್ತಿ ॥ ೧ ॥

ಲೊಂದು ಮಂಡಲವ ಅಷ್ಟದಳಗಳಲಿ
ಬೀಜಾಕ್ಷರಗಳನ್ನೆಲ್ಲ ರಚಿಸೀ–ಶನಿ ರಾಹು ಗುರು
ನ ರುಕ್ರ ಸೋಮ ಮಂಗಳ ಕೇತುಗಳ ನಿರ್ಮಿಸಿ
ಯುದಿ ಕೃಣಾದಿಷ್ಟಾಕ್ಷರಗಳ ನಿರ್ಮಿಸಿ
ತ್ತ್ಯಕ್ಷರರೂಪವ ಚಿಂತಿಸಿ ಅದರಿಂದಭಿವ್ಯಕ್ತಿ
ರ್ಗಳ್ಳಚಿಸೀ ವರ್ಗಕೆ ತತ್ತ್ವ ಕಸ್ಮಾನಿಗಳನೆ ಚಿಂತಿಸಿ
ಪ್ಟಕ್ಷರಾತ್ಮಕನ ದೃಢಮನಸಿನಿಂದ ಸ್ಮರಿಸೀ
ಲ ಅಧಿಕಾರ ಭೇದದಿಂಗು ಪಾಸನಯೋಗ್ಯತೆಯಂತೆ
ಇದು ವ್ಯಾಪ್ತಿ ॥ ೨ ॥

ಲೊಂದು ಮಂಡಲ ದ್ವಾದಶದಳದೊಳ್
ದಶ ಬೀಜಾಕ್ಷರ ಕೇಶವಾದಿ ದ್ವಾದಶ ನಾಮ
ರ್ವಿಭಾಗವು ರಾಶಿಗಳ ವಿವರ ವಲಯದಿ
ರಾಯೋಗಗಳ್ವಿಸ್ತಾರ ಮೇಲ್ಮಂಡಲದೊಳು
ಶವಿಂಶತಿ ಬೀಜಾಕ್ಷರ ಕೇಶವಾದಿನಾಮ
ರೆ ರಾಶಿಗಳೆಣಿಸೀ ಮೇಲೆ ಐವತ್ತೊಂದು
ಶಾದಿಗಳ ಚಿಂತಿಸಿ ಅಲ್ಲಿಹ ಶ್ರೀ ವೇಂಕಟೇಶಾತ್ಮಕ
ಉರಗಾದ್ರಿವಾಸ ವಿಠಲ ॥ ೩ ॥

ಲ್ಯಾಣಿ — ತಾಳ – ಆದಿ

ನ ಮುದ್ರೆಯ ಧರಿಸೋ–ಶ್ರೀಹರಿಯ ದಿವ್ಯ* ॥ ಪ ॥

ಮುದ್ರೆಯ ಧರಿಸೇ ಆ ಯಮುನಾಳುಗಳ
ನ ವಿಕ್ರಮದ ಭಯಲೇಶವಿಲ್ಲವೋ ॥ ಅ ಪ.

---

ವ ಚಕ್ರಗಳಲ್ಲಿರುವ ಭಗವದ್ರೂಪಗಳ ಚಿಂತನ ಕ್ರಮವನ್ನು ಇಲ್ಲಿ ವಿವರಿಸಲಾಗಿದೆ

ಚಕ್ರದೊಳ್ ಸುದರ್ಶನನಾಮಕನು
ಚಕ್ರವೈರಿಯು ಕಾಯ್ತು ತಮವನ್ನ ಹರಿಸಿ
ವಿಕ್ರಮ ಕೃದ್ಧೋಲ್ಕ ತಮಲೋಕದೊಳು ಇದ್ದೂ
ಚಕ್ರ ಧರಿಸದ ಜೀವರ ಕ್ರೂರತನದಲಿ ಶಿಕ್ಷಿಸುವ ॥ ೧

ಶಂಖದೊಳ್ ಪ್ರತೀಹಾರನಾಮಕ ಹರಿ ಇರುವ
ಶಂಕಿಸ ಬೇಡವೋ ಮೋಹವ ಹರಿಸುವ
ಶಂಕಿಸುವನ ಪಾಪಪಂಕದೊಳು ಇಟ್ಟು
ಮಂಕುಗೊಳಿಸಿ ಮಹೋಲ್ಕ ಶಿಕ್ಷಿಸನಯ್ಯ ॥ ೨

ಗದೆಯೊಳು ನಿಧನನಾಮಕ ಹರಿ ತಾನಿದ್ದೂ
ಹಿಂಗುವ ಮನದೋಷವನ್ನ ಯೆಗುವ
ಮದದಿ ಮರೆವವರನು ವೀರೋಲ್ಕ ತಾ
ಸದೆಬಡಿವನು ತನ್ನ ಗದೆಯಿಂದಲಿ ನಿತ್ಯ ॥ ೩

ಪದುಮದೊಳು ಪ್ರಸ್ತಾವ ನಾಮದಿ
ಮುಗದಿ ಭಕ್ತರ ತಾಪತ್ರಯ ಹರಿಸುವ
ಪದ್ಮರಹಿತ ಮಾನವರ ದ್ಯುಲ್ಕರೂಪದಿ
ವಧಿಸುವ ತಾಪತ್ರ ನರಕದೊಳು ನಿತ್ಯ ॥ ೪

ನಾರಾಯಣಮುದ್ರೆಯೊಳು ಉದ್ಗೀಥನು
ಹರಿ ಭಕುತರ ಅಂಧತಾಮಿಸ್ರ ಕಳೆವನು
ದುರುಳ ಕಲ್ಯಾದ್ಯರ ಸಹಸ್ರೋಲ್ಕರೂಪದಿ
ಕ್ರೂರತನದಿ ಅಂಧಂತಮದೊಳಿಡುವನು ॥

ನೇಮದಿ ದ್ವಾದಶ ಊರ್ಧ್ವ ಪುಂಡ್ರಗಳು
ಕಮಲ ತುಳಸಿಮಣಿ ಮಾಲೆಗಳ ಕೊರಳೊಳು
ವಿಮಲ ಮನಸಿನಿಂದ ಧರಿಸುವ ಮನುಜರಿಗೆ
ಯಮನಾಳುಗಳ ಭಯ ಲೇಶವಿಲ್ಲೆಂದಿಗೂ ॥

ಪಂಚರೂಪಾತ್ಮಕ ಹರಿಯನ್ನೇ ನೆನೆಯುತ
ಪಂಚ ಪಂಚ ಕರಣಗಳ ಕಾರ್ಯ ಒಪ್ಪಿಸೇ

ಂಚನರಕಬಾಧೆ ಕಿಂಚಿತ್ತಾದರು ಇಲ್ಲ
ಂಚಾನನನುತ ಶ್ರೀ ವೇಂಕಟೇಶನ ದಿವ್ಯ || ೭

ನೋಹನ ತಾಳ – ೮

ಚಿಂತ್ಯಾದ್ಭುತ ಮಹಿಮ ಈ ಸಚರಾಚರದೊಳು
ಪ್ರಚುರನಾಗಿಹೆ ದೇವ ಮುಚುಕುಂದವರದ || ಪ

ಜಲಭಕುತಿಯು ನಿನ್ನ ಚರಣದಿ
ಂಚಿತ್ತಾದರೂ ಪ್ರಚುರಮಾಡಿಸು ಅ–
ಚಂಚಲನು ಬಲುವಂಚಕನು ನಾ ಅನುಚಿ–
ೋಚಿತ ಕರ್ಮ ಮರಿಯೆನೋ || ಅ.ಪ

ಬಿನವಾಸದಿ ಎನಗೆ ವಿಪರೀತವನು ತೋರಿ
ಪರಾಧವೆಣಿಸದೆ ಪಾಲಿಸಿದೇ
ಪ್ರಪಣವತ್ಸಲ ನೀನೆ ಕೃಪೆಮಾಡಿ ಸ್ವಪನದಿ
ಪರಿಮಿತದ ವಿಶ್ವರೂಪವಾ ನೀ ತೋರ್ದೆ
ಪರಾಧಿ ನಾನಹುದೋ ಸ್ವಾಮಿ–ಅಪವರ್ಗಪ್ರದನು ನೀನು
ಫಲಗೊಳಿಸದೆ ಎನ್ನ ಮನದನು–
ಾಪವನು ಪರಿಹರಿಸಿ ಕಾಯ್ದು
ಪಯೋಜಾಂಡದೊಡೆಯ ಬಿಡದೆ ನಿನ್ನಡಿದಾವರೆಯ ನಂಬಿದೆನೆ
ೀ ಪರಮಹಂಸರಿಂದ ನುಡಿಸಿದ ರಹಸ್ಯಗಳು ಅದು ಏನೋ
ೀ ಪುರುಷೋತ್ತಮನೆ ನೀನೆನ್ನಭಯಹಸ್ತದಿ
ರಿದ ಪರಿಯೇನೊ– ಅದನೊಂದನೂ ಅರಿಯೆನೋ
ಪರಿಯ ಕರ ಚರಣದಲಿ ಚರಿಸಿದ
ನುಪಮ ಕ್ರಿಯೆಯ ನೋಡಿ ಮನದೊಳು
ುಪುತಕಾಲದಿ ತೈಜಸನೆ ನೀನೆನ್ನ
ಳಕಾಂಕಿತನ್ನ ಮಾಡಿದೇ || ೧

ಲವು ಒನ್ಮವನಿತ್ತಿ ಹೊಲೆಗೆಟ್ಟು ತಿರುಗುತ
ಲವಿಲ್ಲದೆ ಅಮಿತ ಕಾರ್ಯವನೆಸಗಿ

ಾಗಿದ್ದರು ಎನ್ನ ಛಲವು ತೊಲಗಲಿಲ್ಲ
ಾಭನೆ ನೀನೆ ಕರುಣಿಸಿ ಸಲಹದಿದ್ದೊಡೆ ಪ್ರ-
ಷ್ಣನು ಕವಿದು ಮನಚಂಚಲವ ಪುಟ್ಟಿಸಿ
ುಖನಂತಾಡಿಸುವರೋ
ೀಲನೆ ನೀನೆನ್ನ ಮನದ ಕಲಿಮಲವನ್ನೆ ಹರಿಸುವುದೋ
ತ್ರ ನಿನ್ನನು ಧೇನಿಸಲು ಮನದಿ ಎಡೆಯು ದುರ್ಲಭವೊ
ಯಿಂದಲಿ ಸಾಧಿಸಲು ಎಲ್ಲಿಡೆಯು ಸರ್ವತಂತ್ರ-
ಂತ್ರ್ಯ ನಿನ್ನದೋ ಭೋಜಗತ್ಪ್ರತೀ
ಮಕ ನೀನೆ ಆಪತ್ಕಾಲ ಬಾಂಧವನೆಂದು ನಂಬಿದೆ
ಾಡದೆ ಎನ್ನ ಜೀವಿತದಲ್ಪ ಕಾಲದಿ ಕರುಣೆ ತೋರೈ ॥ ೨ ॥

ನೆಂತಾಗುವೆಯೊ ಭ್ರಷ್ಟಪಾತಕಿ ನಾನು
ಲ್ಲವೋ ನಿನಗೆ ಶ್ರೇಷ್ಟಮೂರುತಿಯೆ
ೂರುತಿಯೆಂದು ಇಷ್ಟನುಡಿದೆನೊ
ಂಗ ನಿನ್ನೊಳು ಇರಲೋ ಇಷ್ಟೇ ಎನ್ನದೊ ದೇವಾ
ಕಷ್ಟವೋ ಬಿಟ್ಟದೊಡೆಯು
ದಷ್ಟು ನಿನ್ನ ದಯಾ ಇಷ್ಟೆ ಬೇಡುವೆ ಎನಗೆ ಎ-
ಭಕುತಿಯು ಕೊಡದಿರುವೆಯಾ
ಸ್ಥಿತಿ ಲಯ ನಿಯಮನಾದ್ಯಷ್ಟ
ತ್ವವು ನಿನ್ನದೋ ಅಷ್ಟಾಂಗಯೋಗದಿ
ನಡಿಸೆ ತನುಮನೋಧಿಷ್ಠಾನವು ನಿನ್ನದೊ
ಮೂರುತಿ ಸುಲಭದಲಿ ನೀ
ಗೋಚರ ವಾಗುವುದು ಇನ್ನೆಂತೋ ಹಾ ಕಷ್ಟ ಕಷ್ಟವೋ
ಯೊಳು ನಾನೆಷ್ಟರವ ನಿನ್ನಿಷ್ಟ ಬಂದಂತಾಗಲಿ ಭವ-
ಪರಿಹರಿಸೆನ್ನ ಕಾಯೋ ಶ್ರೀ ವೇಂಕಟೇಶ
ಉರಗಾದ್ರಿವಾಸ ವಿಠ್ಠಲ ॥೩ ॥

ಧ್ಯಾನಿಸೊ ಶ್ರೀಹರಿಯ ಮಹಿಮೆ ನೀ ಧ್ಯಾನಿಸೋ* ||

ಧ್ಯಾನಿಸು ಶ್ರೀಹರಿಯ ಲೀಲಾ ಸೃಷ್ಟಿ
ವಿಧಾನದಲಿ ನಿನಿಯಮದ ಪರಿಯಾ ||ಅಹಾ||
ತಾನೆ ತನ್ನಯ ಲೀಲಾಜಾಲತನದಿ ತನ್ನ
ಆನಂದದೊಳಿಪ್ಪ ಶ್ರೀ ಮುಕುಂದನನ್ನ | ಅ

ಮೂಲನಾರಾಯಣ ದೇವ – ತಾನು
ಆಲದೆಲೆಗಳು ಲೀಲೆ – ತೋರಿ
ಬಾಲಕನಡಲಿ ತಾ ನಲಿವಾ – ಅನೇಕ
ಕಾಲಪರಿಯಂತರದಿ ಸರ್ವ – ಅಹಾ
ಎಲ್ಲಜಗವ ತನ್ನ ಒಡಲೊಳಡಗಿಸಿ
ಲೋಲನಾಗಿ ಬಾಲಕ್ರೀಡೆಯಾಡುವ ಪರಿಯಾ ||

ಇಂತು ಶಯನ ಗೈದ ಹರಿಯ – ಅ–
ನಂತವೇದಗಳಿಂದ ತ್ವರಿತಾ – ರಾಗದಿ
ಸಂಕರ್ಷಣ ಸಂಸ್ತುತಿಯ – ಮಾಡೆ
ಕಂಕುಟಿಸನು ತಾನೆಚ್ಚರಿಯ – ಅಹಾ
ಅಂತೆ ತೋರ್ದ ವಾಸುದೇವಾದಿ ಚತುರಾ–
ನಂತವತಾರ ಸಿರಿರೂಪಗಳ ಸಹಿತ |

ಸಕಲರೂಪಗಳ ತನ್ನೊಳೈಕ್ಯ – ಮಾಡಿ
ಸಕಲ ಲಕುಮಿರೂಪಗಳೆಲ್ಲ ಐಕ್ಯ – ಇಟ್ಟು
ಸಕಲ ಮರುತಗರ್ಭ ತನಯಮುಖ್ಯಾ – ಇತ್ತು
ಸಕಲಕ್ರೀಡೆಯೊಳು ಬಾಹ್ಯಾ – ಅಹಾ –
ಲಕುಮಿಯು ಸ್ತುತಿಗೆ ಒಲಿದು ತಾನೇ ತ–
ನ್ನ ಕಡೆಗಣ್ಣಿಂದ ಪಂಚಜೀವರ ನೋಡಿದಾ |

---

* ಈ ಕೃತಿಯಲ್ಲಿ ಶ್ರೀಹರಿಯ ಅದ್ಭುತ ಸೃಷ್ಟಿ ಕಾರ್ಯ ವಿವರಗಳಿವೆ

ಸೃಷ್ಟಿಯೆಂಬುದೊಂದು–ಸಾಮಾ–
ವಿಶೇಷವು ಎಂದು–ಮತ್ತೆ
ವಿಶ್ವಸೃಷ್ಟಿಯೆಂತೆಂದು–ಹಿಂದು
ಸೃಷ್ಟಿಯೆಂದೂ–ಆಹಾ
ನದಿಂದೆಸಗೆ ದುರ್ಗರೂಪವಾದ
ಂಧಕಾರವ ಪ್ರಾಕಿಸುವ ವಿವರ ॥ ೪ ॥

ಶ್ವೈಕ್ಯವಾಗಿದ್ದ–ಮಹ
ಚತುರಮೂರುತಿ ತೋರ್ದ–ಇನ್ನು
ಪ್ರಕಟನಾಗಿನಿಂದ–ಆಗ
ಂತ ಚತುರನಾಮದಿಂದ–ಆಹ
ಮ ಸ್ಥಿತಿ ಮೃತಿ ಮೋಕ್ಷದನಾಗಿರ್ಪ
ರುದ್ಧಾದಿ ಚತುರಮೂರ್ತಿಗಳ ವ್ಯಾಪಾರ ॥ ೫ ॥

ಷನಾಮಕ ಪರಮಾತ್ಮ–ತಾ
ಷದಿ ಪ್ರಕೃತಿಯು ಸೂಕ್ಷ್ಮ–ವೆಲ್ಲವ
ರಿತು ಘನಮಾಡ್ದ ಹಿಮಾ–ಸೃಷ್ಟಿ
ರವಮಾಡ್ದ ಮಹಾತ್ಮ–ಆಹಾ–
ಕೃತ ವೈಕೃತ ದೇವತ ಸಮಾನ ಈ
ರುವಿಧ ಸೃಷ್ಟಿಯೆಸಗಿದ ಪರಿಯ ನೀ ॥ ೬ ॥

ದಹಂಕಾರ ತತ್ತ್ವ–ಪಂಚ
ಭೂತಗಳು ಮನಸ್ತತ್ತ್ವ–ಇನ್ನು
ದಶೇಂದ್ರಿಯಗಳ ತತ್ತ್ವ–ಮತ್ತೆ
ತಾಮಿಶ್ರಾಂಧತಾಮಸ ತತ್ತ್ವ–ಆಹಾ–
ದು ಈ ಪರಿಯಲ್ಲಿ ಪ್ರಾಕೃತ ಸೃಷ್ಟಿಯು
ಹುಮಾರ್ಗವು ಇದನೆ ಆಲಿಸಿ ನಿನ್ನೊಳು ॥ ೭ ॥

ೃತದೊಳ್ ಸಕಲ ವೃಕ್ಷಾ–ತಿರ್ಯಕ್
ಲಪ್ರಾಣಿಗಳ್ ಮನುಜ ಪಕ್ಷಾ–ಎಲ್ಲ
ತ ಸೃಷ್ಟಿಯ ಮಾಡ್ದ ಅಧ್ಯಕ್ಷಾ–ಇನ್ನು

ಸುರಸಮಾನ ಸೃಷ್ಟಿಯು ಅಪೇಕ್ಷಾ – ಆಹಾ–
ಸಕಲಸುರಾಸುರಪ್ಸರ ಗಂಧರ್ವರು
ಪಿತೃಗಳು ಯಕ್ಷ ರಾಕ್ಷಸರ ಪರಿಯುವರಾ ||

ಘನಾತ್ಮನು ವಿರಿಂಚಿ ಬ್ರಹ್ಮನು–ಅಂದು
ಘನ್ನ ವಾಸ ದೇವ ತಾನು–ಸೃಷ್ಟಿ
ಯನ್ನ ಪ್ರಕಟ ಮಾಡಿದನು–ಮುಂದೆ
ಅನಿಲದೇವನ ಸಂಕರುಷಣನು–ಆಹಾ–
ಅನಿಲನೆ ಸೂತ್ರನಾಮಕ ವಾಯುವಾಗಿಹ
ಭಾವಿಬ್ರಹ್ಮನೀತನೆ ನಿತ್ಯಗುರುವೆಂದು ||

ಪ್ರದ್ಯುಮ್ನನಿಂದ ಸರಸ್ವತಿ–ಇನ್ನು
ಶ್ರದ್ಧಾನಾಮಕಳು ಭಾರತೀ ಸೃಷ್ಟಿ–
ಯಾದ ವಿವರ ತಿಳಿಯೊ ಪೂರ್ತಿ–ಇದೇ
ಪ್ರದ್ಯುಮ್ನನ ಸೃಷ್ಟಿಯು ಕೀರ್ತಿ–ಆಹಾ–
ಶ್ರದ್ಧಾದೇವಿಯೊಳು ಸೂತ್ರನ ವೀರ್ಯದಿಂ–
ದುದ್ಭವಿಸಿದ ಜೀವ ಕಾಲನಾಮಕನು || ೮

ವಿರಿಂಚಿ ಬ್ರಹ್ಮ ಗಾಯತ್ರೀ ರಿಂದ
ಈರಬ್ರಹ್ಮರ ಸೃಷ್ಟಿ ಚರಿತ್ರೆ–ಚಿತ್ರ
ವರ ಮಹತ್ತತ್ತ್ವದ ಗಾತ್ರ–ಇವರ
ತರವೆಲ್ಲ ವಿಚಿತ್ರ–ಆಹಾ–
ವಿರಿಂಚಿ ಬ್ರಹ್ಮ ಸರಸ್ವತಿಯಿಂದ ವೈ–
ಕಾರಿಕರುದ್ರ ಶೇಷ ಗರುಡರ ನೀ || ೧೮

ಸೂತ್ರ ಶ್ರದ್ಧಾ ದೇವೇರಿಂದ–ಪವಿ
ತ್ರ ತೈಜಸ ರುದ್ರ ಬಂದಾ–ಪ–
ವಿತ್ರ ಶೇಷ ಗರುಡರೆಂದೂ–ವರ
ಪುತ್ರರಾಗಿಹ ರತಿ ಚಂದಾ–ಆಹಾ–
ಪುತ್ರನಾದ ಶೇಷ ಸಾವಿತ್ರಿ ಬ್ರಹ್ಮರಿಗೆ
ಪುತ್ರನಾದ ತಾಮಸರುದ್ರ ಶೇಷಗೆ || ೧೨

ಬದ್ಧಾರಮಾಡಿದ ಜೀವರ–ಅನಿ
ರುದ್ಧನ ಕೈಲಿ ಕೊಡಲವರಾ–ಅನಿ
ರುದ್ಧನು ಮಾಡ್ದ ವಿಸ್ತಾರಾ–ಅಹಾ–
ದಪೇಕ್ಷ ಮೂಲ ಪ್ರಕೃತಿಯಿಂದ ಗುಣತ್ರ–
ಯಧ ಕೊಂಡು ಮಹತ್ತತ್ತ್ವ ನಿರ್ಮಿಸಿದಾ ॥ ೧೩

ಮಹತ್ತತ್ತ್ವದಿಂದಹಂಕಾರ ತತ್ತ್ವ
ವಿಕದಹಂಕಾರವು ಮೂರುತೆರ–ಇದ–
ರೊಳು ಬ್ರಹ್ಮ ವೈಕಾರಿಕ ಶರೀರ–ವಾಗಿ–
ಇದು ಈ ಪರಿ ಈ ರೂಪ ನಿವರಾ–ಆಹಾ–
ಇದು ತೈಜಸದಿಂದ ಶೇಷನ ದೇಹವು
ತಾಮಸದಿಂದಲಿ ರುದ್ರ ತಾನಾದನು ॥ ೧೪

ರಡನೆಯ ಸಾರಿ ಪ್ರದ್ಯುಮ್ನ–ಅರ್ಧ
ಶರೀರರೂಪನಾಗಿ ಇನ್ನು ಎಡದಿ–
ಸ್ತ್ರೀರೂಪ ಜೀವರ ಗಳನ್ನು ಬಲದಿ
ಪುರುಷಜೀವರೆಲ್ಲರನ್ನು–ಆಹಾ
ರಿಸಿ ಅವರ ದೇಹಗಳನಿತ್ತು ಅ
ರುದ್ಧನ ಕೈಯೊಳಿತ್ತಾ ಪರಿಯನ್ನು ॥ ೧೫

ದರಂತೆ ಅನಿರುದ್ಧದೇವ ತಾ
ದಕಿಂತ ಸ್ಥೂಲದೇಹವ–ಮೂಲ
ಪ್ರಕೃತಿಯಿಂದ ಗ ಣವಾ–ಕೊಂಡು
ದುಭುತ ಮಹತ್ತತ್ತ್ವತೋರ್ವ–ಆಹಾ–
ದುಭುತ ಮಹತ್ತತ್ತ್ವದಿಂದಹಂಕಾರ
ಬಧಿಸಿದ ಪರಿಯನು ಮುಂದದಿಂದಲಿ ಅರಿತು ॥ ೧೬

ದಮ ಕರುಣೆಯಲೀ ರುದ್ರನ–ಅರ್ಧ
ಶರೀರರೂಪತಾಳಿ ಇನ್ನು–ಎಡದಿ
ಸರಾಸ್ತ್ರೀಗಳನ್ನು ಬಲದೀ

ಸುರಪುರುಷರನ್ನೂ–ಆಹಾ–
ಭರದಿ ಪುಟ್ಟಿಸಿ ಪ್ರದ್ಯುಮ್ನನ ಕೈಲಿಯಿತ್ತ
ಪರಿಪರಿ ಸೃಷ್ಟಿಯ ಕ್ರಮವರಿತು ನೀನೀಗ ॥ ೧

ಅನಿರುದ್ಧದೇವನು ಜೀವರ–ಸ್ಥೂಲ
ತನುವಕೊಟ್ಟು ಪಾಲಿಪ–ತದಭಿ–
ಮಾನಿಶ್ರೀ ಧೂದುರ್ಗಾ–ಮಾಡಿ
ತಾನೆಲ್ಲವ ಸತತ ತೋರಿವಾ–ಆಹಾ–
ಅನವರತ ವಾಯು ಬ್ರಹ್ಮ ಸತಿಯರ
ಮಹತ್ತತ್ತ್ವ ಮಾನಿಗಳೆನಿಸಿದ ದೇವನ ॥ ೧

ಅಹಂಕಾರ ತತ್ತ್ವಾಭಿಮಾನಿ–ಅದಕೆ
ಅಹಿ ಗರುಡರು ಅಭಿಮಾನಿ ಇನ್ನು
ಅನಿರುದ್ಧಾದಿ ರೂಪತ್ರಯವು–ಇದಕೆ
ಇನ್ನು ನಿಯಾಮಕನು ಇನ್ನು–ಆಹಾ–
ಮಹತ್ತತ್ತ್ವನಿಯಾಮಕ ವಾಸುದೇವನಿಂದ–
ನವರತ ಈ ಸೂಕ್ಷ್ಮ ಪ್ರಮೇಯ ಗ್ರಹಿಸಿ ನೀನು ॥ ೧

ಮನಸ್ತತ್ತ್ವಾಭಿಮಾನಿ ಸುರರಾ–ಸೃಷ್ಟಿ
ಯನ್ನೆ ವೈಕಾರಿಕದಿಂದಲವರ ಮಾಡಿ
ಘನ್ನ ತೈಜಸದಿಂದಲಿಂದ್ರಿಯ–ತತ್ವನೆ–
ಲ್ಲನೆಸಗಿದಂಥ ವಿವರಾ–ಆಹಾ–
ಉನ್ನಂತ ತನ್ಮಾತ್ರ ಭೂತಪಂಚಕಗಳ
ತಾಮಸದಿಂದಲಿ ಉದಿಸಿದ ಪರಿಯನು ॥ ೨

ತತ್ತ್ವದೇವತೆಗಳಿನ್ನು–ತಮಗೆ
ಯುಕ್ತ ಸ್ಥಾನಾದಿಗಳನ್ನು–ಕೊಡೆ
ಉತ್ತಮೋತ್ತಮನನ್ನು–ತಾವು
ಸುತ್ತಿ ಸ್ತುತಿಸಲು ಇನ್ನೂ–ಆಹಾ–
ತತ್ತ್ವದೇವತೆಗಳ ಭಕ್ತಿಗೆ ಒಲಿದು
ತತ್ತ್ವರೆಲ್ಲರ ತೋರಿ ರೂಪದಿ ಧರಿಸಿಟ್ಟನ್ನ ॥ ೨

ವರ್ಣಾತ್ಮಕವಾದ–ಘನ
ವತ್ತು ಕೋಟಿಗಾಳದಾ–ಉಳ್ಳ
ಡವನ್ನು ತಾತೋದರ–ತನ್ನ
ನ್ನು ಉದರದಿ ಮಾಡ್ದ–ಆಹಾ–
ಬ್ರಹ್ಮಾಂಡದಿ ತತ್ವಗಳೊಡಗೂಡಿ
ಗಿ ತಾನೊಳಪೊಕ್ಕ ವಿರಾಟನ್ರ ॥ ೨೨ ॥

ಳದಿ ಸಪ್ತಲೋಕ–ಕಡೆ
ೋಕ ಪರ್ಯಂತ–ರೂಪ
ಳಿದ ಆದ್ಯಂತ ಎಂತು
ಸಚ್ಚಿದಾನಂದ–ಆಹಾ–
ವಿರಾಟ ತನ್ನಂತರದೊಳು
ರೆಲ್ಲರ ತತ್ಸ್ಥಳದಲ್ಲಿಟ್ಟು ಪೊರೆದನ್ನ ॥ ೨೩ ॥

ಯಾತ್ಮಕ ವಾಯುವಿಂದ ಆಗ
ುದಕ ಶುಷ್ಕದಿಂದ ಇರಲು
ುಕ್ತಾಮುಕ್ತರ ಭೇದದಿಂದ
ಕ್ಷನವ ಕಲ್ಪಿಸಿದ ಚಂದಾ –ಆಹಾ–
ಕ ಪುನ್ನಾಮಕನು ಧಾಮತ್ರಯು
ಾದ ನರಕಪಂಜರಗಳ ಮಾಡಿದ ॥ ೨೪ ॥

ಶೋಷಣೆಯನ್ನು ಮಾಡಿ ಇನ್ನು ಮ–
ಂಕಾರವ ಕೂಡಿ ಭೂತ
ವ ಮಿಳನ ಮಾಡಿ ಆಗ
ಲ್ಕು ದಳಾತ್ಮಕ ಪದ್ಮ ತೋರಿ–ಆಹಾ–
ಂತ ಪದುಮದಿ ಉದಿಸಿದ ಬ್ರಹ್ಮನು
ನಾಲ್ಕು ದಿಕ್ಕು ಮುಂದದಿಂದ ನೋಡಿದ ॥ ೨೫ ॥

ದಲ್ಲಿ ಚತುರಾಸ್ಯನಾಗಿ–ಅದು
ುಹಿಮೆ ನೋಡುತ ತಾನೆ
ವಿಂದ ಮೊಗತಿರುಗಿಸುತಾ ಅದ

ಅದುಭುತ ಶಬ್ದ ಕೇಳುತ್ತಾ–ಆಹಾ–
ತದಪೇಕ್ಷ ತಪವನಾಚರಿಸಿ ನಾಳದಿ ಬಂದು
ಪದುಮನಾಭನ ತಾನು ಮುದದಿಂದ ನೋಡಿದ

ಪರಮಪುರುಷ ಉಕ್ತಿ ಲಾಲಿಸಿ ಮೆಚ್ಚಿ
ವರವ ಕೊಟ್ಟು ಪಾಲಿಸಿ ಸೃಷ್ಟಿ
ನಿರುತಮಾಡಲು ತಾ ಬೆಸಸೀ ತಾನು
ಆವನಂತರದೊಳು ನೆಲಿಸೀ–ಆಹಾ–
ಹೊರಗೂ ಒಳಗೂ ನಿಂತು ಸೃಷ್ಟಿಲೀಲೆಯ
ತೋರ್ದ ಉರಗಾದ್ರಿವಾಸವಿಠ್ಠಲ ವೆಂಕಟೇಶನ್ನು

ರಾಗ – ಶಂಕರಾಭರಣ

ಧೇನಿಸೂ–ಶ್ರೀಹರಿಯ ಮಹಿಮೆಯ*

ಧೇನಿಸು ಲಯದ ವಿಸ್ತಾರ–ಚತುರಾ–
ನನಕಲ್ಪದ ವಿವರಾ–ಆಹಾ–
ಧೇನಿಸು ಶತಾನಂದಗೆ ಶತ–
ಮಾನ ಕಾಲದಲ್ಲಿ ಇದ್ದು ನಡೆಸುವ ಹರಿಕಾರ್ಯ

ಮೊದಲರ್ಧ ಶತಮಾನ ಸೂಕ್ಷ್ಮ–ಸೃಷ್ಟಿ
ಪದುಮನ ತೋರಿದ ಮಹಾಮಹಿಮ–ಆಗ
ಆದೆ ಪ್ರಥಮ ಪರಾರ್ಧವು ನೇಮ–ಮೇಲೆ
ದ್ವಿತೀಯ ಭಾಗಕ್ಕೆಲ್ಲ ಬ್ರಹ್ಮ–ಆಹಾ–
ಅದರೊಳು ತ್ರಿದಶ ಏಳರ್ಧವರುಷವು
ಪದುವ ಜನಿಂದ ರಾಜ್ಯವನಾಳಿಸಿದ ಪರಿಯನು

ದ್ವಾದಶಾರ್ಧವರುಷ ತಾ ಉಳಿಯೆ ಆಗ
ತೋರ್ದ ಅದುಭೂತವಾದ ಮಹಾಪ್ರಳಯ–ಸೂಜ–
ನಾದಿ ಕಾರ್ಯವು ತಾ ಮೆರೆಯೆ ಶತ

---

* ಈ ಕೃತಿಯಲ್ಲಿ ಲಯ ಪ್ರಕರಣದ ವಿವರಗಳಿವೆ

ನಾವೃಷ್ಟಿ ತೋರಿದೆ–ಆಹಾ–
ಜಾಂಡದೊಳಿಹ ಪ್ರಜೆಗಳ ಸಂಹಾರ
ಶೋಷಣೆಯಿಂದ ಸರ್ವಸಂಹಾರವು ॥ ೨ ॥

ಪರ್ವತ ಸ್ಥಳದಲ್ಲಿ ಇದ್ದ ಪ–
ಪ್ರದಿಗಳೆಲ್ಲರಲ್ಲಿ–ಮಹ
ರ ಆನಂದದಿಂದಲಿ ಆನಂದ
ತ ಕುಣಿದಾಡುತ್ತಲಿ–ಆಹಾ–
ೋದ್ರೇಕದಿಂದ ಸಂಗಡ ಕುಣಿಯುವ
ಯುವಗಳ ಶಾಸಲಂಕರಿಸಿದನ ॥ ೩ ॥

ನರ್ತನವಮಾಡಿ ತನ್ನ
ತ್ರಿಶೂಲವನು ನೀಡಿ–ದಿ–
ಪೋಣಿಸಿ ಆಡಿ–ಸರ್ವರ ಉ–
ಳಿಟ್ಟು ಕೂಡಿ–ಆಹಾ–
ನಟಿಸುವ ನಿಟಿಲದೇವನ ಗಾತ್ರ ಸ
ಶಾವಮಾಡಿ ಕ್ರೀಡಿಸುತಿರ್ಪನ್ನ ॥ ೪ ॥

ದೇವರಗದಾ ಪ್ರಹಾರದಿಂದ
ಕುಂಕಾರದಿಂದ ಜೀವರ–ಲಿಂಗ
ಂಗ ಗೈದವರಾ–ಅವರ
ಸ್ಥಳದಲ್ಲಿಟ್ಟವರಾ–ಆಹಾ
ಲದಿ ಸಂಕರುಷಣಮುಖದಿಂದ
ಗಲು ಅಗ್ನಿ ಪೊರಟು ದಹಿಪುದಾ ॥ ೫ ॥

ಸೊಂಡಿಲಿನಂತೆ ಮಳೆಯ ಧಾರೆ
ಕಶಾವರ್ಷ ಗರೆಯೆ–ನೋಡೆ–
ಜಲಮಯವಾಗೆ–ಅಗ–
ಂಡವೆಲ್ಲ ಕರಗೆ–ಆಹಾ–
ಶೇಷಮಾರ್ಗವರಿತು ಒರುತಿರ್ಪ
ವರ ತನ್ನ ಉದರದೊಳಿಟ್ಟನ್ನಾ ॥ ೬ ॥

ಅರಿಯೊ ನೀ ಶೇಷಮಾರ್ಗವನ್ನು—ಇಲ್ಲಿ
ಸುರರು ಕುಬೇರನೊಳಿನ್ನು ಆತ
ವರುಣನಲ್ಲಿ ಲಯವನ್ನು—ಚಂದ್ರ
ಹರಿಪಾರ್ಷದರನಿರುದ್ಧನನ್ನು—ಆಹಾ—
ಅನಿರುದ್ಧ ಸನತ್ಕುಮಾರನ್ನ ತಾವು ಪೊಂದಿ
ಮಾರ ವಾರುಣಿಯು ಹರಿಮಡದಿಯರಲ್ಲಿ ಲಯವಾ

ಖಗಪನೊಳವಶಿಷ್ಟ ಸುರರ —ಮೊದಲು
ಅಗ್ನಿಯೊಳ್ ಲಯವನೈದುವರು ಆ
ಅಗ್ನಿ ತಾ ಸೂರ್ಯನ್ನ ಸೇರುವನ —ಸೂರ್ಯ
ತಾ ಗುರುವನ್ನ ಸೇರುವನು—ಆಹಾ—
ಆಗಲೆ ಸರ್ವಮನುಜರು ಪಿತೃಗಳು
ನಿರುಋತಿಯೊಳು ಪೊಕ್ಕು ತಾ ಯಮನಲ್ಲಿ ಸೇರುವ

ಯಮ ಪ್ರಿಯವ್ರತರಾಯರೆಲ್ಲಾ—ಲಯ
ತಮ್ಮ ಸ್ವಾಯಂಭು ಮನುವಿನಲ್ಲಿ—ಮತ್ತೆ ಮ—
ಹಿಮ ಭೃಗುವು ದಕ್ಷನಲ್ಲೀ ಲಯವು
ಆ ಮಹ ದಕ್ಷ ಸ್ವಾಯಂಭು ಇಂದ್ರನಲ್ಲೀ—ಆಹಾ—
ಅಮರಪತಿಯು ತಾ ಸಾಪರಣಿಯನು ಪೊಂದಿ
ಈ ಮಾರ್ಗದಿ ತಾನು ಗರುಡನ್ನ ಸೇರುವುದು

ಶೇಷ ಗರುಡರೊಡಗೂಡಿ ಆಗ
ಸರಸ್ವತಿಯನ್ನ ಪೊಂದುವರು ಮತ್ತೆ
ಅಸು ವಿರಿಂಚಿ ವಾಯುಗಳು ತಾವು
ಸರಸ್ವತಿಯನ್ನೇ ಪೊಂದುವರು —ಆಹಾ—
ಈ ಸರಸ್ವತಿ ಕಾಲಬ್ರಹ್ಮನ್ನ ಸೇರುವ
ಈ ಸೂಕ್ಷ್ಮ ಲಯವನ್ನ ಕ್ರಮವರಿತು ನೀನೀಗ

ಸೂತ್ರನಾಮಕ ವಾಯುದೇವ—ರುದ್ರ
ಉಮೆ ಪ್ರದ್ಯುಮ್ನ ದ್ವಾರ—ಶಾಪ್ರತ
ಸಂಕರುಷಣನ ದಯ ದಿ ಜ —

ತ್ರಿತೆ ಲಕ್ಷ್ಮಿಯೊಳು ಸೇರುವರು–ಅಹಾ–
ತುರಾಸ್ಯ ಜೀವರ ತನ್ನುದರ ದೊಳಿಟ್ಟು
ತಿವೋದದಿಂದ ವಿರಾಟನ್ನೈದುವುದು ॥೧೧

ರಾಟ್ ಬ್ರಹ್ಮನು ತಾನೆಲ್ಲಾ–ತನ್ನ ಆ
ರಣದಲ್ಲಿ ಇಪ್ಪಂಥ–ತನ್ನ
ರಿಯಲ್ಲಿ ಲೀನನಾಗುವ–ಆಗ
ರಿಪರಿಯಿಂದ ತನ್ಮಾತ್ರ–ಆಹಾ
ರಿತು ಶಬ್ದ ಸ್ಪರ್ಶರೂಪರಸಗಂದ
ರಿಪರಿಯಿಂದಲಿ ಲಯವನ್ನೈದುವುದಾ ॥೧೨

ಂಧ ದ್ವಾರಾ ಲಯ ತನ್ನ ಬಿಲದಿ–ಜಾತ
ೇದದಲ್ಲಿ ರಸಲಯವು- ರೂಪ
ದ್ವಾರಲಯ ವಾಯುವಿನೊಳ–ಸ್ಪರ್ಶ
ದ್ವಾರ ಲಯ ಆಕಾಶದೊಳ–ಅಹಾ–
ಬ್ದದ್ವಾರ ಲಯ ತವ ಅಹಂಕಾರಾದಿ
ದಂತರ್ಗತ ಭಗವದ್ರೂಪ ದಲ್ಲೈಕ್ಯವಾ ॥೧೩

ಹಂಕಾರ ತ್ರಯದಲಿ ಬಂದಾ–ತತ್ವ
ೇಹಸೂರರೆಲ್ಲರ ಲಯವು–ಇಹ
ತತ್ವಾಂತರ್ಗತ ಭಗವದ್ರೂಪಕೆ–ಆಗ
ಲ್ಲಲ್ಲಿ ತಮ್ಮೈಕ್ಯವು–ಅಹಾ–
ಹಂಕಾರತ್ರಯ ಮಹತತ್ತ್ವದಲ್ಲಿಲಯ
ಮಹತ್ತತ್ತ್ವವು ಮೂಲ ಪ್ರಕೃತಿಯಲ್ಲಿ ಲಯವಾ ॥೧೪

ವಾಸುದೇವಾದಿ ಚತುರರೂಪ–ಮತ್ತೆ
ೇಶವ ವಿಶ್ವಾದಿರೂಪ–ಅಜಿತ
ಶ್ರೀಶನನಂತಾದಿರೂಪ–ಮತ್ತು
ಶ್ರೀಶನಷ್ಟೋತ್ತರ ರೂಪ–ಅಹಾ–
ಆ ಸಕಲ ರೂಪಗಳು ಮೂಲರೂಪದೊಳೈಕ್ಯ
ಶಾಶ್ವತನಾದ ಶ್ರೀಸಚ್ಚಿದಾನಂದನಾ ॥೧೫

ಗುಣವಾನಿ ಶ್ರೀಭೂದುರ್ಗಾ ಅಂ—
ಭೃಣರೂಪವನ್ನು ತಾ ಧರಿಸೀ ಸಂ
ಪೂರ್ಣನ್ನ ಸಾಮೀಪ್ಯ ಸೇರಿ- ಪೂರ್ಣ—
ಕಾಮನ್ನ ಎಡೆಬಿಡದೆ ನೋಡೀ—ಆಹಾ—
ಕ್ಷಣಬಿಡದೊಡೆಯನ ಅಗಣಿತಗುಣಗಳ
ಕಡೆಗಾಣದೆ ನೋಳ್ಪ ನಿತ್ಯಮುಕ್ತಳಸಹಿತಾ ॥ ೮

ಏಕೋನಾರಾಯಣ ಅಸೀತ—ಅ—
ನೇಕ ಜನರ ಸಲಹಲಿನ್ನು—ತಾನೆ
ಸಾಕಾರದಲಿ ನಿಂದಿಹನು—ಇಂತು
ವೇಂಕಟಾಚಲದಲ್ಲಿ ಇನ್ನು ಮುನ್ನು—ಆಹಾ—
ಏಕ ಮನಸಿನಿಂದ ಭಜಿಸ ಭಕ್ತರನ ತಾ ನಿ—
ರಾಕರಿಸದೆ ಕಾಯ್ವ ಶ್ರೀ ವೇಂಕಟೇಶ ನಿತ್ಯಾ ॥ ೮

— ಶ್ರೀರಾಗ ತಾಳ

ಪಂಚರೂಪಾತ್ಮಕ—ನೀನೇ ಈ
ಪಾಂಚಭೌತಿಕ ದೇಹದಿ ಸಂಚರಿಸುವೆ ॥

ಪಂಚಕೋಶಗಳಲ್ಲಿ ಚರಿಸಿ ಹಂಚಿಕೆ ಕೊಡುವೆಯಾ ಸ್ಥೂಲರಸ
ಪಾಂಚಭೌತಿಕ ದೇಹಕುಪಚಯ ಹಂಚಿಕೆಂದಲಿ ಇತ್ತು
ಸಲಹುವೆ ॥ ಅ

ರಸವಾಯು ಆಪಜಿಹ್ವೆ ನಾಸಿಕಗಂಧ
ಪೃಥ್ವಿ ಉಪಸ್ಥಯುಕ್ತ ಕೋಶವಹುದಯ್ಯ
ಅನ್ನಮಯವೆನ್ನುತ ಕೋಶಾಂತರ್ಗತ ಅನಿರುದ್ಧದೇವನೆ ನೀ
ಅ ಶನೈಶ್ಚರ ವರುಣ ಭೂದೇವಿಯರಿಂದಲಿ ಸೇವಿಪಸತತ
ಲೇಶವಾದರು ಬಿಡದೆ ತಾ ಖಂಡಾಖಂಡ ರೂಪದಿ
ದೇಶಕಾಲಗಳಲಿ ನೆಲೆಸಿ ಕೋಶಕಾರ್ಯವ ಗೈವೆ ಪ್ರಾಣನಿಂ

ರಹಿತನಿರುದ್ಧದೇವನೆ ನಿನ್ನ ರೂಪವು ಈ ಸ್ಥೂಲದೊಳು
ಈ ಶರೀರದ ಶಿರವೆ ನಿನ್ನಯ
ನ ಸ್ಥಾನವೆಂದು ಪೇಳ ವರು ಈಶ ನಿನ್ನಯ ಉಭಯಪಕ್ಷಗಳ
ಸುತಿಹರು ಭುಜದ್ವಯ ಶ್ರೀಶ ನಿನ್ನಯ ಮಧ್ಯದೇಶವೆ
ಶರೀರದ ಮಧ್ಯಭಾಗವು ಪ್ರಸಿದ್ಧಪುರುಷನೆ
ಧ್ಯಭಾಗವು ಪಾದವೆನಿಸುವುದು ಈಶ ನಿನ್ನಿಂದೋಷಧಿಗಳು
ಧಿಗಳಿಂದನ್ನವೆಲ್ಲವು ಪೋಷಣೆ ಎಲ್ಲ
ದಿಂದಲೆ ದೋಷದೂರ ನೀ ನನ್ನದನ್ನದಾ ॥ ೧ ॥

ತ್ವಗ್ವಾಯು ಸ್ಪರ್ಶ ನೇತ್ರ ತೇಜ ಪಾದರೂಪಗಳಿಂದಲಿ
ಸಿಕೊಳ್ಳುವುದು ಪ್ರಾಣಮಯದ ಕೋಶವು ತಾನಲ್ಲಿಹ
ದ್ಯುಮ್ನ ಮೂರುತಿ ಸತತ–ಗಣಪತಿ ಅಗ್ನಿ ವಾಯು
ಚಿಗಳೆಲ್ಲರೂ ಸನ್ನುತಿಪರೋ
ಬಿಡದೆ ಖಂಡಾಖಂಡರೂಪದಿ ಜೀವ
ಣಧಾರನಾಗಿಹೆ ಪ್ರಾಣನಿನ್ನಿಂದ ಸ್ಥೂಲದೇಹಕೆ ಅ–
ನನಿಂದೊಡಗೂಡಿ ನೆಲೆಸಿಹೆ ಪ್ರಾಣಪತಿ ಪ್ರದ್ಯುಮ್ನ
ಯು ಶಿರದ ಸ್ಥಾನವು ಪ್ರಾಣನಲ್ಲಿಹುದೋ
ಸುವರೋ ವ್ಯಾನೋದಾನದೊಳ್ ದಕ್ಷಿಣೋತ್ತರ ಪಕ್ಷ
ವಿರುತಿಹುದೊ
ಪುದು ಮಧ್ಯದೇಶವು ಆಗಸದೊಳು ಉ–
ನ ವಾಯುವಿನಲ್ಲಿ ಇರುತಿಹುದೋ
ಪೋ ಪೃಥುವಿಯು ಪಾದವೆಂಬುದು ಸ–
ನ ವಾಯುವಿನಲಿ ಇರುತಿಹುದು
ನ ರೂಪದಿ ಈ ಪರಿಯಲಿ ರೂಪವಿರುತಿಹುದು
ಣಿಗಳಿಗಾಯುಷ್ಯವಿತ್ತು ಪ್ರಾಣ ಪ್ರೇರಕನಾಗಿ ಪೊರೆಯುವೆ
ಣಧಾರಣೆ ನಿನ್ನದಯ್ಯಾ ಪ್ರಾಣಸುತ ಪ್ರದ್ಯುಮ್ನ ಮೂರುತೀ
॥ ೨ ॥

ಹಂಕಾರಬುದ್ಧಿ–ಅಂತಃಕರಣ–ಮನ–ಅಹಂಕಾರ
ವಯುತ ಪಾಕ್ಯೋತ್ರಾಗಸ ಶಬ್ದ

ಈ ತ್ರಿಗಯುಕ್ತವಾದೀ ಕೋಶವು ಇದಕೆ
ಖ್ಯಾತವಾದ ಮನೋಮಯ ಕೋಶದೊಳು
ಸತತರುದ್ರೇಂದ್ರಾದಿ ಸುರರೆಲ್ಲರು ವಂದಿಸುತಿಹರು
ಖ್ಯಾತ ಸಂಕರುಷಣನೆ ಖಂಡಾ ಖಂಡರೂಪದಿ ನೆಲೆಸಿಕೋಶ
ಪ್ರೀತಿಯಿಂದಲಿ ಪ್ರಾಣನೊಡಗೂಡಿ
ಸತತ ಮನಸಿನ ಕಾರ್ಯ ಮಾಳ್ಪುದಾತನು ನೀನೆ ಯಜ್ಞಭ
ಯಜುರ್ವೇದವೆ ನಿನ್ನ ಶಿರವಹುದು ಶ್ರುತಿಗಳೊಳು
ಋಕ್ ಸಾಮವೇದಗಳೆಂಬುವೆ ನಿನಗೆ
ಥ ಪಕ್ಷಯುಂಗಳಾಗಿಹುದು ನುತಿಪ ಪಾಂಚರಾತ್ರಾಗಮ ವೇ
ನಿನ್ನಯ ಮಧ್ಯದೇಶವು ಅಥರ್ವ ಅಂಗಿರ
ನಾಮಕಂಗಳೆನಿಪುದೆ ನಿನ್ನ ಪಾದ ದ್ವಯಂಗಳು
ಖ್ಯಾತ ನಿನ್ನಯ ರೂಪ ಮಹಿಮೆಯು ತಿಳಿಯಲಸದಳವೋ
ಜಾತರಹಿತ ನಿನ್ನ ವರ್ಣಿಸೆ ನಾತು ಮನಕಿಗೆ
ಸಿಲುಕದಂತಿಹ ಖ್ಯಾತನೀನಹುದೋ ಮನೋಮಯ
ಪ್ರೀತಿಯಿಂದಲಿ ಸಲಹೋ ಎನ್ನನು

ಮಹತ್ತತ್ತ್ವ ಪ್ರಾಚುರ್ಯದಿಂದಿಹ ಈ ವಿಜ್ಞಾನಮಯಕೋಶ
ಶ್ರೀಹರಿ ವಾಸುದೇವಾ ನೀನೆ ನೆಲೆಸಿಹೆ
ಅಹರಹ ಬ್ರಹ್ಮವಾಯುಗಳಿಂದಲಿ
ಮಹಾಪೂಜೆ ವಂದನೆಗೊಳುತಿಹೆ– ಖಂಡಾಖಂಡದಿ ತುಂಬಿಹೆ
ದೇಹದೊಳು ಉದಾನನಿಂದೊಡಗೂಡಿ
ಸಹಾಯನಾಗಿಹೆ ಜೀವಿಗಳಿಗೆ
ಮೋಹ ಹರಿಸಯ್ಯ ಮಾಯಾಪತಿಯೆ
ಬಾಹದುರಿತದಿಂ ಪಾರುಗಾಣಿಸೋ
ದೇಹ ದೇಹಿಯು ರೂಪ ನೀ ಸ್ವಗತಭೇದ ವಿವರ್ಜಿತನೆ
ಬ್ರಹ್ಮಾದಿ ವಂದ್ಯನೆ ಶ್ರುತಿಯು ಧರಿಸಿದೆ
ಶಿರವೆ ನಿನ್ನಯ ಶ್ರದ್ಧವೆಂಬೋರು
ಮಹಾಭುಜಂಗಳೆ ಋತುಸತ್ ಎಂದೆನಿಸಿಕೊಳುತಿಹುದು
ಇಹುದು ಮಧ್ಯದೇಶವೆ ಜಗಕೆ ಆಶ್ರಯವೆನಿಪ ಯೋಗವು
ಮಹವೆಂಬುದೆ ಪಾದವೆನಿಸಿತು ಸೂರ್ಯತೇಜದೊಳು

ಮೋಹಪಾಶದಿ ಬಿದ್ದ ಜೀವರ
ಮಹಾಪ್ರಳಯದಿ ಉದರದೊಳಿಟ್ಟು
ಇಹಪರದಿ ರಕ್ಷಿಸುವೆ ದೇವ ||

ಆನಂದಮಯಕೋಶವು ತನ್ಮಯ
ಅವ್ಯಕ್ತತತ್ವದಿಂದಲಿ ನನ್ನೀಯಿಂದ
ಆನಂದಮಯಮೂರುತಿ ನಾರಾಯಣ ನೀ
ಕೋಶಾಂತರ್ಗತನು ನೀನೆ ಸಮಾನ ನೊಡಗೂಡಿಹೆ
ಸನ್ನಿಧಿಯಲ್ಲಿ ಶ್ರೀಯು ನುತಿಸುತಿಹಳೋ
ಅನಾದಿಲಿಂಗವ ಭಂಗಗೈಸುವಳೋ
ಘನಮಹಿಮ ನಿನ್ನ ಅನುಸರಿಸಿ ತಾನಿಪ್ಪಳೋ
ಭಿನ್ನಭಕ್ತರಿಗೊಲಿಯಳೋ ಅವಿ-
ಚ್ಛಿನ್ನ ಭಕ್ತರ ಜನನಿ ಎನಿಪಳೋ
ಶ್ರೀ ನಾರಾಯಣ ನಿನ್ನ ಶಿರ ಮುಕುತರಿಗೆ
ಪ್ರಾಪ್ಯನು ಎಂದು ಪ್ರಿಯವೆಂದು
ಘನ ದಕ್ಷಿಣೋತ್ತರ ಪಕ್ಷವೆನಿಪೊವು
ಮೋದ ಪ್ರಮೋದಗಳು ಘನ ಆನಂದವೆಂಬುದೆ
ತನ್ನ ಮಧ್ಯದ ಪ್ರದೇಶವೆಂಬೋದು
ಜ್ಞಾನಸುಖ ಆನಂದ ಪಾದಗಳು
ಬ್ರಹ್ಮನಾಮಕ ವಾಯುವೆಂಬುವರೋ
ಆನಂದಮೂರುತಿ ಮಹಿಮೆ ಎಂತಿಹುದೋ
ಭಿನ್ನನಾಮದಿ ಕರೆಸುತಲಿ ತಾ ಅ
ಭಿನ್ನನಾಗಿ ಚರಿಸಿಕೋಶದಿ
ಘನ್ನಕಾರ್ಯವ ನಡೆಸುತಿರ್ಪೆ
ಪನ್ನಗಾದ್ರಿ ಶ್ರೀ ವೇಂಕಟೇಶನೆ ||

ಕಾಂಬೋದಿ ತಾಳ – ೮

ಹ್ಯಾಂಗಾದರಾಗಲಿ ಎ-
ನ್ನಿಂಗಿತವ ನೀ ಬಲ್ಲೆ ರಂಗಯ್ಯ ||

ಂಗಾ ನಿನ್ನಂತರಂಗ ಏಕಾಂತಭಕುತರ ಸಂಗ
ಂಗಳಾಂಗ ನೀಕೊಟ್ಟು ಸಲಹೋ ಶುಭಾಂಗ ಅ-
ಂಗಜನಕ ಭುಜಂಗಶಯನ ಮಾ-
ಂಗವರದ ಶ್ರೀರಂಗನಾಥನೇ ॥

ವಾ ನಾ ಸದ್ಭಾವದಲ್ಲಿ ನಿನ್ನ ಪಾದ
ದುಮನಿರುತ ಧೇನಿಸುವೆ ಪವಮಾನ
ವೋತ್ತಮ ನೀ ಧರ್ಮೋತ್ತಮ ನೆನ್ನುವ
ಾವ ಎನಗಾವಕಾಲದಿ ಇರಲಿ
ೇಡೆನು ಇತರ ಸಂಪದವಾ ॥

ಶ್ರೀಶಾ ಶ್ರೀ ವೆಂಕಟೇಶ ನಿರ್ದೋಷ ಗುಣ
ಸಂಪೂರ್ಣದಿಂದಿಹ ವೇಷ ಶೇಷಾದ್ರಿ ಮಂದಿರ
ಾಸನೆ ನಿನ್ನ ದಾಸಜನಭವಪಾಶ ಕ್ಲೇಶ-
ಾಶನವ ಗೈಸಿ ಸಲಹುವುದು ಶೇಷಶಯನ ಶ್ರೀರಂಗಶಾಯಿ ॥

ರಾಗಮಾಲಿಕೆ

ತಾಳ – ೧

ಸ್ವಾತಂತ್ರ್ಯವೆನಗುಂಟೆ ಸರ್ವಾಂತರ್ಯಾಮಿ ॥

ನಿಂತು ನೀ ನಡೆಸುವಿಯೊ ಜೀವಾಂತರ್ಯಾಮಿ ॥ ಅ

ಜೀವಸ್ವರೂಪದಲಿ ಜೀವನಾಕಾರದೊಳಿದ್ದು
ಜೀವನ ಅನಾದಿ ಕರ್ಮ ಜೀವಂಗೆ ಪ್ರೇರಿಸಿ
ಜೀವಕೆ ಚೇತನಕೊಟ್ಟು ಜೀವಕ್ರಿಯೆಗಳನ-
ಭಿವ್ಯಕ್ತಿ ಮಾಡಿ ಸತತ ಪೊರೆಯುವ ಕರುಣೀ ।

ದತ್ತ ಸ್ವಾತಂತ್ರ್ಯ ತನಗಿತ್ತಿಹನು ದೇವನೆಂದು-
ನ್ಮತ್ತತನದಿ ತಾ ಕರ್ತನೆಂದೆನಿಸಿ ಸುತ್ತಲಿಹ
ನಿತ್ಯ ಅವಸ್ಥೆಗಳ ಪರಿಹರಕೆ

ರ್ವಾಗಿ ತಾ ಜಡನಂತಿಹಾ
ದಲಿ ಶ್ರೀರಮಣಸೇರಿ ಚೇತನಕೊಟ್ಟು
ಕೆಗೋಸ ಗ ಬಿಡುವ ಸರ್ವ ಜೀವರನಾ ॥ ೩ ॥

ಅನಾದಿ ಕರ್ಮವು ಎನ್ನದೆಂದಿಗು ಸರಿಯೆ
ಇಲ್ಲಾ ಸ್ವಾಮಿ ಎನ್ನನುಭವಕೆ ಕೊಡುವೆ
ಷ್ಣಪ್ರಳಯದಿ ನಿನ್ನ ಘನ್ನೊಡಲೊಳಿಂಬಿಟ್ಟೆ
ಕರ್ಮಗ್ರಂಥಿ ಎನ್ನಿಂದ ಬಿಡಿಸೊ ॥ ೪ ॥

ದೇಹಕ್ಕಾಗಿ ತ್ರಿಗುಣ ಅಂಗಿಯು ಕೊಟ್ಟೆ
ಬೇಕೆಂದಿತ್ತೆ ಅನಿರುದ್ಧ ಲಿಂಗಾ
ಕಾರ್ಯಕೆ ಎನಗೆ ಸ್ಥೂಲಾಂಗಗಳ ಕೊಟ್ಟು
ಣೀಪಾಂಗದಲಿ ನಿನ್ನಾಂಗೇ ಮೆರೆವೇ ॥ ೫ ॥

ುಗಳಿಂದ್ರಿಯಕೆ ವಿಷಮವಾಗಿಹವ್ರೋ ದೇವ
ಕಪನೆ ನಿನಗೆ ಇದು ಸಂತೋಷವೇನೊ
ಕಸಿವುಕೊಡದೆ ದುರ್ವಿಷಯಗಳಿಗೆ ಬಿಡದೆ
ಎತ್ರಯ ಹರಿಸಿ ಪೋಷಿಸೋ ದೇವಾ ॥ ೬ ॥

ಣಯ ವೃತ್ತಿಯು ತರಣಿ ಬಿಟ್ಟಿಪ್ಪುದೆ
ಕಿರಣವನನುಸರಿಸಿ ವೃತ್ತಿಯಹುದೊ
ನಿಯಾಮಕ ನೀನೆ ಕಾರ್ಯವ ನಡೆಸಲು ದೇವ
ಜಲಿ ಸ್ಥೂಲದಲಿ ಕಾರ್ಯಾಭಿವ್ಯಕ್ತಿಯೊ ॥ ೭ ॥

ಸ್ವಾತಂತ್ರ್ಯ ಕಾರ್ಯ ಮುಕ್ತಿಯಲ್ಲಿ
ಫಲವೇನೊ ಸ್ಥಿತಿಕಾಲದಿ ನೀನಿಲ್ಲದಿನ್ನಿಲ್ಲ
ಬದ್ಧರ ಕಾರ್ಯ ನೀ ಜಲಿಸೆ
ಬಂಬ ಕಾರ್ಯವಹುದೋ ॥ ೮ ॥

ವಾತೀನು ಜೀವನಿಚ್ಛೆಯನನುಸರಿಸಿ
ಕ ತಾನೆ ಸ್ವೇಚ್ಛ ಚರಿಸಿ

ದಲಿ ಲಿಂಗಾನಿರುದ್ಧದಿ ತಾನಿದ್ದು
ರಿಸಿ ಸ್ಥೂಲದಿಂದೆಚ್ಚರದಿ ನಡೆವುದೊ ॥ ೯

ಸಂಕಲ್ಪವಿಲ್ಲ ದಿನ್ನಿಲ್ಲ ಅನ್ಯಥಾಗುವುದುಂಟೆ
ದೆಂದಿಗೂ ಘನ್ನ ಮಹಿಮನೆ ಎನ್ನ
ತ್ಯವಾವುದೋ ಕಾಣೆ ಎನ್ನ ಭ್ರಾಮಕತ್ರಯವ
ನ್ನ ಹರಿಸೋ ದೇವಾ ॥ ೧೦

ದಸಿಂ ದತ್ತಸ್ವಾತಂತ್ರ್ಯ ಸಮ್ಯಕವೇನು
ನಸ್ವಾತಂತ್ರ್ಯ ಕಾರ್ಯದಲ್ಲಿ ಮೋದನಾಮಕ ನೀನೆ
ರಿಸಿ ಸಲಹಯ್ಯ ಮೋದತೀರ್ಥಾ-
ಧ್ಯ ಶ್ರೀ ವೇಂಕಟೇಶಾ ॥ ೧೧

ದೇವ-ಅದ್ವಿತೀಯಾ-ಅಪ್ರಾಕೃತ ಕಾಯಾ ॥ ಪ

ಕರಾರ್ಚಿತಪಾದ ಲೋಕೇಶವಂದಿತ ಅ-
ಕೃತಾಕಾಶದೊಡೆಯನೆ-ವಾಸುಕೀಶಯನ ಸರ್ವೇಶ ನೀನೆ
ಕತ್ರಯ ಸರ್ವ ಲೋಕಾಶ್ರಯನಾಗಿಹೆ ಪ್ರಾಕೃತ
ಸಜ್ಜಮಜ್ಜ
ರ್ಯಕೆ ಕಾರಣನಯ್ಯ-ಏಕೋ ನಾರಾಯಣ ॥ ಅ.ಪ.

ಳಯಕಾಲದಿ ಜೀವರ ನಿಲಯಾ ಕಲ್ಪಿಸಿ ತತ್ತ
ಳದಲ್ಲಿಡೆ ನಾಲ್ಕು ಸ್ಥಳಗಳನ್ನಾಗಿ ನಿನ್ನ ಕಳೆಯಾ
ಲ್ಕುವಿಧಗಳ ರೂಪಗಳನು ಧರಿಸಿ ಪ್ರಳಯದೊಳಿಂಬಿಟ್ಟು
ಲಿಯೊಳು ನಿಂದೆ-ನಳಿನನಾಭ ನೀ ಪಸುಳೆಯಂತೆ
ದಾಲದೆಲೆಯೊಳು ಪೊಳೆಯುತಲಿದ್ದು ಎಳಸಿದ ಕಟಾಕ್ಷ
ವೀಕ್ಷಣದಿಂದ
ವು ಇಲ್ಲದ ಸೃಷ್ಟಿಯ ನೆಸಗಿದೇ ॥ ೧

ಧುಜೀವರು ತವ ಸಾಧನ ಪೂರೈಸಿ

ಸುಜೀವರ ನೋಡಪಡಿಸಿ ನಿ
ಸದೆ ಸ್ವರೂಪಾನಂದವೀಯಲೋಸುಗ
ರದೊಳಿಟ್ಟೈಯ್ಯ ಸದಮಲಮೂರುತಿ
ಭುತ ಮಹಿಮ ಶ್ರೀವಾಸುದೇವನೆ || ೨

ವು ಸಂಚಿತ ನೀಗಿ ಪ್ರಾರಬ್ಧ ಶೇಷ
ಗ ಉಳ್ಳವರಲ್ಲ ಆಗಾದೆ ಪೂರ್ಣ ಸಾಧನ
ಗಾದೆ ಲಿಂಗಭಂಗ ಆಗ ಬಿಂಬನ್ನ ನೋಳ್ಪರ
ಗತಿಯನ ನಿನ್ನ ಗಾದೊಳಿಂಬಿಟ್ಟ
ಗುಮಾಡದೆ ನೀನಾಗಲಿ ಜೀವರ ಭೋಗವ ತರಲು
ಗನಗೈಸಿ ಭೂಭಾಗದಿ ಸಾಧನವಾಳ್ವ ಜೀವಗಣ
ಗವ ಕಾಯ್ದ ಸಂಕರುಷಣ ಮೂರುತೆ | ೩

ಸಂಸಾರಿಗಳಿಗೆ ಇತ್ತಿ ನಿನ್ನುದರದೊಳು
ಪ್ರದ ಪ್ರದ್ಯುಮ್ನ ನಿತ್ಯಸಾಧನರಿಗೆ
ಅತ್ತ ಕೊಡೆಯು ದೇವ ಶಕ್ತನವಂದೋ ನೀ
ತ್ತಿ ಮುಂದಿನ ಬ್ರಹ್ಮನ ಹತ್ತಿ ಬರುವ ಜೀವರ
ಅತ್ತ ನೋಡಲು ನೀನಿತ್ತು ಪೊರೆದೆ ಬರಲಿತ್ತ ಕಾರಣ ಪ್ರ
ತಿಯಿಂದಲಿ ಸುತ್ತಿ ತಂದು ಮತ್ತೆ
ತ್ತಿಸುತ್ತಿರುವೆ ಬಿತ್ತರಿಸಲೀನನಿರುದ್ಧ ಮೂರುತೇ ||

ಣುವಿಗೆ ಅಣುವಾಗಿ ಘನಕೆ ಘನತಮನಾಗಿ
ಣಜೀವರಾದಿ ಬ್ರಹ್ಮಗಣರಿಲ್ಲದೊಳು
ಣನೆ ಇಲ್ಲದ ಕಾರ್ಯ ಕ್ಷಣ ಬಿಡದಲೆ ನಡೆಸಿ
ಅಣನಿಧಿ ಶೇನ ವಿನಾ ತೃಣಮಪಿ ನ ಚಲತಿ ಎಂಬ
ಣೆಯಿಲ್ಲದಿಹ ಸುಗುಣಸಾಂದ್ರನೆ
ಣವದೊಳು ಪ್ರತಿಬಿಂಬನಾಗಿಹೆ ತ್ರಿಗುಣರಹಿತ ಮುಖ್ಯ
ಪ್ರಾಣಾಂತರ್ಗತ ಪ್ರಣತಕಾವ ದ ಪೂರ್ಣಸಂಪೂರ್ಣ ||

ಮುಕ್ತಾಮುಕ್ತಾತ್ರಯ ಭಕ್ತಪರಾಧೀನ
ಶಕ್ತಾನೆ ಸರ್ವ ವೇದೋಕ್ತ ಮಹಿಮಾತೀತ
ಉಕ್ತನಾಗಿಹೆ ಪುರುಷಸೂಕ್ತದೊಳಪ್ರಮೇಯ
ವ್ಯಕ್ತನಲ್ಲವೊ ನೀನು ಭಕ್ತಿಯಿಂದಲ್ಲದೆ
ಮುಕ್ತಿದಾತ ಪುರುಷೋತ್ತಮ ನಿನ್ನಯ
ಶಕ್ತಿಯನರಿಯರು ಅಜಭವಾದ್ಯರು
ಶಕ್ತನೆ ಜೀವನ್ಮುಕ್ತರಾಘ
ಸಕ್ತರಾಗಿ ನಿನ್ನ ಸ್ತೋತ್ರವ ಮಾಳ್ಪರು

ಶ್ರೀಶಾ ಸರ್ವೋತ್ತಮ ವಾಸವೈಕುಂಠಾಧೀಶ
ಶ್ವಾಶಾನಿಂದಲಿ ಶೇಷನಹಂಕಾರ ಬಿಡಿಸಿದೆ
ವಾಸವಾದಿ ವಂದಿತ ಭಾಸುರಾಂಗನೆ
ವಿಶ್ವಾಸ ನಿನ್ನೊಳಿಟ್ಟ ದಾಸಜನರ ಕಾಯ್ವ
ಈಶಾವಾಸ್ಯ ಮಿದಂ ಸರ್ವಂ ಎಂದೆಂದು ಎಂದು
ಉಸುರುವ ವೇದಗಳ್ ಏಸುಕಾಲಕು ಸಾಕಲ್ಯದಿ ವರ್ಣಿಸ-
ಲೇಕಕೋಟಿ ಪ್ರವಿಷ್ಟಗೆ ಅಸದಳ

ಅಂಗಜಾಪಿತ ರಂಗ ಮಂಗಳಾಂಗನೆ ಮಾ-
ತಂಗವರದ ದೇವ ಗಂಗಾಜನಕ ಕಾಳಿಂಗನಾ ಮದ ಮೆಟ್ಟಿ
ಭಂಗಾಗೈಸಿದ ಭುಜಂಗಶಯನ ಎನ್ನಂತರಾ-
ರಂಗದಿ ನಿಲ್ಲೋ ಇಂಗಿತ ಬಲ್ಲೆ ಶ್ರೀರಂಗಶಾಯಿ ಸಾ-
ರಂಗಪಾಣಿ ಕೃಪಾಂಗ ಎನ್ನಯ ಭವಭಂಗಗೈಸಿ ಸ-
ತ್ಸಂಗವೀಯೋ ಯದುಪುಂಗವ ಮಂಗಳಮೂರುತಿ ಶೌರೇ

ಕಾಲನಾಮಕ ನೀನೆ ಕಾಲಮಹತ್ಕಾಲ ಕಾಲಕಲ್ಪಾಂತ
ಕಾಲದಲ್ಲಿ ಸೃಷ್ಟಿಯ ಲೀಲೆ ತನದಿ ಲಯಲೀಲೆಯ ತೋರಿ
ಬಾಲಲೀಲೆಯಿಂದಲಿ ಆಲದೆಲೆಯೊಳು ಪವಳಿಸಿದೆ
ಶ್ರೀಲಲನೆಯ ಲೋಲ ನೀನೆಲೊ ಈ ಜಗಲೀಲೆಗೆ ಜೀವರ
ಜಾಲವ ತಂದೆ ಪಾಲಿಪ ಸಲಹುಪ ಕರ್ತನೀನಲ್ಲದಿ-
ನ್ನಿಲ್ಲವಯ್ಯ ಶ್ರೀ ವೇಂಕಟೇಶಪ್ರಭೋ

ಶೇಷಾಚಲ ಮಂದಿರ-ಇಂದಿರೇಶ ||

ಪೋಷಿಸೊ ನಿನ್ನಯ ಪಾದಸ್ಮರಣೆಯಿತ್ತು || ಅ.

ಕರಣಕ್ರಿಯ ಕರ್ಮಂಗಳೆಲ್ಲವು ಜಡವು
ಕರಣಕ್ರಿಯ ಕರ್ಮ ನಿನ್ನ ನಿಯಮನದಿಹುದು
ನಿರುತ ಪರವತನಾಗಿ ನಾಮಾಳ್ಪೆನೆಂಬ ಈ
ದುರಭಿಮಾನದಿ ನಾ ಭವಕೊಳಗಾದೆನೊ ||

ವಿಷಯಂಗಳೆಲ್ಲ ಜ್ಞಾನಗೋಳಕದಿ ಒಂದು ಎನ್ನ
ವಿಷಮಗೊಳಿಸಿತು ಮನ ಅಭಿಮಾನದಿಂದಲಿ
ಹೃಷೀಕಪನೆ ಎನ್ನ ಮನವಿಷಮತೆಯ ಹರಿಸಿ
ಪೋಷಿಸೊ ನಿರುತ ಕೃಪಾಕರಮೂರುತೇ ||

ಈಷಣತ್ರಯ ದೋಷಕ್ಲೇಶದಿ ನೊಂದು ನಿಂದೆ
ದೋಷದೂರನೆ ನಿನ್ನ ವಿಸ್ಮರಣೆಯಿಂದಲಿ
ವಾಸುಕೀಶಯನ ನೀ ಭೂತಾವಾಸ ನೀನಾಗಿರೆ
ಮೋಸ ಹೋದೆನ್ನನು ಪೋಷಿಸ ಬೇಕಯ್ಯ ||

ಹಟದಿ ಕಪಟಾಚಾರದಿ ನಿಂದು ನಾ
ಕುಟಿಲಮನದಲಿ ನಿನ್ನ ಭಕುತನೆಂದೆನಿಸಿದೆ
ವಟಪತ್ರಶಾಯಿ ನೀ ಹಟಸಾಧನಕ್ಕೆ ಒಲಿಯೆ
ಧಿಟಭಕುತಿಯ ಕೊಟ್ಟು ಕಡೆಹಾಯಿಸಯ್ಯ |

ತನುಛಾಯೆ ಕ್ರಿಯಯು ತನ್ನ
ತನುವನಾಶ್ರೈಸಿದಂತೆ ನಾ ನಿನ್ನ ಪ್ರತಿಬಿಂಬನಾಗಿರಲು ಸದಾ
ಎನ್ನ ಕ್ರಿಯೆಗಳೆಲ್ಲಾ ನಿನ್ನ ಆಣತಿಯಂತಿರೆ
ಘನ ಮಹಿಮನೆ ನಿನ್ನಾಕ್ರಿಯವನರಿಯದೆ ಹೋದೆ |

ಪನ್ನಗಾಚಲನಿಲಯ ಆಪನ್ನರಕ್ಷಕ ನೀನಿರೆ
ಬನ್ನಬಡಲ್ಯಾಕಯ್ಯ ಅನ್ಯರನಾಶ್ರಯಿಸಿ
ಮನೋವಾಕ್ಕಾಯ ಕರ್ಮವನರ್ಪಿಸಲು
ಸನ್ಮತಿಯನೆ ಇತ್ತು ಸತತ ಸಲಹಯ್ಯ

ಸರ್ವಸತ್ತಾಪ್ರದನೆ ಸರ್ವ ಪ್ರವೃತ್ತಿಪ್ರದನೆ
ಸರ್ವರಂತರ್ಯಾಮಿ ಮಮಕುಲಸ್ವಾಮಿ
ಉರಗಾದ್ರಿವಾಸವಿಠ್ಠಲ ನಿನ್ನಯ ದಿವ್ಯ
ಚರಣಸ್ಮರಣೆಯನಿತ್ತು ಕಾಯೊ ಕಮಲಾಕಾಂತ

ಬ್ರಹ್ಮಾದಿವಂದ್ಯ ಪರಬ್ರಹ್ಮನ ಕಾಯೊ
ಅಹಂ ಬ್ರಹ್ಮ ಭಾವವ ಬಿಡಿಸೊ

ಬ್ರಹ್ಮನ ಜನಕನೆ ಬ್ರಹ್ಮಾಂಡದೊಡೆಯ
ಬ್ರಹ್ಮಾಂಡಾಂತರ್ಯಾಮಿ ಸಲಹೊ ||

ಸತ್ಯವ್ರತನೆ ನೀ ಸತ್ಯಪರನು ಜಗಸತ್ಯ ಸೃಜಿಸಿ ಪೊರೆವೆ
ಸತ್ಯಾತ್ಮಕನೆ ನೀ ತತ್ತ್ವದಾಕಾರದೊಳು ನಿತ್ಯ ನಿಲಿಸ್ತನಜು

ಏಕರೂಪನೆ ಅನೇಕರೂಪದಿ ಎಲ್ಲಾ ಲೋಕಗಳೆಲ್ಲಾ ಪಾಲಿಪ
ಏಕಮೇವನೆ ಮೂಲವಾದ ಪ್ರಕೃತಿಯಿಂದ ಲೋಕಗಳನೆಲ್ಲ

ನಿನ್ನಾಶ್ರೈಸಿದ ಭಿನ್ನಪ್ರಕೃತಿ ತ್ರಿಭಿನ್ನಗೈಸಿ ಅಂದು ಜಗದ
ಘನಾಖ್ಯವೃಕ್ಷದಿ ಬನ್ನ ಸುಖವು ಎಂಬ ಪಣ್ಣನ್ನ ನಿರ್ಮಿಸಿದೆ

ಮುನ್ನ ವೃಕ್ಷಕೆ ಬೇರು ಭಿನ್ನ ತ್ರಿಗುಣಗಳು ಪಣ್ಣಿಗೆ ನಾಲ್ಕು
ಜ್ಞಾನಪಂಚಕ ಬಿಳಲು ಘನ್ನ ಷಡೂರ್ಮಿಗಳನ್ನೆ ನಿರ್ಮಿಸಿ

ಕೊಟ್ಟೆ ಸಪ್ತಧಾತು ಅಷ್ಟವಿಟಪಿಗಳನಿಟ್ಟೆ ನವಾಕ್ಷಪೊಟರೆ
ದಟ್ಟದಶಚ್ಛದ ಕೊಟ್ಟು ಜಗವೃಕ್ಷ ಸೃಷ್ಟಿಯ ಮಾಡಿ ಮೆರೆದೆ

ಅಟ್ಟಹಾಸದಿ ಫಲ ಮುಟ್ಟದೆ ಇಹ ಖಗಶ್ರೇಷ್ಠನೆ ನೀ ತುಷ್ಟ
ಕೊಟ್ಟ ಫಲವನುಂಡಷ್ಟು ಸುಖಿಪ ಜೀವರೆಷ್ಟೋ ಜಗವರಿ

ಷ್ಟೀಸುವಂಷ್ಟಿಯು ಸೃಷ್ಟಿಯೊಳು ನೀನ ಶ್ರೇಷ್ಠನೇ ವ್ಯಾಪಿಸಿರುವ
ದೃಷ್ಟಿಗೋಚರವಲ್ಲ ಅಷ್ಟೈಶ್ವರ್ಯ ಪರಮೇಷ್ಠಿಜನಕ ಸಲಹೋ
॥ ೭

ಪ್ರಾಪ್ಯ ಮನೋವಚ ತ್ವತ್ ಪ್ರಾಪ್ತಿ ಎಂತಯ್ಯ
ತ್ವತ್ಪ್ರಸಾದವಿಲ್ಲದೆ
ಪ್ರಬುದ್ಧನು ನಾನು ಅಪ್ರಾಕೃತನೆ ಎನ್ನ ಬಂಧ ಪ್ರಕೃತಿಯನ್ನೆ
ಹರಿಸೋ ॥ ೮

ಷ್ಟರಶಿಕ್ಷಕ ಶಿಷ್ಟರ ಪಾಲಕ ನಿರ್ದಿಷ್ಟಫಲದಾಯಕ
ಷ್ಟಿಯೊಳಗೆ ಸ್ವನಿಷ್ಠೆಯಿಂದಲೀ ಜಗದೃಷ್ಟಿಗೋಚರನಾಗುವೆ
॥ ೯

ಕ್ಷೀಂದ್ರವಾಹ ತವಸಾಕ್ಷಾತ್ಸ್ವರೂಪ ಮುಮುಕ್ಷುಗಳಿಗೆ ಸಾಕ್ಷಿ
ಕ್ಷು ಗೋಚರನಲ್ಲ ಸಾಕ್ಷೀಮೂರುತಿ ಮನಪಕ್ಷಿಯೊಳು ಪೊಳೆವೇ
॥ ೧೦

ಕ್ತಿವಿರಹಿತ ದುರ್ಯುಕ್ತಿಕಾರ್ಯದಿ ಮನ ಸಕ್ತವಾಗಿಹುದು
ತ್ಯ ಯುಕ್ತಿಯ ತೋರಿ ಭವಮುಕ್ತನಾಗಲು ತ್ವದ್ಭಕ್ತಿಯ
ಕೊಡುನಿತ್ಯ ॥ ೧೧

ತ್ತೀಬಹುದೊ ಬೆನ್ನತ್ತಿ ಕರ್ಮವು ಮತ್ತೆ ಸುತ್ತೀಸುತ್ತುತ ಜನ್ಮವ
ತ್ತುತೆತ್ತು ಬೇಸತ್ತುಹೋಯಿತು ಎನಗೆ ಉತ್ತಮಗತಿ ತೋರದೇ
॥ ೧೨

ಘೋರದುರಿತ ಪರಿಹಾರವಮಾಡಿ ಪೊರೆ ಮಾರಾರಿಪಿತವಂದ್ಯ
ರಂಬಾರಿಗೆ ನಿನ್ನ ಚಾರುಚರಣ ಸ್ಮರಣಾರಾಧನೆ(ಅದು)ಸಾಕೊ
॥ ೧೩

ರಿದೆನೋ ಶ್ರೀ ವೇಂಕಟೇಶಾಭಿನ್ನ ಉರಗಾದ್ರಿವಾಸ ವಿಠ್ಠಲಾ
ರಿತೋರದು ಸಂಸಾರ ಶರಧಿಯೊಳು ಪಾರುಗಾಣಿಸಿ ಪೊರೆಯೊ
॥ ೧೪

ಬರಬಾರದಾಗಿತ್ತು ಬಂದೆನಯ್ಯಾ
ಕರೆತರಲು ಬಂದುದಕೆ ಫಲವೇನೊ ದೇವಾ ॥

ತರಳತನದಲ್ಲಿ ಎನ್ನ ಕರಣಗಳು ಮಾಡಿದ
ಪರಿಪರಿಯ ಕ್ರೀಡೆಗಳ ಫಲವೇನೊ ಎನಗೆ
ಮರಳಿ ಯೌವನ ಬರಲು ದುರುಳಸಂಗದೊಳಿದ್ದು
ಹರುಷದಿಂದಲಿ ಎನ್ನ ಆಯುವನು ಕಳೆದೆ

ಸತಿಸುತರು ಹಿತರಿವರು ಎನಗೆಂದು ಉಬ್ಬುಬ್ಬಿ
ಮಿತಿ ಇಲ್ಲದಾಕಾರ್ಯಗಳನೆ ಮಾಡೀ
ಗತಿಯೇನು ಮುಂದು ಹಿತವು ಯಾವುದು ಎಂದು
ಮತಿಗೆಟ್ಟ ಮೇಲೆನಗೆ ಗೊತ್ತಾಗುವುದೆಂತೋ

ಶ್ವಾನಸೂಕರಗಳು ಸ್ವೇಚ್ಛೆಯಿಂದಲಿ ಚರಿಸಿ
ತನ್ನ ಪರಿವಾರವನೆ ತಾ ಪೊರೆಯುತಿಹವೋ
ಎನ್ನ ಸತಿಸುತರುಗಳ ಉದರಪೋಷಣೆಗಾಗಿ
ಹೀನ ಸೇವೆಯಿಂದ ಉಪಜೀವಿಸಲು ಬಹುದೆ

ತನುಬಲವು ಇದ್ದಾಗ ಕೋಣನಂದದಿ ತಿರುಗಿ
ಜ್ಞಾನಕರ್ಮಗಳನ್ನು ಆಚರಿಸದೇವೆ
ಧನ ವನಿತೆ ಮೋಹಕೆ ಕೊನೆ ಮೊದಲು ಇಲ್ಲದೆ
ಮನವೆಲ್ಲವನು ನಾನು ಹೊಲೆಗೆಡಿಸಿದ ಮೇಲೆ

ವಿಕಳಮತಿಯನು ಹರಿಸಿ ಅಕಳಂಕ ಪರಿಭಕ್ತ-
ರಕುಟಿಲಾಂತಃಕರಣ ದೂರಿತು ಎನ್ನ
ಸಕಲಾಪರಾಧಗಳ ಕ್ಷಮಿಸುವರ ಸಂಗ
ನೀ ಕರುಣಿಸದಿದ್ದ ಮೇಲೆ ಶ್ರೀ ವೇಂಕಟೇಶಾ

- ಮೋಹನ ತಾ

ಹೃತ್ಪದ್ಮದೊಳಿದ್ದು ಹೃತ್ತಾಪಗಳ ಕಳೆಯೊ ಜೀ-
ವತ್ಪಿತಾಮಹ ಜನಕನೇ

ತ್ರಿಂಡ ದಂತಿನ್ನ ಉಸ್ಪತ್ತಿಗೆ ಠ-
ತ್ತಿ ನೋಡಲರಿಯಾ ಜೀಯಾ ॥ ಅ. ಪ.

ಂತ್ಯ ನೀನಿತ್ಯ ಜಗವೆಲ್ಲವು ನಿತ್ಯವು
ತ್ವವೆಲ್ಲ ಸರಿಯೇ ಏನಿದ್ದರೇನು
ಾದಿಕರ್ಮದ ಬವಣೆ ಬೆನ್ನಟ್ಟಿ ಬರುತಿರ್ಪುದ-
ನಾಂಧಕಾರದಿಂ ಧ್ಯಾನವನು ತಿಳಿಯದೇ
ನ ದೊಳಗಿಪ್ಪೆನೋ ಜ್ಞಾನಗಮ್ಯನೆಂದು
ುತಿದೆ ಶ್ರುತಿ ಶಾಸ್ತ್ರ ಜ್ಞಾನಗುರು ದೊರೆತಿಲ್ಲವೋ
ುರಾಗದಿ ನೀನೆ ಸಾಧನಕೆ ಕರುಣಿಸಿ
ನದಲಿ ಮನಸು ನಿಲಿಸೋ ಉಳಿಸೋ ॥ ೧ ॥

ನ ಮೋಕ್ಷಕೆ ಎಲ್ಲ ಮನವೆ ಕಾರಣವೆಂದು
ಿಂದಿಗು ಪೇಳುತಿಹರು
ನುಕಯುನನೆ ಭವಬಂಧಮೋಚಕನೆಂದು
ಏಸಿ ಪೊಗಳುವರೊ ಮಂದರೋದ್ಧರ ನಿನ್ನ
ದಮತಿಯಿಂದಲಿ ವಂದಿಸಲು ನಾನರಿಯೆನೊ
ರ್ವಜನಕ ನೀ ಮಂದಭಾಗ್ಯನ ಮನವ
ಯಿಸದೆ ನಿನ್ನ ಪದದಲ್ಲಿರಿಸೊ
ೆ ಎನ್ನಯ ಭವಬಂಧನಾಶ ವಾಗುವ-
ುದೆ ನಿನ್ನನು ಬೇಡುವೆನೊ ಜೀಯ ॥ ೨ ॥

ರೆಲ್ಲರು ಗುಣತ್ರಯಾವರಣದಿಂದ ಕರ್ಮ
ರಹ ದೊಳಿಪ್ಪರೊ ಕವಿಸಿ ಮೋಹವ ನೀನು
ಕೆ ಕಾರಣವಹುದು ದೇವೇಶ ನಿನ್ನಾಟವೋ
ಣದಿಂದಲಿ ಭವಬಂಧ ಮೋಚಕನೆಂದು
ಬಿರಿದು ಸಾರುತಿದೆಕೊ ಭಾವಬಲ್ಲವರಾರೊ
ಕರುಣಿ ನೀನೆ ಭಾವಜನ ಪಿತನು ಅದೇ
ಪಾಶ ಬಿಡಿಸೆ ನಾ ಭಕುತಿ ಪಾಶದಿಂದ
ಪಾದ ಬಿಗಿವೆನಯ್ಯ ಜೀಯ ॥ ೩ ॥

ಸ್ವಾತಂತ್ರ್ಯವೆಲ್ಲಿಹುದು ಸ್ವಾಮಿತ್ವವೆಲ್ಲಿಹುದು ಅ-
ಸ್ವತಂತ್ರನಾಗಿಪ್ಪೆನೊ-ಕಾತುರದಿ ನಾ ಮಾಳ್ಪ
ಕ್ರಿಯೆ ಗಳೆಲ್ಲವು ಎನ್ನ ಸ್ವತಂತ್ರ್ಯವೆಂದೇಳುವೆ ನೀ
ತಂತ್ರಿಯಾಗಿದ್ದೆನ್ನ ನಡಸುವುದನರಿಯೆ ಕು-
ತಂತ್ರವನು ನಾ ಮಾಡುವೆ ಸ್ವಾ-
ತಂತ್ರ್ಯನು ನೀನು ಸೂತ್ರನಾಮಕ ದೇವ
ಮಂತ್ರಿಯಾಗೀ ದೇವ ಯಂತ್ರನಡೆಸುವ
ಎಂತಾದರಡಿಗಡಿಗೆ ಅತಂತ್ರನಾಗಿಹೆ ನಾನೇ
ಭ್ರಾಂತಿ ಪರಿಹರಿಸಿ ಕಾಯೊ ಶೌರೇ

ಭಕ್ತಿಯಿಲ್ಲದೆ ನಿನ್ನ ಭಕ್ತನಾಗುವುದೆಂತೋ
ಭಕ್ತ ಮಾಹಾತ್ಮ್ಯನು ನಾನು ಮುಕ್ತರೊಡೆಯ ನೀನು
ಯುಕ್ತಿ ತೋರಿಸು ಎನಗೆ ಭಕ್ತಸಂಬಾಧಸಹಿಷ್ಣು
ಶಕ್ತ ನೀನಹುದೊ ವೇದೋಕ್ತ ಮಹಿಮಾತೀತ
ಸಕ್ತವಾಗಲಿ ನಿನ್ನ ಪದದಿ ಮನಸು
ವ್ಯಕ್ತವಲ್ಲವೊ ಸರ್ವ ಸಾಂಭೋಕ್ತನು ನೀನು
ಭಕ್ತವತ್ಸಲ ಪುರುಷಸೂಕ್ತಮೇಯ ಅಪ್ರಮೇಯ
ಯುಕ್ತಿಮಾತಲ್ಲದು ಭಕ್ತಿಪೂರ್ವಕ ನಿನ್ನ
ಭಕ್ತ ಶ್ರೇಷ್ಠರ ಸೇವೆ ಕೊಟ್ಟು ರಕ್ಷಿಸೊ ದೇವಾ

ನಾಸ್ತಿಕ್ಯ ಪರನಾಗಿ ವಾದಕ್ಕೆ ದೊರೆಯೋ ನೀ
ವೇದವೇದಾಂತ ವೇದ್ಯ ಸಾಧನವು ಕಾಣೆ
ಸಾಧನಶರೀರವಿದು ಸಾದರದಿ ಕರುಣಿಸಿದೆ ಅನಿರುದ್ಧದೇವ
ಬಾಧಿಪರು ಬಂಧುಗಳು ಅನಾದಿಕರ್ಮದಿ ಬಂದು
ಶ್ರೀಧರಾ ನಿನ್ನ ಮರೆದೀ ಭೂ ಧನ ಯೋಷಿತ ವಾಂಛಿ-
ತಾದಿಂದೆ ನಾ ಅಧಮನು ಸಾಧನವನ್ನು ಸಗಿದೆ
ನೀ ದಯಾಸಿಂಧು ಎಂದಡಿಗಡಿಗೆ ಬೇಡುವೆನು
ಕೃದ್ಧನಾಗದೆ ಇನ್ನು ಉದ್ಧರಿಸು ತಂದೆ ಎಂದೇ

ಶಂಖುಚಕ್ರಾಂಕಿತನೆ ಮಂಕುಬುದ್ಧಿಯ ಬಿಡಿಸೊ
[illegible]ನಗೆ ಇಲ್ಲ ಅಂಕೆ ಇಲ್ಲವೊ ನಿನ್ನ ನೆನೆಹುದಕೆ ಎಂದು

ು ಪಡುವನಲ್ಲ ವೇಂಕಟಾದ್ರಿಯವಾಸ ಶ್ರೀ
ವೇಶನು ಮುಮುಕುಲಸ್ವಾಮಿ ದೈವವೆಂದನುದಿನ
ಾಗಾದಿಗಳ ಕಂಟಕವ ಹರಿಸಿ ಪದ
ದಿ ಮನವ ನಿಲ್ಲಿಸೋ
ಮಾಕಲ್ಲ ಪಂಕಜದಳಾಯತಾಕ್ಷ ಅಕ-
ಮಹಿಮ ಕಾಯೋ ಜೀಯಾ ॥ ೭ ॥

೩ ತಾಳ – ಆದಿ

ಗವತ ಮಹಿಮೆ ಬಣ್ಣಿಸಲಳವೇ ॥ ಪ ॥

ಶರಧಿಗೆ ಸುನಾವೆಯಂತಿಹುದಯ್ಯ ॥ ಅ ಪ ॥

ಸ್ತ್ರಾದಿ ಅನೇಕ ಧರ್ಮಗಳಲ್ಲಿ
ಕಸಾಧನವಾದ ಸದ್ಧರ್ಮಗಳು
ಾಶರಸೂನು ಶ್ರೀಮನ್ನಾರಾಯಣ
್ರಂಥವನಲ್ಲದಿನ್ನಿಲ್ಲವೆಂಬುವಾ ॥ ೧ ॥

ಸ್ಕಂಧದಲಿ ಶ್ರೀಪರಮಾತ್ಮನ ಜ್ಞಾನಕೆ
ನಕ್ತಿ ವೈರಾಗ್ಯದ ವಿವರಣೆಯು
ಾಪದಲಿ ನಾರದನ ವಿಷಯವ ಪೇಳ್ವ ॥ ೨ ॥

ು ಸ್ಕಂಧದಿ ಪರೀಕ್ಷಿತ ಶುಕಸಂವಾದ
ರು ಅವತಾರಗಳ ವರ್ಣನೆಗಳು
ುಹದಾದಿ ತತ್ತ್ವಸೃಷ್ಟಿಕ್ರಮ
ಪುಣ್ಯಚರಿತೆಗಳನು ಪೇಳ್ವ ॥ ೩ ॥

ಮ್ಮಾಂಡದಿಂದೆ ಚತುರ್ಮುಖನ ಸೃಷ್ಟಿಯು
ು ಪೇಳ್ವ ಸೂಕ್ಷ್ಮ ಪರಮಾಣು
ಕಾಲಗಳು ವ್ಯಷ್ಟಿ ಭೂತೋತ್ಪತ್ತಿ
ರೂಪದಿ ತೋರಿದ ಮಹಿಮೆಯಾ ॥ ೪ ॥

ಶಾವತಾರದೀ ಧರಣಿಯ ತಂಡಂಥ
ಾಷ ಸ್ತ್ರೀಯರ ಸೃಷ್ಟಿ ಸರ್ವಸೃಷ್ಟಿಯು ಮತ್ತೆ
ಯಂಭುಮನು ಶತರೂಪೆಯರ ಚರಿತೆ
ಕಪಿಲ ದೇವಹೂತಿಯ ಸಂವಾದವ ಪೇಳ್ವ || ೫ ||

ರಸ್ಕಂಧದಿ ನವಬ್ರಹ್ಮರ ಉತ್ಪತ್ತಿ
ಧ್ವರಭಂಗ ಭಕ್ತಧ್ರುವಚರಿತೆ
ಕಿತವಾದ ಪೃಥುಸಾರ್ವಭೌಮರಿಂದ
ಚೀನಬರ್ಹಿಷರ ವೃತ್ತಾಂತವನು ಪೇಳ್ವ || ೬ ||

ಚಮ ಸ್ಕಂಧದಿ ಪ್ರಿಯವ್ರತ ನಾಭಿನೃಪರ
ಷಭ ಚರಿತೆಗಳು ಪುತ್ರಭರತನ ಕಥೆಯು
ಲಲೋಕ ದ್ವೀಪಾದ್ರಿ ನದನದಿಗಳ ಸೃಷ್ಟಿ
ತಿಶ್ಚಕ್ರ ನರಕ ಪಾತಾಳಗಳ ಪೇಳ್ವ || ೭ ||

ಸ್ಕಂಧದೊಳು ದಕ್ಷಜನ್ಮವು
ರ ಕನ್ಯೆಯರಿಂದ ದೇವ ಮಾನವ ದಾನವ
ಷ್ಟಮೃಗ ಪಕ್ಷೀ ಪನ್ನಗಾದಿ ಜನನವು
ಶ್ರನ ಜನನ ಮರಣಗಳೆಲ್ಲ ಪೇಳ್ವ || ೮ ||

ಮಸ್ಕಂಧದಿ ದಿತಿಪುತ್ರರ ಜನನ
ಣ್ಯಕಶಿಪುವಿನ ದುರುಳತನವು
ತ್ತೆ ಧೀವರನಾದ ಪ್ರಹ್ಲಾದರಾಯನಿಂ ಪ-
ತವಾದ ಶ್ರೀಹರಿಯ ಮಹಿಮೆಯ ಪೇಳ್ವ || ೯ ||

ಮಸ್ಕಂಧದಿ ಮನ್ವಂತರ ವಿವರವು
ರಾಜನಿಗೆ ಮೋಕ್ಷ ಮನ್ವಂತರ ಅವತಾರ
ಕಮಠ ಮತ್ಸ್ಯ ನರಹರಿ ವಾಮನ
ರುವದನನವತಾರ ಸುಧೆಯಿತ್ತ ಮಹಿಮೆಯ || ೧೦ |

ಮಸ್ಕಂಧದಿ ನೃಪವಂಶಾನುಚರಿತವು
ಾ,ಕು ಸುತ ಸುದ್ಯುಮ ರಾಜನ

ನನ [illegible] ಕಥೆಗಳು
ಳೋಪಾಖ್ಯಾನವ ತಾರೋಪಾಖ್ಯಾನವ ಪೇಳ್ವ || ೧೧

ಸೂರ್ಯವಂಶ ಶಶಾದರಾಜನ ವೃತ್ತ ಸುಕನ್ಯೆ
ಶರ್ಯಾತಿ ಕಾಕುಸ್ಥ ಖಟ್ವಾಂಗ ಧೀರ ಮಾಂ-
ಧಾತೃ ಸೌಭರಿ ಸಗರರ ಚರಿತೆ ಪರಮಾತ್ಮ
ರಘುರಾಮನ ಚರಿತೆಗಳನು ಪೇಳ್ವ || ೧೨

ಮುಕ್ತಿ ನಿಮಿಯು ದೇಹತ್ಯಾಗದ ವಿಷಯವು
ಜನಕನೃಪ ಭೃಗುರಾಮನ ಚರಿತವು
ಉತ್ತಮಚಂದ್ರವಂಶದ ನಹುಷಾಸುತ ಯ-
ಯಾತಿ ಶಂತನು ಯದು ಚರಿತೆಗಳುಳ್ಳ || ೧೩

ದಶಮಸ್ಕಂಧದಿ ಹರಿ ಯದುವಂಶದಿ ಜನಿಸಿ
ಶಿಶುಲೀಲೆಗಳ ತೋರಿ ಅಸುರಿಪೂತನಿ ಕೊಂದು
ಅಸುರಶಕಟ ತೃಣ ಬಕ ವತ್ಸ ಮೊದಲಾದ
ಅಸುರಭಂಜಕ ಹರಿಯು ಮೆರೆದ ಮಹಿಮೆಯ ಪೇಳ್ವ || ೧೪

ಮಾಯಾ ಮಹಿಮ ಧೇನು ಪ್ರಲಂಬಕರ ಕೊಂದು
ಕಾಡುಕಿಚ್ಚಿನಿಂದ ಗೋಪಾಲರಕಾಯ್ದ
ನೋಯಿಸಿ ಕಾಳಿಯ ಬಾಯ ಬಿಡಿಸಿ
ಕಾಳಿಮರ್ದನಕೃಷ್ಣ ನಾಡಿದ || ೧೫

ಗೋಪಸ್ತ್ರೀಯರ ಚರಿತ ಗೋವರ್ಧನೋದ್ಧರಣ
ಶಂಖಚೂಡವಧೆ ಅರಿಷ್ಟಕೇಶಿಯ ನಿಧನ
ಭೂಪನೆದುರಿನಲ್ಲಿ ಜಟ್ಟಿ ಮುಷ್ಟಿಕರ ಕೊಂದು
ಕಂಸವಧೆಯ ಮಾಡಿ ಗುರುಸುತನನು ತೋರ್ದ || ೧೬

ಜರೆಯ ಸೇನೆಯ ಜಯಿಸಿ ಕಾಲಯವನರ ಕೊಂದು
ಪಾರಿಜಾತವ ತಂದು ಸಿರಿರುಕ್ಮಿಣಿಯ ಪಡೆದು
ಹರಿಸಿ ಬಾಣನ ತೋಳ ನರಕಾಸುರನ ಗೆದ್ದು
ಸೆರೆಯ ಬಿಡಿಸಿ ರಾಜಕನ್ಯೆಯರನು ಕಾಯ್ದ || ೧೭

ಶಿಶುಪಾಲದಂತವಕ್ರ ಪೌಂಡ್ರಕ ಸಾಲ್ವ ಶಂಬರ
ದ್ವಿವಿಧ ಮುಂತಾಸುರರೆಲ್ಲರ ನಾಶ ಪಡಿಸಿ
ಕಾಶೀಪುರವ ದಹನಮಾಡಿ ಪಾಂಡವರನ್ನು ಕಾಯ್ದ
ಪರಮ ಮಹಿಮೆಯ ಪೇಳ್ವ

ಭೂಭರವನಿಳುಹಲು ಕುರುಪಾಂಡವರೊಳು
ಕ್ರೂರಯುದ್ಧವ ಕುರುಕ್ಷೇತ್ರದಿ ಮಾಡಿಸಿ
ಅಭಯುದಾಯಕ ಪಾಂಡುನಂದನರಿಂದ
ಸದ್ಧರ್ಮಸ್ಥಾಪಿಸಿದ ಶ್ರೀಕೃಷ್ಣಚರಿತೆಯ ಪೇಳ್ವ

ಏಕಾದಶಸ್ಕಂಧದಿ ಯಾದವರೆಲ್ಲರು
ಭೂಸುರ ಶಾಪದಿ ಯುದ್ಧವನ್ನೆ ಮಾಡಿ
ಏಕನಾಗಿದ್ದ ಉದ್ಧವನಿಗೆ ಬೋಧಿಸಿ
ಲೋಕಾವನ್ನೈದು ನಿಜಧಾಮಕ್ಕೆ ತೆರಳಿದ

ದ್ವಾದಶಸ್ಕಂಧದೊಳು ಯುಗಭೇದ ಪ್ರಳಯಗಳು
ನಿತ್ಯನೈಮಿತ್ತಿಕ ಪ್ರಾಕೃತಗಳ ಸೃಷ್ಟಿ
ವೇದವಿಭಾಗವು ಹರಿರಾಧನ ಅಂತ್ಯ
ಮಾರ್ಕಂಡೇಯ ಚರಿತ ಸೂರ್ಯಗಣಗಳ ಪೇಳ್ವ

ಹರಿಲೀಲೆ ಅವತಾರಚರಿತೆಯ ಕೇಳುತ
ಮರವೆಯಿಂದಾಗಲಿ ರಜೆಯಿಂದಾಗಲಿ
ಹರಯೇನಮಃ ಎಂದುಚ್ಚರಿಸಿದ ಮಾತ್ರದಿ
ದುರಿತಪಾಪವು ನಾಶವಾಗಿ ಪೋಗುವುದಯ್ಯ

ಹರಿಯ ಸ್ಮರಣೆಯ ಮಾಡಿದರು ಕೇಳಿದರು
ಬಿರುಗಾಳಿಗೆ ಸಿಕ್ಕು ಮೋಡ ಓಡುವಂತೆ
ದುರಿತ ವ್ಯಾಧಿಗಳು ತ್ವರಿತದಿ ಓಡುವುವು
ಹರಿಸಂಬಂಧವಲ್ಲದ ಮಾತೆಲ್ಲವೂ ವ್ಯರ್ಥವೋ

ನಾರಾಯಣವ ಕೆ ಈ ಭಾಗವತವ ಕರಿಸೆ
ಭಾಗವತದ ಸಪ್ತಾಹದ ಪುಣ್ಯಫಲವು
ಭಾವಭಕುತಿಯು ಹುಟ್ಟಿ ಶ್ರೀವೇಂಕಟೇಶನ
ಪಾವನವಾದ ಶ್ರೀಪಾದವ ಸೇರುವ || ೨೧

ಭೈರವಿ ತಾಳ –

ನಿನೂ ತೋಚದೇ–ಮುಂದೇನು ಗತಿಯೋ ದೇವಾ
ದೀನವತ್ಸಲ ಕಾಯೋ ಅಪ್ರಮೇಯ ಸದಾ ||

ನಾನು ನನ್ನದು ಎಂಬಭಿಮಾನದಿಂದನುದಿನ
ಹೀನಕರ್ಮದ ಸುಳಿಯೊಳು ನಾನೊಂದು ನಿಂದೆನೊ || ಅ.

ಬೋಧ ಇಲ್ಲದೆ ನಾನು ಬಾಧಪಡುವ ಪೂರ್ಣ–
ಬೋಧರ ಮತತತ್ತ್ವ ಸಾಧಿಸಲಿಲ್ಲವೋ
ಸಾಧುಸಜ್ಜನರೆಂದು ಆದರಿಸಲರಿಯೆನೋ
ಆಧಾರನಾಗೋ ನಿರಾಧಾರನಾಗಿಹೆ
ಬಾಧಿಪರೋ ಬಂಧುಗಳು ಪ್ರತಿದಿನ
ನಿಂದಿಪರೋ ಮನಬಂದ ತೆರದಲಿ ಊರೊಳಿತರಜನ
ಉದಯಾಸ್ತ ಪರಿಯಂತರದಿ ಎನಗೆ
ಉದರದಯೋಚನೆ ಆದುದೀಪರಿ ಎನ್ನ ಜೀವನ
ಇಗಕೆ ಸಾಧನಮಾಡಿ ಮೋಹದ
ಮದದಿ ಮೈಮರೆದೆನನುದಿನ
ಪದುಮನಾಭನೆ ಮೊರೆಯಿಡುವೆ
ಮುಂದೇನುಗತಿ ಪಥವಾವುದೋ ದೇವಾ ||

ಯುಕುತಿಯಿಂದಲಿ ಕರ್ಮಮಾಡಿ ಬೆಂಡಾದೆ
ಭಕುತಿಮಾತ್ರವು ಎನ್ನೊಳಿನಿತಿಲ್ಲವೋ
ಶಕುತಿಯುಕುತಿಗಳೊಳು ನೀನಿದ್ದು ನಡೆಸುವೆ
ಭಕುತಿಕೊಡದಿರುವೆಯಾ ಮುಕುತರೊಡೆಯಾ

ಮಾಕಳತ್ರನೆ ನಿನ್ನ ದಯವೊಂದನವರತ ಇರಲಿ
ಅಕುಟಿಲಾಂತಃಕರಣ ಭಕ್ತರಸಂಗವೆನಗಿರಲಿ
ನಿಖಿಳಗುಣಗಣಪೂರ್ಣ ನಿನ್ನಯ ಸ್ಮರಣೆಯೊಂದಿರಲಿ
ಸಾಕು ಇದಕಾನೇನು ಮಾಡಲಿ ನಾಕುಮನಸಿಗೆ ಸಿ–
ಲುಕದವ ನಿನ್ನ ಕಾಕುಮನುಜ ನಾನೆಂತು ತಿಳಿಯಲಿ
ನೀ ಕರುಣಿಸದಲಿರೆ ಇನ್ನು ಅವಿ–
ವೇಕಿ ನಾನಿನ್ನೆಂತುಗೈಯಲಿ

ನರಜನುಮದಿ ಬಂದು ಬರಿದೆ ಆಯುವ ಕಳೆದೆ
ಹರಿಯೆ ನಿನ್ನಯ ಕರುಣ ದೊರೆಯಲಿಲ್ಲಾ
ಕರೆಕರೆಪಡುತಲಿ ಜರೆಯೊಳಾಡುತಿದೆ
ಪರಿಹಾರ ತೋರೆನಗೆ ದುರಿತಹರೇ
ದಾರಿ ಎನಗೇನಿಹುದೋ ಇನ್ನು ಮುಂದೆ
ಪರಿಪರಿಯ ತನುಮನ ಕ್ಲೇಶಕೊಡದಲೆ
ಪಾರುಗಾಣಿಸೋ ತಂದೆ ಶರಣಜನರಿಗನವರತ
ಸುರಧೇನು ನೀನೆಂದೇ ಅರಿಯದವನಾ ನೀ
ಪೊರೆಯಲರಿದೇ ಕರುಣಾಶರಧಿಯೇ ನಿನ್ನ ಕೃಪೆಯೊಂ
ಉರುತರಸಾಧನವು ಅದು
ಶರವರಿತು ದೃಢಭಕ್ತಿ ಪಾಲಿಸೊ
ಉರಗಗಿರಿ ಶ್ರೀ ವೇಂಕಟೇಶನೆ

ರಾಗ – ಧನಾಸರಿ

ಕಷ್ಟಕಷ್ಟವೋ ಕೃಷ್ಣ ದೃಷ್ಟಿಯಲಿ ನೋಡದಿರೆ
ತುಷ್ಟಿಪಡಿಸಲು ನಿನ್ನ ನಾನೆಷ್ಟರವನಯ್ಯ

ಭ್ರಷ್ಟನಾಗಿಹೆ ನಾ ಅಷ್ಟಾಂಗಯೋಗವ ತಿಳಿಯೆ ಹಿಂ
ದಿಷ್ಟು ಭಕುತಿಯ ಕೊಟ್ಟು ಕಡೆಹಾಯಿಸಯ್ಯ

ಸತ್ಯ ಅಸ್ತೇಯ ಬ್ರಹ್ಮಚರ್ಯ ಅಹಿಂಸಾ
ಧೃತಿ ದಯಾ ಕ್ಷಮಾರ್ಜಿತ ಮಿತಭುಕ್ತವು

ತ್ಯ ಬಾಹ್ಯಾಂತರ ಶೌಚಾದಿ ದಶಗುಣ
ಂಶವಾದ ಯಮ ಉಪಾಸನೆಗಳಿನಿತಿಲ್ಲವೋ ದೇವಾ ॥ ೧

ಯಮ ಮೊದಲಿಲ್ಲ ಜಪತಪ ಸಂತೃಪ್ತಿ
ಯುತ ಸಿದ್ಧಾಂತ ಶ್ರವಣ ಲಜ್ಜಮತಿಯು
ಯಃಶಪತಿಯು ಪೂಜನ ಆಸ್ತಿಕ್ಯವ್ರತ ದಾನೋ-
ಯವಿಲ್ಲದೇ ಕಡೆಹಾಯ್ವುದೆಂತಯ್ಯ ॥ ೨

ಶಿಯಾಗಿಹುದಯ್ಯ ಷಡ್ವಿಧಾಸನಗಳು
ಸ್ತಿಕ ಭದ್ರ ಪದ್ಮ ಅರ್ಧಾಂಗಾಸನದಿ
ದ್ಧ ಪರ್ಯಂಕಗಳೆಂಬ ಆಸನದಿ ಕುಳಿತು
ಧೇನಿಸಲರಿಯೆ ಹರಿಯೇ ॥ ೩

ಾಣಾಯಾಮದ ಕ್ರಮವು ರೇಚಕ ಪೂರಕವು
ಕವಿಲ್ಲದೆ ಕುಂಭಕದ ಕ್ರಮವಿಲ್ಲ
ಣವಿಲ್ಲವೊ ವಾಯುಬಂಧಮಾಡಲರಿಯೆ
ಣಪತಿ ನಿನ್ನ ಕರುಣವಿಲ್ಲದಾ ತನಕ ॥ ೪

ಷಯಾಭಿಲಾಷೆಯಿಂದ್ಹರಿದು ಹೋಯಿತು ಮನಸು
ಶಮವಾಗಿಹುದಯ್ಯ ಮತ್ಸಾಧನ
ಹೀಕಪನೆ ಪ್ರತ್ಯಾಹಾರಸಾಧನವಿಲ್ಲ
ಹಿಮಾಡಿ ಸ್ಥಿರಮನದಿ ಧೇನಿಸಲು ನಾನರಿಯೆ ॥ ೫

ರಣೋಪಾಯದೊಳು ಅಣುಮಾತ್ರ ನಾನರಿಯೆ
ಕ್ರಿಮಿಯಾಗಿ ನಾ ಧರೆಯೊಳುಳಿದೆ
ಯೆ ಬಾಹ್ಯಾಂತರದಿ ಭೂತಪಂಚಕವಿರುವ
ತಿಳಿದು ಪ್ರಾಣವಾಯು ಸಡಿಲಬಿಡಲರಿಯೆ ॥ ೬

ನಿಸಲು ಏಕಾಗ್ರಚಿತ್ತವೇ ಎನಗಿಲ್ಲ
ಸ್ಮೃತಿಸೆ ಸಂಪ್ರಜ್ಞಾ ಅಸಂಪ್ರಜ್ಞವೆಂಬ
ಸಮಾಧಿಯೊಳ್ ಪರಿವಿಲ್ಲದಲೆ
ಕರುಣವೆಂತಾಗುವುದೋ ಶ್ರೀ ವೇಂಕಟೇಶಾ ॥ ೭

ದ್ಧವಾದದ್ವೈತತ್ರಯ ತಿಳಿಯದಲೆ
ುಗ್ಧನಾಗಿಹೆ ನಾನಪರಿಶುದ್ಧನೊ
ಬ್ದಗೋಚರ ನಿನ್ನ ಪರಿಶುದ್ಧ ಭಾವದಿಂ
ುದ್ಧಿಪೂರ್ವಕ ತಿಳಿಯೆ ಬದ್ಧ ಪಾಮರನಯ್ಯ ॥ ೮

ರಣತ್ರಯದಲಿ ಮಾಳ್ಪ ಕ್ರಿಯೆಗಳೆಲ್ಲವು ಸತತ
ರಿಯೆ ಬಿಂಬಕ್ರಿಯವನಾನರಿಯದೇ
ರುಣಶರಧಿಯೆ ನೀ ಕೃಪೆಮಾಡಿ ಪೊರೆಯದಿರೆ
ರಗಾದ್ರಿವಾಸವಿಠ್ಠಲ ನಿನ್ನೊರತು ಗತಿಯುಂಟೆ ॥ ೯

ರಣದ ಹಾಡು

ಪಂಚರೂಪಾತ್ಮಕ ಪ್ರಪಂಚ ಕಾರ್ಯಕನವಾದ
ಪಂಚೀಕರಣ ಮಾಡಿ ತಾ ಸಂಚರಿಸುವ ॥ ಪ

ಪಂಚೀಕರಣ ತಿಳಿಯದೆ | ಪ್ರಪಂಚದೊಳು ಮುಳುಗಿ ನಾ
ವಂಚಿತನಾದೆ ವಿರಿಂಚಿ ಭಕ್ತಿಗೆ ॥ ಅ ಪ

ಸಚ್ಚಿದಾನಂದರೂಪ | ವ್ಯಾಪ್ತಿರೂಪಿ ನಾರಾಯಣ ಅಪ-
ರಿಚ್ಛಿನ್ನ ಮೂಲಪ್ರಕೃತಿ ತ್ರಿಗುಣ ಗೈಸಿದ
ಅಚ್ಯುತ ತನ್ನಿಚ್ಛೆಯಿಂದ ವೈಕೃತಾಕಾಶಕ್ಕೆ
ಅಂಭ್ರಣೀದೇವಿಯರನೆ ಮುಖ್ಯಮಾಡಿದಾ ॥

ಗುಣರಾಶಿಯೊಳು ಸತ್ವಕ್ಕೆ ಶ್ರೀದೇವಿಯರು ಮುಖ್ಯ
ರಜಕೆ ಭೂದೇವಿ ತಮಕೆ ದುರ್ಗಾದೇವೇರು
ಸತ್ಯ ಜ್ಞಾನಾನಂದ ದಯೆ ಮಾನ ಪಂಚೇಂದ್ರಿಯ ಜಯ
ಆಶ್ಚರ್ಯ ಗುರುಸೇವೆಯೇ ಸತ್ವಕಾರ್ಯವು ॥

ಕಾಮ ಕ್ರೋಧ ಅಹಂಕಾರ ಮದೋನ್ಮಾದ ಚಪಲೋದ್ಯೋಗ

ಕಾರ್ಯ ಅಜ್ಞಾನ ಮೋಹ ನಿದ್ರಾಲಸ್ಯ
ಶೂನ್ಯ ತಾಪಸವಾದಿ ಹಿಂಸಾಕಾರ್ಯವು ॥ ೩ ॥

ಪ್ರಾಚುರ್ಯದಿಂದ ಗುಣತ್ರಯ ವೈಷಮ್ಯ ಹೊಂದಿ
ಕಾರ್ಯಕೆ ಮಹತ್ತತ್ವವಾಯಿತು
ತಾಂ ಪತಿಯ ಇಚ್ಛೆಯಿಂದ ಮಹತ್ತತ್ವದಿ
ಕಾರತತ್ವವೆಂಬುದೇ ಹುಟ್ಟಿತು ॥ ೪ ॥

ಾಯಿತು ಅಹಂಕಾರ ವೈಕಾರಿಕ ತೈಜಸ
ಸ ಅಹಂಕಾರವೆನುತಲಿ ಮೂರಹಂ–
 ಮೂರು ರುದ್ರರೂಪಗಳು ಬ್ರಹ್ಮವಾಯು
ಂದುದಯಿಸಿದರು ॥ ೫ ॥

ರಿಕ ಅಹಂಕಾರದಿ ದೇವತಾ ದೇಹ ಮನಸು
ದಿಂದ ದಶೇಂದ್ರಿಯ ಹುಟ್ಟಿತು
ಭೂತ ಪಂಚಕವು ಪಂಚತನ್ಮಾತ್ರಗಳು
ಸಾಹಂಕಾರದಿಂದುತ್ಪನ್ನವಾದುವು ॥ ೬ ॥

ಮಿಳಿತ ಮಾಡಿ ಬ್ರಹ್ಮಾಂಡವನ್ನೆ ಸೇರಿ
ಯು ಪದ್ಮನಾಭರೂಪದಿಂದ ಶಯನ ಗೈದನು
ಲೋಕೋದ್ಧಾರ ಹರಿಯ ನಾಭಿಯೊಳು ಪದ್ಮ
ಿ ಪದುಮದಲ್ಲಿ ಪದ್ಮಸಂಭವನ ಸೃಜಿಸಿದ ॥ ೭ ॥

ರಂತರ್ಯಾಮಿ ಸಕಲ ಜೀವರನ್ನು ಸೃಷ್ಟಿಗೈಸಿ
 ಯೋಗ್ಯತಾ ಕಾರ್ಯ ನಡೆಸುತಿರುವನು
ಜೀವ ಕಾರ್ಯವು ಪಂಚವಿಂಶತಿತತ್ವ ಈ–
ವಲಿ ಕಾರ್ಯನಡೆಯುತಿರುವುದು ॥ ೮ ॥

ತನ್ಮಾತ್ರದಿಂದ ಆಕಾಶ ಹುಟ್ಟಿತು ವಾಯುಹುಟ್ಟಿತು
ರ್ಶ ತನ್ಮಾತ್ರದಿ । ರೂಪ ತನ್ಮಾತ್ರದಿ ಅಗ್ನಿ ಭೂತ ಹುಟ್ಟಿತು
ರಸ ತನ್ಮಾತ್ರದಿ ಅಪ್ಪು ಹುಟ್ಟಿತು ॥ ೯ ॥

ಪೃಥ್ವಿ ಹುಟ್ಟಿತು ಗಂಧ ತನ್ಮಾತ್ರದಿಂದಲಿ
ಈ ಪರಿ ವಿರಾಟದಿಂದುದಯಿಸಿದವು ಆಕಾಶ
ಕೊಂಡೆ ಶಬ್ದ ಗುಣವು ಮಾತ್ರ ಇರುವುದು
ಅಹದು ವಾಯುವಿಗೆ ಶಬ್ದ ಸ್ಪರ್ಶವೆರಡು ಗುಣಗಳು

ತೋರುತಿರ್ಪುದಗ್ನಿ ಶಬ್ದ ಸ್ಪರ್ಶ ರೂಪಗುಣಗಳು
ಅಪ್ಪುಗಿಹುದು ಶಬ್ದ ಸ್ಪರ್ಶ ರೂಪರಸ
ಗುಣ ಶಬ್ದ ಸ್ಪರ್ಶ ರೂಪ ರಸ ಗಂಧವೈದು
ಪೃಥ್ವಿಗುಣವು ಈಪರಿ ಭೂತಪಂಚಕಗಳ ಅರಿವುದು

ಪಂಚಭೂತಗಳು ತಮ್ಮ ಸ್ವಾಂಶಗಳ ಭಾಗಗೈಸಿ ಪ್ರ-
ಪಂಚ ಕಾರ್ಯಕಿತ್ತ ಪರಿಯುದೆಂತೆನೆ ಆಕಾಶ
ದರ್ಧಭಾಗ ಭೂತ ಪ್ರೇತ ಪಿಶಾಚಗಳಿಗೂ ಉಳಿ
ದರ್ಧದೊಳ್ ಪಾದ ಪಾದವನ್ನು ಜೀವಕೋಟಿಗೂ

ವಾಯು ತನ್ನರ್ಧಭಾಗ ಪಕ್ಷಿ ಪನ್ನಗಾದಿಗಳಿಗೂ
ಮಿಕ್ಕರ್ಧದೊಳು ಪಾದಭಾಗ ಜೀವಕೋಟಿಗೂ
ಅಗ್ನಿ ತನ್ನರ್ಧಭಾಗ ದೇವಋಷಿಗಳಿಗೂ
ಮಿಕ್ಕರ್ಧದೋಳ್ ಪಾದಭಾಗ ಜೀವಕೋಟಿಗೂ

ಅಪ್ಪು ತನ್ನರ್ಧಾಂಶ ಜಲಚರ ಪ್ರಾಣಿಗಳಿಗು
ಮಿಕ್ಕರ್ಧದೋಳ್ ಪಾದಭಾಗಜೀವಕೋಟಿಗೂ
ಪೃಥ್ವಿ ತನ್ನರ್ಧಾಂಶ ಜಡಜೀವಕೋಟಿಗೂ ಮಿಕ್ಕ
ರ್ಧದೊಳ್ ಪಾದಭಾಗ ಜೀವಕೋಟಿಗೂ

ಪೃಥ್ವಿ ಅಪ್ಪು ತೇಜೋ ವಾಯು ಆಕಾಶಗಳು
ಸೂಕ್ಷ್ಮರೂಪದಿಂದೆರಡೆರಡಾದವು
ಆಕಾಶ ತನ್ನರ್ಧಾಂಶದಲ್ಲಿ ವಾಯ್ವಗ್ನಿ ಅಪ್ಪುಪೃಥ್ವಿಗಳಿ
ಗೆ ಕೊಟ್ಟು ಸ್ವಾಂಶ ಅಂತಃಕರಣವೆನಿಸಿತು

ವಾಯು ಸ್ವಾಂಶದಿಂದುದಾನವೆಂದೆನಿಸಿ ಮಿಕ್ಕ
ಪೃಥ್ವ್ಯಪ್ತೇಜಾಕಾಶಗಳಿಗೆ ತನ್ನ ಚಲನಕೊಟ್ಟಿತು

ತನ್ನ ಸ್ವಾಂಶದಿಂದ [illegible]
ಸಿ ವಾಯ್ವಾಕಾಶ ಅಪ್ಪುಪೃಥ್ವಿಗುಷ್ಣ ಕೊಟ್ಟಿತು ॥ ೧೬ ॥

ಪ್ಪು ತನ್ನ ಸ್ವಾಂಶದಿಂ ರಸವೆಂದೆನಿಸಿ ವಿಶ್ಕ
ಯ್ವಾಕಾಶಾಗ್ನಿ ಪೃಥ್ವಿಗೆ ದ್ರವವ ಕೊಟ್ಟಿತು
ಥ್ವಿ ತನ್ನ ಸ್ವಾಂಶದಿಂ ಗಂಧವೆಂದೆನಿಸಿ ವಿಶ್ಕ
ತೇಜವಾಯ್ವಾಕಾಶಕೆ ಕಠಿಣ ಕೊಟ್ಟಿತು ॥ ೧೭ ॥

ತ ಪಂಚಕಗಳಿಗೆ ಸದ್ಯೋಜಾತ ವಾಮದೇವ
ಘೋರ ತತ್ಪುರುಷ ಈಶಾನರೂಪವು
ನಿಷ್ಠಾನರಾಗಿ ಅಪರಂತರ್ಯಾಮಿಯಾಗಿ
ರುದ್ರಾದಿ ಐದು ಭಗವನ್ಮೂರ್ತಿ ಇರುವುದು ॥ ೧೮ ॥

ಮ ರೂಪ ವರ್ಣ ಗುಣ ಸ್ವಭಾವ ತೇಜ
ಮುಖ ದೇವರ ಶಕ್ತಿ ಅಕ್ಷರ ಕ್ರಿಯಾ
ಬೀ ಹತ್ತು ಗುಣಗಳು ಭೂತ ಒಂದಕ್ಕೆ ತಿಳಿದು
ಪಾಸನ ಮಾಳ್ಪುದೂ ಬುಧರು ಎಲ್ಲರು ॥ ೧೯

ಮವೇ ಆಕಾಶ ರೂಪ ಒಟ್ಟು ಭಾವ ಬಯಲು
ರ್ಣ ಕಪ್ಪು ಗುಣಶಬ್ದ ಕ್ರಿಯ ಅನುಗ್ರಹ
ಖವೇ ಈಶಾನ ದೇವತೆ ಪರಶಿವಶಕ್ತಿ
ರಾಶಕ್ತಿ ಅಕ್ಷರವೇ ನಾದವು ॥ ೨೦

ಮ ವಾಯುರೂಪ ಷಟ್ಕೋಣ ವರ್ಣನೀಲ
ಭಾವಚಲನ ಗುಣವು ಸ್ಪರ್ಶ ಕ್ರಿಯಾಸಂಚಾರ
ಖ ತತ್ಪುರುಷ ದೇವತೆ ಸದಾಶಿವ ಶಕ್ತಿ
ಕ್ಷರ ಬಿಂದುವೆನಿಪುದು ॥ ೨೧

ಮ ಅಗ್ನಿರೂಪ ಮುಕ್ಕೋಣ ವರ್ಣ ರಕ್ತವರ್ಣ
ಭಾವ ಉಷ್ಣ ಗುಣ ತೇಜ ಕ್ರಿಯಾ ಸಂಹಾರ
ಮುಖ ಅಘೋರ ದೇವತೆ ರುದ್ರ ಶಕ್ತಿಪಾರ್ವತಿ
ಕ್ಷರ ಮಕಾರ ॥ ೨೨

ನಾಮ ಅಪ್ಪು ರೂಪ ಅರ್ಧೇಂದು ಶ್ವೇತವರ್ಣ
ಸ್ವಭಾವದ್ರವ ಗುಣ ಮಾಧುರ್ಯ
ಕ್ರಿಯರಸ ಮುಖವಾಮದೇವ ದೇವತೆ
ವಿಷ್ಣುಶಕ್ತಿ ಅಕ್ಷರ ಉಕಾರ ಎಂದು ಪೇಳ್ವುದು

ನಾಮವೇ ಪೃಥ್ವಿರೂಪ ಚತುಷ್ಕೋಣ ವರ್ಣ
ಹೇಮ ಸ್ವಭಾವವೇ ಕಠಿಣ ಕ್ರಿಯಸೃಷ್ಟಿ
ಗುಣವೆ ಗಂಧವು ಮುಖ ಸದ್ಯೋಜಾತ ದೇವತೆ
ಬ್ರಹ್ಮಶಕ್ತಿ ಸರಸ್ವತಿ ಅಕ್ಷರ ಅಕಾರವು

ಉಕ್ತರೀತಿ ಹತ್ತು ಗುಣಗಳೊಳ್ ಭೂತ ಪಿಂದ-
ಕ್ಕೆ ತಿಳಿದು ಈ ಜ್ಞಾನೇಂದ್ರಿಯಗಳೆಂತಾದವು
ಎಂದರಿವುದು । ಆಕಾಶ ಸಮಾನಾಂಶ ಅಗ್ನಿಯು
ಮುಖ್ಯಾಂಶದಿರೆ ಶ್ರೋತ್ರೇಂದ್ರಿಯ ಹುಟ್ಟಿ ತೋರುತಿರುಂ

ವಾಯುಸಮಾನಾಂಶ ಬಂದು ಅಗ್ನಿ ಮುಖ್ಯಾಂಶದಿರೆ
ತ್ವಗೇಂದ್ರಿಯವು ತಾನೆ ತೋರುತಿರುವುದು
ಅಪ್ಪು ಸಮಾನಾಂಶ ಬಂದು ಅಗ್ನಿ ಮುಖ್ಯಾಂಶದಿರೆ
ಜಿಹ್ವೇಂದ್ರಿಯವು ತೋರುತಿರುವುದು

ಪೃಥ್ವಿ ಸಮಾನಾಂಶ ಬಂದು ಅಗ್ನಿ ಮುಖ್ಯಾಂಶದಿರೆ
ಘ್ರಾಣೇಂದ್ರಿಯ ತಾನೆ ತೋರುತಿರುವುದು
ಅಗ್ನಿ ಸ್ವಾಂಶದಿಂದ ಚಕ್ಷುಷೇಂದ್ರಿಯವೆಂದು
ಹಿಂದೆಯೇ ಈ ವಿವರ ಪೇಳಿರುವುದು

ಪೃಥ್ವಿ ಮುಖ್ಯಾಂಶದೊಡನೆ ಆಕಾಶಸಮಾಂಶ ಸೇರಿ
ವಾಗೇಂದ್ರಿಯವೆ ತಾನೆ ತೋರುತಿರುವುದು ಪೃಥ್ವಿ
ಮುಖ್ಯಾಂಶದೊಡನೆ ವಾಯು ಸಮಾಂಶ ಸೇರೆ
ಘ್ರಾಣೇಂದ್ರಿಯವು ತಾನೆ ತೋರುವುದು

ಪೃಥ್ವಿ ಮುಖ್ಯಾಂಶದೊಡನೆ ಅಗ್ನಿ ಸಮಾಂಶ ಸೇರಿ
ಪಾದೇಂದ್ರಿಯವು ತಾನೆ ತೋರುತಿರುವುದು

ಮುಖ್ಯಾಂಶದೊಡನೆ ಅಪ್ಪು ಸಮಾನಾಂಶ ಸೇರಿ
ಂದ್ರಿಯವೆಂದು ತೋರುತಿರ್ಪುದು ॥ ೨೯ ॥

ಶ್ವಾಂಶವೇ ಗುಹ್ಯೇಂದ್ರಿಯವೆಂದು ಪೂ
ರೀತಿ ಗಣನೆ ತಲೂಪುದು ಈರೀತಿ
ಂದ್ರಿಯಗಳೆಲ್ಲ ಪೃಥ್ವಿತತ್ವದಿಂದಲೇ
ಬೆಳಗುತಿರುವುದ ॥ ೩೦ ॥

ಸಮಾನಾಂಶ ಅಪ್ಪು ಮುಖ್ಯಾಂಶದಿರೆ ಶಬ್ದ
ಸ್ವಯಾಂಶದಿ ಅಪ್ಪು ಮುಖ್ಯಾಂಶದಿ
ತೋರ್ಪುದು । ಅಗ್ನಿ ಸಮಾನಾಂಶ ಅಪ್ಪು ಮು
ಶದಿ ರೂಪಗಂಧವಹುದ ಪೃಥ್ವಿಸಮಾಂಶ ಅಪ್ಪು
ಮುಖ್ಯಾಂಶದಿಂದಲಿ– ॥ ೩೧ ॥

ಸ್ವಯಾಂಶವೇ ರಸವು ಎಂದೆನಿಸಿತು
ತ್ರ ಪಂಚಕಕ್ಕೆ ಮೂಲ ಅಪ್ಪುತತ್ವವು
ಾದಿ ಪಂಚಗಳ । ಮುಂದೆ ವಿವರಿಸಿಹುದು
ುತತ್ವವೇ ಅದಕೆ ಮುಖ್ಯಕಾರಣ ॥ ೩೨ ॥

ು ಮುಖ್ಯಾಂಶದೊಳು ಆಕಾಶಸಮಾನಾಂಶ
ಸಮಾನ ವಾಯುವೆಂತೆಂದೇರ್ಪಟ್ಟಿತು
ು ಮುಖ್ಯಾಂಶದೊಡನೆ ಅಗ್ನಿಸಮಾನಾಂಶ ಸೇರಿ
ವಾಯು ಎಂತೆಂದೇರ್ಪಟ್ಟಿತು ॥ ೩೩ ॥

ು ಮುಖಾಂಶದೊಳು । ಅಪ್ಪುಸಮಾನಾಂಶಸೇರಿ
ನ ವಾಯುವೆಂತೆಂದೇರ್ಪಟ್ಟಿತು ವಾಯು
ಖ್ಯಾಂಶದೊಡನೆ ಪೃಥ್ವಿ ಸಮಾನಾಂಶ ಸೇರಲು
ಣವಾಯು ಉತ್ಪನ್ನವಾಯಿತು ॥ ೩೪ ॥

ಯುವಿನ ಸ್ವಯಾಂಶವೇ ಉದಾನವಾಯುವೆನಿಸಿತು
ಂದೆ ವಿವರಿಸುವುದು ಜ್ಞಾನ ಪಂಚಕ । ಈ ಜ್ಞಾನ
ಚಕಕ್ಕೆ ಆಕಾಶ ತತ್ವವೇ ಮುಖ್ಯಕಾರಣವೆಂದು
ರು ಪೇಳ್ವರು ॥ ೩೫ ॥

ಕಾಶ ಮುಖ್ಯಾಂಶದಿ ವಾಯು ಸಮಾನಾಂಶ ಸೇರಿ
ಾಗಲಿ ಮನಸು ಎಂಬುವದು ಹುಟ್ಟಿತು
ಕಾಶ ಮುಖ್ಯಾಂಶದಿ ಅಗ್ನಿ ಸಮಾನಾಂಶ ಸೇರಿ
ಾಗಲಿ ಬುದ್ಧಿ ಎಂಬುದು ಗೋಚರವಾಯಿತು || ೩೬

ಕಾಶಮುಖ್ಯಾಂಶ ದೊಳು ಅಪ್ಪು ಸಮಾನಾಂಶ
ೇರಿ ಚಿತ್ತವೆಂಬುವದು ವ್ಯಕ್ತವಾಯಿತು
ಕಾಶ ಮುಖ್ಯಾಂಶದೊಳು ಪೃಥ್ವಿ ಸಮಾನಾಂಶ
ೇರಿ ಅಹಂಕಾರವೆಂಬು ದೇರ್ಪಟ್ಟಿತು || ೩೭

ಕಾಶಸ್ವಾಂಶವೇ ಕರ್ತೃತ್ವವೆಂದೆನಿಸಿತು
ಈ ಪರಿಯು ತಿಳಿವುದು ಜ್ಞಾನ ಪಂಚಕ
ಜ್ಞಾನೇಂದ್ರಿಯು ಕರ್ಮೇಂದ್ರಿಯು ಪಂಚ ತನ್ಮಾತ್ರ
ಕ್ರಗಳಿಗೆ | ಆಧ್ಯಾತ್ಮಿಕಾದಿಭೌತಿಕ ದೇವತೆಗಳ ತಿಳಿವುದು || ೩೮

ಕಂಠದೊಳು ಪ್ರಾಣನೂ ಶ್ವಾಸೋಚ್ಛ್ವಾಸ ಮಾಡಿಸುವ
ಅಪಾನ ಗುದದೊಳಿದ್ದು ಕಾರ್ಯ ಮಾಡುವ
ಅನ್ನಕಾರ್ಯ ವ್ಯಾನನು ಉದ್ಗಾರ ಮಾಳ್ಪ ಉದಾನನು
ಶಿಖಿನಖದಿ ದೇಹವ್ಯಾಪ್ತನಾಗಿಹ ಸಮಾನನು || ೩೯

ಚತುರ್ವಿಧ ಅನ್ನಗಳನ್ನು ಭಾಗಗೈಸಿ ನಾಡಿಗಳಿಗೆ
ಸಾಗಿಸುವ ಕಾರ್ಯವು ಸಮಾನನಿಂದಲಿ
ಅನ್ನದೊಳು ರಸಾಂಶಸಾರ ನಿಸ್ಸಾರಾಂಶ
ವೆಂದು ರಸವು ತ್ರಿವಿಧವಾಗಿ ತೋರುತಿರ್ಪುದು || ೪೦

ಪ್ರಾಣಧಾರಣೆಗೆ ಅನ್ನದ ರಸಾಂಶವೇ ಮುಖ್ಯ
ಮಧ್ಯಮಾಂಶ ಮಾಂಸಕ್ಕೆ ನಿಸ್ಸಾರ ಮಲಕ್ಕೆ
ಉದಕದ ರಸಾಂಶವೇ ಮನಸ್ಸಿಗೂ ಮಧ್ಯ
ಮಾಂಶ ರಕ್ತವಾಗಿ ನಿಸ್ಸಾರ ಮೂತ್ರಾದಿಗೂ || ೪೧

ಸರ್ಪಿ ರಸಾಂಶವೇ ಕಾಂತಿಗೂ ಮಧ್ಯಮಾಂಶ
ಮಾಂಸ ನಿಸಾರಾಂಶ ಅಸ್ಥಿಚರ್ಮಗಳಿಗೂ

ರೀತಿ ರಸಸಾರ ನಿಸ್ಸಾರ ಭಾಗವು ಸ್ಥೂಲ
ಹಕುಪಜಯ ವಾಗಿರುವುದು || ೪೨ ||

ಪಾಧಿ ದ್ವಾರದಿಂ ಬಂದ ಅಂತಃಕರಣ ಕಾರ್ಯ
ಕೀನೆಂದು ಚಿಂತಿಸುವುದು ಸಮಾನವಾಯು
ಂದು ಶ್ರೋತ್ರೇಂದ್ರಿಯ ದ್ವಾರ ಸಕಲಶಬ್ದವನ್ನ
ಳಿದು ವಾಗೇಂದ್ರಿಯ ದ್ವಾರ ವಚನ ನಡೆವುದು || ೪೩ |

ನಸಿನೊಡನೆ ಕೂಡಿ ಉದಾನವಾಯುವಿಗೆ ಬಂದು
ಗೇಂದ್ರಿಯದಿಂದ ಸ್ಪರ್ಶ ತಿಳಿವುದು ಸ್ಪರ್ಶ ತಿಳಿ-
ನಂತರ ಪಾಣೇಂದ್ರಿಯದ ದ್ವಾರ ಸಕಲ
ಾರ್ಯಗಳನ್ನ ಮಾಡುತಿರುವುದು || ೪೪

ುದ್ಧಿಯೊಡನೆ ಕೂಡಿಕೊಂಡು ವ್ಯಾನವಾಯುವಿಗೆ ಬಂದು
ಚಕ್ಷುಷೇಂದ್ರಿಯದ ದ್ವಾರ ರೂಪ ತೋರ್ಪುದು
ೂಪತಿಳಿದ ನಂತರ ಪಾದೇಂದ್ರಿಯ ದ್ವಾರದಿಂದ
ಸಕಲ ಗಮನಾದಿ ನಡೆಯುತ್ತಿರುವುದು || ೪೫

ಚಿತ್ತಸಂಗಡದಿ ಕೂಡಿ ಅಪಾನವಾಯುವಿಗೆ
ಬಂದು ಜಿಹ್ವೇಂದ್ರಿಯ ದ್ವಾರದಿಂದ ರಸವು ತಿಳಿ-
ವುದು ರಸವು ತಿಳಿದನಂತರ ಪಾಯು
ಇಂದ್ರಿಯದ್ವಾರ ಮಲವಿಸರ್ಜನ || ೪೬

ಅಹಂಕಾರದಿ ಬಂದು ಪ್ರಾಣವಾಯುವಿನೊಡನೆ ಸೇರಿ
ಘ್ರಾಣೇಂದ್ರಿಯ ದ್ವಾರದಿಂದ ಗಂಧ ತಿಳಿವುದು
ಗಂಧ ಜ್ಞಾನದನಂತರ ಗುಹ್ಯೇಂದ್ರಿಯದ ದ್ವಾರ
ಸಂಬಂಧಾದಿ ಭೋಗವಾಗುವದು || ೪೭

ಸುಖಿಯಾಗಿ ದುಃಖಿಯಾಗಿ ಕರ್ತೃವಾಗಿ ಭೋಕ್ತನಾಗಿ
ಜಾತಿನಾಮ ವರ್ಣಾಶ್ರಮಾಚಾರದಿಂದಲಿ
ಸಾಧನ ಮಾಡುತಿರಲು ಸದ್ಗುರೂಪದೇಶವಾಗೆ
ಜಗದ್ಗುರು ಪ್ರಾಣನಕೃಪೆಯು ಆಹೋದು || ೪೮

ಶ್ರವಣಮನನವಾಗಿ ತನ್ನ ದೇಹಕಾರ್ಯ
ತನ್ನದಲ್ಲವೆಂಬನುಸಂಧಾನವೇ ಮಾಡುತಿರಲು
ಭಗವದನುಗ್ರಹದಿ ತನ್ನ ಸಂಚಿತಾಗಾಮಿ
ಕ್ಷಯಿಸಿ ಪ್ರಾರಬ್ಧ ಭೋಗ ಮಾಡುತಲಿರುವನು ॥ ೪

ಪ್ರಾರಬ್ಧ ನಾಶದಿಂದ ದೇಹವಿಯೋಗ ಕಾಲದಲಿ
ಸರ್ವತತ್ವಕಾರ್ಯವೆಲ್ಲ ಲಯ ವಾಗೋದು
ಆಕಾಶ ಅಗ್ನಿಗೂ ವಿಯೋಗಕಾಲ ಬರಲು
ಆಕಾಶತತ್ವದಲ್ಲಿ ಆಕಾಶ ಸೇರುತಿರೆ ಶ್ರೋತ್ರಲಯವು ॥ ೫

ವಾಯುವಿಗೂ ಅಗ್ನಿಗೂ ವಿಯೋಗಕಾಲ ಬರಲು
ವಾಯುತತ್ವದಲ್ಲಿ ವಾಯುಸೇರೆ ತ್ವಗೇಂದ್ರಿಯವೆ ತಾನೇ
ಲಯವನೈದುವದು ಅಪ್ಪುವಿಗೂ ಅಗ್ನಿಗೂ
ವಿಯೋಗ ಕಾಲ ಬರಲು ಅಪ್ ತತ್ವದಲ್ಲಿ ಅಪ್ ಸೇರೆ
ಜಿಹ್ವೇಂದ್ರಿಯ ವೆ ಲಯವನೈದಿತು ॥ ೫

ಪೃಥ್ವಿಗೂ ಅಗ್ನಿಗೂ ವಿಯೋಗ ಕಾಲಬರಲು
ಪೃಥ್ವಿತತ್ವದಲ್ಲಿ ಪೃಥ್ವಿಸೇರೆ ಘ್ರಾಣೇಂದ್ರಿಯವೆ
ಲಯವನೈದಿತು ಅಗ್ನಿ ಸ್ವಯಾಂಶವೆ ಚಕ್ಷುರಿಂ-
ದ್ರಿಯವು ತನ್ನ ತತ್ವದಲ್ಲಿ ತಾನೆ ಲಯವನೈದಿತು ॥ ೫

ಆಕಾಶ ಪೃಥ್ವಿಗೂ ವಿಯೋಗ ಕಾಲ ಬರಲು ಆಕಾಶತತ್ವ
ಆಕಾಶದಲ್ಲಿ ಸೇರೆ ವಾಕ್ಕುಲಯವನೈದಿತು ವಾಯು-
ವಿಗೂ ಪೃಥ್ವಿಗೂ ವಿಯೋಗ ಸಮಯದಲ್ಲಿ ವಾಯು
ತತ್ವದಲ್ಲಿ ವಾಯು ಸೇರೆ ಘ್ರಾಣೇಂದ್ರಿಯವೆ ಲಯವನೈದಿತು ॥ ೫

ಅಗ್ನಿಗೂ ಪೃಥ್ವಿಗೂ ವಿಯೋಗಕಾಲಬರಲು ಅಗ್ನಿ ತತ್ವದಲ್ಲಿ
ಅಗ್ನಿಸೇರೆ ಪಾದಲಯವನೈದಿತು ಅಪ್‌ಗೂ ಪೃ-
ಥ್ವಿಗೂ ವಿಯೋಗಕಾಲ ಬರಲು ಅಪ್‌ತತ್ವದಲ್ಲಿ ಅಪ್‌ಸೇರೆ
ಪಾಯು ಇಂದ್ರಿಯವೆ ಲಯವ ನೈದಿತು ॥ ೫

। ಸ್ವಯಾಂಶವೇ ಗುಹ್ಯೇಂದ್ರಿಯವು ತಾನೆ ತನ್ನ
ಲ್ಲಿ ಲಯುವನೈದಿತು ಆಕಾಶ ಅಪ್ಪಿಗೂ
ೀಗಕಾಲ ಬರಲು ಆಕಾಶತತ್ವದಲ್ಲಿ ಆಕಾಶ ಸೇರಿ
ಯುವನೈದಿತು ॥ ೫೫ ॥

ುವಿಗೂ ಅಪ್ಪಿಗೂ ವಿಯೋಗಕಾಲಬರಲು
ುತತ್ವದಲ್ಲಿ ವಾಯುಸೇರಿ ಸ್ಪರ್ಶ
ವನೈದಿತು ಅಗ್ನಿಗೂ ಅಪ್ಪಿಗೂ ವಿಯೋಗ ಕಾಲಬರಲು
ತ್ವ ಅಗ್ನಿಯಲ್ಲಿ ಸೇರಿ ರೂಪಲಯುವಾಯಿತು ॥ ೫೬ ॥

ಗೂ ಅಪ್ಪಿಗೂ ವಿಯೋಗ ಕಾಲಬರಲು
ತತ್ವ ಪೃಥ್ವಿಯಲ್ಲಿ ಸೇರಿ ಗಂಧ ಲ-
ನೈದಿತು ಅಪ್‌ಸ್ವಯಾಂಶವೇ ರಸವೆಂದೆನಿಸಿ
ತನ್ನತತ್ವದೊಳು ಲಯುವನೈದಿತು ॥ ೫೭ ॥

ಶ ವಾಯುವಿಗೂ ವಿಯೋಗಕಾಲ ಬರಲು
ಶತತ್ವ ಆಕಾಶದಲ್ಲಿ ಸೇರಿ ಸಮಾನವಾಯು
ವನೈದಿತು ಅಗ್ನಿಗೂ ವಾಯುವಿಗೂ ವಿ
ಗಕಾಲ ಬರಲು ಅಗ್ನಿತತ್ವದಲ್ಲಿ ಅಗ್ನಿಸೇರಿ
ವ್ಯಾನವಾಯು ಲಯುವನೈದಿತು ॥ ೫೮ ॥

ಗೂ ವಾಯುವಿಗೂ ವಿಯೋಗಕಾಲ ಬರಲು
ತತ್ವದಲ್ಲಿ ಅಪ್ಪುಸೇರಿ ಅಪಾನವಾಯು ಲಯುವನೈದಿತು
ು ಸ್ವಯಾಂಶವೇ ಉದಾನವಾಯುವೆಂದೆನಿಸಿ ತಾನೆ
ತತ್ವದೊಳು ಲಯುವನೈದಿತು ॥ ೫೯ ॥

ು ಆಕಾಶಕ್ಕೂ ವಿಯೋಗಕಾಲ ಬರಲು ವಾಯುತತ್ವದಲ್ಲಿ
ುಸೇರಿ ಮನಸು ಲಯುವನೈದಿತು ಅಗ್ನಿ ಆಕಾಶಕ್ಕೂ
ೀಗಕಾಲ ಬರಲು ಅಗ್ನಿತತ್ವ ಅಗ್ನಿಯಲ್ಲಿ ಸೇರಿ
ಲಯುವನೈದಿತು ॥ ೬೦ ॥

ಆಕಾಶಕ್ಕೂ ವಿಯೋಗಕಾಲ ಬರಲು ಅಪ್ಪುತತ್ವ
ವಿನಲ್ಲಿ ಸೇರಿ ಚಿತ್ತಲಯುವನೈದಿತು

ಪೃಥ್ವಿ ಆಕಾಶಕ್ಕೂ ವಿಯೋಗ ಕಾಲಬರಲು ಪೃಥ್ವಿತತ್ವ
ಪೃಥ್ವಿಯಲ್ಲಿ ಸೇರಿ ಅಹಂಕಾರ ಲಯುವನೈದಿತು || ೩.

ಪೃಥ್ವಿಗೂ ವಾಯುವಿಗೂ ವಿಯೋಗಕಾಲ ಬರಲು ಪೃಥ್ವಿತತ್ವ
ಪೃಥ್ವಿಸೇರಿ ಪ್ರಾಣಲಯುವನೈದಿತು ಪೃಥ್ವಿಅಪ್ಪಿನಲ್ಲಿ ಲಯು
ಅಪ್ ಅಗ್ನಿಯೊಳು ಲಯು ಅಗ್ನಿವಾಯುವಿನಲ್ಲಿ ಲಯು
ವಾಯು ಆಕಾಶದಲ್ಲಿ ಲಯುವು || ೪.

ಆಕಾಶ ತಾಮಸಾಹಂಕಾರದಲ್ಲಿ ಅಲ್ಲಿಂದಹಂಕಾರದಲ್ಲಿ
ಮೂಲ ಅಹಂಕಾರದಿ ಮೂಲ ಅಹಂಕಾರವು ಮಹ-
ತ್ತತ್ವದಲ್ಲಿ ಲಯುವಾಗಿ ಲಕ್ಷ್ಮೀ ಉದರದ್ವಾರ ಶ್ರೀ
ಹರಿಯು ಉದರವು || ೫.

ವಿಷಯುವೈರಾಗ್ಯಕೆ ಹೃಷೀಕೇಶನ ದಯವು ಬೇಕು
ವಿಷಯು ಲಂಬಿಸಿಹುದೆಂದು ಕ್ಷಮೆಯು ತಾಳ್ಬುದು
ಕೃಷಿಯು ಮಾಡಿ ಹಿಂದೆ ಬರೆದ ಪಂಚೀಕರಣ
ವಿಷಂಗದೊಳು ವಿಷಮಪ್ರಾಸವಿದ್ದರೂ ಭೂಷಿಸುವುದು || ೬.

ಹರಿಯು ಉದರ ಸೇರುವ ಪರಿಯು ಲಯುವ ಚಿಂತಿಸುವಗೆ
ಪದವಿಯನೀವ ಶ್ರೀ ವೇಂಕಟೇಶನು ಸರ್ವ ತತ್ವರಂ-
ತರದಿ ಉರಗಾದ್ರಿವಾಸ ವಿಠ್ಠಲಸ್ವಾಮಿ ಸರ್ವ
ಕಾರ್ಯಗಳೊಳಮಾಡಿ ಮಾಡಿಸುತಿರ್ಪ || ೭.

ಕಾಂಬೋಧಿ ತಾಳ — ೧

ಯಜನವಾಗಲಿ ನಾನು ಭುಜಿಸುವುದು ಎಲ್ಲ ||

ಅಜಪಿತನೆ ಅದರ ಅನುಸಂಧಾನವನು ಅರಿಯೆ || ಅ.

ದೇಹವೆಂಬುದೆ ಯಜ್ಞಶಾಲೆಯಾಗಿ
[illegible]

ನೀಯಾಗ್ನಿಯು ಮುಖದಲ್ಲಿ ಹೃದಯದೊಳು
ಸ್ಪತೀ ದಕ್ಷಿಣಾಗ್ನಿಯು ಸುನಾಭಿಯಲ್ಲಿ ॥ ೧

ಕುಕ್ಷಿಯೊಳು ಸುರಭಿ ಉತ್ತರ
ಯೊಳು ಸೋಮಾಗ್ನಿ ಅರಿ ಪಂಚಾಗ್ನಿಯೊಳು
ದಿ ಪ್ರಾಣಾದಿ ಪಂಚರೂಪಗಳು ಹೋತಾ ಉದ್ಗಾತಾದಿ
ತ್ವಿಕ್ಕುಗಳಾಗಿ ನಿಂತಿಹರೆಂದು ॥ ೨

ತಿಯು ಕೊಡತಕ್ಕ ಸ್ರುಕ್ಸ್ರುವಗಳು ಬಾಹುಗಳು
ಭೋಜ್ಯವಸ್ತುವೆಲ್ಲ ಆಹುತಿಯು
ರಗತ ತತ್ವರು ಪರಮಾತ್ಮ ಬ್ರಾಹ್ಮಣರು
ವ ದೀಕ್ಷಿತನು ಬುದ್ಧಿ ತತ್ಪತ್ನಿ ॥ ೩

ಂಮಮತಾದಿ ಅರಿಷಡ್ವರ್ಗಗಳು
ಹಯಜ್ಞದ ಯೂಪಸ್ತಂಭದ ಪಶುಗಳು
ರಹ ಬಹ ನೀರಡಿಕೆಯು ಕುಡಿವ ನೀರೆಲ್ಲವು
ಜನಕಾರ್ಯದ ಮಧ್ಯ ಪರಿಷಿಂಚನವು ॥ ೪

ಪ್ಯದರನುಸಂಧಾನವನೆ ಕೊಡು ಕಂಡ್ಯ
ಷ್ಟಮೂರುತಿ ಶ್ರೀವೇಂಕಟೇಶ
ತ್ತಿಯೆನ್ನೊಳಗಿಲ್ಲ ಉರಗಾದ್ರಿವಾಸವಿಠ್ಠಲ
ಟ್ಟಿಹೊರೆವುದು ನಿನಗೆ ತಾಪ್ಯವಾಗಲಿ ದೇವ ॥ ೫

ಾಲಿ

ಹಿಂ ಸಿರಿ ಉರಗಾದ್ರಿವಾಸ ವಿಠಲನೇ
ದೃಂದಯಾಂತರಾತ್ಮ ವಿಠಲನೆ ಸಲಹೋ ॥

ಹದಲಿ ನಲಿವ ತಾಂಡವಕೃಷ್ಣ ವಿಠಲನೆ
ನ್ನಿಷ್ಟ ಭಕುತರ ಮನೋಭೀಷ್ಟವನೆ ಸಲಿಸಯ್ಯ ॥

ವಂದಿಪೆ ತಂದೆ ವೇಂಕಟೇಶವಿಠಲ
ಬಂದು ದಯವೀಯೋ ಜಯಾಪತಿವಿಠಲ
ಬಂಧಮೋಚಕ ಶಾಂತೀಶವಿಠಲನೆ ನಿನ್ನ
ಸಂದಭಕುತರ ಕಾಯ್ವ ಗಜವರದವಿಠಲ

ಶೇಷಶಯನ ವಿಠಲ ದೋಷರಾಶಿಗಳು ಕಳೆದು
ಮನದಾಯಾಸ ಸಲಿಸಯ್ಯ ಹರಿವಿಠಲ
ಶೈಶವದಿ ಕಾಯ್ದಂತೆ ಧ್ರುವವರದವಿಠಲನೆ
ಈ ಸಮಯದಲ್ಲೀ ಗ ರುವಾಸುದೇವವಿಠಲ

ವರದಲಕ್ಷ್ಮೀರಮಣವಿಠಲನೆ ಎನ್ನ
ಅವಿದ್ಯವನೆ ಹರಿಸೊ ಪ್ರದ್ಯುಮ್ನ ವಿಠಲ
ಪರಮಪುರುಷಾ ವರದ ವೇಂಕಟೇಶ ವಿಠಲನೆ
ಪರಮಸಾಧನ ನೀಡೋ ಸುಜ್ಞಾನವಿಠಲ

ಶ್ರೀನಾಥವಿಠಲ ತೈಜಸನು ನೀನೆ
ದೀನರಕ್ಷಕ ಭಾರತೀಶಪ್ರಿಯವಿಠಲ
ಪರಮಪಾವನ ಕಾಯೊ ವರಹವಿಠಲಮೂರ್ತೆ
ವರಮತಿಯ ನೀಡೊ ಆನಂದಮಯವಿಠಲ

ವಿಜ್ಞಾನಮಯ ಮನದ ಅಜ್ಞಾನವನು ಹರಿಸೊ ಸ-
ರ್ವಜ್ಞ ನೀನೆ ಶ್ರೀಪ್ರಾಜ್ಞವಿಠಲನೆ
ಯಜ್ಞಭುಗ್ಯಜ್ಞ ಸಾಧಕನು ನೀ
ಜಗದ್ಭರಿತವಿಠಲನೆ ನೀನೆನ್ನ ಸಲಹೋ

ಶುದ್ಧಮೂರುತಿ ಶ್ರೀ ವಿಜ್ಞಾನಮಯ ವಿಠಲ
ಸರ್ವಕಾರ್ಯದಿ ಮನಶುದ್ಧಿಯ ನೀಡೊ
ಮಧ್ವಗುರು ಶ್ರೀಕೃಷ್ಣದ್ವೈಪಾಯನ ವಿಠಲ
ಮದ್ಭರನಿಳುಹಿ ನೀ ಉದ್ಧಾರಮಾಡೊ

ರಕ್ಷಿಸೋ ಲಕ್ಷ್ಮೀಶವಿಠಲನೆ ಎನ್ನ ಮನ
ದಕಿಯೊಳು ನೆಲಿಸೊ ಶ್ರೀವೇಂಕಟೇಶವಿಠಲ

ಯೊಳು ಬ್ರಹ್ಮಾಂಡ ರಕ್ಷಿಸಿ ಶ್ರೀರಮಣವಿಠಲ
ದಾಸದಾಸ್ಯವ ದೇಹಿ || ೯

ಜನಪ್ರಿಯ ಶ್ರೀವರದವಿಠಲದೇವಾ
ಕಾರಿ ಪನ್ನಂಗ ಶಯನವಿಠಲ
ಕೋದಾರ ದಾಮೋದರವಿಠಲನೆ
ಯೋಗಿಗಳ ಗೋವಿಂದವಿಠಲಪಾಹಿ || ೧೦

ಕಂದೆ ಮುದ್ದುಮೋಹನ್ನ ವಿಠಲಾತ್ಮಕ ಶ್ರೀ
ಗಾದ್ರಿವಾಸ ವಿಠಲಸ್ವಾಮಿ
ರಿಗೆ ಆಯುಜ್ಞಾನ ಸಂಪತ್
ಸಾಧನೆಗಳಿತ್ತು ಸಲಹೋ || ೧೧

ಗ್ಯಾಣಿ ತಾಳ –

ಉರಗಾದ್ರಿವಾಸ ವಿಠಲ ||

ಹಿ ಪಾಹಿ ನಿನ್ನ ಚರಣಸೇವಕಳೆಂದೊಲಿ || ಅ ಪ

ರು ಶರಣ ದೊರೆಯುದಲಿ ಹರಿ ಒಲಿವನಲ್ಲೆಂದರುಹಯ್ಯ
ಚಿತ ತರತಮ ಪಂಚಭೇದ ಜ್ಞಾನ ನಿತ್ಯವಾಗಿರಲಿ ||

ಲಚಕ್ರದಲಿ ಬಹ ಕಲಿಬಂಗ ತೊಡಕಿಗೆ ಹೆದರಿ
ಲಮೂರುತಿ ನಿನ್ನ ಬಲವಿಲ್ಲದೆ ನೊಂದೆನೊ
ಾಗುಮಾಡದೆ ನಿನ್ನೊಳು ದೃಢಭಕುತಿ-ನೀತವಾಗಿರಲಿ ಹರಿಯೆ
||

ರುತಮತತತ್ವ ಅಮೃತವಾದುದು ಎಂದು
ರಗಾದ್ರಿವಾಸ ನೀನೆ ಕರುಣಿಸಿ ನೀಡೊ
ರಿತವಳಿವಳಲ್ಲ ನಿನ್ನ ಬಲವೇ ಬಲ ಶ್ರೀನಲ್ಲ ನೀ ಕಾಯು-
ರ ರಕ್ಷಕರಿಲ್ಲ ಶ್ರೀ ಗುರುಗಳಂತರ್ಗತ ಶ್ರೀ

ಾರತೀಶಾಂತರ್ಗತ ಶ್ರೀ ಉರಗಾದ್ರಿವಾಸವಿಠಲಾಭಿನ್ನ
ರಿ ಉರಗಾದ್ರಿವಾಸವಿಠಲ ತವ ದಾಸೋಹಂ ತವ ದಾಸೋ
||

ಕಾಂಬೋಧಿ ತಾಳ

ಶ್ರೀ ವೇಣುಗೋಪಾಲ ಕೃಷ್ಣಮೂರ್ತೇ ||
ಾವುದೀತನ ನಿನ್ನ ದಾಸನೆಂದನವಂತ || ಅ

ಾಯದಿಂದಲಿ ನಿನ್ನ ಚರಣಸೇವೆಯ ಮಾಡಿ
ಕೋಯಿಂದ ಆಂಬಿಕ ನಿನ್ನ ನಾಮ ಪಾಡಿಸುತ
ಕೀಯ ನಿನ್ನಯ ಮೂರ್ತಿ ಮಾನಸದಿ ಧೇನಿಸುತ
ಈ ಉಪಾಸನೆಯನ್ನನವರತ ಕೊಡು ದೇವ |

ಾಕಿಕದಲ್ಲಿದ್ದಾರು ಲೋಕೈಕನಾಥನೆ
ಕಾಂತದಲಿ ನಿನ್ನ ನೆನವು ಹಿಂದಿರಲಿ
ಮಾಕಳತ್ರನೆ ನೀನು ಸಕಲಮಂಗಳವಿತ್ತು
ಲೋಕದೊಳು ನಿನ್ನಯ ಭಕುತರೊಳಿಡು ಇನ್ನು

ವನಾಂತರಾತ್ಮ ಶ್ರೀ ವೇಂಕಟೇಶಾತ್ಮಕ
ಶ್ರೀವೇಣುಗೋಪಾಲಕೃಷ್ಣ ಮೂರುತೇ
ಭಾವಶುದ್ಧಾನವಮಾಡಿ ಶ್ರೀವರನ ದಾಸರ
ಸೇವೆಯನೆಕೊಟ್ಟು ಭವ ದುಃಖವನೆ ಹರಿಸೊ

ಕರುಣಿಸಯ್ಯ ಶ್ರೀಹರೇ ವಿಠಲ

ಚಾರುಚರಣ ಸೇವಕಳೊ ಇವಳೆಂದೆನುತ
ಪರಮ ಭಾಗವತರ || ೧

ನಿರುತ ನಿನ್ನ ಭಜಿಸ ಧರ್ಮ ನಿರಂತರಾ

ರ್ಧಾರಿ ನೀ ಸರ್ವಗತಿ ಪ್ರದನೆಂದು ನುತಿಪೆ
ವಾಯು ಗಿರೀಶರಾದಿ ಸರ್ವತರತಮ ಭೇದಪಂಚಕಜ್ಞಾನ
ನಿತ್ತು ಗುರುಕರುಣ ಪಡೆದು ನಿತ್ಯ
ಬಿಂಬ ಕ್ರಿಯ ನಿನ್ನದೆಂಬ ಜ್ಞಾನವನೆ ॥ ೨

ಹಿರಿಯರಾದಿ ಬಂಧು ಬಾಂಧವರೊಳು
ನಿನ್ನ ವಿಭೂತಿಯನೆ ತಿಳಿದು ಪರಮಶುದ್ಧಳಾಗಿ
ವೆಸಗುವಂತೆ ಕರುಣಿಸಯ್ಯ
ಗಾದ್ರಿವಾಸ ವಿಠಲ ॥ ೩

ದೋ ವಿಠಲ ತಂದೆ ಕಾವುದೋ ॥ ಪ

ನ ಭಾವಶುದ್ಧನ ಮಾಡು ಮುಂದೆ-ಆಹಾ-
ನೀತಧರ ತಾಂಡವಕೃಷ್ಣ ವಿಠಲ
ಪಾದ ದಾಸ ದೀಕ್ಷೆಯನಿತ್ತು ಅನುದಿನ ॥ ಅ ಪ

ುತೀರ್ಥ ಯತಿವರ್ಯ ಸೇವೆಯನಿತ್ತೆ
ಯ್ಯಂತರ್ಗತ ಕೃಷ್ಣ ಹಿಲಿದು
ುವಾಗಿ ನಡೆಸಿದೆ ಕಾರ್ಯ ಈಗ
ನಿನ್ನಂಕಿತ ವಿತ್ತೆ ಜೀಯಾ-ಆಹಾ-
ಯಜಪಿತ ನಿನ್ನ । ಆಯತವ ನಾನರಿಯೆ ।
ಯವು ನಿನ್ನದು । ಅಭಯ ದಾಯಕ ಹರಿ ॥

ರ್ಗವೀಶಾ ಅನುಗ್ರಹದಿ ಭವದುರ್ಗವಕಡಿಯೊ ಶೀಘ್ರದಿ
ತ್ತವರ್ಗದೊಳಿಟ್ಟು ಕರುಣದಿ ಅಪವರ್ಗಸಾಧನೆ ಅನುದಿನ-ಆ
ರ್ಗವತೋರಿ ಸನ್ಮಾರ್ಗದೊಳಿಟ್ಟೆವನ
ಘಾರ್ಯಯುವಂತನೆಂದೆನಿಸಿ ಸಾಧನವಿತ್ತೇ ॥

ಡವರಾಧಾರಿ ನೀನೆಂದು ಕೈಯ್ಯ ।
ಡದೆ ಪಾಲಿಸು ಇನ್ನುಮುಂದು । ನೀನು
ಡಿಗಡಿಗನಿಮಿತ್ತ ಬಂಧು । ಎಂದು

ನುಡಿಗೆನು ನೀ ಕೃಪಾಸಿಂಧು–ಆಹಾ–
ತಡವ ಮಾಡದೆ ನಿನ್ನಯ ಸೇವೆಯನಿತ್ತು ।
ನುಡಿಸು ನಿನ್ನ ನಾಮ । ಮಹಿಮೆಗಳನುದಿನ ॥

ಮಡದಿಮಕ್ಕಳು ಒಡಗೂಡಿ । ಗಿರಿಯೊಡೆಯನ ದರುಶನಮಾಡಿ
ಒಡನೆ ಪಂಡರಿರಾಯನ ನೋಡಿ । ಬಿಡದೆ ವಿಜಯದಾಸರನ್ನು
ಬೇಡಿ–ಆ

ಸಡಗರದಿಂದಲಿ ಸ್ತುತಿಸಿ ನಟಿಸುವ । ಬಡಭಕುತನ ಮನ
ದೃಢಮಾಡಿ ಇನ್ನು ।

ಗುರ್ವಂತರ್ಗತ ಬಿಂಬವೈಕ್ಯಮಾಡಿ । ಹರಿವಾಯುಸ್ತುತಿಯನೆ
ಮುಖ್ಯ

ವರಮತಿಯನೆಯಿತ್ತು ಸಖ್ಯ । ನಿರುತ । ಹರಿಭಕುತನೆನಿಸು
ಪ್ರಮುಖ್ಯ–೬

ಗುರ್ವಂತರ್ಯಾಮಿ । ವಾಯ್ವಂತರ್ಗತ ಕೃಷ್ಣ ।
ಉರಗಾದ್ರಿವಾಸವಿಠಲ ನಿನ್ನದಾಸ

- ಕಾಂಬೋದಿ ತಾಳ

ಕರಿವರದ ವಿಠಲ ತವ ಚರಣಸೇವಕನೆಂದು
ನಿರುತ ನಿನ್ನಯ ಸ್ಮರಣೆಯಿತ್ತು ಸಲಹೊ

ಮರುತಮತ ತತ್ತ್ವಸುಪಥ ಮಾರ್ಗದಲ್ಲಿ ಸರ್ವ
ಕರಣಕಾರ್ಯಗಳಲ್ಲಿ ಪ್ರಗತಿಯನು ನೀಡು ॥ ಅ

ಜ್ಞಾನ ಕರ್ಮೇಂದ್ರಿಯ ಜಡಗಳಾಗಿದ್ದು
ತನ್ಮಾತ್ರವಿಷಯದಲ್ಲಿ ನಿತ್ಯ
ಮನವದರಲ್ಲಭಿಮಾನಿಸಿದರು ತ–
ನ್ನನುಭವದಲ್ಲಭಿಮಾನ ತಪ್ಪಿಸ್ಯ

ಸತಿಸುತ ಪಿತೃಮಾತೃ ಬಂಧು ಬಾಂಧವರೊಳ್ಹರಿ ವಿ–
ಭೂತಿಯನೆ ತಿಳಿದು ಪ್ರೀತಿಪೂರ್ವಕದಿ ತವ ಸೇವೆಯೆ–
ನುತ ಕೃತಕಾರ್ಯಗಳ ಫಲದಿ ನಿರ್ಮಮತೆಯ ನೀಡೊ

ಣಾಲಸಂಸ್ಕೃತಿಯನರಿತು ಆಧುನಿಕ ವಿಜ್ಞಾನ-
ದಿಕಾರಣ ಹರಿ ಸರ್ವತ್ರ ಕರ್ತನೆಂಬನು
ಧ್ಯಾನ ವಿರಲಿ ॥ ೩

ಂಬನಾಗಿಹ ಹರಿಯು ಬ್ರಹ್ಮಾಂಡಕೋಟಿ ಪ್ರತಿ-
ಂಬ ರೆನಿಸುವರೆಲ್ಲ ಶ್ರೀಹರಿಗೆ
ಂಬ ಚಲಿಸಿದರೆ ಪ್ರತಿಬಿಂಬ ಚಲಿಸುವು-
ಂಬ ಜ್ಞಾನವನಿತ್ತು ಸತತ ಸಲಹುವುದು ॥ ೪

ರಣರಕ್ಷಕ ನೀನೆ ತವ ಸೇವಕರು
ಅರಿದಂತೆ ಐಹಿಕಾಮುಷ್ಮಿಕ
ಕಾರ್ಯಗಳಲಿ ನಿರುತ ವಾಕ್ಕಾಯ ಮನಶುದ್ಧಿಯನಿತ್ತು
ಬರಗಾದಿ ವಾಸ ವಿಠಲ ಪೊರೆಯೊ ನಿತ್ಯ ॥ ೫

ಂಧುಶಯನ ವಿಠಲಾ ಭವ
ಂಧ ಹರಿಸಿ ತವ ಪದ ಭಕುತಿಯಿತ್ತು ಇವಳ ಸಲಹೊ ॥ ಪ

ಸುಂದರಾಂಗನೆ ನಿನ್ನ ಮಂಗಳಾಕೃತಿ ತನ್ನ
ಅಂತರಂಗದಿ ನೋಡಿ ನಲಿವಂತೆ ಮಾಡೊ ॥ ಅ ಪ

ಬೋಧೆಯಿಂದಲಿ ಪಂಚಭೇದ ತರತಮ ತತ್ತ್ವ
ಸಾಧನೆಯಲಿ ಸರ್ವಸಾರವನೆ ತಿಳಿದು
ಸಾಧ್ವಿಧರ್ಮದಿ ಸರ್ವಸಾಧನೆಯಿತ್ತು
ಮೋದತೀರ್ಥರ ಸುಶಧರ್ಮದೊಳಿರಿಸೊ ॥ ೧

ಪತಿಹಿತಳಾಗಿ ಸುತಸಂಪದವಿತ್ತು
ಹಿತ ಬಂಧು ಬಾಂಧವರಲ್ಲಿ ಅತಿಪ್ರೀತಿಯಿಂದ
ಚಿತಮನದಿ ಶ್ರೀಪತಿಸೇವೆಯೊಲ್ಲವು ಎನುತ
ಪತಿತಪಾವನ ನಿನ್ನ ಸ್ಮೃತಿ ಪಥವನೆ ತೋರೊ ॥

ಹರಿಗುರುಹಿರಿಯರಲಿ ವಿನಯಿಗಳಾಗಿ ಶುದ್ಧ
ಸರಳಮಾರ್ಗದಿ ನಿನ್ನನಾರಾಧಿಸೆ
ಕರುಣಿಸೋ ಉರಗಾದ್ರಿವಾಸ ವಿಠಲಾ-
ಭಿನ್ನ ಸಿಂಧುಶಯನ ವಿಠಲಮಣಿದು ಬಿನ್ನೈಪೆ ।

ಶ್ರೀನರಹರಿವಿಠಲನೆ ನಿರುತ ನಿನ್ನ ನಂಬಿಹಳ
ದುರಿತ ದೂರಳಮಾಡಿ ಪೊರೆಯಬೇಕೀಗ

ಪರಮಮಂಗಳಮೂರ್ತೇ ಪರಮ ಕರುಣವ ಮಾಡಿ
ಮನಕೆ ಹರುಷವ ನೀಯೊ ॥

ಶರಣಳೆಂದೆನಿಸಿ ಹರಿವಾಯು ಮತದಲ್ಲಿ
ಕರುಣಶುದ್ಧಿಯನಿತ್ತು
ನಿರುತ ನಿನ್ನ ಕಾರ್ಯಸ್ಮರಣೆ ಬರುವಂತೆ ತರಳ ಪ್ರಹ್ಲಾದ
ಪರಿಪಾಲಿಸಿದ ತೆರದಿ ತರಳೆಯನು ಕಾಯ್ದಂತೆ
ಶರಣಳನು ಕಾಯೊ

ಪತಿಸುತರು ಮತ್ತೆ ಬಂಧು ತತಿಗಳಲಿ
ಅತಿಶಯದ ರೂಪಗಳ ಚಿಂತಿಸುತ
ಮತಿವಂತಳಾಗಿ ಪತಿಯಂತರ್ಗತನಾದ
ಪತಿತಪಾವನ ನಿನ್ನ ಸ್ಮೃತಿಯಿತ್ತು

ಮೊರೆಹೊಕ್ಕೆನೊ ಶ್ರೀ ಉರಗಾದ್ರಿವಾಸವಿಠಲ
ಪರಮ ಮಂಗಳವೀಯೊ ಮರುತಾಂತರಾತ್ಮಕ
ಶರಣ ಜನಪಾಲ ಶ್ರೀರಮಣಿ ಲೋಲ
ಉರಗಾದ್ರಿವಾಸವಿಠಲಾತ್ಮಕ ನರಹರಿವಿಠಲ

ಆದಿ

ಕ್ಷೇತ್ರಕ್ಷೇತ್ರಗಳಲ್ಲಿ ಕ್ಷೇತ್ರಜ್ಞನಾರೆಂದು
ಕ್ಷೇತ್ರದೊಳು ಜ್ಞೇಯವಸ್ತುವನ್ನೇ ತಿಳಿದು

ಪ್ರವ ದಂಡಿಸಿ ಯಾತ್ರೆಯ ಮಾಡಿ
ಚರಿತ ಹರಿಭಕ್ತರೊಡನೆ ಕೂಡಿ
ರ ಹಗಲೆನ್ನಾದೆ ಸ್ತೋತ್ರಮಾಡುತ ಪ-
ನಾಗಿ ಸತತ ಪುತ್ರಕಳತ್ರರಿಂದಧಿಕ
ತಿಯು ನಿತ್ಯ ಇಟ್ಟು ಶ್ರೀಪತಿಪಾದ
ಯಿಂದಲಿ ನೆನೆದು ಎತ್ತ ಸಂಚರಿಸಲು
ತ್ತ ಕ್ಷೇತ್ರವು ಉತ್ತಮೋತ್ತಮ ನಮ್ಮ
ವೇಂಕಟೇಶನು ಅತ್ತಿತ್ತ ಬಿಡದೆ ನಮ್ಮ
ದ್ಧರಿಪ ಭವದಿಂದ ॥ ೧ ॥

ತಪಂಚಕ ಮಹದಹಂಕಾರದಿ ಬುದ್ಧಿ
ತ್ಯಾದಿಗುಣತ್ರಯ ಶ್ರೋತ್ರಾದಿ ಪಂಚಕ
ನಸು ಕರ್ಮೇಂದ್ರಿಯ ತತುಮಾತ್ರಗಳೆಲ್ಲ
ತ್ರವೋ ಶ್ರೀಪತಿಗೆ ನಿತ್ಯಾಭಿಮಾನಿಗಳು
ತ್ರಕ್ಕೆ ಇಹರಯ್ಯ ತತ್ವಾಭಿಮಾನಿಗಳೆಂದೆನಿಸುವರು
ರ ಅಂತರದಿ ಹರಿ ತಾ ನಿರಂತರದಿ ನಿಂತು
ತ್ತಕಾರ್ಯಗಳ ಪ್ರೇರಿಸಿ ಮಾಡಿಸುವ
ತ್ತರಿಸಲು ಸಲ್ಲ ಕ್ಷೇತ್ರಜ್ಞನಾ ಮಹಿಮೆ
ಕ್ತಜಾಪಿತ ನಮ್ಮ ಶ್ರೀವೇಂಕಟೇಶನೆ
ಕ್ಷ ಸರ್ವತ್ರದಿ ವ್ಯಾಪ್ತ ನಿರ್ಲಿಪ್ತ ॥ ೨

ನ್ನ ಜೀವರೊಳು ಅಭಿನ್ನ ತಾನಾಗಿ
ನ್ನರೂಪಕ್ರಿಯವ ಭಿನ್ನ ಭಿನ್ನವೇ ಮಾಡಿ
ನ್ನ ಜೀವರ ಇಚ್ಛೆಗನುಸರಿಸಿ ಪ್ರೇರಿಸಿ
ನ್ನಕಾರ್ಯಗಳ ಫಲ ಭಿನ್ನವನ್ನೆ ಇತ್ತು
ನ್ನಿಚ್ಛೆಯಿಂದ ಚೇತನ ಅಚೇತನದಲ್ಲಿ
ನ್ನಿಯಿಂದಲಿ ಚರಿಪ ತನ್ನ ತಿಳಿಗೊಡದಲೆ
ನ್ನಕಾರ್ಯವನೆಸಗಿ ಜೀವರನುಭವಕೀವ
ಪನ್ನಗಶಯನ ಶ್ರೀವೇಂಕಟೇಶನು ಸರ್ವ

ಪ್ರಕೃತಿ ಮೊದಲಾದ ತತ್ವಂಗಳೆಲ್ಲ
ಅಕಳಂಕ ಶ್ರೀಹರಿಗೆ ಕ್ಷೇತ್ರಂಗಳಾಗಿಹವು
ಸಕಲಾಭಿಮಾನಿಗಳು ದೇಹಕ್ಷೇತ್ರದೊಳಿಹರು
ಪ್ರಕೃತಿ ಪರಿಣಾಮದಿಂ ಜೀವಸ್ವರೂಪ ವೈ-
ತಕ್ಯ ಕ್ಷೇತ್ರವಿಕಾರವಿದಕಿಹುದಯ್ಯ
ಸುಖದುಃಖ ಧೈರ್ಯೇಚ್ಛ ಚೇತನ ಶರೀರವು
ತಕ್ಯ ಅಭಿಮಾನಿಗಳು ನಿಂತು ನಡಿಸುವರಯ್ಯ
ಪಕ್ಷಿವಾಹನನಿಂದ ಪ್ರೇರಿತವು ಪ್ರಕೃತಿಯು
ಮಿಕ್ಕವಾತೇನು ಶ್ರೀಹರಿಗಿದು ಕ್ಷೇತ್ರವು
ಪ್ರಕೃತಿ ಜನ್ಯವಾದ ದೇಹವಿಲ್ಲದೆ ಜೀವ
ತಕ್ಯ ಸಾಧನವನ್ನು ಮಾಳ್ಪುದಿಲ್ಲೆಂದಿಗು
ಲೋಕೇತ ಪಿತ ನಮ್ಮ ಶ್ರೀವೇಂಕಟೇಶನೆ
ಅಜಾಂಡಾಂತರ್ಬಹಿ ಸರ್ವಕ್ಷೇತ್ರಜ್ಞನಯ್ಯ I

ಅಣುಮಹತ್ತಿಗಿಂತ ಅಣುಮಹತ್ತಾಗಿ
ಪಾಣಿಪಾದದಿ ಪೂರ್ಣದೇಹಶಕ್ತಿಯು ತನು
ಪೂರ್ಣಶಕ್ತಿಯೆಂತೋ ಇಂದ್ರಿಯಶಕ್ತಿ
ಪೂರ್ಣ ಅಂಗದ ಶಕ್ತಿ ಎಂತೋ ಅಂತಿರ್ಪುದಯ್ಯ
ಕಾಣಿಸಿಕೊಳ್ಳದಲೆ ಕಾರ್ಯ ನಡೆಯುವುದಯ್ಯ
ಗುಣಗಣಪರಿಪೂರ್ಣ ಬ್ರಹ್ಮಾದಿವಂದ್ಯನು
ಕ್ಷಣದೊಳು ತಾ ನೆನೆಸೆ ಬ್ರಹ್ಮಾಂಡಕೋಟಿಗಳು
ಗಣನೆ ಇಲ್ಲದೆ ಸೃಷ್ಟಿಲಯವ ಗೈಸಲು ಬಲ್ಲ
ತೃಣಮೊದಲು ಬ್ರಹ್ಮಾದಿ ಜೀವಗಣಗಳನ್ನು
ಕ್ಷಣಬಿಡದಲೆ ರಕ್ಷಿಸುವ ಶ್ರೀವೇಂಕಟೇಶಾ II

ಜ್ಞೇಯವಸ್ತುವು ಸರ್ವನಿಯಾಮಕನು ನೀನೆ
ಶ್ರೀಯರಸನೆ ಕಾಯೋ ಶ್ರೀವೇಂಕಟೇಶನೆ

ಓಂಕಾರ ಪ್ರತಿಪಾದ್ಯ ಶ್ರೀಕಾಂತನೇ ನಿನ್ನ
ಏಕಾಂತ ಭಕ್ತರಾ ಸಂಗವಾ–ಸಂಗವಾಕೊಟ್ಟು ಭವ
ಭಂಗವ ಗೈಸಿ ಶುಭಾಂಗನೆ ಕಾಯಯ್ಯ ಶ್ರೀರಂಗ

ಕಾಲತ್ರಯಕೃತ ವಿಕಾರವಿಲ್ಲದೆ ನೀನೆ
ಮೂಲರೂಪಾನೆ ಬಹುರೂಪ–ಬಹುರೂಪ
ಸ್ವಗತಭೇದ ವಿವರ್ಜಿತನೆ ಸನಹಯ್ಯ

ಆವಕಾಲಕು ನೀನೆ ಚತುರರೂಪದೊಳಿದ್ದು
ಜೀವನಿಯಾಮಕನು ನೀನಾಗಿ–ನೀನಾಗಿ
ತಿಳಿಸುವೆ ವಿಶ್ವತೈಜಸ ಪ್ರಾಜ್ಞ ತುರ್ಯಾತ್ಮ

ಸಪ್ತಾಂಗ ಏಕೋನ ವಿಂಶತಿಮುಖನಾಗಿ
ಇಪ್ಪೆ ನೀ ಬಲಗಣ್ಣಮನೆಯೊಳು–ಮನೆಯೊಳು
ಸ್ಥೂಲ ಶುಭ ವಿಷಯಂಗಳಾ ಮಾಡಿ ಉಣಿಸೂವೆ

ವಿಶ್ವದಲಿ ವ್ಯಾಪಿಸಿಹೆ ವಿಶ್ವನೆಂಬೋರು ನಿನ್ನ
ನಾಶರಹಿತಾನೆಂದೂ ನರನೆಂದೂ–ನರನೆಂದೂ
ನಿನ್ನ ವೈಶ್ವಾನರನು ಎಂದು ಪೇಳ್ವರೊ

ಹರಿ ನಿನ್ನ ವಿಶ್ವನೆಂದು ಉಪಾಸನೆಯನು ಮಾಡಿ
ಹೇರಂಬ ನಿನ್ನ ಒಲಿಸೀದಾ–ಒಲಿಸಿದಾ
ಗಜವಕ್ತ್ರನಾಗಿ ನಿನ್ನ ಸ್ತುತಿಪಾನೋ

ಬಾಹ್ಯಾನುಭವಗಳಿಂದ ಇತರಾನುಭವವ
ದೇಹದೊಳು ಸ್ವಪನದಲಿ ನೀ ನೀಡಿ–ನೀ ನೀಡಿ
ಜೀವರುಪಭೋಗಿಸುವ ಸಾರವನು ರಕ್ಷಿಪೆ

ಸ್ವಪನಕಾಲದಲಿ ಕಂಠದೊಳು ನೀನಿದ್ದು
ಅಪರಿಮಿತ ಕಾರ್ಯ ಮನಸಿನಲ್ಲಿ–ಮನಸಿನಲ್ಲಿ
ತೈಜಸನೆ ವಾಸನಾಮಯವೆಲ್ಲ ತೋರಿಪೆ

ಸ್ವಪನಕಾಲದಲಿ ದೇಹಾಭಿಮಾನದ
ವ್ಯಾಪಾರವೆಲ್ಲ ಬಿಡಿಸೂವೆ-ಬಿಡಿಸೂವೆ
ತತ್ತ್ವಗಳ ವ್ಯಾಪಾರವೇ ವ್ಯಾಪಾರ ॥

ಸುಪ್ತಿಕಾಲದಿ ಜೀವಸ್ವರೂಪಕೆ ತಕ್ಕ
ಕ್ಲೃಪ್ತ ಅಜ್ಞಾನ ಮೊದಲಾದ-ಮೊದಲಾದ
ಕಾಲವನನುಸರಿಸಿ ಜೀವನಿಗೆ ತನ್ನಾ ತಿಳಿಯಗೊಡದೆ ॥

ಪ್ರಾಜ್ಞಮೂರುತಿ ನೀನೆ ಹೃದಯಸ್ಥಾನದಲ್ಲಿದ್ದು
ಅಜ್ಞಾನಿ ಜೀವನಕಾಲಾವ-ಕಾಲಾವಾ
ನನುಸರಿಸಿ ಜೀವಸ್ವರೂಪಾನಂದವನು ನೀ ನೀವೆ ॥

ಸ್ವಪನ ಜಾಗ್ರತ ಜ್ಞಾನವಿನಿತಿಲ್ಲವೆಂದು
ಸುಪ್ತಿಕಾಲದಿ ಪ್ರಾಜ್ಞ ನಿನ್ನಿಂದ-ನಿನ್ನಿಂದ
ಕೂಡುವ ಜೀವ ಆನಂದ ಹಿಂದೆಂದು ಕಾಣನೊ ॥

ಘನ ಬಹು ಪ್ರಾಜ್ಞ ತೈಜಸಾಂತ ಪ್ರಾಜ್ಞ
ಘನಪ್ರಾಜ್ಞ ಮೂರುತಿ-ಮೂರುತಿ-
ಗಳುಪಾಸನ ಮಾಳ್ಪ ಬುಧರೇನು ಧನ್ಯರೊ ॥

ತುರ್ಯನಾಮಕ ಹರಿಯೆ ಶಿರವೆ ನಿನ್ನಯ ಸ್ಥಾನ
ಸೂರಿಗಳ ಜ್ಞಾನಕ್ಕೆ ಗೋಚರ-ಗೋಚರ-
ನಾಗಿ ನೀ ಕೊಡುತಿರುವೆ ಮುಕ್ತರಿಗೆ ಆನಂದ ॥

ಮುಕ್ತರಿಗೆ ದೃಷ್ಟನೋ ಅದೃಷ್ಟನೋ ಅ-
ಮುಕ್ತರಿಗೆ ನಷ್ಟ ಪ್ರಾರಬ್ಧರ್ಗೆ ಲಭ್ಯನೊ-ಲಭ್ಯನಾಗುವೆ
ಗುರುಪ್ರಾಣನನುಗ್ರಹದಿ ಲಭ್ಯನಹುದಯ್ಯ ಹೇ ಜೀಯ ॥

ಕಣ್ಣನಹೃದಯ ತ್ರಿಧಾಮಗಳಲಿ ಇದ್ದು
ಉಣಿಸೂವೆ ಜೀವಂಗೆ ಫಲಭೋಗ-ಫಲಭೋಗವ
ವಿಶ್ವ ತೈಜಸ ಪ್ರಾಜ್ಞ ಸ್ಥಿತಿಯೊಳು ॥

ರೂಪವು ಪೂರ್ಣ ಸರ್ವಗುಣಸಂಪೂರ್ಣ
ೕತ್ವಾದಶ ಸುಖರೂಪಿ-ಸುಖರೂಪಿ
ಲೋಕ ಜೀವರೊಳಿದ್ದು ನಿರ್ಲಿಪ್ತಾ ॥ ೧೭ ॥

ತ್ರಯಯುತ ಓಂಕಾರದೊಳಾದ್ಯವರ್ಣ
ದೊಳು ವಿಶ್ವ ನೀನೆ-ವಿಶ್ವನು ನೀನು
ರವೇ ತೈಜಸನು ಮಕಾರವಾಚ್ಯನೇ ಶ್ರೀಪ್ರಾಜ್ಞ ॥ ೧೮ ॥

ದೊಳು ನೀವಾಚ್ಯ ತುರ್ಯ ರೆಂಬೋರು ನಿನ್ನ
ವಾಗಿಹುದ್ಯ ಶಿರಸ್ಥಾನ-ಶಿರಸ್ಥಾನ
ಕಾಗ್ರದಿ ಊರ್ಧ್ವದ್ವಾದಶಾಂಗುಲದಲ್ಲಿ ನೆಲೆಸಿರ್ಪೆ ॥ ೧೯ ॥

ಗ್ಯ ವಿಷಯಗಳನು ಪ್ರಾಪಿಸುವ ವಿಶ್ವನೆ
ಸನೊಡಗೂಡಿ ವಾಸನಾ-ವಾಸನಾಮಯ
ಅಜ್ಞಾನಿ ಜೀವನನ್ನಾಡಿಸುವೆ ಶ್ರೀಪ್ರಾಜ್ಞ ॥ ೨೦ ॥

ಶಕ್ತನು ನೀನೆ ಸರ್ವಕರ್ತನು ನೀನೆ
ೕತ್ತಮನು ನೀನೆ ಸರ್ವಜ್ಞ-ಸರ್ವಜ್ಞ
ಪ್ರಜ್ಞಾಂತರ್ಯಾಮಿ ಸಲಹಯ್ಯ ॥ ೨೧ ॥

ಸು ಜನುಮದಲಿ ಏಸು ಸಾಧನವನ್ನು
ಸು ಮಾಡಲು ಇನ್ನೇನು-ಇನ್ನಾವ
ಲ್ಲ ವಾಸುದೇವನೆ ನಿನ್ನ ದಯ ಬೇಕೊ ॥ ೨೨ ॥

ಮ್ಮನಿದ್ದರು ಮನಸು ಸಮ್ಮತಿಸದೆ
ಮ್ಮನಿರದೆ ಎನ್ನನೂ-ಎನ್ನನು
ಸುವೆ ಲೇಸು ಮನ ನಿನ್ನಲ್ಲಿ ನೆಲೆಸಾಲೊ ॥ ೨೩ ॥

ಕಂಡಲ್ಲಿ ನಾನು ಉಂಡುಂಡು ಓಡ್ಯಾಡಿ
ಗನಾಗಿ ಬೆಳೆದೆನೊ-ಬೆಳೆದೆನೊ
ದೆನೋ ಪುಂಡರೀಕಾಕ್ಷ ನಿನ್ನ ಮರೆತೆನೋ ॥ ೨೪ ॥

ದಾವ ಕಾಲದೊಳು ನೀನಿದ್ದು ಉಣಿಸುವೆ
ೀವಕೃತ ಕರ್ಮಫಲಗಳ–ಫಲಗಳ
ವೆಂಕಟೇಶ ನೀನಿತ್ತು ಸಲಹೂವೆ ॥ ೨೫

ಂದರೋದ್ಧರ ಜಗದ ಬಂಧ ಮೋಚಕ ನೀನೆ
ಂದನೆಯು ಹಿಂದೇ ಮುನದಿಂದೆ–ಎನಡಲ್ಲಿ ನಿನ್ನ
ಾದಾರವಿಂದವ ತೋರಯ್ಯ ॥ ೨೬

ಂಧುಗಳು ಹಿತರೆನ್ನ–ಬಂಧಕರಾಗಿಹರು
ಂದು ಮುಂದಕು ಎನ್ನ ಬಿಡದಲೆ–ಬಿ–
ದಲೆ ಭವಪಾಶಬಂಧಕೆ ನಾ ಇನ್ನು ಸಿಲುಕಿದೆ ॥ ೨೭

ನನದಾರಭೃದಿ ಜನನಿ ಜನಕರು ಬಿಡದೆ
ನವಾಗಿ ತನು ಬೆಳೆಸಿ ಹಿತದಿಂ–ಹಿತದಿಂದ
ುಂದೆ ಪರಗತಿಯ ಕಾಣುವುದೆಂತೋ ಗೋವಿಂದ ॥ ೨೮

ತ್ತಾಪಹಾರಕರು ಹೃತ್ತಾಪ ಕಳೆವರೆ
ತ್ಯ ನೀನನಿಮಿತ್ತ ಬಾಂಧವನಾಗಿ–ಬಾಂಧವನಾಗಿ ನೀ
ಉತ್ತಮಗತಿಯ ತೋರೀಸು ॥ ೨೯

ರಿಕಥಾಪುರಾಣಶ್ರವಣ ನಿತ್ಯದಿ ಮಾಡೀ–
ರಿಯಿಂದ ನಿಜತತ್ತ್ವವರಿಯಾದೆ–ಅರಿಯಾದೆ
ರಿದೇ ವಿಪರೀತಜ್ಞಾನಕೆ ವಶನಾದೆ ॥ ೩೦

ದ್ಯತುಂಬಿದ ಭಾಂಡ ಗದ್ದುಗೆಯ ಮೇಲಿಟ್ಟು
ರದ್ಧೆಯಿಂದಲಿ ಅದನ ಪೂಜಿಸೆ–ಪೂಜಿಸೆ
ತಿ ದುರ್ಗಂಧ ಫಲವದು ಬಿಟ್ಟೀತೆ ॥ ೩೧

ಂದಹಾಸದಿ ಜನರ ಸಂದೋಹದೊಳು ಕುಳಿತು
ಂದೆ ಮಾತುಗಳಾಡಿ ಮದ ತುಂಬೀ–ಮದ ತುಂ–
ದಾ ದುರ್ಮದಾಂಧರಿಗೆ ಗತಿಯು ಮುಂದೆ ಇನ್ನೆಂತೊ ॥ ೩೨

ಂಡ ಕಂಡವರಲ್ಲ ಕೂಂತ ಮಾತ ಗಳಾಡಿ
ಂಡರೀಕಾಕ್ಷ ನಿನ್ನ ಸ್ಮರಿಸಾದೆ–ಸ್ಮರಿಸದಲೆ
ರದಿ ಯಮದಂಡಕ್ಕೆ ಗುರಿಯಾದೆ ॥ ೩೪

ಂವೆ ಮಾಡಿ ಪುಣ್ಯದಿಂದ ಇಂದಿನ ಭಾಗ್ಯ
ಂದು ತಿಳಿದು ಮುಂದೆ ನಡೆಯಾದೆ–ನಡೆಯಾದೆ
ಳಿಗೇಡಿ ಬುದ್ಧಿಯಿಂದ ಕೆಂದುಪೊಂದುನೆ ॥ ೩೦

ಯಿ ಮಾತಲ್ಲ ಶ್ರೀ ತೋಯಜಾಕ್ಷನ ಭಕ್ತ–
ಯತನ ತಿಳಿಯುವುದು ಶ್ರಮಸಾಧ್ಯ–ಶ್ರಮಸಾಧ್ಯ
ನು ಸದುಪಾಯದಿಂದಲಿ ತಿಳಿದು ನಲಿದಾಡೊ ॥ ೩೬

ಂದಕರ ನುಡಿಯಿಂದ ಹಿಂದೆಮಾಡಿದ ಪಾಪ
ಂದೊಂದು ಪರಿಯಲ್ಲಿ ಪರಿಹಾರ–ಪರಿಹಾರವಾಗಿ
ಂದಕರು ಬಂದನಕೆ ಬೀಳ್ವರೋ ॥ ೩೭

ಸ್ಮೃತಿಯುಕ್ತಿಯನೆ ಬಿಟ್ಟು ಯುಕ್ತಿ ಮಾತುಗಳಿಂದ
ಕೊತ್ತು ಕಳೆಯುತ ಉನ್ಮತ್ತನೆನಿಸಿ–ಉನ್ಮತ್ತನೆನಿಸಿದವ ಇ–
ಸ್ಮೃತ್ತ ಭವಶರಧಿಯ ದಾಟುವಾ ॥ ೩೮

ರರ ದೂಷಣೆಯಿಂದ ಹರಿಸ್ಮರಣೆ ಮಾಡದೆ
ರಘೋಗೆ ಕಳೆದುದಿಹ ನರಜನ್ಮ–ನರಜನ್ಮ ಬಂದುದು
ರಕಯಾತನೆಗಲ್ಲದಿನ್ನಿಲ್ಲ ॥ ೩

ುದಯಾಸ್ತಪರಿಯಂತ ಉದರ ಭರಣಕಾಗಿ
ುದಧಿಶಯನ ನಾನಿನ್ನ ಭಜಿಸಾದೆ–ಭಜಿಸಾದೆ
ುದದಿಂದ ಬುಧಜನರ ನಿಂದೆಯಾ ಮಾಡೀದೆ ॥ ೩

ಇನ್ನಿಲ್ಲಪಾತಕವು ಅನ್ಯನಿಂದನೆಗಿಂತ
ಇನ್ನಿಲ್ಲ ಪರಗತಿಯು ಸಾಧನ–ಸಾಧನವು
ಕನ್ನೊಳು ತನ್ನಿರವರಿತು ಸುಮ್ಮನಿರ ವುದು ಅದು ನಿಧಾನ ॥ ೪

ಭಿನ್ನ ಜೀವಗಣ ಭಿನ್ನ ಕ್ರಿಯೆಗಳು
ಭಿನ್ನ ಗರ್ಭಂಗಳ ಗ್ರಹಿಸಾದ-ಗ್ರಹಿಸಾದೆ
ವಣಿಸದೇ ತನ್ನ ಗುಣಧರ್ಮದಿಂ ತನ್ನ ಬಹನೇನೊ ॥ ೭

ಕಾಲ್ಯಾವೇ ತಾನೆಂದು ಮಾಯಾಕೆ ಒಳಗಾಗಿ
ಬಾಯಿ ಬಂದಂತೆ ಮಾತಾಡಿ-ಮಾತಾಡಿ ಈಜೀವ
ಕಾಯ ಯಾತನೆಗೊಂಡು ನೋಯುವಾ ॥ ೭

ವಚನ ವಚನವು ಸರ್ವ ಉಚಿತ ದೇಹದ ಕಾರ್ಯ
ನಿಚಯದೊಳು ಹರಿಪ್ರಚುರನಾಗಿ-
ಪ್ರಚುರನಾಗಿ ಕಾಯಕವ ಪಚಯವಿತ್ತು ಸಲಹುವ ॥ ೧

ದೇಶ ಕಾಲದ ಕಾರ್ಯ ಪ್ರಕ್ರಿಯುವ ತಿಳಿಯಾದೆ
ಮಾಯೆಗೊಳಗಾಗದಿರು ಹೇಮಾನವಾ-ಮಾನವನೆ ತಿ-
ಳಿಯೊ ಮಾಯಾರಮಣನ ಬಿಂಬಕ್ರಿಯುವಾ ॥ ೬

ತನ್ನೊಳಗೆ ಇಹ ಷಡ್ವೈರಿಗಳ ಗೆಲ್ಲದವ
ಅನ್ಯರೊಳು ನೀ ಹೋರಾಡ ಬಲ್ಲೆಯಾ-ಬಲ್ಲೆಯಾ
ನಿನ್ನ ವೈರಿಗಳ ಬಯಸಲರಿಯದ ಖೂಳರಣಹೇಡಿ ॥ ೬

ಕೊಳೆತು ನಾರುವ ದೇಹದೊಳಗಿರುವ ಹುಳುಕುಗಳ
ತೊಳೆಯು ಕಳೆಯದ ಮನುಜ ನೀನೆಂತೊ-ನೀನೆಂತೊ
ಕೊಳೆತ ತೆಗಣೆಯೊಳಗಿಹ ಹುಳವೆ ನಿನ್ನ ಗತಿಯೆಂತೊ ॥ ೬

ಆದದ್ದು ಆಯಿತು ಯತ್ನ ತಪ್ಪಿತು ಎಂದು
ಕೈದಾರಿ ಹಿಡಿದು ಪರಮಾರ್ಥ-ಪರಮಾರ್ಥವ
ಬುದ್ಧಿ ತಿದ್ದಿಕೊಳ್ಳಲು ಮುಂದೆ ಅನುವಾಗೊ ॥ ೪

ಸತ್ವ ದೇವತೆಗಳು ತತ್ತತ್ತ ಕಾರ್ಯ ಜೀ-
ಪ್ರೋತ್ಸಮನಾಜ್ಞೆಯಿಂ ತಾವ್ ಗೈವರೊ-ತಾವ್ ಗೈ-
ಯುತ್ತಲಿರೆ ನಾನೆತ್ತ ವೃತ್ತಿಕಾಪ್ರತಿಮೆಯೊ ॥ ೪

ಒಂದೊಂದು ರೀತಿಯಿಂ ಚೆಂದಾಗಿ ಯೋಚಿಸು
ಮಂದಮತಿಯೆ ನೀನು ಹಿಂದೆಂತೊ-ಹಿಂದೇನು
ಮುಂದೇನು ಇಂದೆ ಗೋವಿಂದನಾ ವಂದನೆಯೊಂದಲ್ಲದಿನ್ನಿಲ್ಲ ॥

ಡಾಂಭಿಕತನಬಿಟ್ಟು ಡಿಂಬದೊಳು ಸರ್ವದಾ
ಅಂಬುಜನಾಭನೇ ಇಂಬಾಗಿ-ಇಂಬಾಗಿ ಸರ್ವತ್ರ
ತುಂಬಿಕೊಂಡಿಹನೆಂದು ನಲಿದಾಡೋ ॥

ತುಷ್ಟಿಯಾಗಿರು ನಿನಗೆ ಕೊಟ್ಟಷ್ಟಲಾಭಕ್ಕೆ
ದುಷ್ಟವಿಷಯಂಗಳಿಗೆ ಎರಗಾದೆ-ಎರಗಾದೆ ಇರಲು ಸಂ
ತುಷ್ಟ ನಾಗುವನಯ್ಯ ಶ್ರೀಕೃಷ್ಣ ॥

ಕಾಯ ನಿನ್ನದು ಅಲ್ಲ ಮನವು ಅಧೀನವಲ್ಲ
ಹೇಯವಿಲ್ಲದೆ ಮಾಯಕೊಳಗಾಗಿ ಮರುಳಾಗದಲೆ-ಮರುಳಾ
ಮಾಯಾರಮಣನ್ನ ನೆನೆಯೋ ನಿರ್ಭಯದಿಂದ ॥

ಹಲವು ಶಾಸ್ತ್ರವ ನೋಡಿ ತಲೆಹರಟೆಯಾ ಬಿಟ್ಟು
ಅಲವಬೋಧರ ತತ್ತ್ವಸುಧೆಯನ್ನು-ಸುಧೆಯನ್ನು ಸವಿದು
ರ್ಮಲ ಜ್ಞಾನದೊಳು ನಲಿದಾಡೋ ॥

ಪರರ ದೂಷಣೆಯಿಂದ ಪಾರುಗಂಡದ್ದೇನು
ಪರರೆಲ್ಲ ಪರಗತಿಗೆ ಸಾಧಕರೆ-ಸಾಧ-
ಕರೆ ಪವಮಾನರೆಂದು ನೆರೆನಂಬು ॥

ಹರುಷದಿಂದ ಮಾಡ್ದ ಪರಹಿಂಸೆ ಫಲವೆಲ್ಲ
ಕೊರಗುತಲಿ ಇಹದಲ್ಲೆ ಉಣಬೇಕು-ಉಣಬೇಕು ತಪ್ಪದು
ದುರಿತಫಲ ಬಿಡದೋ ಎಂದೆಂದೂ ॥

ಜ್ಞಾನಿಗಳು ಹರಿ ಗುರು ಮುನಿದರೆ ಅದು ಹಾನಿ
ಜ್ಞಾನವಿಲ್ಲದ ಪಶು ನರನಾದೆ-ನರ-
ರನಾದೆ ಮುಂದೆ ನರಕಭಾಜನನಾಗಿ ನರಳುವೆ ।

ಕುಂದು ಕೊರತೆಯು ತಿಳಿಯೆ ನಿಂದಕರು ಇರಬೇಕು
ಕುಂದಲ್ಲ ನಿಂದನೆಯು ಎಂತೆಂದ —ಎಂತೆಂದು
ಮುಂದೆ ನಾನಿಂದೆಗೊಳಗಾಗದಲೆ ಇಹುದೆಂದೂ ॥ ೪

ಗ್ರಾಮಸಾರನ ಹೀರ್ವ ಗ್ರಾಮಸೂಕರನಂತೆ
ತಾಮಸಾ ಜನರದನು ಶುದ್ಧಿಯಾ—ಶುದ್ಧಿ—
ಯಾ ಮಾಡೆ ಮನಶುದ್ಧವಾಗುವುದಕ್ಕೆ ಸಾಧ್ಯವೋ ॥ ೫

ಹುಚ್ಚುಹರಟೆಯ ಬಿಟ್ಟು ಅಚ್ಯುತನ ನೆರೆನಂಬು
ಉಚ್ಚರಿಸು ಹರಿನಾಮಸ್ಮರಣೆಯಾ ಸ್ಮರಣೆಯಾಮಾಡಿ ನೀ ತಿಳಿ
ಅಚ್ಯುತನ ಭಕ್ತಿಯಲಿ ಅನುದಿನಾ ॥ ೬

ಕಣ್ಣುಕಿವಿ ನಾಲಿಗೆ ಮಣ್ಣುಪಾಲನು ಮಾಡಿ
ಹೆಣ್ಣುಹೊನ್ನು ಮಣ್ಣಿನಾಶೆಯಾ—ಆಶೆಯಾ ಮಾಡೀ
ಉಣ್ಣುವೆಯಾ ದುಃಖ ಈ ಜನುಮದೀ ॥ ೭

ಇಟ್ಟು ತೊಟ್ಟು ಮೆರೆದು ಹೊಟ್ಟೆ ಹೊರೆಯಲು
ಕಷ್ಟಪಟ್ಟು ಭ್ರಷ್ಟ ಹುಟ್ಟೀದೆ—ಹುಟ್ಟೀದೆ ಮುಂದೆ ಯಮ
ಪಟ್ಟಣಕ್ಕೆ ಕಾಲಿಟ್ಟು ಕೊಟ್ಟಕೊನೆಗೆ ನೀ ಕೆಟ್ಟೆಯೋ ॥ ೭

ಶಪಥದಿಂದಲಿ ನಾನು ಜಪತಪ ವ್ರತನೇಮ
ಕೋಪತಾಪಗಳಿಂದ ಕೂಡಗೂಡಿ—ಕೂಡಗೂಡಿ ಮಾಡಿದ್ದು
ಜಡದೇಹಕಾಯಾಸ ಕೊಡುವುದಲ್ಲದೆ ಫಲವಿನಿತಿಲ್ಲ ॥ ೭

ತನ್ನ ಮನಸು ತನ್ನ ಅಧೀನವಿಲ್ಲದವ
ಅನ್ಯರ ಮನವಾ ನೋಯಿಸಿ—ನೋಯಿಸಿ ತಾ ಮುಂದೆ
ಬನ್ನಪಟ್ಟು ನರಕ ಘನ್ನ ಯಾತನೆಯ ಕೈಕೊಳ್ಳುವಾ ॥ ೭

ಮುನ್ನ ಮಾಡಿದ ಕರ್ಮ ಬೆನ್ನಬಿಡುವೋತನಕ
ಸನ್ಮನವ ತನ್ನಲ್ಲಿ ನಿಲಿಸೀ—ನಿಲಿಸೀ ನೆನೆಯೊ
ಶ್ರೀ ನಾರಾಯಣನ ಸ್ಮರಣೆ ಸುಮ್ಮನೇ ನೀನು ಅನುದಿನ ॥ ೭

(ಹ ಬರದಂತೆ ಮುಂದಾಡಿಕೋರ್ವ ಗುರು
ನೆಯು ಮಾಡಿ ಮುದದಿಂದ-ಮುದ-
ತಿಳಿಗು ಹರಿಪಾದಾರವಿಂದ ಭಕ್ತನೆನಿಸೊ ದೃಢದಿಂದ ॥ ೬೫

ಟ್ಟಿದನು ಕೈಗೊಳ್ಳ ಮುಟ್ಟಿ ಪೂಜಿಸೆ ದೊರೆಯು
ನಾಗುವ ಅಲ್ಪಭಕ್ತಿಗೆ-ಭಕ್ತಿಗಲ್ಲದಲೆ ಇ
ಷ್ಟ ಮಾಡಿದರು ಹರಿ ತುಷ್ಟನಾಗಿ ಕೊಡನು ಅಭೀಷ್ಟವ
॥ ೬೬

ವಿಲ್ಲದಾ ಅವಲಕ್ಷಣ ಪುರುಷನೇ? ಕ್ಷ-
ಕೆ ದ್ವಾತ್ರಿಂಶಲ್ಲಕ್ಷಣ-ಲಕ್ಷಣಾವುಳ್ಳ ಗುರು-
ಇದೇವನ ನೆನೆದು ಕರುಣದಿಂದಲಿ ನೀನು ಕಡೆಹಾಯೊ ॥ ೬೭

ರೇನಯ್ಯ ಶ್ರೀನಿವಾಸನ ದಯ
ದ್ದರಲ್ಲೇ ಸತಾಧನ-ಸತಾಧನವು ಎಲ್ಲ ನಿ-
ದಿಂದಲಿ ನೀನೆ ನಿನ್ನೊಳು ತಿಳಿದು ನೋಡಯ್ಯ ॥ ೬೮

ಲಾಯಿತು ಹಿಳಗೆ ಹತ್ತಿ ಬಂದಾಸತ್ತು
ತ್ತ ತಿರುಗಲದು ತಪ್ಪಾದು-ತಪ್ಪಾದು
ನಕತ್ತಲೆಗೆ ಶ್ರೀಪತಿಯೆ ಹೆದ್ದೀಪ ॥ ೬೯

ವಿಲ್ಲದೆ ನುಡಿದ ಮರ್ಮಮಾತುಗಳಿಂದ
ಬೆಳೆದು ಬೆಳೆದು ಭವದಿಂದ-ಭವದಿಂದ
ಫಲ ಜನ್ಮ ಜನ್ಮಾಂತರಕು ಬಿಡದಯ್ಯ ॥ ೭

ವಂತೆ ಶಿಶುತನದಿ ಬೆಳೆದುದಾಯಿತು ದೇಹ
ನಾಗಿ ಇಂದ್ರಿಯಗಳು ವಿಷಯದೊಳು-ವಿಷಯದೊಳು ಬಿದ್ದ
ಹೋದರು ದೇಹದಾಸೆ ಬಿಡಲೊಲ್ಲದು ಈ ಜೀವ ॥ ೭

ಹುಟ್ಟಿ ಮತ್ತೇ ಸತ್ತು ಹುಟ್ಟುತಲಿಬೇ
ಬಂದರು ಜನ್ಮನೆತ್ತುತಾ-ಎತ್ತುತಾ
ಕಜನ್ಮ ಕಲ್ಪಾಂತಪರಿಯಂತ ಸುತ್ತುತ ॥ ೭

ಹೆತ್ತತಾಯಿ ತನ್ನ ತೊತ್ತನೆತ್ತಿಕೊಂಡು
ಮುತ್ತಿಟ್ಟು ಅದನು ಪೊರೆವಂತೆ–ಪೊರೆವಂತೆ ಹರಿ ತನ್ನ
ಭೃತ್ಯರನು ಅನವರತ ಸಲಹುವ

ಭವಬಂಧ ನಾನಾದೆ ಭವಮೋಚಕನು ನೀನಹುದೊ
ಭವಹಾರಿ ಎಂಬುವ ಬಿರುದನ್ನು–ಬಿರುದನ್ನು ಕೇಳಿ
ತವ ಶರಣೆಂಬೆ ತವ ಸೇವಕರ ಸೇವೆಯಾದರೂ ನೀಡಯ್ಯ

ಹಿಂದೆಮಾಡಿದ ಕರ್ಮ ಹಿಂದನೆಣಿಸದೆ ಎನ್ನ
ಕುಂದುಗಳನ್ನೆಲ್ಲ ಕಳೆಯಯ್ಯ–ಕಳೆಯಯ್ಯ
ಮುಂದೆ ದುಷ್ಕರ್ಮಕೆ ಎನ್ನ ಬಿಡದೆ ಸಲಹಯ್ಯ

ಮುನ್ನ ನಿನ್ನೊಡಲೊಳಗಿಟ್ಟು ಬನ್ನಬಡಿಸದೆ ಕಾಯ್ದ
ಇನ್ನು ಈ ದೇಹದೊಳು ನೀನಿದ್ದು–ನೀನಿದ್ದೂ
ಎನ್ನ ಕೈಬಿಡದೆ ಘನ್ನ ಅಪರಾಧಗಳನೆಣಿಸದೆ ರಕ್ಷಿಸೊ

ಕಾರಣಾಹ್ವಯನಾಗಿ ಕಾರ್ಯರೂಪದಲ್ಲಿದ್ದು
ಶರೀರವ್ಯಾಪಾರ ನೀಮಾಡಿ–ನೀಮಾಡಿ
ಮಾಡಿಸುವೆ ಪಾರುಗಾಣಿಸೊ ಭವಶರಧಿಯ

ಸಂದು ಹೋಯಿತು ಆಯು ಹಿಂದು ಸಾಧನ ಅರಿಯೆ
ಕುಂದಿತೆನ್ನಯ ಕರಣ ಗೋವಿಂದ–ಗೋವಿಂದ ನೀ
ತಂದೆ ತಾಯಿಯಂದದಲಿ ಮುಂದೆ ಸಲಹೆಂಬೆ

ವರ್ಣಾಶ್ರಮೋಚಿತ ಕರ್ಮ ಮಾಡಲು ಜ್ಞಾನ
ಪೂರ್ಣವಾಗುವುದಯ್ಯ ನಿರ್ಣಯಾ–ನಿರ್ಣಯಾ
ಜ್ಞಾನಿಯ ಕರ್ಮ ಜ್ಞಾನಕಾರಣವಹುದು

ಕರ್ಮ ವಿಕರ್ಮ ಅಕರ್ಮ ವೆಂತೆಂಬ ತ್ರಿ–
ಕರ್ಮಗಳಲಿ ನಾ ಮರ್ಮವಾ–ಮರ್ಮಗಳಲ್ಲಿನಾ ಸು–
ದ್ಧ ಮರ್ಮವ ನರಿಯೆ ರಕ್ಷಿಸೋ

ನುಸಂಧಾನ ವಿಲ್ಲದಾ ಶಾಸ್ತ್ರಾರ್ಥ
ಾಗೀ ತನ್ನ ಪುರುಷಾರ್ಥ–ಪುರುಷಾರ್ಥ ಕೆಡಿಸುವುದು
ಸುವೆ ಕೊಡದಿರು ಅಯುಕಾರ್ಥ || ೮೧ |

ಗಳು ನಿವೃತ್ತ ಧರ್ಮವಾಗಲು
'ರಣಶುದ್ಧಿಯು ಅದರಿಂದ–ಅದರಿಂದ ವಿಷಯ
ತ್ರ ಶ್ರವಣ ಮನನ ಧ್ಯಾನವೂ || ೮೨ |

ಮನನವು ಧ್ಯಾನಾನಂತರದಿ ಜ್ಞಾ–
ದ್ವಾರ ಮೋಕ್ಷವು ಇಂತೆಂದು–ಇಂತೆಂದು
ವೃತ್ತಂ ಶಿವ ಮಾಸ್ತು" ಎಂತೆಂದೂ || ೮೩

ಾರ್ಗವಲ್ಲ ಮುಕ್ತಿದ್ವಾರಕಿಲ್ಲ
ಯುಕ್ತ ಜ್ಞಾನ ಮೊದಲಿಲ್ಲ–ಮೊದಲಿಲ್ಲ ಕೊನೆಯಿಲ್ಲ
ಪಾದಕ್ಕೆ ಗತಿಯಿಲ್ಲ || ೮೪ |

ವ ಹರಿಸೊ ಶ್ರೀವೇಂಕಟೇಶನೆ ನಿನ್ನ
ಂದೆನಿಸಿ ಸಲಹಯ್ಯ–ಸಲಹಯ್ಯ ಅನಿಮಿತ್ತ
ನ್ಯೋರತು ಇನ್ನುಂಟೆ ಜಗದೊಳು ಹೆದ್ದೈವ || ೮೫ |

ಸುವ್ವಿ ಉರಗಾದ್ರಿವಾಸ ಶ್ರೀ ವೆಂಕಟೇಶ ಸುವ್ವಿ
ಕ್ತಿದಾನಂದಾತ್ಮಕಾನೆ ಸುವ್ವಿ || ಪ

ನಾರಾಯಣ ತಾ ಮೂಲ ಪ್ರಕೃತಿಯನ್ನು
ಭಾಗಗೈಸಿ ಸೃಷ್ಟಿಮಾಡಿದನೆ ಸುವ್ವಿ
ದೊಳು ಗುಣವ್ಯಷ್ಟಿ ಸಮಷ್ಟಿಯಿಂದ
ದ ಜಗಸಂಸೃಷ್ಟನೆನಿಸಿದ ಸುವ್ವಿ || ೧

ಶತಮು ಸಂಯುಕ್ತದಿಂದ ಕರ್ಮ
ಪರ್ಯಂತ ಜನ್ಮಕರ್ಮಂಗಳು ಸುವ್ವಿ
ಂಗಳು ಸವೆದು ಉತ್ಕ್ರಾಂತಮಾರ್ಗ ಹಿಡಿದು
ಸ್ವರೂಪ ಕರ್ಮ ನೆಸಗುವರೋ ಸುವ್ವಿ || ೨

ಮಹದಹಂಕಾರದಿಂದ ವೈಕಾರಿಕದಿಂದ ವ್ಯಕ್ತ-
ರಾದರು ತತ್ತ್ವದೇವತೆಗಳು ಸುವ್ವಿ
ದೇವತೆಗಳಾದರು ಮೇಲೆ ರಾಜಸಾಹಂಕಾರದಿಂದ
ಇಂದ್ರಿಯಾದಿಗಳೆಲ್ಲ ಸೃಷ್ಟಿಯಾದವು ಸುವ್ವಿ ॥

ಭೂತ ಪಂಚಕವು ತನ್ಮಾತ್ರ ಪಂಚಕಗಳು ತಾಮ-
ಸಾಹಂಕಾರಗಳುದಿಸಿದವೆನ್ನು ಸುವ್ವಿ
ಉದಿಸಿದಹಂಕಾರತ್ರಯದೊಳು ಬಂದು ಸರ್ವಸೃಷ್ಟಿ
ಆದ ಭೂತವಾದುದು ಅನಿರುದ್ಧನಿಂದ ಸುವ್ವಿ ॥

ಎಲ್ಲ ಜೀವರು ಮುನ್ನ ಸೃಷ್ಟಿಗೆ ಬಾರದಿರೆ
ಇನ್ನು ಸುಷುಪ್ತ್ಯವಸ್ಥೆಯಲ್ಲಿ ಸುಮ್ಮನಿರ್ದರೊ ಸುವ್ವಿ
ಸುಮ್ಮನಿಪ್ಪ ಸರ್ವ ಜೀವರ ಗುಣಸಾಮ್ಯದಿ ಅವರ
ಸೃಷ್ಟಿಗೆ ತಂದ ಗುಣವೈಷಮ್ಯದಿಂದಲೀ ಸುವ್ವಿ ॥

ಭೇದಪಂಚಕವು ನಿತ್ಯ ತಾರತಮ್ಯ ಸತ್ಯ ವಿಧಿ
ಮೊದಲು ತೃಣಾಂತ ಜೀವರು ತ್ರಿವಿಧವು ಸುವ್ವಿ
ತ್ರಿವಿಧಜೀವರು ನಿತ್ಯ ತ್ರಿವಿಧಕಾರ್ಯ ಅರಿತು
ತ್ರಿವಿಧ ಸಾಧನದಂತೆ ತ್ರಿವಿಧಗತಿಯು ಸುವ್ವಿ ॥ ೭

ಜೀವರು ಅನಾದಿಯು ನಾಶನೋವುಗಳಿಲ್ಲ ಅ-
ವಾವಸ್ಥೆಗಳೆಲ್ಲ ಸ್ಥೂಲದೇಹಕೆ ಸುವ್ವಿ
ಸ್ಥೂಲದೇಹವ ಧರಿಸಿ ಪೂರ್ವ ಕರ್ಮದಂತೆ ಸಾಧನದಿಂ-
ದಲೆ ಕರ್ಮಕ್ಷಯವಹುದು ಸುವ್ವಿ ॥ ೮

ವೃದ್ಧಿಹ್ರಾಸಗಳಿಲ್ಲ ಶುದ್ಧ ಜೀವಸ್ವರೂಪ
ವಿಧಿಮೊದಲು ತೃಣಾಂತ ಪರಿಮಿತಿ ಒಂದೆ ಸುವ್ವಿ
ಪರಿಮಿತಿ ಒಂದೇರೀತಿ ಗುಣಕ್ರಿಯ ವಿವಿಧರೀತಿ ಅ-
ದರಂತೆ ಜಡಪ್ರಕೃತಿ ಕಾರ್ಯವು ಪರಿಪರಿ ಇಹುದು ಸುವ್ವಿ ॥ ೯

ಸರ್ವ ಸ್ವತಂತ್ರನು ದೇವ ಅಸ್ವತಂತ್ರನು ಜೀವ
ಸರ್ವತ್ರ ಹರಿವ್ಯಾಪ್ತ ನಿರ್ಲಿಪ್ತನು ಸು

ವು ಅನಂತಾನಂತ ಗುಣಗಣ ಪೂರ್ಣ ಅವ್ಯಯ
ಯ ಅಚ್ಯುತಾನಂತ ಸುವ್ವಿ ॥ ೯

ನಂತರೂಪಾನಂತಚೇತನ ಜಡದಿ
ತ್ಮ ತಾ ನಿರಂತರ ನಿಂತಿಹ ಸುವ್ವಿ
ಕದಾಕಾರದಿ ತದ್ಭಿನ್ನ ತನ್ನಾಮದಲಿ
ತನು ತಾ ನಿಂತಿಹನೆನ್ನಿ ಸುವ್ವಿ ॥ ೧೦

ಜೀವರಿಗೆ ಲಿಂಗದೇಹ ಅನಾದಿಯಲ್ಲಿದ್ದು
ವರ್ಣಯುವಾಗಿ ಪ್ರಕಾಶಿಸುತ್ತದು ಸುವ್ವಿ
ದ ಜೀವಕ್ಕೆ ಗಜ್ಜುಗ ಬೀಜದಂತೆ ತ್ರಿಗುಣಾ-
ಲಿಂಗಕ್ಕಾವರ್ಣವು ಸುವ್ವಿ ॥ ೧೧

ದ್ಧನಾದುದರಿಂದ ಗುಣಕಾರ್ಯ ಫಲಗಳಿಂದೆ ಶೀ-
ಸುಖದುಃಖಾನುಭವವಾಗುವುದೆನ್ನಿ ಸುವ್ವಿ
ವದಭಿಮಾನ ಸಾಧನದಂತೆ ಜೀವಾ ಜೀವ
ಜನುಮಾಂತರದ ವಾಸನವಿಹುದು ಸುವ್ವಿ ॥ ೧

ೀವರ ಲಿಂಗಕ್ಕೆ ಸತ್ವಾವರಣವೇ ಪ್ರಥಮ
ಯಾವರಣವೆ ರಜ ತೃತಿಯ ತಮವೆನ್ನಿ ಸುವ್ವಿ
ಆವರಣವೆ ಪ್ರಥಮ ರಜಸತ್ವವು
ರಿ ತ್ರಿವಿಧಾವರ್ಣವು ತಮೋಜೀವರಿಗಿಹುದು ಸುವ್ವಿ ॥

ೀಜೀವರಿಗೆ ರಜವು ಪ್ರಥಮಾವರಣದಿ
ದು ತಮ ಸತ್ವಾವರಣಾನಂತರ ವಿಹುದು ಸುವ್ವಿ
ರಜಸತ್ವಾವರಣ ತ್ರಯಗಳು ಲಿಂಗಕ್ಕೆ ನಿತ್ಯ
ು ತ್ರಿವಿಧ ಬದ್ಧರಾಗಿ ಸುತ್ತುತಿಪ್ಪರು ಸುವ್ವಿ ॥

ವರ್ಣದಿ ವಿಶ್ವ ರಜ ತಮ ತೈಜಸ ಪ್ರಾಜ್ಞ
ದಿ ಜೀವನವಸ್ಥಾ ತೋರಿಸುವರು ಸುವ್ವಿ
ರಿಸುವರು ಜೀವರ ಜಾಗ್ರಸ್ವಪ್ನಾವಸ್ಥೆಯೊಳು
ಲಿಂಗಾಭಿಮಾನಿಗಳು ಸುವ್ವಿ ॥

ಶಶಿಸಹಿತರಾಗಿ ಬ್ರಹ್ಮವಾಯು ಬಿಡದೆ ನಿತ್ಯ
ಭಕ್ತಿಯಿಂದ ಹರಿಯಾರಾಧಿಸುವರೋ ಸುವ್ವಿ
ನಿತ್ಯಭಕ್ತಿಯಿಂದ ಸ್ತುತಿಯ ಮಾಡಿ ಜಗ-
ತ್ಕರ್ತನಿನಾಜ್ಞೆಯಿಂ ತೃಪ್ತರಾಗೋರೊ ಸುವ್ವಿ ॥ ೧೬ ॥

ಜ್ಞಾನಕರ್ಮೇಂದ್ರಿಯ ಭೂತಪಂಚಕಗಳು
ಮನಸು ಎಂದು ಇನಿತು ಕೂಡಿ ಷೋಡಶ ಕಳೆಗಳು ಲಿಂಗಕ್ಕೆ ಸುವ್ವಿ
ಷೋಡಶ ಕಳೆಗಳಿಂದ ಕೂಡಿ ಲಿಂಗವು ಇಹುದು
ಕಳೆಗಳಲ್ಲಿನ ಭಗವದ್ರೂಪವ ತಿಳಿಯೋ ಸುವ್ವಿ ॥ ೧೭ ॥

ಮನಸಿಗೆ ಶ್ರವಣಕೆ ಶ್ರೀಕೇಶವ ನಾರಾಯಣ ತ್ವ-
ಕ್ ನೇತ್ರಕೆ ಮಾಧವ ಗೋವಿಂದನೆ ಸುವ್ವಿ
ಗೋವಿಂದನು ನೇತ್ರಕ್ಕೆ ಜಿಹ್ವೆ ಘ್ರಾಣದಿ
ವಿಷ್ಣು ಮಧುಸೂದನ ತ್ರಿವಿಕ್ರಮನೆನ್ನು ಸುವ್ವಿ ॥ ೧೮ ॥

ಹಸ್ತ ಪಾದಕ್ಕೆಲ್ಲ ವಾಮನ ಶ್ರೀಧರ ಗುಹ್ಯಕ್ಕೆ
ಹೃಷೀಕೇಶಮೂರುತಿ ಇಹರೋ ಸುವ್ವಿ
ಮೂರುತಿ ಇಹರೊ ಮತ್ತೆ ಗುದದೊಳು ಪದ್ಮನಾಭ
ಮುದದಿಂದ ಜ್ಞಾನ ಕರ್ಮೇಂದ್ರಿಯದಲ್ಲಿ ಸುವ್ವಿ ॥ ೧೯ ॥

ಶಬ್ದದೊಳು ದಾಮೋದರ ಸ್ಪರ್ಶದಿ ಸಂಕರ್ಷಣನು
ರೂಪದೊಳು ವಾಸುದೇವ ಮೂರುತಿ ಇಹರೋ ಸುವ್ವಿ
ರೂಪಗಳಲಿ ತಿಳಿಯೊ ಪ್ರದ್ಯುಮ್ನ ಅನಿರುದ್ಧನು
ರೂಪ ಸುಗಂಧಗಳಲಿ ಈ ರೂಪಗಳಿಹವೋ ಸುವ್ವಿ ॥ ೨೦ ॥

ಷೋಡಶ ಕಳೆಗಳಲ್ಲಿ ಅಭಿಮಾನಿಗಳಂತರದಲ್ಲಿ ನೀ
ಬಿಡದೆ ನೆನೆಸು ಈ ಭಗವದ್ರೂಪಗಳಲ್ಲಿ ಸುವ್ವಿ
ಭಗವದ್ರೂಪಗಳಲ್ಲಿ-ದೃಢ ಭಕುತಿಯಿಂದಲಿ
ಎಡೆಬಿಡದೆ ನಡೆನುಡಿಗಳಲ್ಲಿ ಸುವ್ವಿ ॥ ೨೧ ॥

ಆಚ್ಛಾದಿಕವು ಜೀವರಿಗೆ ಎರಡುಂಟು ನಿತ್ಯದಲ್ಲಿ
ಜೀವನ ಮರೆಯ ಮಾಡಿದ ಜೀವಾಚ್ಛಾದಿಕ ಸುವ್ವಿ

ಜೀವಾಚ್ಛಾದಿಕ ಇದೆ ಹರಿ ಇಚ್ಛಾ ಬಂದ ಕಾಲದಿ
ಬಿಚ್ಚಿ ಹೋಗುವುದು ನಿಶ್ಚಯ ಕೇಳೋ ಸುಪ್ವಿ ॥ [illegible] ॥

ಪರಮಾಚ್ಛಾದಿಕವೆಂಬುದು ನಿರುತವು ತಪ್ಪಿದ್ದಲ್ಲ
ಹರಿ ಇಚ್ಛಾ ಇಂಥಾದ್ದೆ ಇಂಥಾದ್ದೆನ್ನು ಸುಪ್ವಿ
ಇಂತಿದ್ದರು ಹರಿಯು ಒಮ್ಮೆ ಇಚ್ಛೆಮಾಡಿದರೆ ಬೊಮ್ಮ
ಒಮ್ಮೆ ತೋರಿದರೆ ಒಮ್ಮೆ ತೋರದಿಹನೋ ಸುಪ್ವಿ ॥ [illegible] ॥

ಲಿಂಗ ದೇಹಕ್ಕೆ ತಮನೋಹ ಮಹಮೋಹ ತಾಮಿಸ್ರ
ಅಂಧತಾಮಿಸ್ರವೆನ್ನು ಸುಪ್ವಿ
ತಾಮಿಸ್ರದಿ ಪಂಚ ನರಕಂಗಳಲ್ಲಿರ್ಪ ಕೃದ್ಧೋಲ್ಕಾದಿ
ಪಂಚ ಭಗವದ್ರೂಪ ವಿಹುದೋ ಸುಪ್ವಿ ॥ [illegible] ॥

ವೈತ್ಯರಿಗವಕಾಶ ಲಿಂಗದೊಳೆಂದಿಗಿಲ್ಲ
ದೈತ್ಯಾರಿ ಜನಾರ್ದನ ಹರಿ ಅಲ್ಲೆ ಇಹನು ಸುಪ್ವಿ
ದೈತಾರಿ ಜನಾರ್ದನನು ಲಿಂಗವ ರಕ್ಷಿಸುತ್ತ
ನಿತ್ಯ ನಿರ್ಲಿಪ್ತನಾಗಿ ನಿಂತಿಹನೊ ಸುಪ್ವಿ ॥ [illegible] ॥

ವಿಧಿ ಮೊದಲು ತೃಣಾದಿ ಜೀವರ ಲಿಂಗದಲಿ
ದಗ್ಧಪಟದ ತೆರದಿ ವಿಧಿಗೆ ಲಿಂಗವು ಸುಪ್ವಿ
ವಿಧಿಗಿಹ ಲಿಂಗದ ಕಾರ್ಯ ಹರಿಯ ಪ್ರೀತ್ಯರ್ಥವು
ಲಿಂಗ ಗುಣದ ಕಾರ್ಯವೆಂದಿಗಿಲ್ಲವೊ ಸುಪ್ವಿ ॥ [illegible] ॥

ಲಿಂಗದೇಹಕೆ ಮುಂದೆ ಅನಿರುದ್ಧದೇಹವು
ಅಂಗಿಯ ತೊಟ್ಟಂತೆ ಸಂಗಮಾದುದು ಸುಪ್ವಿ
ಅದರಿಂದ ಅನಿರುದ್ಧದೇಹ ಇಹುದು ಸಪ್ತಾವರಣ
ಆವರಣಗಳಲ್ಲಿಹ ವಿವರಣೆ ತಿಳಿಯೋ ಸುಪ್ವಿ ॥ [illegible] ॥

ಅನಿರುದ್ಧ ಪ್ರದ್ಯುಮ್ನ ಆವರಣಗಳೆರಡು
ಸಂಕರ್ಷಣ ವಾಸುದೇವ ನಾರಾಯಣ ಸುಪ್ವಿ
ಒಂದೊಂದು ಇನಿತು ಆವರಣ ಸಪ್ತದಲ್ಲಿರುವ
ಸರ್ವತತ್ವ ವ್ಯಕ್ತವಾದವು ನೀ ಮತ್ತೆ ತಿಳಿಯೋದು ಸುಪ್ವಿ ॥ [illegible] ॥

ಮಹತ್ತತ್ವ ತಿಳಿ ಶ್ರೀ ವಾಸುದೇವಾವರಣದಿ
ನಾರಾಯಣಾವರಣದಿ ಅವ್ಯಕ್ತ ತತ್ವವು ಸುವ್ವಿ
ಅವ್ಯಕ್ತತತ್ವಾದಿ ಚತುರ್ವಿಂಶತಿ ತತ್ವದಲಿ
ಕೇಶವಾದಿ ಚತುರ್ವಿಂಶತಿರೂಪವಿಹುದು ಸುವ್ವಿ || ೩೦

ತತ್ವಂಗಳಲಿ ತತ್ತದಭಿಮಾನಿಗಳಂತರದಿ
ನಿತ್ಯ ಹರಿಯು ತನ್ನ ಸತಿಯರಿಂದಲಿ ಸುವ್ವಿ
ಸತಿಯರಿಂದಲಿ ಕೂಡಿ ಕೃತ್ಯಗಳ ನಡೆಸಿ ಅಭಿ
ವ್ಯಕ್ತ ಮಾಡಿಸುತ್ತಿರುವನು ಹರಿ ಸತ್ಯವೆನ್ನಿ ಸುವ್ವಿ || ೩೧

ಹೃದಯದೊಳಿರುತಿರ್ಪ ಅನಿರುದ್ಧದೇಹದೊಳು
ಮುದದಿಂದ ದೈತ್ಯದಾನವಾದಿಗಳಿರುವರು ಸುವ್ವಿ
ದೈತ್ಯರಿಲ್ಲರು ಪಾಪಕಾರ್ಯಗಳ ಮಾಳ್ಪರು
ಪುಣ್ಯಕಾರ್ಯಗಳೆಲ್ಲ ಸುರರಿಂದಾಹುದು ಸುವ್ವಿ || ೩೨

ಲಿಂಗದೇಹದ ರಕ್ಷಣೆ ಅನಿರುದ್ಧದೇಹವು
ಲಿಂಗದೇಹದ ಸಂಗಡ ಭಂಗವಿರುವುದು ಸುವ್ವಿ
ಭಂಗವಾಗಲು ವಿಷಯ ಸಂಗರಹಿತನಾಗು
ರಂಗ ಅಂತರದಿ ತಿಳಿಯಗೊಡುವನು ಸುವ್ವಿ || ೩೩

ಜೀವ ಪ್ರಕಾಶವು ಲಿಂಗಾನಿರುದ್ಧದೊಳು
ಷೋಡ ಕಳೆಗಳಿಂದ ವ್ಯಾಪಿಸಿಹುದು ಸುವ್ವಿ
ವ್ಯಾಪಿಸಿಹುದು ಮುಂದೆ ಸ್ಥೂಲದೇಹವು ಒಂದು
ಸ್ಥೂಲ ಜಡದೇಹದ ಕಾರ್ಯ ಅಭಿವ್ಯಕ್ತವಾಹುದು ಸುವ್ವಿ || ೩೪

ಸ್ಥೂಲದೇಹದೊಳು ಸುಷುಮ್ನಾಧಾರ ಹಿಡಿದು
ಸಪ್ತಕಮಲಗಳಲ್ಲುಂಟು ತಿಳಿಯೋ ಸುವ್ವಿ
ಸಪ್ತಕಮಲದಿ ಮೊದಲು ಮೂಲಾಧಾರದಿ ನಾಲ್ಕು
ದಳ ಕಮಲ ಹವಳ ವರ್ಣವಿದೆ ಭೂಲೋಕವೆನ್ನಿ ಸುವ್ವಿ || ೩೫

ನೀಲವರ್ಣದ ಆರುದಳ ಕಮಲ ನಾಭಿಯಲ್ಲಿ
ವಾಯು ಮಂಡಲವಿದೆ ಭುವಲೋಕವು ಸುವ್ವಿ

ಭುವರ್ಲೋಕ ಇಲ್ಲಿ ವಾಯು ಬೀಜಾಕ್ಷರದಲ್ಲಿ
ಪಾಪಪುರುಷನ ಶೋಷಿಸಲು ಜಪಿಸು ನಿತ್ಯ ಸುವ್ವಿ || ೩೬ ||

ಹೃದಯಕಮಲದಿ ಎಂಟುದಳ ಉಂಟು ರವಿಭಾ
ಸ ತ್ರಿಕೋಣ ಅಗ್ನಿಮಂಡಲವಿಹುದಿಲ್ಲಿ ಸುವ್ವಿ
ಇಹುದು ಸುವರ್ಲೋಕ ಇಲ್ಲಿ ಅಗ್ನಿ ಬೀಜಾಕ್ಷರ
ದಿಂದ ಪಾಪಪುರುಷನ ದಹಿಸೆ ಜಪಿಸು ನಿತ್ಯ ಸುವ್ವಿ || ೩೭ ||

ಹೃದಯಕಮಲದ ಮಧ್ಯಕರ್ಣಿಕ ಮಧ್ಯದಲ್ಲಿ
ಮೂಲೇಶನಿಪ್ಪ ಸ್ಥೂಲಾಂಗುಷ್ಟಮೂರುತಿ ಸುವ್ವಿ
ಮೂರುತಿ ಮೂಲೇಶನ ಪಾದ ಮೂಲದಲಿಪ್ಪ
ಪ್ರಾಣನ ಪಾದಮೂಲದಿ ಅನಿರುದ್ಧದೇಹವೇ ಸುವ್ವಿ || ೩೮ ||

ಈ ಪವನದೇವ ನಿತ್ಯ ಜಪಿಸುವ ಹಂಸಮಂತ್ರ
ಇಪ್ಪತ್ತೊಂದುಸಾವಿರದಾರುನೂರು ಸುವ್ವಿ
ಆರುನೂರುಜಪ ಮೂರು ಮೂರುವಿಧ ಜೀವರೊಳು
ಮೂರುವಿಧ ನಡೆಸಿ ಮೂರ್ಗತಿ ನೀಡುವ ಸುವ್ವಿ || ೩೯ ||

ಅಷ್ಟದಳಗಳ ಮೇಲೆ ಅಷ್ಟಭುಜ ನಾರಾಯಣ
ನಿಷ್ಟೆಯಿಂದಲಿ ಚರಿಸಿ ಜೀವರಿಷ್ಟವ ತೋರುವ ಸುವ್ವಿ
ಜೀವರಿಷ್ಟದೊಳು ಪೂರ್ವದಳದಲಿ ಪುಣ್ಯ
ನಿದ್ರಾಲಸ್ಯವು ಶ್ರೀ ಆಗ್ನೇಯದಳದಲಿ ಸುವ್ವಿ || ೪೦ ||

ಆಗ್ನೇಯದಳದ ಮುಂದೆ ಯಮದಿಕ್ಕಿನಲ್ಲಿ
ಕ್ರೂರಬುದ್ಧಿಯು ಜೀವಗಾಗುವುದೆನ್ನು ಸುವ್ವಿ
ನೈಋತ್ಯ ದಳದಲ್ಲಿ ಪಾಪಬುದ್ಧಿಯು ನೆಸಗುವ ಜೀವ
ನಿರುತ ದಳಗಳಲ್ಲಿ ಸಂಚರಿಸುವ ಸುವ್ವಿ || ೪೧ ||

ವರುಣದಳದಲ್ಲಿ ಬರಿ ಕ್ರೀಡಾಬುದ್ಧಿಯು ನೀವ
ವಾಯುವ್ಯದಲ್ಲಿ ಗಮನಾಗಮನವು ಸುವ್ವಿ
ಗಮನಾಗಮನದಿ ಮೇಲೆ ರತಿ ಬುದ್ಧಿಯು
ಉತ್ತರದಲ್ಲಿ ದಾನಬುದ್ಧಿಯು ಈಶಾನ್ಯದಲಿ ಸುವ್ವಿ || ೪೨ ||

ಮಧ್ಯಕೆ ಬರಲು ವೈರಾಗ್ಯವೆ ಸಿದ್ಧ ಕೇಶರಕೆ
ಬರಲು ಸ್ವಪ್ನಾವಸ್ಥೆಯು ಸುವ್ವಿ
ಸ್ವಪ್ನಾನಂತರದಿ ಕರ್ಣಿಕೆಯಲ್ಲಿ ಜಾಗ್ರತಿಯು
ಮಧ್ಯದೊಳು ಸುಷುಪ್ತ್ಯಾವಸ್ಥೆಯು ಸುವ್ವಿ ॥ ೪೩ ॥

ಉರದಲ್ಲಿ ಮುತ್ತಿನವರ್ಣ ಎರಡಾರುದಳ ಕಮಲದಿ
ವಿರುಪಾಕ್ಷನಭಿಮಾನಿ ನರಸಿಂಹನ ಪೂಜಿಪ ಸುವ್ವಿ
ನರಸಿಂಹನ ಪೂಜಿಪ ಈ ಲೋಕ ಮಹರ್ಲೋಕೆ
ದ್ವಾದಶದಳದಿ ಕಲಾಭಿಮಾನಿಗಳಿಹರು ಸುವ್ವಿ ॥ ೪೪ ॥

ಕಂಠದಲಿ ಎರಡೆಂಟೆರಷ್ಟುದಳ ಕಮಲ
ಉಂಟು ಕಮಲ ರಕ್ತವರ್ಣ ಜನಲೋಕವು ಸುವ್ವಿ
ಜನಲೋಕದಲಿ ಶೇಷ ಸಂಕರ್ಷಣಮೂರ್ತಿಯನು
ನಿತ್ಯ ಸ್ತುತಿಸುತ ತಾ ಭೃತ್ಯನಾಗಿಹನೊ ಸುವ್ವಿ ॥ ೪೫ ॥

ಭ್ರೂಮಧ್ಯದಿ ದ್ವಿದಳ ಕಮಲ ಉಂಟೊಂದಿಲ್ಲಿ
ತಾ ಮಧುಪುಷ್ಪದಂತೆ ಪೊಳೆಯುತ್ತಿಹುದು ಸುವ್ವಿ
ಮಧುಪುಷ್ಪದಂತೆ ಪೊಳೆವ ಸ್ಥಳವೆ ತಪೋಲೋಕವೆನ್ನು ಸುವ್ವಿ
॥ ೪೬ ॥

ಶಿರದೊಳು ಸಾವಿರದಳ ಕಮಲವು ವಜ್ರದ ಕಲಾ
ವರುಣ ಮಂಡಲವಿದೆ ಸತ್ಯ ಲೋಕವೆ ಸುವ್ವಿ
ಸತ್ಯಲೋಕದಿ ಬ್ರಹ್ಮ ನಿತ್ಯ ಅಭಿಮಾನಿಯು
ಉತ್ತಮೋತ್ತಮ ಶ್ರೀರಂಗನ ಪೂಜಿಸುವನು ಸುವ್ವಿ ॥ ೪೭ ॥

ಓಂಕಾರವರ್ಣವು ನಿತ್ಯ ಅಷ್ಟಾಕ್ಷರಗಳ ಯುಕ್ತ
ಅಷ್ಟಾಕ್ಷರಗಳ ಭಗವದ್ರೂಪಗಳಿಹವು ಸುವ್ವಿ
ರೂಪಗಳಲ್ಲಿ ವಿಶ್ವ ತೈಜಸ ಪ್ರಾಜ್ಞ ತುರ್ಯ
ಆತ್ಮ ಅಂತರಾತ್ಮ ಪರಮಾತ್ಮ ಜ್ಞಾನಾತ್ಮ ಸುವ್ವಿ ॥ ೪೮ ॥

ಓಂಕಾರದಿಂದಲೇ ಏಕ ಪಂಚಾಶದ್ವರ್ಣವು ವ್ಯಕ್ತ
ಸಕಲ ಸ್ವರ ವರ್ಣ ಶಬ್ದ ಪ್ರತಿಪಾದ್ಯನು ಸುವ್ವಿ

ಪ್ರತಿಪಾದ್ಯನು ಶ್ರೀಹರಿಯು ದೇಹವೃಕ್ಷದಿ ಬಂದು
ಸುಖದುಃಖ ಫಲಗಳ ನಿರ್ಮಿಸಿಹನು ಸುವ್ವಿ ॥ ೪೯ ॥

ಸುಷುಮ್ನನಾಡಿಯು ಮೊದಲು ತುಂದಿಯೊಳು
ಆದಿಯಾಗಿ ಮುಂದೆ ಶಿರಪರಿಯಂತ ವ್ಯಾಪಿಸಿಹುದು ಸುವ್ವಿ
ಇಹುದು ಈ ನಾಡಿಗೆ ನಾಲ್ಕು ದಿಕ್ಕಿನಲ್ಲಿರುವ ನಾಲ್ಕು
ನಾಡಿಯಿಂದಲಿ ಪಂಚಪ್ರಭೇದವು ಸುವ್ವಿ ॥ ೫೦ ॥

ವಜ್ರಿಕ ಆರ್ಯಕ ವೈಧೃತಿ ಪ್ರಕಾಶಿನಿ ಎಂಬ
ನಾಲ್ಕುನಾಡಿಗಳೊಂದಕ್ಕೆ ಇಪ್ಪತ್ತೈದಾದವು ಸುವ್ವಿ
ಇಪ್ಪತ್ತೈದರಂತೆ ಕೂಡಿ ಎಲ್ಲ ನಾಡಿ ನೂರ ಒಂದು
ಮುಖ್ಯನಾಡಿ ಆದುವೆನ್ನು ಸುವ್ವಿ ॥ ೫೧ ॥

ನೂರ ಒಂದು ನಾಡಿ ಭಾಗಗಳನ್ನೆ ಮಾಡಿ ಎಪ್ಪ-
ತ್ತೆರಡುಸಾವಿರ ನಾಡಿಗಳಾದವು ಸುವ್ವಿ
ನಾಡಿಗಳಲ್ಲಿ ಇಡಾನಾಡಿ ಎಡದಲ್ಲಿಹುದು
ನಾಡಿಯೊಳು ಪಿಂಗಳಾನಾಡಿ ಬಲದಲ್ಲಿಹುದು ಸುವ್ವಿ ॥ ೫೨ ॥

ಎಡಬಲದಲಿ ಶ್ರೀಹರಿ ತಾನು ಸ್ತ್ರೀ ಪುಂರೂಪದಲ್ಲಿದ್ದು
ಒಡಗೂಡಿ ತನ್ನೊಳು ತಾ ಕ್ರೀಡಿಸುವನು ಸುವ್ವಿ
ಕ್ರೀಡಿಸುವ ನಾಡಿಯೊಳು ನಾಡೀನದಿಗಳೊಳು
ಬಿಡದೆ ಶ್ರೀಹರಿಯ ಅಡಿಯ ನಂಬಿರುವುದು ಸುವ್ವಿ ॥ ೫೩ ॥

ಸಾವಿರದೆಂಭತ್ತು ಅಸ್ಥಿ ಶರೀರದೊಳು ಯು-
ಕ್ತವಾದುವು ಪರ್ವಸಂಧಿಕೀಲುಗಳಲ್ಲಿ ಸುವ್ವಿ
ಕೀಲುಗಳಲ್ಲಿದ್ದು ಸ್ಥೂಲಕಾರ್ಯಕ್ಕೆಲ್ಲ
ಶಕ್ತಿಯನಿತ್ತು ದೇಹ ಯುಕ್ತವಾಯಿತು ಸುವ್ವಿ ॥ ೫೪ ॥

ಸ್ಥೂಲಕಾಯವು ಸಪ್ತಧಾತುಗಳಿಂದಲಿ ಯುಕ್ತ
ಅಲ್ಲಿರುವ ಸರ್ವ ಭಗವದ್ರೂಪಗಳ ತಿಳಿಯೋ ಸುವ್ವಿ
ಭಗವದ್ರೂಪಗಳಲ್ಲಿ ಸ್ಥಾನಭೇದಗಳಲ್ಲಿ ಮಾ-
ತೃಕಾನ್ಯಾಸದಂತೆ ಗ್ರಹಿಸು ನಿತ್ಯ ಸುವ್ವಿ ॥ ೫೫ ॥

ಅನ್ನಮಯ ಅನಿರುದ್ಧ ಪ್ರಾಣಮಯ ಪ್ರದ್ಯುಮ್ನ
ಮನೋಮಯ ಸಂಕರ್ಷಣ ವಿಜ್ಞಾನಮಯ ಸುವ್ವಿ
ವಿಜ್ಞಾನಮಯಕೆ ವಾಸುದೇವ ಆನಂದಮಯಕೆ
ಶ್ರೀನಾರಾಯಣ ಇನಿತು ಪಂಚಕೋಶ ಸ್ಥೂಲದೇಹದಿ ಸುವ್ವಿ ॥ ೫೬

ಮುಖ್ಯರಸಗಳಲ್ಲಿ ಸ್ವಾಖ್ಯರಸವು ಹರಿಗೆ
ಮಿಕ್ಕದ್ದು ತತ್ತ್ವರಿಗೆ ಸ್ವರೂಪರಸವು ಸುವ್ವಿ
ಸ್ವರೂಪ ರಸವು ಸುರರಿಗೆ ಜಡರಸ ಜೀ-
ವರಿಗೆ ತಕ್ಕಂತೆ ಸ್ಥೂಲದೇಹಕ್ಕುಪಚಯವು ಸುವ್ವಿ ॥ ೫೭

ನವಕೋಟಿ ರೋಮಗಳು ಈ ಸ್ಥೂಲದೇಹದೊಳು
ಅವಕಾಶದಿಂದಲಿ ತಾ ತುಂಬಿಹವು ಸುವ್ವಿ
ತುಂಬಿಹ ರೋಮದೊಳಗೆ ಕೂಪಂಗಳಿಹವು
ಭಾವಿಸುತ್ತಲಿ ನಿತ್ಯ ನಂದವಿರುವುದು ಸುವ್ವಿ ॥ ೫೮

ಮೂರು ಅರ್ಧ ಮೊಳದುದ್ದ ಇದ್ದ ಈ ದೇಹದೊಳು
ಭೂತ ಪಂಚಕಗಳ ಭಾಗವಧಿಕವಾವುದು ಸುವ್ವಿ
ಭಾಗಾಧಿಕದಿಂದ ಗುಣ ಒಂದು ಬಂದೂ
ಎಂದಾದರೊಂದುದಿನ ನಾಶವಾಗುವುದು ಸುವ್ವಿ ॥ ೫೯

ಬದ್ಧಜೀವರು ಗುಣಬದ್ಧರಾಗಿರುವರು ವಿಧಿ
ಬದ್ಧರಾಗಿಹರೆಲ್ಲ ಉದ್ಧಾರಾಹೋರು ಸುವ್ವಿ
ಉದ್ಧಾರಾಗಲು ಅನಿರುದ್ಧನ ನೆರೆನಂಬಿ
ಮಧ್ವಮತದೊಳಿದ್ದು ಸುಖಿಸು ನಿತ್ಯ ಸುವ್ವಿ ॥ ೬೦

ಭೇದ ಪಂಚಕವು ಶುದ್ಧ ತಾರತಮ್ಯವ ತಿಳಿದು
ಶ್ರೀದ ಸಗುಣ ಸರ್ವಜ್ಞನೆಂದು ತಿಳಿ ಸುವ್ವಿ
ಸರ್ವಜ್ಞ ಸ್ವತಂತ್ರದಿ ಸೃಷ್ಟ್ಯಾದಿ ಕರ್ತ ಎಂದು
ಸರ್ವಾಂತರ್ಯಾಮಿ ಎಂದು ನಂಬಿಕೊಂಡಿರು ಸುವ್ವಿ ॥ ೬೧

ವಿಶ್ವ ಬಲಗಣ್ಣಿನೊಳು ತೈಜಸ ಕಂಠದೊಳು
ಪ್ರಾಜ್ಞ ಹೃದಯದಲ್ಲಿದ್ದು ತೋರಿವನು ಸುವ್ವಿ
ತೋರಿವನು ಪ್ರತಿದಿನ ಸ್ಥಿತಿಕಾಲ ಗುಣ ಕಾಲಕ
ಕರ್ಮಜ ಅನುಭವ ತಿಳಿಸುವ ಸುವ್ವಿ || ೬೨ ||

ಜೀವನನಾದಿಕರ್ಮ ಜ್ಞಾನೇಚ್ಛಾ ಪ್ರಯತ್ನಗಳು
ಸೃಷ್ಟಿಗೆ ಬಂದಾರಭ್ಯ ಹರಿ ವ್ಯಕ್ತವಾಡಿಸುವನು ಸುವ್ವಿ
ವ್ಯಕ್ತವಾಡಿ ಜೀವರ ಕರ್ಮಪ್ರವಾಹದಲ್ಲಿಟ್ಟು ಅಭಿ-
ವ್ಯಕ್ತ ಮಾಡುವ ಹರಿ ಸ್ವತಂತ್ರನು ಸುವ್ವಿ || ೬೩ ||

ಜಲಜನಾಭಗೆ ಎರಡು ಅಧಿಷ್ಠಾನವು
ಎಲ್ಲಾ ಜಡವು ಮತ್ತೆ ಚೇತನಗಳು ಸುವ್ವಿ
ಜಡಚೇತನ ಎರಡು ಭಾಗಗಳಿಹವು ತಿಳಿದು
ಚಿಂತಿಸುವುದು ಅಧಿಷ್ಠಾನಭೇದವು ಸುವ್ವಿ || ೬೪ ||

ಜಡದೊಳು ಶುದ್ಧ ಜಡಗಳು ಸಹಜಾಚಲ-
ಗಳಿನ್ನು ಚರ ಚರಣಾದಿ ಜಡ ಪ್ರತೀಕವು ಸುವ್ವಿ
ಪ್ರತೀಕದೊಳು ಚೇತನಪ್ರತಿಮೆಯು ಸ್ತ್ರೀ ಪುರು-
ಷರುಗಳ ಗೋಳಕದಂತರದಿ ಹರಿ ಚಿಂತಿಸುತ್ತಿರು ಸುವ್ವಿ || ೬೫ ||

ಚೇತನದೊಳು ಪಂಚಗೋಳಕದಿ ಚಿಂತಿಸುವುದು
ದೇಹಗೋಳಕ ಜೀವ ಗುರು ಪುಷ್ಕರ ಪ್ರಾಣರ ಸುವ್ವಿ
ಪ್ರಾಣಗೋಳಕದ ಅಂತರದಲಿ ಹರಿಯನು
ನಿರಂತರ ಧೇನಿಸುತ್ತಿರುವುದು ಸುವ್ವಿ || ೬೬ ||

ಜಡಪ್ರತಿಮೆಗಳಲ್ಲಿ ಪ್ರತಿಮೆಗೋಳಕ ಒಂದು
ಗುರುಗೋಳಕ ಒಂದು ಗುರುಗೋಳಕ ಭಾರ-
ತೀರಮಣಗೋಳಕವು ಸುವ್ವಿ
ಗೋಳಕತ್ರಯಗಳಲ್ಲಿ ಅಂತರ್ಯಾಮಿಯ ಚಿಂ-
ತಿಸುತ್ತ ಭ್ರಾಂತಿಯ ಕಳೆದು ನಿಶ್ಚಿಂತನಾಗು ಸುವ್ವಿ || ೬೭ ||

[illegible] ವಹಿಸಿ ಮೋಸಲವಮನವನೆ ಇರಿಸಿ
[illegible] ಯು ನಿಲ್ಲಿಸಿ ಪೂಜಿಸುತ್ತಿರು ಸುಪ್ತಿ
[illegible] ವಲಿ ಪ್ರುದಯುಸದನದಲ್ಲಿ
[illegible] ಲಿ ಚಿಂತಿಸು ನಿತ್ಯ ಸುಪ್ತಿ || ೧೮ ||

[illegible] ತಿಯು ಅಪರೋಕ್ಷಾನಂತರದಿ
[illegible] ರ್ಗತ ಚಿದಾನಂದ ಮೂರ್ತಿ ಸುಪ್ತಿ
[illegible] ಪರೋಕ್ಷಾನಂತರದಿ ಈ ದೇಹಾ
[illegible] ಮೂರ್ತಿ ಅಗ್ರೇಶನ ನೆನೆಸು ಸುಪ್ತಿ || ೧೯ ||

[illegible] ಅನುಗ್ರಹ ಸಂಪಾದಿಸಿ
[illegible] ತ ಬಿಂಬಮೂರುತಿ ಸುಪ್ತಿ
[illegible] ಪರೋಕ್ಷಾನಂತರದಿ ಸಂಚಿತಾಗಾಮಿಗಳು
[illegible] ಪ್ರಾರಬ್ಧ ಕರ್ಮ ಭೋಗಿಸುತ್ತಿರುವುದೆ ಸುಪ್ತಿ || ೨೦ ||

[illegible] ಭೋಗದಲಿ ಜನುಮ ಕರ್ಮಂಗಳಲಿ
[illegible] ನಾಗಿರುವುದು ಕರ್ಮಫಲದಲಿ ಸುಪ್ತಿ
[illegible] ಲೇಪವು ಇಲ್ಲ ಜ್ಞಾನದ ತಿರೋಧಾನವಿಲ್ಲಾ
[illegible] ಯೋನಿಗಳಲ್ಲಿ ಜನಿಸಿದಾಗಲು ಸುಪ್ತಿ || ೨೧ ||

[illegible] ತಿಳಿದು ಪ್ರತಿಬಿಂಬದ ಕ್ರಿಯವೆನ್ನುತ್ತ
[illegible] ಭಗೆ ದ್ವಂದ್ವಕರ್ಮವನರ್ಪಿಸು ಸುಪ್ತಿ
[illegible] ಮರ್ಮವ ಅಂಬುಜನಾಭನು ನೋಡಿ
[illegible] ಕೋಪವನಯ್ಯ ಹೃದಯಾಂಬರದಲಿ ಸುಪ್ತಿ || ೨೨ ||

[illegible] ಸಂಕಲ್ಪನು ಏನಿತ್ತುದೇ ಪುರುಷಾರ್ಥವು
[illegible] ಭಕ್ತಿಯಿಂದ ತೃಪ್ತನಾಗಿರು ಸುಪ್ತಿ
[illegible] ನಾಗಿರುತಿದ್ದು ಕೃತ್ಯಾರ್ಥವನೆ ತಿಳಿದು
[illegible] ನಡೆಸಿ ಹರಿಗಿತ್ತು ಸುಖಿಸು ಸುಪ್ತಿ || ೨೩ ||

[illegible] ಕ್ರಮವ ಮರುತ ಮತದಂ[illegible]
[illegible] ರಿಂದಲಿ ತಿಳಿದು ಹರಿಯನೆ ನುತಿಸು ಸುಪ್ತಿ

ಹರಿಯನೆ ನುತಿಸಲು ತ್ವರಿಯಾ ದುರಿತವ ಹರಿಸಿ ಕಾಯ್ವ
ಸರ್ವಸಾಧನವನೀವ ಯೋಗ್ಯತೆಯಂತೆ ಸುವ್ವಿ ॥ ೭೪ ॥

ಸ್ವತಂತ್ರನು ದೇವ ಅಸ್ವತಂತ್ರನು ಜೀವ ಚಿತ್ತ-
ಸ್ವಾತಂತ್ರ್ಯವಿದೆ ಸ್ವರೂಪದಲ್ಲಿ ಸುವ್ವಿ
ಸ್ವರೂಪಸ್ವತಂತ್ರಕ್ಕೆ ಸ್ವತಂತ್ರವಾಜ್ಯನು ಶ್ರೀಶ
ಬಿಂಬನೆಂದೆನಿಸಿ ನಿತ್ಯವಾಗಿರುತಿರ್ಪನು ಸುವ್ವಿ ॥ ೭೫ ॥

ಅನಾದಿಯಿಂದಲಿ ಕರ್ಮ ಶಾ ಪ್ರಕೃತಿ ಬಂಧದಿಂದ
ಜನ್ಮಜನ್ಮಕೆ ಉಪಾದಾನವು ಸುವ್ವಿ
ಉಪಾದಾನಾದಿ ಕಾರಣ ಪುಣ್ಯಪಾಪಂಗಳು
ಹಾನಿವೃದ್ಧಿಗೆ ಕಾರಣವೆನ್ನು ಸುವ್ವಿ ॥ ೭೬ ॥

ಗುಣಕಾಲ ಯೋಗ್ಯತೆಯಂತೆ ಕರ್ಮಪ್ರವಾಹದೊಳಿರಲು
ಕಡೆ ಹಾಯುವುದಂಟೆ ಅನಂತ ಜನ್ಮಕೆ ಸುವ್ವಿ
ಅನಂತ ಜನ್ಮದ ಕರ್ಮವನೆಲ್ಲ ಬಲ್ಲ ಶ್ರೀನಲ್ಲ-
ನೊಲುಮೆ ಮಾಡೆ ನಾಶಮಾಡುವ ಸುವ್ವಿ ॥ ೭೭ ॥

ಕರ್ಮಂಗಳಲ್ಲಿ ನಿತ್ಯ ನೈಮಿತ್ತಿಕ ಕಾಮ್ಯವೆಂದು
ಕರ್ಮದ ವಿವರ ವಿಸ್ತಾರವಿರುವುದು ಸುವ್ವಿ
ವಿಸ್ತಾರದಿ ನಿತ್ಯಕರ್ಮ ಬಿಡದೆ ನಡಸುವುದು
ಮುಖ್ಯ ಉತ್ತಮಸಾಧನ ಇದೇ ಮತ್ತೆ ಕೇಳೋ ಸುವ್ವಿ ॥ ೭೮ ॥

ಸ್ನಾನ ಸಂಧ್ಯಾವಂದನ ಜಪ ವೀತಿಹೋತ್ರ ಶ್ರವಣ
ಧ್ಯಾನ ಕೀರ್ತನ ಗಾನ ಇದೇ ನಿತ್ಯ ಕರ್ಮವು ಸುವ್ವಿ
ನಿತ್ಯಕರ್ಮವು ಕಾಲತ್ರಯದಲಿ ಮಾಡಿ ಕೃತ-
ಕೃತ್ಯನಾಹೋನು ಸತ್ಯ ಕೇಳೋ ಸುವ್ವಿ ॥ ೭೯ ॥

ನೈಮಿತ್ತಿಕ ಕರ್ಮದೊಳು ಮನ್ವಾದಿ ಅಯನಂಗಳು ಪಾ-
ರ್ಣವು ಪೈತೃಕ ವತ್ಸರ ಕರ್ಮಗಳು ಸುವ್ವಿ
ವತ್ಸರದಿ ಮತ್ತೆ ಉಪರಾಗ ದ್ವಾದಶಿ ಆದಿ
ತಿಥಿತ್ರಯದ ಕರ್ಮವಾಪುದು ಸುವ್ವಿ ॥ ೮೦ ॥

ಭೋಗಾಪೇಕ್ಷೆಯು ಮುಖ್ಯ ಕಾಮನ ಕ-
ರ್ಮಂಗಳಲಿ ವಿತ್ತಾಕಾಂಕ್ಷೆ ಯುತವು ಸುವ್ವಿ
ಕಾಂಕ್ಷೆಯಿಂದಲಿ ಎಲ್ಲಾ ಕುಕ್ಷಿ ಪೋಷಣೆ-
ಗಾಗಿ ಮುಮುಕ್ಷು ಮಾರ್ಗಕ್ಕೆ ನಿರ್ಲಕ್ಷಿಸುವುದು ಸುವ್ವಿ || ೬೧ ||

ನಿತ್ಯನೈಮಿತ್ತಿಕದೊಳು ಸಬೀಜ ನಿರ್ಬೀಜ ಕ-
ರ್ಮದ ವಿವರ ಪೇಳುವುದಯ್ಯ ಸುವ್ವಿ
ಕರ್ಮದೊಳು ಕಾಮ್ಯಾದಿ ಸಬೀಜಕರ್ಮ
ಪುಣ್ಯಬೀಜಕರ್ಮವೆಂದೆರಡು ವಿಧ ಪೇಳ್ವರು ಸುವ್ವಿ || ೬೨ ||

ಶಮದಮವಿದ್ದರು ಸರಿಯೆ ಕರ್ಮನೆಸಗುವಾಗ
ಪುಣ್ಯಪಾಪವು ಬಿಡದೆ ಹತ್ತಿ ಬರುವುದು ಸುವ್ವಿ
ಬರುತಿರ್ಪುದು ಮಹಾತ್ಮರಿಗೆ ಬಿಡದು ಕರ್ಮಂಗಳಲಿ
ಕರ್ಮಂಗಳ ಪಾಡೇನು ಪೇಳಲೊಶವೆ ಸುವ್ವಿ || ೬೩ ||

ಆರ್ತಜನರ ಕ್ಲೇಶಹರಿಸಿ ಉಪಕಾರದಲಿ
ಸತ್ವಗುಣ ಪ್ರವರ್ತರುತ್ತಮರು ಸುವ್ವಿ
ಉತ್ತಮರು ಮಾತಾಪಿತೃ ಸಹಜಾತ ಬಾಂಧವ-
ರ ತೃಪ್ತಿ ಪಡಿಸಲು ಪುಣ್ಯಬೀಜಪಾಪವು ಸುವ್ವಿ || ೬೪ ||

ಜ್ಞಾತಾಜ್ಞಾತವೆಂಬೊ ನಿರ್ಬೀಜ ಪುಣ್ಯವು ವಿವಿಧ
ಭೂತಳದೊಳು ಜನಕುಂಟೆಂಬುದು ಸುವ್ವಿ
ಉಂಟೆಂಬರು ಖ್ಯಾತಿ ದಾನ ಧರ್ಮವ ನೆಸಗಲು
ಜ್ಞಾತಬೀಜದ ಪುಣ್ಯ ಕರ್ಮ ವಿರುವುದು ಸುವ್ವಿ || ೬೫ ||

ಅಜ್ಞಾತ ನಿರ್ಬೀಜ ಪುಣ್ಯವು ಎಂತೆಂದೆನೆ
ಪೋತತನದಿ ರತ್ನಭೂಷಣ ತೊಡಿಗೆಯಂತೆ ಸುವ್ವಿ
ಭೂಷಣ ತೊಡಿಗೆ ಜ್ಞಾನವಿಲ್ಲದೆ ಪೋಪಂತೆ ಸಾ-
ಧನವಿನಿತಿಲ್ಲದೆ ಕೆಟ್ಟು ಪೋವುದು ಸುವ್ವಿ || ೬೬ ||

ಜ್ಞಾತನಾದಮೇಲೆ ಪಾತಕಿ ಪುಣ್ಯನದರೋ ಈ ಪರಿ ಅ-
ಜ್ಞಾತ ನಿರ್ಬೀಜ ಪುಣ್ಯ ಸುವ್ವಿ

ಪುಣ್ಯವು ಈ ಪರಿ ಅಜ್ಞಾತನಿರ್ಬೀಜವು
ಎಂತೆಲೋ ಕರ್ಮದ ಬೀಜ ತಿಳಿಯಲರಿಯದು ಸುಪ್ವಿ ॥ ೮೭ ॥

ಜ್ಞಾತ ಅಜ್ಞಾತದ ನಿರ್ಬೀಜ ಪಾಪದ ವಿವರ
ಪ್ರೀತಿಯಿಂದಲಿ ಕೇಳಿ ತಿಳಿಯೊ ಮನಕೆ ಸುಪ್ವಿ
ತಿಳಿಯೊ ಜ್ಞಾತ ನಿರ್ಬೀಜ ಪಾಪವು
ಪಾತಕ ಮಾಡದೆ ಸತ್ಕರ್ಮವಾವುದು ಮತ್ತೆ ಕೇಳೊ ಸುಪ್ವಿ ॥ ೮೮ ॥

ಜ್ಞಾತ ನಿರ್ಬೀಜದ ಪಾಪದ ನಿದರ್ಶನ
ತೀರ್ಥಯಾತ್ರೆ ಕಾಲದಲ್ಲಿ ಸುಪ್ವಿ
ಕಾಲತ್ರಯದಲ್ಲಿ ದೂತನಂತೆ ತಿರುಗಿ ವಿ-
ಧಿ ತೋರದ ಸತ್ಕರ್ಮವಾವುದು ಅದು ಸುಪ್ವಿ ॥ ೮೯ ॥

ಜ್ಞಾತರಹಿತ ನಿರ್ಬೀಜ ಪಾಪವ ತಿಳಿಯೋ
ಮಾರ್ಗದೊಳು ಪೋಪ ಆತುರದಲ್ಲಿ ಸುಪ್ವಿ
ಆತುರದಲ್ಲಿ ಪೋಪಾಗ ಕ್ರಿಮಿಕೀಟ ಘಾತಕವು
ಘಾತಿಸಿದ ಪಾಪವೇ ಅಜ್ಞಾತ ನಿರ್ಬೀಜವು ಸುಪ್ವಿ ॥ ೯೦ ॥

ದೈಹಿಕ ದೇಶಿಕ ಕಾಲಿಕ ಸ್ವಾಭಾವಿಕ ಕರ್ಮದಲಿ
ವಿಹಿತಾವಿಹಿತವು ತಿಳಿದು ಆಚರಿಸುವುದು ಸುಪ್ವಿ
ಆಚರಿಸುವ ಕರ್ಮದೊಳು ಕರ್ಮಾಂತರ್ಗತನ ತಿಳಿದು ಸು-
ವಿಚಾರದಿಂದಲಿ ಫಲಯಾಚಿಸದಿರು ಸುಪ್ವಿ ॥ ೯೧ ॥

ಗುರುಭಕ್ತಿ ತಾರತಮ್ಯ ವಿಷ್ಣುವೈಷ್ಣವ ಜ್ಞಾನ
ನಿರುತ ಕರ್ಮಗಳು ವಿಧಿವಿಹಿತ ಸುಪ್ವಿ
ವಿಧಿವಿಹಿತ ಮಾರ್ಗದಲಿ ನಿಶ್ಚಲ ಮನದಿಂದೆ-
ಸಗಿ ನಿರ್ಮಮನಾಗಿರು ಕರ್ಮಫಲಗಳಲ್ಲಿ ಸುಪ್ವಿ ॥ ೯೨ ॥

ಭಿನ್ನಾಧಿಷ್ಠಾನದ ದಾರುಪಾಷಾಣದಲಿ ವಹ್ನಿ
ಭಿನ್ನವಿಲ್ಲದೆ ಎಂತು ಅಡಗಿರ್ಪುದು ಸುಪ್ವಿ
ಅಡಗಿರ್ಪದದರಂತೆ ಭಿನ್ನರಹಿತನಾಗಿ
ಶ್ರೀನಿಧಿ ಸರ್ವಾಂತರ್ಯಾಮಿ ಎನ್ನು ಸುಪ್ವಿ ॥ ೯೩ ॥

ಸೂಕ್ಷ್ಮ ಸ್ಥೂಲ ಸೃಷ್ಟಿಗೆ ಕಾರಣವೆರಡುಂಟು
ಸೂಕ್ಷ್ಮಸೃಷ್ಟಿಯು ಅನಿರುದ್ಧ ದೇಹದ ಪರಿಯಂತ್ರ ಸುವ್ವಿ
ದೇಹಕ್ಕೆ ಉಪಾದಾನ ಕಾರಣವು ಲಿಂಗದೇಹ ಸ್ಥೂಲ-
ದೇಹಕ್ಕೆ ಜಡಪ್ರಕೃತಿ ಅಜಾಂಡಾವರಣವೆನ್ನು ಸುವ್ವಿ ॥ ೧೪ ॥

ಕಾರ್ಯಗಳೇನೆಂಬೆ ಲಿಂಗೋಪಾದಾನ
ಕಾರ್ಯವು ಅನಿರುದ್ಧದೇಹವದರೊಳು ಇರುತಿರ್ಪುದು ಸುವ್ವಿ
ಇರುತಿರ್ಪ ದಿದಕೆ ಮೂಲ ಜಡಪ್ರಕೃತಿ ಉಪಾದಾನ-
ಕಾರ್ಯ ಬ್ರಹ್ಮಾಂಡದೊಳು ಕಾರ್ಯಗಳಹವು ಸುವ್ವಿ ॥ ೧೫ ॥

ಅನಾದಿಕರ್ಮದಂತೆ ದೇಹದ್ವಾರದಿ ಸಕಲ
ಪಾಪಪುಣ್ಯ ಭೋಗಕೆ ಕರ್ತೃ ಜೀವನು ಸುವ್ವಿ
ಕರ್ತ ಕಾರ್ಯ ಕಾರಣದಿ ಯಾವತ್ತರಲ್ಲಿ ಹರಿ
ಪತ್ನಿಯರೊಡಗೂಡಿ ಕ್ರೀಡಿಸುತಿರ್ಪನು ಸುವ್ವಿ ॥ ೧೬ ॥

ಪ್ರೇರ್ಯ ಪ್ರೇರಕನಾಗಿ ಸ್ವರೂಪಸ್ಥೂಲದೊಳಿದ್ದು ತ್ರಿವಿಧರ
ಯೋಗ್ಯತೆಯಂತೆ ಕ್ರಿಯವ ನಡೆಸುವ ಸುವ್ವಿ
ಕ್ರಿಯವ ಪ್ರೇರಿಸಿ ನಡೆಸಿ ಮಾಡಿ ಮಾಡಿಸುತಿರ್ಪ ತಿ-
ಳಿಯಗೊಡದೆ ಬಿಂಬಕ್ರಿಯವನೆಲ್ಲ ಹರಿಯು ಸುವ್ವಿ ॥ ೧೭ ॥

ಈಶ್ವರೇಚ್ಛಾ ಮೊದಲು ಆಚ್ಛಾದಿಕವು ಎರಡು
ಲಿಂಗ ಅವಿದ್ಯಾಕಾಯಕ ಎಂಬಿವೆ ತಿಳಿದು ಸುವ್ವಿ
ಎಂಬೋ ಏಳಾವರಣಗಳು ಜೀವನ ಮೇಲೆ
ಹಾಗು ಅನಾದಿಯಲ್ಲಿದ್ದು ಅಂತಸ್ಥೂಲದಿ ತೋರ್ಪವು ಸುವ್ವಿ
॥ ೧೮ ॥

ಕ್ಲೇಶ ದೇಹಗಳೆಲ್ಲಾ ನಾಶಗೈಸಲು ಬಲ್ಲ
ಶ್ರೀ ವೇಂಕಟೇಶಾಭಿನ್ನ ಉರಗಾದ್ರಿವಾಸವಿಠಲ ಸುವ್ವಿ
ಉರಗಾದ್ರಿವಾಸವಿಠಲ ಹರಿಸುವ ಸಂಕಟ
ಪಟಲ ಹೃತ್ಕಮಲಸ್ಥ ಶ್ರೀಲೋಲ ಭಕ್ತವತ್ಸಲ ಸುವ್ವಿ ॥ ೧೯ ॥

★ — ★

# ಶ್ರೀ ಚಕ್ರಾಬ್ಜಮಂಡಲದ ಸಂಕ್ಷಿಪ್ತ ಸೂಚಿ

- ಓಂ ಘೃಣಿ ಓಂ

- ತ್ರಿಕೋಣಾಕ್ಷಿ ಅಭಿಮಾನಿಗಳು  ಶ್ರೀ ಭೂ ದುರ್ಗಾ ಅಥವ ಕ್ರಿಯಾದಿಗಳು

- ಪರಮಾತ್ಮನ ರೂಪಗಳು  ವಿಷ್ಣು॥ ಶ್ರೀಂ ಇಚ್ಛಾಶಕ್ತಿಗೆ ಶ್ರೀದೇವೇರು
  ಕ್ಲೀಂ ಕ್ರಿಯಾಶಕ್ತಿಗೆ ಭೂದೇವೇರು
  ಹ್ರೀಂ ಜ್ಞಾನಶಕ್ತಿಗೆ ದುರ್ಗಾದೇವೇರು

4. ಬ್ರಹ್ಮಾಂತರ್ಗತ ವಿಷ್ಣು

5. ರುದ್ರಾಂತರ್ಗತ ವಿಷ್ಣು

ಮೂರುವಲಯದಲ್ಲಿ ಸೋಮ ಸೂರ್ಯ ಅಗ್ನಿ
ಉತ್ತರಾಯಣಮಾರ್ಗ  ಸೋಮ
ದಕ್ಷಿಣಾಯನಮಾರ್ಗ  ಸೂರ್ಯ
ವಿಷುವತ್ ಮಾರ್ಗ  ಅಗ್ನಿ

ರಾಶಿಗಳು ॥ ವೀಥಿತ್ರಯಗಳು
ಸಿಂಹ ಕನ್ಯಾ ವೃಶ್ಚಿಕ ತುಲಾ ಇವು ॥ದ॥ ರಥವೀಥಿ  ಸೂರ್ಯ
ಧನುಸ್ಸು ಮಕರ ಕುಂಭ ಮೀನ ॥ಉ॥ ಕರಿವೀಥಿ  ಸೋಮ
ಮೇಷ ವೃಷಭ ಮಿಥುನ ಕಟಕ ॥ವಿ॥ ಅಜವೀಥಿ  ಅಗ್ನಿ
ಷಡ್ದಳದ ವಿಚಾರ ॥ ಪರಮಾತ್ಮ ರೂಪ ॥

1ನೇ ದಳ ಪೂರ್ಣ ಜ್ಞಾನಾತ್ಮನೇ ನಮಃ ಅಲ್ಲಿ ಚೈತ್ರ ವೈಶಾಖ – ವಸಂತ ಋತು – ಪ್ರಭವಾದಿ ಧಾತುಸಂವತ್ಸರ ಪರಿಯಂತ ೧೦ ಸಂ॥ ಕೃತ್ತಿಕಾದಿ ಮೃಗಶಿರಪರ್ಯಂತ ಪಾದ ೧೮–ರಾಶಿ–ಮೇಷ ವೃಷಭ–1 ವಲಯದಿ ಅ ಕ ಚ ಮ । ಆ ಖ ಛ ಯ ॥ ಲ ॥ ಅ ॥

2ನೇ ದಳ ಪೂರ್ಣ ಐಶ್ವರ್ಯಾತ್ಮನೇ ನಮಃ–ಗ್ರೀಷ್ಮ ಋತು–ಈಶ್ವರಾದಿ ವ್ಯಯ ಸಂವತ್ಸರ ಪರ್ಯಂತ ೧೦ ಸಂ॥ ಮೃಗಶಿರಾದಿ ಆಶ್ಲೇಷ ಪರಿಯಂತ ಪಾದ ೧೮– ರಾಶಿ ಮಿಥುನ ಕಟಕ ॥ 2 ವಲಯದಿ ಇ ಗ ಜ ರ । ಈ ಘ ಶ ಲ ಉ ಊ ೧೦

[illegible] ಪ್ರಭಾತ್ಮನೇ ನಮಃ—ಶ್ರಾ॥ ವರ್ಷ ಋತು ಸರ್ವಜಿತು ದುರ್ಮು[illegible]
[illegible] ಪರ್ಯಂತ ೧೨ ಸಂ॥ ಮಘಾದಿ ಚಿತ್ರಾರ್ಧಂ ಪಾದ ॥ ೧೮
[illegible] ಕನ್ಯಾ ೩॥ ವಲಯಾದಿ ಟ ಥಾ ವ ಮ ಮೂ ಟ ದ ಶ [illegible]
[illegible]

[illegible] ಅನಂತಾತ್ಮನೇ ನಮಃ ಆಶ್ವಯುಜ ಕಾರ್ತೀಕ ಶರದೃತು
[illegible] ಪರಾಭವ ಸಂ॥ ೮ ॥ ೧೦—ಚಿತ್ರಾರ್ಧ ಅಶ್ವಿನ್ಯಾ ಜ್ಯೇಷ್ಠ[illegible]
[illegible] ಪಾದ ॥ ೧೮ ॥ ರಾಶಿ ತುಲಾ ವೃಶ್ಚಿಕ—4 ವಲಯಾದಿ ಪ ಥ [illegible]
[illegible] ॥

[illegible] ತೇಜಾತ್ಮನೇ ನಮಃ ಪ್ಲವಂಗಾದಿಗಳ ಪರಿಯಂತ ಸಂವತ್ಸ[illegible]
ಮಾರ್ಗಶೀರ್ಷ ಪುಷ್ಯ ॥ ಹಿಮವಂತ ಋತು ॥ ಮೂಲಾನಕ್ಷತ್ರ[illegible]
[illegible] ಪಾದ ॥ ೧೮ ॥ 5 ವಲಯಾದಿ ಓ ಝ [illegible]
[illegible] ರಾಶಿ ಮಕರ ಧನುಸ್ಸು

[illegible] ಶತ್ರಾತ್ಮನೇ ನಮಃ—ಮಾಘ ಫಾಲ್ಗುಣ—ಶಿಶಿರಋತು—ಪಂ[illegible]
[illegible] ಅಕ್ಷಯ ಪರಿಯಂತ ॥ ೧೦ ಸಂ ॥ ಧನಿಷ್ಠಾರ್ಧ ಆರಭ್ಯ ರೇವತಿ
[illegible] ಪಾದ ೧೮ ॥ ರಾಶಿ ಕುಂಭ ಮೀನ—6ನೆಯ ವಲಯಾದಿ ॥ [illegible]
[illegible] 7 ॥ ಆರುದಳಗಳಲ್ಲಿರುವ ಪರಮಾತ್ಮನ ರೂಪ ॥ವಿಷು

[illegible]ದಳದ ವಿಚಾರ ಪರಮಾತ್ಮನ ರೂಪಗಳು

[illegible] ಓಂ ವಿಶ್ವಾಯ ನಮಃ. ಗ್ರಹ—ಶನಿ

[illegible] ಅಕಾರ ಪ್ರತಿಪಾದ್ಯ ವಿಶ್ವ. ಅದರಿಂದಭಿವ್ಯಕ್ತ 16 ಸ್ವರಗಳ
[illegible] ಅನಂತ ವೇದಗಳು ಕಾಲ ॥ ಶ್ರೀಯೆ ತನ್ಮಾತ್ರ ॥ ಮುಖ್ಯ ಪ್ರಾಣ
[illegible] ॥

[illegible] ಓಂ ನಂ ತೈಜಸಾಯನಮಃ. ಗ್ರಹ ರಾಹು 2ನೆಯ ವಲಯ ಉಕಾ[illegible]
[illegible] ತೈಜಸಾಯನಮಃ ಉಕಾರದಿಂದ ಅಭಿವ್ಯಕ್ತ ಕ ಖ ಗ ಘ ಙ
[illegible] ಪೃಥ್ವೀ ಅಪ್ ತೇಜ ವಾಯು ಆಕಾಶ ॥
[illegible] ಪಂಚಭೂತಗಳ ಅಭಿಮಾನಿಗಳು—ಪೃಥಿವ್ಯೈನಮಃ — ವರುಣಾಯನಮಃ
ಅಗ್ನಯೇ ನಮಃ—ಪ್ರವಹ ವಾಯುವೇನಮಃ—ಗಣಪತಯೇನಮಃ

[illegible] ಓಂ ಪ್ರಾಜ್ಞಾಯನಮಃ. ಗ್ರಹ—ಗುರು

ವಲಯದಿ ಮಕಾರ ಪ್ರತಿಪಾದ್ಯ ಪ್ರಾಜ್ಞಾಯ ನಮಃ ಮಕಾರದಿಂದಭಿವ್ಯಕ್ತ ಚ ಛ ಜ ಝ ಞ. ಈ ವರ್ಗದಿಂದ ಜ್ಞಾನೇಂದ್ರಿಯ ಪಂಚಕಗಳು. ಘ್ರಾಣಾಭಿಮಾನಿ ಅಶ್ವಿನೀಭ್ಯಾಂನಮಃ. ಜಿಹ್ವೆ ವರುಣಾಯನಮಃ ಚಕ್ಷುಃ ಸೂರ್ಯಾಯ ನಮಃ ತ್ವಕ್ ಅಹಂಕಾರ ಪ್ರಾಣಾಯನಮಃ ಶ್ರೋತ್ರ ಚಂದ್ರ ದಿಗ್ದೇವಾಭ್ಯೋ ನಮಃ

ನೇ ದಳ ಓಂ ಓಂ ತುರ್ಯಾಯನಮಃ. ಗ್ರಹ–ಬುಧ 4 ನೆಯ ವಲಯದಿ ನಾದ ಪ್ರತಿಪಾದ್ಯ ತುರ್ಯಾಯನಮಃ. ನಾದದಿಂದ ಅಭಿವ್ಯಕ್ತ ಟ ಠ ಡ ಢ ಣ. ಈ ವರ್ಗದಿಂದ ಕರ್ಮೇಂದ್ರಿಯ ಪಂಚಕಗಳು

ಉಪಸ್ಥ – ಸ್ವಾಯಂಭುವ ಮನವೇ ನಮಃ

ಪಾದ – ಜಯಂತಾಯ ನಮಃ

ಪಾಣಿ – ದಕ್ಷಾಯ ನಮಃ

ಪಾಯು – ಮಿತ್ರಾಯ ನಮಃ

ವಾಕ್ಕು – ವಹ್ನಯೇ ನಮಃ

ನೇ ದಳ ಗ್ರಹ–ಶುಕ್ರ. ಓಂ ರಾಂ ಆತ್ಮನೇ ನಮಃ. 5 ನೆಯ ವಲಯದಿ ಬಿಂದು ಪ್ರತಿಪಾದ್ಯ ಆತ್ಮನೇನಮಃ. ಬಿಂದುವಿಂದಭಿವ್ಯಕ್ತ ತ ಥ ದ ಧ ನ ಈ ವರ್ಗದಿಂದ ಪಂಚ ತನ್ಮಾತ್ರಗಳು

ಗಂಧ – ಸಮಾನ ವಾಯುವೇನಮಃ

ರಸ – ಉದಾನ ವಾಯುವೇನಮಃ

ರೂಪ – ವ್ಯಾನವಾಯುವೇನಮಃ

ಸ್ಪರ್ಶ – ಅಪಾನವಾಯುವೇನಮಃ

ಶಬ್ದ – ಬೃಹಸ್ಪತಿ–ಪ್ರಾಣಾಭ್ಯಾಂನಮಃ

ನೇ ದಳ ಗ್ರಹ – ಚಂದ್ರ, ಓಂ ಯಾಂ ಅಂತರಾತ್ಮನೇ ನಮಃ. 6 ನೇ ವಲಯದಿ ಘೋಷ ಪ್ರತಿಪಾದ್ಯ ಅಂತರಾತ್ಮನೇ ನಮಃ ಘೋಷದಿಂದ ಅಭಿವ್ಯಕ್ತ ಪ ಫ ಬ ಭ ಮ ಈ ವರ್ಗದಿಂದಭಿವ್ಯಕ್ತ ಪಂಚಮನೋವೃತ್ತಿಗಳು

ಅಹಂಕಾರ – ರುದ್ರಾಯನಮಃ, ಚಿತ್ತ – ಗರುಡಾಯನಮಃ

ಬುದ್ಧಿ – ಉಮಾಯೈನಮಃ ಮನಸ್ಸು – ಇಂದ್ರ ಕಾಮಾಭ್ಯಾಂನಮಃ

ಚೇತನ – ಶೇಷಾಯನಮಃ

7 ನೇ ದಳ ಗ್ರಹ – ಅಂಗಾರಕ, ಓಂ ಘಂ ಪರಮಾತ್ಮನೇ ನಮಃ 7 ನೆ ವಲಯ
ಶಾಂತಪ್ರತಿಪಾದ್ಯ ಪರಮಾತ್ಮನೇ ನಮಃ ॥ ಶಾಂತದಿಂದ ಅಭಿವ್ಯ
ಯಕಾರಾದಿ ಸಪ್ತ ವರ್ಣಗಳು ಯ ರ ಲ ವ ಶ ಷ ಸ – ಯಜ್ಞ – ತ್ವ
ರಾಮಾಯನಮಃ–ಚರ್ಮಕ್ಕೆ ಲಕ್ಷ್ಮೀಪತಯೇನಮಃ–ಮಾಂಸೇ ವರಾಹಾ
ನಮಃ – ರುಧಿರೇ ಶಾಂತ ಸಂವಿದೇನಮಃ - ಮೇಧಸೆ ಷಡ್ಗುಣಾಯನವ
ಮಜ್ಜೇಸಾರಾತ್ಮನೇ ನಮಃ.

8 ನೇ ದಳ ಗ್ರಹ–ಕೇತು ಓಂ ಯಂ ಜ್ಞಾನಾತ್ಮನೇ ನಮಃ ॥ 8 ನೇ ವಲಯ
ಅತಿಶಾಂತ ಪ್ರತಿಪಾದ್ಯ ಜ್ಞಾನಾತ್ಮನೇನಮಃ. ಅತಿಶಾಂತದಿಂದಭಿವ್ಯ
ಹ ಳ ಕ್ಷ ಇದರಿಂದ ಗುಣ ತ್ರಯಗಳು. ಸತ್ವ ಕರ್ಮ ಜಾಗ್ರತಾವಸ್ಥೆ
ವಿಶ್ವಾಯ ನಮಃ. ರಜಕರ್ಮ ಸ್ವಪ್ನಾವಸ್ಥೆ–ತೈಜಸಾಯನಮಃ. ತಮಃಕ
ಸುಷುಪ್ತಾವಸ್ಥೆ ಪ್ರಾಜ್ಞಾಯನಮಃ.

## 12 ನೇ ದಳದ ವಿಚಾರ

1 ನೇ ದಳ ಓಂ ಓಂ ಕೇಶವಾಯ ನಮಃ. ಅ ಳ ಡ ಮ-ರಾಶಿ-ಮೇಷ 1 ನೆಯ
ಯದಿ ಅಶ್ವಿನಿ ಭರಣಿ ಕೃತ್ತಿಕಾ ಪಾದಂ ಯೋಗ-ವಿಷ್ಕಂಭ, ಸೌಭಾಗ್ಯ ಪ್ರೀ
4, ಆಯುಷ್ಮಾನ್

2 ನೇ ದಳ ಓಂ ನಂ ನಾರಾಯಣಾಯ ನಮಃ ಇ ಬ ಡ ಯ ರಾಶಿ – ವೃಷ
2 ನೇ ವಲಯದಿ ಕೃತ್ತಿಕಾಶ್ರಯೋಪಾದಂ ರೋಹಿಣೀ ಮೃಗಶಿರಾರ್ಧ
ವೃಷಭ ಆಯುಷ್ಮಾನ್ 3 ಸೌಭಾಗ್ಯ 4 ಶೋಭನ 2

3 ನೇ ದಳ ಓಂ ಓಂ ಮಾಧವಾಯ ನಮಃ ರಾಶಿ–ಮಿಥುನ.
3 ನೇ ವಲಯದಿ ಮೃಗಶಿರಾರ್ಧ ಪುನರ್ವಸು ತ್ರಯೋಪಾದಂ ಮಿಥುನ ಶೋಭನ
ಅತಿಗಂಡ 4 ಸುಕರ್ಮ 3

4 ನೇ ದಳ ಓಂ ಭಂ ಗೋವಿಂದಾಯ ನಮಃ. ರಾಶಿ-ಕಟಕ. ಅಕ್ಷರ ಈ ಫ ತ
4 ನೇ ವಲಯದಿ ಪುನರ್ವಸು ಪುಷ್ಯ ಆಶ್ಲೇಷಾ ಪಾದ ಪರಿಯಂತಂ ಕಕಾ
ಸುಕರ್ಮ 1 ಧೃವ 4 ಶೂಲ 4

5 ನೇ ದಳ ಓಂ ಗಂ ವಿಷ್ಣುವೇ ನಮಃ. ರಾಶಿ-ಸಿಂಹ. ಅಕ್ಷರ ಉ ಊ ಣ ಧ ವ.
5 ನೆಯ ವಲಯದಿ ಮಘ ಪುಬ್ಬ ಉತ್ತರ ಪಾದಂ ಸಿಂಹರಾಶಿ ಯೋಗ ಗ
ವೃದಿ 4 ಧ್ರುವ 1

ನೇ ದಳ ಓಂ ವಂ ಮಧುಸೂಧನಾಯ ನಮಃ. ರಾಶಿ ಕನ್ಯ ಅಕ್ಷರ.
ಪು ಷ ಣ ಠ ಪೆ.

ನೆಯ ವಲಯದಿ ಉತ್ತರಾಸ್ತ್ರಯೋಃಪಾದಂ ಹಸ್ತ ಚಿತ್ರಾರ್ಧಂ ರಾಶಿ ಕನ್ಯಾ
ಯೋಗ ಧೃವ 3 ವ್ಯಾಘಾತ 4 ಹರ್ಷ 3

ನೇ ದಳ ಓಂ ಕ್ಲೀಂ ತ್ರಿವಿಕ್ರಮಾಯ ನಮಃ. ರಾಶಿ-ತುಲಾ. ಇ ಥ ದಪ

ನೆಯ ವಲಯದಿ ಚಿತ್ರಾರ್ಧಂ ಸ್ವಾತಿ ವಿಶಾಖಾಸ್ತ್ರಯೋಃಪಾದಂ ತುಲಾ ಹರ್ಷ 2
ವಜ್ರ 4 ಸಿದ್ಧಿ 3

ನೇ ದಳ ಓಂ ವಾಂ ವಾಮನಾಯನಮಃ. ರಾಶಿ–ವೃಶ್ಚಿಕ. ಎ ಐ ಜ ನ ಸ

ನೆಯ ವಲಯದ ವಿಶಾಖ ಪಾದಂ ಅನೂರಾಧ ಜ್ಯೇಷ್ಠಾಂತಂ ವೃಶ್ಚಿಕ ಸಿದ್ಧಿ ೧
ವ್ಯತೀಪಾತ 4 ವರಿಯಾನ್ 4

ನೇ ದಳ ಓಂ ಖಂ ಶ್ರೀಧರಾಯ ನಮಃ. ರಾಶಿ–ಧನುಸ್ಸು. ಅಕ್ಷರ ಓ ಜ ಧ ಹ

ನೆಯ ವಲಯದಿ ಮೂಲ ಪೂರ್ವಾಷಾಢ ಉತ್ತರಾಷಾಢ ಪಾದ ಧನುಸ್ಸು
ಪರಿಘ 4 ಶಿವ । ಸಿದ್ಧ 1.

10 ನೇ ದಳ ಓಂ ದೇಂ ಹೃಷೀಕೇಶಾಯನಮಃ. ರಾಶಿ–ಮಕರ. ಅಕ್ಷರ ಓ ಜಾ ಖ ಳ.

10 ನೆಯ ವಲಯದಿ ಉತ್ತರಾಷಾಢ ಸ್ತ್ರಯೋಃಪಾದಂ ಮಕರ ಸಿದ್ಧ 2 ಸಾಧ್ಯ 4
ಶುಭ 2

11 ನೇ ದಳ ಓಂ ಪಾಂ ಪದ್ಮನಾಭಾಯನಮಃ. ರಾಶಿ–ಕುಂಭ. ಅಕ್ಷರ ಅಂ ಟ
ಥ ಕ್ಷ

11 ನೆಯ ವಲಯದಿ ಧನಿಷ್ಠಾರ್ಧಂ ಶತತಾರ ಪೂರ್ವಾಭಾದ್ರ ಸ್ತ್ರಯೋಃಪಾದಂ
ಕುಂಭ ಶುಭ 2 ಶುಕ್ಲ 4 ಬ್ರಹ್ಮ 2.

12 ನೇ ದಳ ಓಂ ಯಂ ದಾಮೋದರಾಯ ನಮಃ ರಾಶಿ–ಮೀನ. ಅಕ್ಷರ ಅಃ ಠ ಥ.

12 ನೆಯ ವಲಯದಿ ಪೂರ್ವಾಭಾದ್ರಪದ ಪಾದಂ ಉತ್ತರಾಭಾದ್ರ ಪದ ರೇವ
ತ್ಯಂತಂ ಮೀನ ಬ್ರಹ್ಮ 1 ಐಂದ್ರ 4 ವೈಧೃತಿ 4.

24 ಗಳದ ನಿಚಾಳ ಭಗವದ್ರೂಪಗಳು

| | ನಕ್ಷತ್ರ | ರಾಶಿ |
|---|---|---|
| ಓಂ ಕೇಶವಾಯನಮಃ ಓಂ ॥ ॥ | 1 ಅಶ್ವಿನಿ | |
| ಓಂ ನಾರಾಯಣಾಯನಮಃ ಓಂ ॥ಕ್ಷ॥ | 2 ಭರಣಿ | ಮೇಷ |

| | | |
|---|---|---|
| ಓಂ ಮಾಧವಾಯ ನಮಃ ಓಂ ॥ವಿ॥ | 3 ಕೃತ್ತಿಕಾ | |
| ಓಂ ಗೋವಿಂದಾಯನಮಃ ಓಂ ॥ತು॥ | 4 ರೋಹಿಣಿ | ವೃಷಭ |
| ಓಂ ವಿಷ್ಣವೇನಮಃ ಓಂ ॥ವ॥ | 5 ಮೃಗಶಿರಾ 6 ಆರಿದ್ರ, | ಮಿಥುನ |
| ಓಂ ಮಧುಸೂದನಾಯನಮಃ ಓಂ ॥ರೇ॥ | 7 ಪುನರ್ವಸು | |
| ಓಂ ತ್ರಿವಿಕ್ರಮಾಯನಮಃ ಓಂ ॥ಣಿ॥ | 8 ಪುಷ್ಯ | |
| ಓಂ ವಾಮನಾಯನಮಃ ಓಂ ॥ಯಂ॥ | 9 ಆಶ್ಲೇಷ | ಕರ್ಕಾಟಕ |
| ಓಂ ಶ್ರೀಧರಾಯನಮಃ ಓಂ ॥ಭ॥ | 10 ಮಘ | |
| ಓಂ ಹೃಷೀಕೇಶಾಯನಮಃ ಓಂ ॥ರ್ಗೋ॥ | 11 ಪುಬ್ಬ | ಸಿಂಹ |
| ಓಂ ಪದ್ಮನಾಭಾಯನಮಃ ಓಂ ॥ದೇ॥ | 12 ಉತ್ತರ | |
| ಓಂ ದಾಮೋದರಾಯನಮಃ ಓಂ ॥ವ॥ | 13 ಹಸ್ತ | ಕನ್ಯಾ |
| ಓಂ ಸಂಕರ್ಷಣಾಯನಮಃ ಓಂ ॥ಸ್ಯ॥ | 14 ಚಿತ್ತ | |
| ಓಂ ವಾಸುದೇವಾಯನಮಃ ಓಂ ॥ಧೀ॥ | 15 ಸ್ವಾತಿ | ತುಲಾ |
| ಓಂ ಪ್ರದ್ಯುಮ್ನಾಯನಮಃ ಓಂ ॥ಮ॥ | 16 ವಿಶಾಖ | |
| ಓಂ ಅನಿರುದ್ಧಾಯನಮಃ ಓಂ ॥ಹಿ॥ | 17 ಅನೂರಾಧ | |
| ಓಂ ಪುರುಷೋತ್ತಮಾಯನಮಃ ಓಂ ॥ಧಿ॥ | 18 ಜ್ಯೇಷ್ಠ | ವೃಶ್ಚಿಕ |
| ಓಂ ಅಧೋಕ್ಷಜಾಯನಮಃ ಓಂ ॥ಯೋ॥ | 19 ಮೂಲ | |
| ಓಂ ನಾರಸಿಂಹಾಯನಮಃ ಓಂ ॥ಯೋ॥ | 20 ಪೂರ್ವಾಷಾಢ | |
| ಓಂ ಅಚ್ಯುತಾಯನಮಃ ಓಂ ॥ನಃ॥ | 21 ಉತ್ತರಾಷಾಢ | ಧನುಸ್ಸು |
| ಓಂ ಜನಾರ್ದನಾಯನಮಃ ಓಂ ॥ಪ್ರ॥ | 22 ಶ್ರವಣ | |
| ಓಂ ಉಪೇಂದ್ರಾಯನಮಃ ಓಂ ॥ಚೋ॥ | 23 ಧನಿಷ್ಠ | ಮಕರ |
| ಓಂ ಹರಯೇನಮಃ ಓಂ ॥ದ॥ | 24 ಶತಭಿಷ 25 ಪೂರ್ವಾಭಾದ್ರ, | ಕುಂಭ |
| ಓಂ ಶ್ರೀಕೃಷ್ಣಾಯನಮಃ ಓಂ ॥ಯಾತ್॥ | 26 ಉತ್ತರಾಭಾದ್ರ, 27 ರೇವತಿ, | ಮೀನ |

51 ದಳದ ವಿಚಾರ ಭಗವದ್ರೂಪಗಳು

| | |
|---|---|
| ಓಂ ಅಂ ಅಜಾಯನಮಃ | ಶಿರಸಿ |
| ಓಂ ಆಂ ಆನಂದಾಯನಮಃ | ಮುಖೇ |
| ಓಂ ಇಂ ಇಂದ್ರಾಯನಮಃ | ದಕ್ಷಿಣನೇತ್ರೇ |
| ಓಂ ಈಂ ಈಶಾನಾಯನಮಃ | ವಾಮನೇತ್ರೇ |
| ಓಂ ಉಂ ಉಗ್ರಾಯನಮಃ | ದಕ್ಷಿಣಕರ್ಣೇ |

ಓಂ ಊಂ ಊಹಾರ್ಯಾಯನಮಃ — ವಾಮಕರ್ಣೇ
ಓಂ ಋಂ ಋತಂಬರಾಯನಮಃ — ದಕ್ಷಿಣನಾಸೆ
ಓಂ ೠಂ ೠಘಾಯನಮಃ — ವಾಮನಾಸೆ
ಓಂ ಌಂ ಌಸಾಯನಮಃ — ದಕ್ಷಿಣಗಂಡೆ
ಓಂ ೡಂ ೡಜಾಯನಮಃ — ವಾಮಗಂಡೆ
ಓಂ ಏಂ ಏಕಾತ್ಮನೇನಮಃ — ಊರ್ಧ್ವೋಷ್ಠೇ
ಓಂ ಐಂ ಐರಸಾಯನಮಃ — ಅಧರೋಷ್ಠೆ
ಓಂ ಓಂ ಓಜೋಭೃತೇನಮಃ — ಊರ್ಧ್ವದಂತಪಂಕ್ತೌ
ಓಂ ಔಂ ಔರಸಾಯನಮಃ — ಅಧರದಂತ ಪಂಕ್ತೌ
ಓಂ ಅಂ ಅನಂತಾಯನಮಃ — ಮುಖಾಂತರ ಮೂರ್ಧ್ನಿ
ಓಂ ಅಃ ಅರ್ಧಗರ್ಭಾಯನಮಃ — ವಾಚಿ
ಓಂ ಕಂ ಕಪಿಲಾಯನಮಃ — ದಕ್ಷಿಣಬಾಹು ಸಂಧಿಷು
ಓಂ ಖಂ ಖಪತಯೇನಮಃ
ಓಂ ಗಂ ಗರುಡಾಯನಮಃ
ಓಂ ಘಂ ಘವರ್ಮಾಯನಮಃ
ಓಂ ಙಂ ಙಾಸಾರಾಯನಮಃ
ಓಂ ಚಂ ಚಾಮಾರ್ಗಂಗಾಯನಮಃ — ವಾಮಬಾಹು-ಸಂಧಿಷು
ಓಂ ಛಂ ಛಂದೋಗಮ್ಯಾಯನಮಃ
ಓಂ ಜಂ ಜನಾರ್ದನಾಯನಮಃ
ಓಂ ಝಂ ಝಟಿಕಾರಾಯನಮಃ
ಓಂ ಞಂ ಞಮಾಯನಮಃ
ಓಂ ಟಂ ಟಂಕಿನೇನಮಃ — ದಕ್ಷಿಣಪಾದದಿಂದ ತೊಡೆವರೆಗೆ
ಓಂ ಠಂ ಠರಲಾಯನಮಃ
ಓಂ ಡಂ ಡರಲಾಯನಮಃ
ಓಂ ಢಂ ಢರಲಾಯನಮಃ
ಓಂ ಣಂ ಣಾತ್ಮನೇನಮಃ
ಓಂ ತಂ ತಾರಾಯನಮಃ — ಎಡಪಾದದಿಂದ
ಓಂ ಥಂ ಥವಾನಮಃ
ಓಂ ದಂ ದಂಡಿನೇನಮಃ
ಓಂ ಧಂ ಧನ್ವಿನೇನಮಃ

| | |
|---|---|
| ನಂ ನಮ್ರಾಯನಮಃ | |
| ಪಂ ಪರಾಯನಮಃ | ದಕ್ಷಿಣಪಾರ್ಶ್ವೇ |
| ಫಂ ಫಲಿನೇನಮಃ | ವಾಮಪಾರ್ಶ್ವೇ |
| ಬಂ ಬಲಿನೇನಮಃ | ಪೃಷ್ಠೇ |
| ಭಂ ಭಗಾಯನಮಃ | ಗುಹ್ಯೇ |
| ಮಂ ಮನವೇನಮಃ | ತುಂಡಿ |
| ಯಂ ಯಜ್ಞಾಯನಮಃ | ತ್ವಕಿ |
| ರಂ ರಾಮಾಯನಮಃ | ಹೃದಿ |
| ಲಂ ಲಕ್ಷ್ಮೀಪತಯೇನಮಃ | ಚರ್ಮಣಿ |
| ವಂ ವರಾಹಾಯನಮಃ | ಮಾಂಸೇ |
| ಶಂ ಶೇಷಾಯನಮಃ | ರುಧಿರೇ ಶಾಂತಸಂಪಿತೇ |
| ಷಂ ಷಡ್ಗುಣಾತ್ಮನೇನಮಃ | ಮೇಧಸಿ |
| ಸಂ ಸಾರಾತ್ಮನೇನಮಃ | ಮಜ್ಜಾಯಾಂ |
| ಹಂ ಹಂಸಾಯನಮಃ | ಅಸ್ಥಿಷು |
| ಳಂ ಳಾಳಕಾಯನಮಃ | ಪ್ರಾಣೇ |
| ಕ್ಷಂ ಶ್ರೀಲಕ್ಷ್ಮೀನರಸಿಂಹಾಯನಮಃ | ಜೀವೇ. |

ಶೂನ್ಯನಾಮಕ ಶ್ರೀಮನ್ನಾರಾಯಣಾಭಿನ್ನ

ಉರಗಾದ್ರಿವಾಸ ವಿಠಲಾಯ ನಮಃ

ಶ್ರೀ ಗುರುಭ್ಯೋ ನಮಃ

ದಾಸೋಽಹಂ

# ಸೊನ್ನೆ ಮಹಾತ್ಮ್ಯೆ

ಅಪರಿಚ್ಛಿನ್ನ ವ್ಯಾಪ್ತರೂಪಿ ನಾರಾಯಣನು ಮಹಾಪ್ರಳಯದಲ್ಲಿ ಸಕಲ ಚರಾಚರ ಪ್ರಪಂಚವನ್ನು ಲಯಗೊಳಿಸಿ ಸೂಕ್ಷ್ಮರೂಪದಿಂದ ತನ್ನೊಳಗಿಟ್ಟುಕೊಂಡು ಶೂನ್ಯನಾಮಕನಾಗಿ, ಸರ್ವರಿಗೂ ಬಿಂಬನಾಗಿ ಸಾನಂದದಿಂದಿರುವನು

ಸೃಷ್ಟಿಗೆ ಎಳೆಸಿದಾಗ ಸರ್ವರಿಗೂ ಅದರದರ ಆಕಾರಕ್ಕೆ ಸ್ಥೂಲತ್ವ ಕೊಟ್ಟು ಕಾರ್ಯ ಅಭಿವ್ಯಕ್ತಿಗೊಳಿಸುವನು. ಅದರಂತೆ ನನ್ನ ಬಿಂಬನಾದ ಶೂನ್ಯನಾಮಕ ಸ್ವಾಮಿಯಂತೆ ಪ್ರತಿಬಿಂಬನಾಗಿ ಸೊನ್ನೆಯಾಗಿರುವೆನು.

ಓಂಕಾರವು ಸಮಸ್ತ ವೇದಶಾಸ್ತ್ರ ಪುರಾಣ ಪ್ರತಿಪಾದ್ಯನ ಗುಣಗಳನ್ನೆಲ್ಲ ವ್ಯಾಪ್ತಿಗಿರುವುದು. ಓಂಕಾರಕ್ಕೆ ಕಾರಣವಾದ ಅಂಶಗಳಲ್ಲಿ ಅ, ಉ, ಮ, ನಾದ, ಬಿಂದು, ಘೋಷ, ಶಾಂತ, ಅತಿಶಾಂತ ಎಂಬ ಎಂಟು ಅಂಶಗಳಲ್ಲಿ ಬಿಂದುವೆಂಬುವುದು ಪಂಚಸ್ಥಾನದಲ್ಲಿದ್ದು ಆತ್ಮನೆಂಬ ರೂಪದಿಂದ ವಿಶ್ವಾದಿಗಳಲ್ಲಿ ಬಿಂದುವಿನಲ್ಲಿದ್ದು ಸೊನ್ನೆಯನ್ನು (ಬಿಂದು) ಮುಂದೆ ಮಾಡಿಕೊಂಡು ಅ.ಉ.ಮ. ಕ್ಕೆ (ಓಂ) ಎಂಬ ಉಚ್ಚಾರದಿಂದ ಪ್ರಾಶಸ್ತ್ಯಗೊಂಡಿರುವುದು.

“ಅಕಾರೋಽಸರ್ವವಾಕ್” ಎಂಬಂತೆ ಅಕ್ಷರಗಳಲ್ಲಿ ಅಕಾರವಾಚ್ಯನಾಗಿ ಸರ್ವರಿಗೂ ಕಾರಣವಾಗಿರುವುದರಿಂದಲೂ “ಅತಿಶಾಂತಸ್ಥ” ‘ಹ’ ಕಾರದ ಮುಂದೆ ಬಿಂದುವನ್ನು ಮುಂದೆ ಮಾಡಿ “ಅಹಂ” ಎಂದು ಅಹೇಯ ತ್ವಾದಹಂ” ಎಂಬುದಾಗಿ ಪರಮಾತ್ಮವಾಚಕವಾಗಿರುವುದು. ಅಂಥಾ “ಅಹಂ” ಎಂಬ ಶ್ರೀಹರಿಗೆ ಪ್ರತಿಬಿಂಬನಾದ ಜೀವನು “ಅಹಂ” ಎಂದು ಸ್ವಾತಂತ್ರಿಸಿ ಹೇಳುವುದು ಅಯುಕ್ತವು.

ಆದ್ದರಿಂದ ಬಿಂದುವಿನ ಅಂತಸ್ಥನಾದ ಆತ್ಮನಿಂದ ಅಭಿವ್ಯಕ್ತಿಸಲ್ಪಟ್ಟ “ಪ” “ಸ” “ಶ” ವರ್ಣಗಳು ಅತಿ ಶಾಂತಸ್ಥವಾಗಿ ಜ್ಞಾನಾತ್ಮನನ್ನು ಪ್ರತಿಪಾದಿಸುವು

... ಭಾವದಿಂದ "ಅಹಂ" ಎಂಬುದಕ್ಕೆ ಬದಲು ಜೀವನು "ದಾಸೋಽಹಂ" ... ಭಾವನೆ ಕಡೆಗೊಳ್ಳದೆ ಸಫಲಸಾಧನೆ ಆಗುವುದು.

... ಗೂಢವಾದ ಅಭಿಪ್ರಾಯ ಸದ್ಗುರುಗಳ ಅನುಗ್ರಹವಿಲ್ಲದೆ ತಿಳಿಯದು. ... ಎಂಬ ಮಾತು ಮುಕ್ತಿಯನ್ನು ಅಲ್ಲದೆ ಅನುಕ್ತ ದಶೆಯಲ್ಲಿ ಉಪಯೋಗ ...—ವಿಜ್ಞರು ಕ್ಷಮಿಸಬೇಕು.

ನಾನು ಅಜ್ಞಾನಿ ಸೊನ್ನೆ ಎಂದು ಹೇಳಿಕೊಳ್ಳುವೆ—ಎಂದು ಹೇಳಿಕೊಳ್ಳಲು ... ಜೀವನಾಗಿ ನನಗೆ ಸ್ವರೂಪದಲ್ಲಿ ಯಾವ ನಾಮವೂ ಇಲ್ಲದ್ದರಿಂದಲೂ ಈ ... ದೇಹದಲ್ಲಿದ್ದು ವ್ಯವಹಾರದಲ್ಲಿ ಉಪಯೋಗಿಸುವ ಜನ್ಮದಾತೃಗಳು ...ದಿಂದ ಕರೆಯುವ ಹೆಸರನ್ನು ಹೇಳಿಕೊಳ್ಳಲು ಶಕ್ತಿ ಇಲ್ಲವಾಗಿದೆ.

ಇತಿ ಹರಿದಾಸರ ದಾಸರ ದಾಸರ ಪಾದ ಸೇವಕ—ಅಜ್ಞಾನಿಯಾದ
ನನ್ನ ವಿಜ್ಞಾಪನೆಗಳು

## ಪ್ರಥಮ ಪ್ರಕರಣ

# ಸೊನ್ನೆಯ ಮೂಲತತ್ವ

ಸೊನ್ನೆ ಎಂದರೆ ಜಗತ್ತಿನಲ್ಲಿ ಎಲ್ಲರೂ ಕನಿಷ್ಠವನ್ನಾಗಿಯೂ, ಏನೂ ಇಲ್ಲದ ವಸ್ತುವೆಂಬುದಾಗಿಯೂ ಭಾವಿಸುವುದು ಸ್ವಾಭಾವಿಕವಾಗಿದೆಯಷ್ಟೆ? ಆದರೆ ಸೊನ್ನೆಯನ್ನು ಚೆನ್ನಾಗಿ ಪರ್ಯಾಲೋಚಿಸಿದರೆ, ಮೂಲ ರೂಪಿಯಾಗಿ ಪ್ರಕೃತಿ ಪುರುಷ ನಿರ್ಮಿತ ಪರಮಾತ್ಮನ ಮಹಿಮೆ ಪ್ರದರ್ಶನೆಗೆ ಸಾಧ್ಯವೆಂದು ತಿಳಿಯುವುದು

ಸೊನ್ನೆ ಏನೂ ಇಲ್ಲದ ವಸ್ತುವೆಂದರೆ ಅಷ್ಟೈಶ್ವರ್ಯವಂತನಾದ ನಿರಾಕಾರ ನಿರ್ಗುಣ ನಿಷ್ಕ್ರಿಯ ನಿರ್ನಾಮವಸ್ತುವಲ್ಲ. ನಾಮ ರೂಪ ಕ್ರಿಯ ಗುಣಾದಿಗಳು ಸೊನ್ನೆಗೆ ಉಂಟು. ಸೊನ್ನೆಯ ನಾಮಗಳು ಅಥವಾ ಪರ್ಯಾಯ ಪದಗಳು ಯಾವುವೆಂದರೆ—ಸೊನ್ನೆ, ಬಿಂದು, ವರ್ತುಲ, ಬಿಂಬ ಎಂಬುದಾಗಿ ಗುಂಡಾದ ಆಕೃತಿಯಾಗಿಯೂ, ವರ್ಣಗಳಿಗೂ ಸಂಖ್ಯೆಗಳಿಗೂ ಕೂಡಿ ಕಾರ್ಯಾನುಕೂಲವಾಗುವುದು. ಅಂದರೆ ವರ್ಣಗಳ ಉಚ್ಚಾರಣೆಗೂ, ಸಂಖ್ಯೆಗಳ ವೃದ್ಧಿ ಹ್ರಾಸಗಳಿಗೂ ಕಾರಣವಾಗಿ ತನ್ನ ರೂಪವನ್ನು ಎಷ್ಟು ಮುಂದು ಮಾಡಿ ಬೆಳೆಸಿದರೆ ಅಷ್ಟು ಸಂಖ್ಯೆಗಳಿಗೆ ಗೌರವವನ್ನೂ ಅಭಿವೃದ್ಧಿಯನ್ನೂ ಕೊಟ್ಟು ತನ್ನ ಮಹಿಮೆಯನ್ನು ತೋರಿಸದೆ ಗುಪ್ತವಾಗಿ ಏನೂ ಪ್ರಯೋಜನವಿಲ್ಲದಂತಿದ್ದು ತನ್ನನ್ನು ಮುಂದಾಳಾಗಿ ನಿಲ್ಲಿಸಿ ಅಂಕೆಗಳನ್ನು

ಉತ್ಕ್ರಮಿಸಿದ ಬಳಿಕ [illegible] ಪ್ರಸನ್ನನಾಗಿ ಶ್ರೀಬ್ರಹ್ಮದೇವನು [illegible] ಇರುವನು. ಆ ದೇವನು ತನ್ನಾದ್ಯಂತ ಕಾಲಗಳಲ್ಲಿ [illegible] ವೇದ ರಾಶಿಗಳನ್ನು ಪುನಃ ಉದ್ಧರಿಸಿಕೊಂಡು ನಿತ್ಯನಾಗಿರುತ್ತಾನೆ. ಸಕಲ ವೇದರಾಶಿಗಳು ಸೊನ್ನೆಯಿಂದಲೇ ಉತ್ಪನ್ನವಾಗುತ್ತವೆ. ಈ ಪ್ರಪಂಚಕ್ಕೆ [illegible] ಮೂಲವಾಗಿ ಇದ್ದುದರಿಂದಲೂ, ಪ್ರಪಂಚವು [illegible] ಕೊನೆಗೆ [illegible] ವಸ್ತುವು ಸೊನ್ನೆಯೇ ಆಗುತ್ತದೆ.

ಸೊನ್ನೆ ಎಂದರೆ ಶೂನ್ಯ ಎಂತಲೂ ಅರ್ಥವಿದ್ದು, ಆ ಸೊನ್ನೆಯು ಬ್ರಹ್ಮ ಸ್ವರೂಪವುಳ್ಳ ಪರಮಾತ್ಮನು ಜಗದಾಕಾರ ತತ್ತ್ವಕ್ಕೆ ಸಾಕ್ಷ್ಯವಾಗಿ ಮಾಯಾ [illegible] ಶೂನ್ಯವೆಂಬ ಅಭಿಧಾನದಿಂದ ಪ್ರಳಯಕಾಲದಲ್ಲಿ ಸಕಲ ಚರಾಚರಗಳನ್ನು ತನ್ನಲ್ಲಿ ಲಯಿಸಿಕೊಂಡು ಪುನಃ ಸೃಷ್ಟಿಕಾಲಕ್ಕೆ ಸೃಷ್ಟಿಗಾಧಾರವಾದ ಬೀಜಗಳಿಗೆ [illegible] ವನ್ನು ಕೊಡುವನು, ಸೊನ್ನೆಗೂ [illegible] ಕೊಟ್ಟು ಸೊನ್ನೆಯನ್ನು ಮುಂದಿಟ್ಟುಕೊಂಡು ಸಕಲ ವೇದ ರಾಶಿಗಳನ್ನು [illegible] ಪುತ್ರನಾದ ಬ್ರಹ್ಮನಿಗೆ ಉಪದೇಶಮಾಡಿದನು. ಅದ್ದರಿಂದ ಸಕಲ ವೇದಗಳಿಗೂ ಮೂಲಾಧಾರ [illegible] ಸೊನ್ನೆಯೇ ಆಯಿತು.

ಹೇಗೆಂದರೆ ಉಪನಿಷತ್ತುಗಳಿಗೆ ಮೂಲಮಂತ್ರವಾದ ಪ್ರಣವವು ಓಂಕಾರವು. ಈ ಓಂಕಾರವು ಅ, ಉ, ಮ, ನಾದ, ಬಿಂದು, ಘೋಷ, ಶಾಂತ ಮತ್ತು ಅತಿಶಾಂತ ಎಂಬುದಾಗಿ ಉಳ್ಳ ಎಂಟು ಭಾಗಗಳಲ್ಲಿ ಬಿಂದು ಎಂಬುದು [illegible] ಸೊನ್ನೆಯಾಯಿತು. ಈ ಬಿಂದು ಸೇರದ ಹೊರತು ಅ, ಉ, ಮಕಾರಗಳು [illegible] ವಾದ ಸ್ವರೂಪದಿಂದ ಘೋಷಿಸಲು ಶಕ್ತಿ ಉಳ್ಳದ್ದಾಗುವುದಿಲ್ಲ. ಹೇಗೆಂದರೆ [illegible]: ಅಕ್ಷರಗಳು ಎಂಬ ಪಾತ್ರೆ ಇದ್ದರೂ [illegible] ಎಲ್ಲಿವರೆಗೆ [illegible] ಕಾರ್ಯಕಾರಿಯಾಗುವುದಿಲ್ಲವೋ ಹಾಗೆಯೇ ಈ ಬಿಂದುವು ಅ ಉ ಮ [illegible] ಮೂರು ವರ್ಣಗಳಿಗೆ ಸೇರದಿದ್ದರೆ ನಾದ ಘೋಷ ಶಾಂತ ಅತಿಶಾಂತ [illegible] ಆಗಲಾರವು. ಅದ್ದರಿಂದ ಈ ಸೊನ್ನೆಯು ತಮಗೆ ಸಂಬಂಧವನ್ನು ಉಂಟು ಮಾಡಿದುದಕ್ಕಾಗಿ ಅಕಾರ ಉಕಾರ ಮಕಾರವೆಂಬ ಈ ಮೂರು ವರ್ಣಗಳು [illegible] ಸೊನ್ನೆಯನ್ನೇ ಮುಂದು ಮಾಡಿ ತಮ್ಮ ಗೌರವವನ್ನು ಅಭಿವ್ಯಕ್ತಿ ಪಡಿಸಿಕೊಂಡವು (ಅಂದರೆ ಓಂ ಎಂಬಲ್ಲಿ ಸೊನ್ನೆಯು ಮುಂದಿರುತ್ತದೆ ಎಂದು ಭಾವ).

ಓಂಕಾರಕ್ಕೆ ಕಾರಣವಾದ ಎಂಟು ಅಂಶಗಳಲ್ಲಿ ಈ ಬಿಂದುವು ಐದನೆ ಸ್ಥಾನದಲ್ಲಿರುವುದರಿಂದ ಇದು ಭಗವದಂಶ ಸಂಭೂತವಾಯಿತು. ಹೇಗೆಂದರೆ ಈ ಬಿಂದುವಿಗೆ ಹಿಂಭಾಗದಲ್ಲಿರುವ ನಾಲ್ಕು ಭಾಗಗಳೂ ಚತುರ್ವಿಧ ಪುರುಷಾರ್ಥಗಳಾಗಿಯೂ ಮುಂದಿನ ಭಾಗಗಳ ನಾಲ್ಕು ಭಾಗಗಳು [illegible] ಆಗಿಯೂ ಇರುವುದರಿಂದ ಪುರುಷಾರ್ಥ [illegible] ಪ್ರದಾಯಕನಾದ [illegible]

[illegible] ನಿಂತು ಓಂಕಾರವನ್ನು ಉತ್ಪತ್ತಿಮಾಡಿ ಪುನಃ ಸಮುಂದಾಕಾ [illegible] ಉಚ್ಚರಿಸಲು ಅನುಕೂಲವಾಗಿರುವುದು. ಈ ಸೊನ್ನೆಯನ [illegible] ಉಚ್ಚಾರಣೆ ಉತ್ಪನ್ನವಾಗಲಾರದು. ಆದ್ದರಿಂದ ವೇದಾದಿಗಳಿ [illegible] ರಕ್ಕೆ ಮೂಲಕಾರಣವಾದ ಸೊನ್ನೆಯು ಪರಾದ [illegible] ವ್ಯಕ್ತವಾಗಿರುವುದೇ ಹೊರತು ಅನಾಮಧೇಯ ವಸ್ತುವಲ್ಲವು.

## ಪ್ರಕರಣ ೨.

## ಸೊ[illegible]ನ್ನೆಯ ಉತ್ಪತ್ತಿ

[illegible] ಆರಂಭದಲ್ಲಿ ಶ್ರೀ ಮಹಾವಿಷ್ಣುವು ಪ್ರಕೃತಿ ಅಭಿಮಾ [illegible] ದೊಡಗೂಡಿ ಸಕಲ ತತ್ವಾಭಿಮಾನಿ ದೇವತೆಗಳನ್ನು ತ [illegible] ಸೃಷ್ಟಿಸಿದನು. ಇವರೂ ಪುನಃ ತನ್ನ ಮಗನಾದ ಬ್ರಹ್ಮದೇವರಿಂ [illegible] ಉತ್ಪತ್ತಿಯಾದಂತೆ ಅನಾದಿಯಾದ ಸೊನ್ನೆಯೂ ಕೂಡ ಉತ್ಪ [illegible]

[illegible] ದರೆ ಅಸುರರ ಉಪಟಳದಿಂದ ಇಂದ್ರಲೋಕವನ್ನು ಶತ್ರುಗಳಾಕ್ರಮಿಸ [illegible] ದೇವಾಸುರರು ಸಮುದ್ರಮಥನ ಮಾಡುವಾಗ್ಯೆ ಅನೇ [illegible] ಉತ್ಪನ್ನವಾಗಿ ಕೊನೆಗೆ ಅಮೃತವು ಉತ್ಪನ್ನವಾಗಲು ಶ್ರೀನಾರಾಯಣ [illegible] ದಿಂದ ಅಮೃತಕಲಶವನ್ನು ಕರದಲ್ಲಿ ಹಿಡಿದು ಉದ್ಭವಿಸಿ ಬರುವಾ [illegible] ನೇತ್ರಗಳಿಂದ ಆನಂದಾಶ್ರುಗಳು ಉದುರಿದುವಷ್ಟೆ, ಅಗ್ಯೆ ಆ ಬಿಂ [illegible] ಗಿಡಗಳಾದವೆಂದು ಪುರಾಣ ಪ್ರಸಿದ್ಧವಾಗಿರುವುದು. ಆ ಕಾಲದ [illegible] ನೇತ್ರಗಳಿಂದಲೂ ಕೊನೆಗೆ ಹೊರಟ ಎರಡು ಬಿಂದುಗಳು ಕೆಳ [illegible] ಅಲ್ಲ! ನಿಂತದ್ದರಿಂದ ತುಳಸಿ ವೃಕ್ಷವಾಗಲು ಅವಕಾಶವಾಗಲಿಲ್ಲ, ಆ [illegible] ಎರಡ ಬಿಂದುವು ಶ್ರೀಹರಿಯನ್ನು ಕುರಿತು "ಸ್ವಾಮಿ, ನ [illegible] ನಾನು ನಿನ್ನ ನೇತ್ರದಿಂದ ಈಚೆಗೆ ಬಂದೆನು. ಆದರೆ ಭೂಮಿ [illegible] ಲ್ಲೇ ನಿಂತಿರುವೆನು. ನನಗಿನ್ನು ಆವ ಪಥ?" ಎಂದು ಶ್ರೀಹರಿವನ [illegible] ಸ್ವಾಮಿ [illegible] ಆ ಬಿಂದುವಿನಲ್ಲಿ ಪರಮ ಕರುಣೆ ಉಳ್ಳವನಾಗಿ "ನೀನು ನ [illegible] ಆಶ್ರಯಿಸಿ ನಿಂತಿದ್ದರಿಂದ ನನ್ನ ಅಂಶವುಳ್ಳವನಾಗಿದ್ದು ಪ್ರಖ್ಯಾತಿಯನ [illegible] ನಿನ್ನನ್ನು ಆಶ್ರಯಿಸದೆ ಅಹಂಕರಿಸಿದರೆ ಅವಕ್ಕೆ ಅಭಿವೃದ್ಧಿ ಇಲ್ಲವಾ [illegible] ನನ್ನ [illegible] ಸೇರತಕ್ಕ ಭಕ್ತರು ನಿನ್ನನ್ನು ಮುಂದು ಮಾಡಿ ತ [illegible] ದೆ ನನ್ನನ್ನು ಭಜಿಸಿದರೆ (ದಾಸೋಹಂ) ಬಹುಬೇಗ ಪ್ರಸ

ನಾಗುವೆನು. ನಿನ್ನನ್ನು ಮುಂದು ಮಾಡದಿದ್ದರೆ ಬೇಗ ಒಲಿಯಲಾರೆನು. ನಿನ್ನ ದ್ವಾರದಿಂದಲೇ ನನ್ನ ಪ್ರಾಪ್ತಿಯೂ ಮುಕ್ತಿಗಾಗಲಿ ಭಕ್ತರುಗಳಿಗಾಗಲಿ" ಎಂದು ಅಮೋಘವಾಗಿಯೂ ಅನಶ್ವರವಾಗಿಯೂ ಅತಿ ಗುಪ್ತಾರ್ಥಪೂರ್ಣವುಳ್ಳದ್ದಾಗಿಯೂ ಇರುವ ದಿವ್ಯವರವನ್ನು ದಯಪಾಲಿಸಿದನು. ಆಗ ಆ ಬಿಂದುವು, "ಸ್ವಾಮಿ ಎಂಥಾ ಉತ್ಕೃಷ್ಟವಾದ ವರಗಳನ್ನು ದಯಪಾಲಿಸಿದರೂ ಸಹ ಸಚ್ಚಿದಾನಂದಾತ್ಮಕನಾದ ನಿನ್ನ ಅಪ್ರಾಕೃತ ಶರೀರವನ್ನು ಅಗಲಿರಲಾರೆ" - ಎಂದು ಮೊರೆಯಿಡಲು, ಕರುಣಾಳುವಾದ ಸ್ವಾಮಿಯು ಸೊನ್ನೆಯನ್ನು ಕುರಿತು–

ಸೊನ್ನೆಯೇ, ನೀನು ಸಜ್ಜನೋದ್ಧಾರಕಳಾಗಿಯೂ, ತ್ರಿವಿಧ ಜೀವರ ಗತಿ ಸಾಧನಕ್ಕಾಗಿಯೂ ಭೂಲೋಕಕ್ಕೆ ತೆರಳುವವನಾಗು. ನಾನು ನಿನ್ನನ್ನು ಒಂದು ಕ್ಷಣವಾಗಲಿ ಬಿಟ್ಟು ಇರುವುದಿಲ್ಲ–ಅಕಾರಾದಿ ಐವತ್ತೊಂದು ವರ್ಣ ಪ್ರತಿಪಾದ್ಯನಾದ ಭಗವದ್ರೂಪಗಳ ಉತ್ಪತ್ತಿಯು ನಿನ್ನಿಂದ ಸಹಿತವಾಗಿಯೇ ಇರುವುದು – (ಅಂ ಅಜಾಯನಮಃ, ಆಂ ಆನಂದಾಯನಮಃ ಇತ್ಯಾದಿ). ನನಗೆ ಅತ್ಯಂತ ಪ್ರಿಯತಮನಾದ ಭಕ್ತೋತ್ತಮನು ನಿನ್ನನ್ನು ಮುಂದುಮಾಡಿಕೊಂಡು ಸ್ತೋತ್ರಮಾಡುವನೋ ಅಂಥವರ ಭಕ್ತಿಗೆ ವಶನಾದ ನನ್ನ ನೇತ್ರದಲ್ಲಿಯೂ ನನ್ನ ಭಕ್ತನ ನೇತ್ರದಲ್ಲಿಯೂ ಆನಂದಾಶ್ರುರೂಪದಿಂದ ಈ ದಾಸರೂಪವಾದ ಸ್ವಾಮಿ – ಭೃತ್ಯ ನ್ಯಾಯಕ್ಕೆ ಕಾರಣವಾಗುತ್ತೀಯೆ. ನೇತ್ರದಲ್ಲಿ ಬಿಂದುರೂಪವಾದ ನಿನ್ನ ಉತ್ಪತ್ತಿ ಆಗದ ಹೊರತು ಭಕ್ತಿಗೆ ತಕ್ಕದೆಶೆ ಬರಲಾರದು – (ಬಿಗಿದ ಕಂಠಂ ವ್ಯಗ್ರಾಶ್ವಗಳಿಂ) ಈ ರೀತಿಯಾಗಿ ಸ್ವಾಮಿ ಭೃತ್ಯರುಗಳ ಅಂತಃಕರಣ ಮಿಳಿತಕ್ಕೆ ಕಾರಣವಾದ ನಿನ್ನಲ್ಲಿ ಎಂದಿಗೂ ನನ್ನ ಕಟಾಕ್ಷವು ತಪ್ಪುವುದಿಲ್ಲ" ಎಂಬ ಅಭಯವನ್ನಿತ್ತನು. ಆಗ ಸ್ವಾಮಿಯು ತನ್ನ ನೇತ್ರೋತ್ಪನ್ನವಾದ ಬಿಂದುಗಳು ಲಕ್ಷ್ಮೀಪತಿಯನ್ನು ಪ್ರಾರ್ಥಿಸಲು, ಕರುಣಾಳುವಾದ ಹರಿಯು:

ವಾಮಬಿಂದುವಾದ ನೀನು ನನ್ನ ಪತ್ನಿಯಾಗಿಯೂ, ನಿತ್ಯಾವಿಯೋಗಿನಿಯಾಗಿರುವ ರಮಾವೇಶದಿಂದ ಕೂಡಿಕೊಂಡು ಬಿಂದುವಿನೊಡನೆ ಸಹ ಭೂಲೋಕಕ್ಕೆ ಹೋಗಿರಿ. ವಿಸರ್ಗರೂಪದಿಂದ ಕಾರ್ಯಗಳಿಗೆ ಅನುಕೂಲವಿರುವುದು. ಶ್ರೀಲಕ್ಷ್ಮಿಯು ಯಾವರೀತಿಯಿಂದ ಅಭಕ್ತನಿಗೆ ಲೌಕಿಕ ಭಾಗ್ಯರೂಪವಾದ ಅಹಂಕಾರ ಪ್ರದಳಾಗಿಯೂ ಕೇವಲ ಭಕ್ತರಿಗೆ ನನ್ನ ಪ್ರಾಪ್ತಿ ರೂಪವಾದ ಭಕ್ತಿಭಾಗ್ಯಪ್ರದಳಾಗಿಯೂ ಇರುವಳೋ ಅದೇ ರೀತಿಯಾಗಿ ನೀನೂ ಸಹಾ ವರ್ತಿಸತಕ್ಕದ್ದು. ಸೊನ್ನೆಯನ್ನು ಮುಂದುಮಾಡಿ "ದಾಸೋಽಹಂ" ಎಂದು ಉಪಾಸನೆಮಾಡಿದರೆ ಯಾವರೀತಿ ನನಗೆ ಪ್ರೀತಿಯೋ ಅದೇ ರೀತಿಯಾಗಿ ಸೊನ್ನೆಯೊಡನೆ ಕೂಡಿ ವಿಸರ್ಗರೂಪವಾದ ನಿನ್ನನ್ನು ಮುಂದು ಮಾಡಿ "ನಮೋ ನಮಃ" ನನ್ನಲ್ಲಿ ಶರಣಾಗತರಾದ ಭಕ್ತರಿಗೆ ನಾನು ಬೇಗನೆ ಉದ್ಧಾರಮಾಡಲು ಬದ್ಧನಾಗಿರುವೆನು. "ದಾಸೋಽಹಂ" ಎಂಬುದು ಅಹಂಕಾರವರ್ಜಿತವಾಗಿಯೂ "ನಮೋನಮಃ" ಎಂಬುದು ಮಮಕಾರ ವರ್ಜಿ

[illegible] ತ್ವಯು ಪಡೆಯುತ್ತ ಬುಳ್ಳ, ಶಕ್ತಿಯುಂತ ಅಶಾಂತಿಪಾತಗಳ [illegible] ಜಾಲಗಳನ್ನು ಶೋಧಕನಿಂದ ಬಿಡಿಸಲ್ಪಟ್ಟು, ಶುದ್ಧ [illegible] ಸ್ವರೂಪವನ್ನು ಸೇರುವುದು. ಅಲ್ಲದೆ ಆಕಾರಾದಿ [illegible] ಅವರ್ಣ್ಯತ್ವ ಭಗವದ್ಭಕ್ತಗಳಾಗುವಂತೆ- ಸಕಲ [illegible] ವೇದೋಕ್ತಗಳು ಉಪಾಸನಾರ್ಹಗಳಾಗುವುವು (ಅಂ [illegible]) ಶಿಷ್ಯರಿಗೆ [illegible] ಗಳಾದ ಸಕಲ ಕರ್ಮ ಜಾಲಗಳು [illegible] ಹೇಳುವುದು ಸಂಶಯವಿಲ್ಲ" ಎನಲು-

[illegible] ವಸ್ತುವನ್ನು ತಿಳಿಸುವುದು. ನಿನ್ನ ವಾಕ್ಯಗಳೆಲ್ಲವೂ [illegible] ಆದರೆ ಲೋಕದಲ್ಲಿ ಸರ್ವರೂ ಪರಸ್ಪರ ವ್ಯಾಸಂಗದಿಂದ [illegible] ರಾಗಿ ನಮ್ಮನ್ನು ಕಾರ್ಯದಲ್ಲಿ ನಿಯೋಗಿಸುತ್ತಾರೆ. [illegible] ನಮ್ಮನ್ನು ನಿನ್ನ ಪಾದಾಶ್ರಯರಾಗುವಂತೆ [illegible] ನಿವಾರಕರು ಮತ್ತು ಅದೇ ರೀತಿ ನಿನ್ನ [illegible] ನಿನ್ನ ಅನುಗ್ರಹ ರೂಪವಾದ ಗುಣಗಳನ್ನು ಪ್ರದರ್ಶನ [illegible] ನಿನ್ನ ಪ್ರಾಪ್ತಿ ರೂಪವಾದ ಮುಖ್ಯ ಪ್ರಯೋಜನ [illegible] ಸನ್ಮಾರ್ಗ ಬೋಧಕರಾದ ಮಹಾತ್ಮರಾದ ಮತ್ತು [illegible] ಕಾರಣರಾದ [illegible] ಹೇಳಿರುವೆಯೆ. ಈ ತ್ರಿವಿಧ ಜೀವರ [illegible] ಉಭಯೋಪಕಾರಕ ಸಹ, ಅಂತರಂಗ ಸಂಬಂಧ [illegible] ನಮ್ಮ ಶಕ್ತಿಯಿಂದ ನಮ್ಮನ್ನು ಕಾಪಾಡಿಕೊಳ್ಳುವರಾರು? [illegible] ಸ್ವಾತಂತ್ರ್ಯವನ್ನು ಹೊಂದಿ ಯಾವ ಪ್ರಕಾರದಲ್ಲು ಸಿಕ್ಕದೆ ನಿನ್ನ [illegible] ಧರ್ಮವನ್ನು ಹೊಂದೆವು?" ಎಂದು ಪ್ರಾರ್ಥಿಸಲು [illegible] ಪ್ರಾರ್ಥನೆಯಾದ [illegible]:

[illegible] ನಿನ್ನ [illegible] - [illegible] ನಿಶ್ಚಯವು. ನೀವು [illegible] ಪಡೆಯುವಂತೆ [illegible] ಕಾಪಾಡು [illegible] ನು. ನೀವು ಹೇಳಿದ ಗುಣಗಳೆಲ್ಲವೂ ಅವನಲ್ಲಿ [illegible] ನನ್ನ ಪುತ್ರನಾಗಿ ರಾಜಿಸುವಳ ಶ್ರೀಮಾನ್ [illegible] ಪ್ರತ್ಯಕ್ಷನಾಗಿರುವನು. ಸಕಲ ಜೀವಿಗಳಲ್ಲಿಯೂ [illegible] ಸರ್ವಾಧಿಪತ್ಯವನ್ನು ನಾನು ಕರುಣಿಸಿರು [illegible] ನೀವು [illegible] ಯನ್ನು ಹೊಂದಿ ಶರಣಾಗತರಾದರೆ [illegible] ನಿಶ್ಚಯ ಸಕಲ ಮುಕ್ತಿಯೋಗ್ಯ ಜೀವರುಗಳಿಂದ ಸಹಿತ [illegible] ಎಂದು ಅಭಯದಾನ ಮಾಡಲು [illegible] ಯನು, ಅನುಸರಿಸಿ ನಿತ್ಯ [illegible] ಗಳಿಂದ [illegible] ಎಂಬ ವಿಶ್ವಾಸಾಲಬೆಂಬ ಅವ್ಯಕ್ತ ಪ್ರಾಂತ್ಯದ [illegible] ಮಾಡಿದರು.

# ಸೊನ್ನೆಯ ಕಾರ್ಯಗೌರವವು

ಶ್ರೀಮಹಾವಿಷ್ಣುವಿನಿಂದ ಜಗತ್ಸೃಷ್ಟಿ ಸಂಹಾರಾದಿ ಕಾರ್ಯಗಳು ಸಗುಣಸ್ವರೂಪವಾಗಿ ನಡೆಯುತ್ತಿರುವುದು. ಸೃಷ್ಟ್ಯಾದಿಗಳಿಗೆ ಮೂಲಕಾರಣ ಪ್ರಕೃತಿರೂಪವಾದ ಗುಣತ್ರಯಗಳನ್ನು ಪ್ರಳಯದಲ್ಲಿ ಶ್ರೀಹರಿಯು ಸ್ವಾಧೀನಗೊಳಿಸಿ ತ್ರಿಗುಣಗಳಿಗೆ ಒಂದಕ್ಕೊಂದು ಸಂಬಂಧವಿಲ್ಲದಂತೆ ಇರುತ್ತಾನೆ. ಸೃಷ್ಟಿಗೆ ತೊಡಗುವಾಗ ಸನ್ನಿಧಿಯಿಂದ ಪ್ರಕೃತಿಯನ್ನು ಕ್ಷೋಭೆಗೊಳಿಸುವನು. ಆಗ್ಗೆ ಸೊನ್ನೆಯ ಮೂಲಸ್ವರೂಪವಾದ ಬಿಂದುವನ್ನು ಸಂಖ್ಯಾರೂಪಕ್ಕೆ ತರಲು ತನ್ನ ಸಂಕಲ್ಪಕ್ಕೆ ಒಂದನ್ನು, ಬಿಂದುಗಳನ್ನು ತ್ರಿಗುಣಗಳಿಂದ ಕೂಡಿಕೊಂಡು ಗುಣಗಳಿಗೆ ಸಂಬಂಧವನ್ನುಂಟುಮಾಡಿ ಸತ್ವಬಿಂದುಗಳಿಗೆ ರಜೋಗುಣ ಬಿಂದುಗಳನ್ನು, ಹಾಗೆಯೇ ರಜೋಗುಣಕ್ಕೆ ತಮೋ ಬಿಂದುಗಳನ್ನೂ ಬೆರಸಿ ಅವ್ಯಕ್ತಾದಿ ಪೃಥ್ವ್ಯಂತ ತತ್ವಗಳನ್ನು ಅಂಡಸೃಷ್ಟಿಯನ್ನು ಮಾಡಿ ತಾನು ಪುರುಷರೂಪದಿಂದ ಜಲಶಾಯಿಯಾಗಿ ವಿರಾಡ್ರೂಪದಿಂದ ಸಕಲ ಚರಾಚರ ಪ್ರಪಂಚವನ್ನು ತನ್ನ ಸಕಲ ಅವಯವಗಳಿಂದ ಸಕಲ ದೇವ ಅಸುರಾದಿ ಜೀವ ಜಾಲಗಳನ್ನು ಹಾಗೆಯೇ ಗುಣಕರ್ಮಪ್ರಕಾರ ಚಾತುರ್ವರ್ಣಗಳನ್ನು ಪದ್ಮನಾಭರೂಪದಿಂದ ಬ್ರಹ್ಮದೇವರನ್ನು ಸೃಷ್ಟಿಸಿದನು. ಕಮಲೋದ್ಭವನಾದ ಬ್ರಹ್ಮನು ತನ್ನ ಆಧಾರವಾದ ವಸ್ತುವನ್ನು ಮುಂದಿನ ತನ್ನ ಕರ್ತವ್ಯವನ್ನೂ ತಿಳಿಯದಂತೆ ಇರುವಾಗ ಶ್ರೀಹರಿಯು ಬ್ರಹ್ಮನಿಗೆ ಮುಂದಿನ ಸೃಷ್ಟಿಕಾರ್ಯಕ್ಕೆ ನಿಯೋಗಿಸಿದ್ದರಿಂದ ಆಧಾರವಿಲ್ಲದೆ ಸೃಷ್ಟಿ ಸಾಮರ್ಥ್ಯವಿಲ್ಲವೆಂದು ತಿಳಿದು ಸೃಷ್ಟಿಸ್ಥಿತಿಗಳಿಗೆ ಆಧಾರವಾದ ಚತುರ್ವೇದಗಳನ್ನು ಸೃಜಿಸಲು ಇಚ್ಛಾಮಾತ್ರದಿಂದ ಸರ್ವಕ್ಕೂ ಮೂಲವಾದ ಓಂಕಾರವನ್ನು ಸೃಜಿಸಿದನು. ಅನಂತರ ಓಂಕಾರದ ಅವಯವಗಳಾದ ಅಕಾರಾದಿ ಏಕಪಂಚಾಶದ್ವರ್ಣಗಳನ್ನು ಸೃಜಿಸಿದನು. ಹೇಗೆಂದರೆ—ಅಕಾರದಿಂದ ಹದಿನಾರು ಸ್ವರಗಳು; ಉಕಾರದಿಂದ ಕವರ್ಗ; ಮಕಾರದಿಂದ ಚವರ್ಗ; ನಾದದಿಂದ ಟವರ್ಗ; ಬಿಂದುವಿನಿಂದ ತವರ್ಗ; ಘೋಷದಿಂದ ಪವರ್ಗ; ಶಾಂತದಿಂದ ಯ ರ ಲ ವ; ಅತಿಶಾಂತದಿಂದ ಶ ಷ ಸ ಹ ಳ ಕ್ಷ ಗಳು, ಈ ರೀತಿ ಎಲ್ಲಾ ವರ್ಣಗಳೂ ಉತ್ಪತ್ತಿಯಾಗಲು ಆ ಸಕಲ ವರ್ಣಾಭಿಮಾನಿ ದೇವತೆಗಳನ್ನು ಒಂದೊಂದರಿಂದಲೂ ಸೃಜಿಸಿ—"ನೀವುಗಳೆಲ್ಲರೂ ಸೇರಿ ವಾಕ್ಯಸಮೂಹಗಳಾಗಿ ವೇದಸ್ವರೂಪರಾಗಿರಿ" ಎಂದು ನಿಯಮಿಸಿದನು. ಸ್ವರಗಳ ಗುಂಪಿಗೆ ಸೇರಿದ ಸೊನ್ನೆ ವಿಸರ್ಗಗಳು "ಸ್ವಾಮಿಯೇ ಸಕಲವರ್ಣಗಳಿಗೂ ಉಚ್ಚಾರಶಕ್ತಿಯನ್ನು ದಯಪಾಲಿಸಿದೆ. ಅವುಗಳು ಒಂದಕ್ಕೊಂದು ಕಲೆತಾಗಲಿ ಅಥವಾ ಒಂದೊಂದೇ ಆಗಲಿ ಉಚ್ಚಾರಕ್ಕೆ ವಿಷಯವಾಗಿರುತ್ತವೆ. ನಾವುಗಳಾದರೂ ಸ್ವರಗಳನ್ನಾಗಲಿ, ವ್ಯಂಜನಗಳನ್ನಾಗಲಿ ಆಶ್ರಯಿಸದಲ್ಲದೆ ಉಚ್ಚಾರಣೆಗೆ ಯೋಗ್ಯವಾಗಲಾರೆವು. ಆದರೂ ನಾವುಗಳೇನೋ ಅಹಂಕಾರವನ್ನು ಬಿಟ್ಟು, ನಿನ್ನ ಆಜ್ಞಾಧಾರಕರಾಗಿ ವರ್ಣಗಳನ್ನಾಶ್ರಯಿಸುವೆವು. ವರ್ಣಗಳು ನಮ್ಮನ್ನು ನಿರಾಕರಿಸಿದರೆ ನಮ್ಮ ಗತಿಏನು? ಆಗ ನಾವು ಬೇರೆ ಆಧಾರದಲ್ಲಿ ಕಾರಣರಾಗುವೆವು

[illegible] ಯಾವ ರೀತಿಯಿಂದ ರಕ್ಷಿಸುವಿಯೋ ಆ ಮಾರ್ಗವನ್ನು ತೋರ[illegible]ಬೇಕು. ನಾವು ನಿನ್ನನ್ನೇ ಶರಣು ಹೊಕ್ಕಿರುವೆವು" ಎಂದು ಪ್ರಾರ್ಥಿಸಲು, [illegible] ಪ್ರಸನ್ನನಾದ ಸ್ವಾಮಿಯು, "ಎಲೈ ಸೊನ್ನೆ ವಿಸರ್ಗಗಳಿರಾ — ಲೇಶ [illegible]ಬೇಡಿರಿ. ಎಲ್ಲ ವರ್ಣಗಳೂ ಸಕಲ ಸಂಖ್ಯೆಗಳೂ ನಿಮ್ಮನ್ನೇ ಆಶ್ರಯಿಸುವಂತೆ ಮಾಡುವೆನು. ಒಂದುವೇಳೆ ಅವುಗಳು ನಿಮ್ಮನ್ನು ನಿರಾಕರಣೆಮಾಡಿದರೂ, ನಿಮ್ಮನ್ನು ಕ್ಷಣವೂ ಬಿಟ್ಟಿರುವುದಿಲ್ಲ. ಎಲೈ ಬಿಂದುವೇ, ನಿನ್ನ ರೂಪಸ್ಮರಣೆಗಾಗಿ ಗುಂಡಾದ ಚಕ್ರಾಯುಧವನ್ನು ಧರಿಸಿರುವೆನು. ನಿನ್ನ ಉಚ್ಚಾರಣೆಯ ನಾದವನ್ನು ಶಂಖದಲ್ಲಿ ಪೂರೈಸುವೆನು. ಶಂಖಘೋಷದಿಂದ ಶತ್ರುಗಳ ಹೃದಯ ಭೇದಿಸುವೆನು. ಚಕ್ರದಿಂದ ಅರಿಗಳನ್ನು ಹರಿಸುವೆನು. ನನ್ನ ಜಯ — ಕೀರ್ತಿಗಳಿಗೆ ನಿಮ್ಮನ್ನೇ ಕಾರಣವನ್ನಾಗಿ ಇಟ್ಟುಕೊಳ್ಳುವೆನು. ಚಿಂತಿಸಬೇಕಾದ್ದಿಲ್ಲ" ಎಂಬ ಅಭಯದಾನ ಮಾಡಿದನು. ಅದರಂತೆ—

ಎಲೈ ಬಿಂದುದ್ವಯವೇ (ವಿಸರ್ಗ), ನಿನ್ನಲ್ಲಿ ಲಕ್ಷ್ಮೀನಾರಾಯಣರಾದ ನಮ್ಮ ಸಾನ್ನಿಧ್ಯವನ್ನು ಇಟ್ಟು ಯಾವಾಗಲೂ ನಿನಗೆ ಅಗಲಿಕೆ ಇಲ್ಲದಂತೆ ನನ್ನ ಸಾಯುಜ್ಯವನ್ನಿತ್ತು ರಕ್ಷಿಸುವೆನು. ಆದ್ದರಿಂದ ಜಗತ್ಕಾರ್ಯಕ್ಕೆ ಅನುಕೂಲರಾಗಿರಿ. ನಿಮ್ಮನ್ನು ವರ್ಣಗಳೂ ಸಂಖ್ಯೆಗಳೂ ಅನಾದರ ಮಾಡದಂತೆ ಗೌರವಿಸುವ ಶಕ್ತಿಪ್ರದನಾದ ಒಬ್ಬ ಗುರುವನ್ನು ತೋರಿಸುವೆನು. ಆ ಗುರುಕಟಾಕ್ಷಕ್ಕೆ ಪಾತ್ರರಾಗಿ ನಿಮ್ಮ ಅನುಕೂಲದಿಂದ ಆ ಸದ್ಗುರುವನ್ನು ಆಶ್ರಯಿಸಿಕೊಂಡಿದ್ದು ಅವನ ಉಪದೇಶದ್ವಾರಾ ಸಾಧನ ಸಂಪೂರ್ಣವುಳ್ಳವರಾಗಿ ನನ್ನ ಸಂಪೂರ್ಣಕೃಪೆಗೆ ಪಾತ್ರರಾಗಿ ನನ್ನ ಸಾಯುಜ್ಯವನ್ನು ಹೊಂದುವುದಲ್ಲದೆ ಸಕಲ ಮುಕ್ತಿಯೋಗ್ಯರನ್ನೂ ನನ್ನ ಸಾಯುಜ್ಯ ಹೊಂದುವಂತೆ ಮಾಡುವಿರಿ. ನಾನು ಈಗ ನಿಮ್ಮಿದುರಿಗಿದ್ದರೂ ಸಚ್ಚಿತ್ಸುಖೈಕ್ಯ ಸ್ಥಾನವಾದ ನನ್ನ ಸ್ಥಾನವು ಸದ್ಗುರುಗಳ ಉಪದೇಶದ್ವಾರಾ ಹೊಂದಬೇಕೇ ಹೊರತು ಇತರೋಪಾಯಗಳಿಂದ ಸಾಧ್ಯವಲ್ಲವು. ಇದು ನನ್ನ ಸಂಕಲ್ಪವು. ಇದರಂತೆ ಆಚರಿಸಿರಿ ಎಂದು ಸದ್ಗುರುವಿನ ಗುರುತನ್ನು ತಿಳಿಸಿ ಅಭಯದಾನವನ್ನು ಮಾಡಿ ವರ್ಣಾಭಿಮಾನಿಗಳನ್ನು ಕಳುಹಿಸಿದನು.

(ಈ ಸೊನ್ನೆ ವಿಸರ್ಗಗಳ ಉತ್ಪತ್ತಿಯನ್ನು ಹಿಂದೆ ಒಂದು ಬಗೆಯಾಗಿ ತಿಳಿಸಿದೆ. ಈಗ ಒಂದು ಬಗೆಯಾಗಿ ತಿಳಿಯಬಾರದು ಆ ರೀತಿ ಶಂಕೆಗೆ ಅವಕಾಶವಿಲ್ಲ. ಶ್ರೀಲಕ್ಷ್ಮಿಯು ಸಮುದ್ರಮಥನ ಕಾಲದಲ್ಲಿ ಉತ್ಪನ್ನಳಾಗಿ ಸರ್ವೋತ್ತಮನಾದ ಶ್ರೀಹರಿಯನ್ನು ವರಿಸಿದಳೆಂಬುವುದರಿಂದ, ಅವ್ಯಕ್ತ ತತ್ತ್ವಾಭಿಮಾನಿಯೂ, ನಿತ್ಯಾವಿಯೋಗಿನಿಯೂ ಆದ ಇಂದಿರೆಯು ಪೂರ್ವದಲ್ಲಿರಲಿಲ್ಲವೆ ? ಇಂದ್ರಚಂದ್ರಾದಿಗಳು [illegible]ದಿಂದ ಉತ್ಪನ್ನರಾದರೆಂಬಲ್ಲಿ ತತ್ತ್ವಾಭಿಮಾನಿಗಳಾದ ಇವರು ಪೂರ್ವದಲ್ಲಿರಲಿಲ್ಲವೆ ? ಹಾಗೆಯೇ ಸೊನ್ನೆ ವಿಸರ್ಗಗಳ ವಿಚಾರವನ್ನು ತಿಳಿಯಬೇಕು. ಅಲ್ಲದೆ [illegible] ದೇವತಾಗಣದವರು ಹಿಂದಿನ ಕಲ್ಪಗಳಲ್ಲಿ ಸಾಧನೆಯನ್ನು ಈ ಕಲ್ಪದಲ್ಲಿ

ಪದವಿಯನ್ನು ಪಡೆಯು [illegible] ವಿಚಾರವನ್ನು [illegible] ಬೇಕೆಂದು ಪ್ರಾಜ್ಞರೇ
ಪ್ರಾರ್ಥನೆ)

ಶ್ರೀಹರಿಯಿಂದ ಅಜ್ಞಪ್ತರಾಗಿ ಸೊನ್ನೆ ವಿಸರ್ಗಗಳು ಮೂಲದಲ್ಲಿ ಸದ್ಗುರ
ಪ್ರಾಪ್ತಿಗೋಸ್ಕರ ತಪಸ್ಸನ್ನಾಚರಿಸತೊಡಗಿದವು. ಆಗ ಶ್ರೀಹರಿಯ ದೆಸೆಯಿಂ
ಆಜ್ಞಪ್ತರಾದ ವರ್ಣಾಭಿಮಾನಿಗಳು ವಾಕ್ಯಸಮೂಹಗಳಾಗಲು ತಮ್ಮ ಅಂಗ
ಗಳನ್ನು ಹಿಂಗಡಿಸಿ ನಿಲ್ಲಿಸಿ ಒಬ್ಬರಿಗೊಬ್ಬರು ಬೆರೆಯಲು ಯೋಚಿಸುವಾಗ ಅಕಾರಾ
ಹದಿನಾಲ್ಕು ಸ್ವರಗಳು ತಮ್ಮ ಒಂದೊಂದು ರೂಪಗಳ ಉದ್ಗಾರವಮಾಡುತ್ತ ವ್ಯಂಜನ
ಗಳೊಡನೆ ಬೆರೆಯುವಾಗ ತಮ್ಮ ಗುಂಪಿಗೆ ಸೇರಿದ ವಿಸರ್ಗಗಳನ್ನು ಕಾಣದೆ ಮುಂ
ತೋರದಂತಾಗಿ ಆಲೋಚನೆಗೊಳಲು ವರ್ಣೋತ್ಪತ್ತಿಕಾರಣನಾದ ಶ್ರೀಹರಿಯ
ಸೊನ್ನೆ ವಿಸರ್ಗ ಮುಂದೆ ಮಾಡಿಕೊಂಡು ಪ್ರಪಂಚದಲ್ಲಿ ವಾಕ್ ಶಬ್ದ ವ್ಯವಹಾರದ
ತೊಡಗಬೇಕೆಂದು ಮೊದಲು ನಿಯಮಿಸಿದ್ದನು ಭಗವದಾಜ್ಞೆಯನ್ನು ಉಲ್ಲಂಘಿಸಿದ
ಅಪರಾಧವಾಗುವುದು. ಸ್ವತಂತ್ರೋಚ್ಚಾರಣೆ ನಮ್ಮಲ್ಲಿದೆ ಎಂದು ಅಹಂಕಾರದಿಂ
ಮುಂದೂಡಿದರೆ ಮುಂದೆ ನಮಗೆ ತೊಂದರೆ ಉಂಟಾಗುವುದೆಂದೂ ಅದಕ್ಕಾಗಿ ಈಗಲೆ
ನಾವು ಸೊನ್ನೆಯ ಒಲುಮೆಯನ್ನು ಪಡೆದು ಶ್ರೀಹರಿಯ ಕೃಪೆಗೆ ಪಾತ್ರರಾ
ಸೊನ್ನೆಯನ್ನು ಪ್ರಶಂಸಿಸಿ ಪ್ರಾರ್ಥಿಸಲು, ಆ ಕಾಲದಲ್ಲಿ ಸೊನ್ನೆಯು ಅವರ ಪ್ರಾರ್ಥ
ಯನ್ನು ಮನ್ನಿಸಿ ಅನುಗ್ರಹವನ್ನುಂಟುಮಾಡಿತು. ವ್ಯಂಜನಸ್ವರೂಪರಾದ ನೀ
ಗಳೂ ನಾನೂ ಪರಸ್ಪರ ಅನುರಾಗದಿಂದ ವರ್ತಿಸೋಣವೆಂದು ಅಭಯದಾನವಮಾ
ವಾಕ್ಯೋತ್ಪತ್ತಿಗೆ ಅವಕಾಶವಾದುವು. ವ್ಯಂಜನಸ್ವರೂಪಗಳು ಸೊನ್ನೆಯನ್ನು ಕುರಿ
ನಮ್ಮೆಲ್ಲರ ಉತ್ಪತ್ತಿಗೆ ಮೂಲವಾದ ಓಂಕಾರವು ನಿನ್ನನ್ನು ಆಶ್ರಯಿಸಿದ್ದರಲ್ಲವೆ
ಉಚ್ಚಾರಣೆಗೆ ಯೋಗ್ಯವಾಯಿತು. ಹೀಗಿರುವಾಗ ನಿನ್ನನ್ನು ನಾವುಗಳು ಮರೆಯುವ
ದೆಂತು? ನಿನ್ನ ಸ್ಥಾನಕ್ಕೆ ನೀನು ಬರದ ಹೊರತು ವ್ಯಂಜನಗಳನ್ನು ನಾವ
ಹೊಂದುವ ಮಾರ್ಗವಿಲ್ಲವು. ನಿನ್ನನ್ನು ಮುಂದೆ ಮಾಡಿಯೇ ನಾವುಗಳು ಒಬ್ಬೊಬ್ಬರ
ಒಂದೊಂದು ಭಗವದ್ರೂಪಗಳನ್ನು ಒಲಿಸಿಕೊಂಡು ಕೊನೆಗೆ ನಿನ್ನ ದ್ವಾರವೇ ನಾವ
ಶ್ರೀಹರಿಯನ್ನು ಹೊಂದುವೆವು – ಎಂಬುದಾಗಿ ಅಕಾರಾದಿಸ್ವರಗಳು ಪ್ರಾರ್ಥಿಸಲ
ಶ್ರೀಹರಿಯ ಆಜ್ಞಾಧಾರಕವಾದ ಸೊನ್ನೆಯು ಪ್ರಸನ್ನವದನದಿಂದ ವರ್ಣಗ
ಪ್ರಥಮಾಕ್ಷರವಾದ "ಅ"ಕಾರದ ಮುಂದೆ ಬಂದು ನಿಲ್ಲಲು ಅಂ ಎಂಬ ಉಚ್ಚಾರಣ
ವ್ಯಕ್ತವಾಯಿತು. ಆಗ ಸಕಲವರ್ಣಗಳೂ ಆನಂದಹೊಂದಿ ಉಕ್ಕೇರುತ್ತಿರಲು
ಉದ್ಗಾರವನ್ನು ವ್ಯಕ್ತಪಡಿಸಲು ಅಃ ಎಂಬ ಆಶ್ಚರ್ಯಸೂಚಕವೂ ವ್ಯಕ್ತವಾಯಿತು
(ವಿಸರ್ಗಃ). ಅನಂತರ ಸ್ವರವರ್ಣಗಳೂ ಸರ್ವಸ್ವರಗಳೂ ಸೊನ್ನೆಯನ್ನಾಶ್ರಯಿ
ಪ್ರಾರ್ಥಿಸಲು ಸೊನ್ನೆಯೇ ಅನೇಕರೂಪವನ್ನು ತಾಳಿ ಎಲ್ಲಾ ವರ್ಣಗಳ ಮುಂಭಾ
ದಲ್ಲಿ ನಿಂತು ಅಂ ಕಂ ಗಂ ಚಂ ರಂ ಸಂ ಎಂಬ ಉಚ್ಚಾರ ಶಕ್ತಿಯನ್ನು ಪಡೆದ
ಆನಂದಪಟ್ಟವು ನಂತರ ಶ್ರೀಹರಿಯು ಅಂ ಅಚಾದಿ 51 ವರ್ಣ ಪ್ರತಿಪಾದ್ಯರೂ
ನಾಗಿ ಪ್ರಸನ್ನನಾಗಿ ಮುಂದೆ ಶಬ್ದಜಾಲಗಳ ಸಮೂಹವಾಗತಕ್ಕ ಶಕ್ತಿಪ್ರದನಾದನ

ಅನುನಾಸಿಕಗಳಾದ ಙ ಞ ಣ ನ ಮ ಎಂಬ ವರ್ಣಗಳು ಸೊನ್ನೆಯನ್ನು [illegible] ಬಂದಾಗಲು ಬೇರೆ ತಮ್ಮ ರೂಪವನ್ನು ತೋರ್ಪಡಿಸಿಕೊಳ್ಳದೆ [illegible] ಪ್ರತ್ಯೇಕ ವರ್ಣ ಕೊಟ್ಟು, ನಾದಶಕ್ತಿಗೆ ಅನುಕೂಲವನ್ನುಂಟುಮಾಡಿದವು [illegible] ಅಡಗಿರುವವು. ಇದಕಂತೆನೆಂದರೆ (ಙ); ಬಂದ (ನ) [illegible] (ಮ) ಇತ್ಯಾದಿ)

[illegible] ಪ್ರಾರಂಭದಲ್ಲಿ ಸೊನ್ನೆಯನ್ನು ಮುಂದುಮಾಡಿ ವಾಕ್ಯಗಳಾಗುತ್ತಲೂ [illegible] ರೀತಿ ಶಬ್ದ ಪದ ವಾಕ್ಯಗಳಾಗುತ್ತಲೂ ಸಕಲ ವೇದರಾಶಿಗಳೂ [illegible] ಪ್ರಾಕೃತ ವಂಶ ಸಮೂಹಗಳಾಗಿ ಅವುಗಳನ್ನು ಉಚ್ಚಾರಣೆಮಾಡತಕ್ಕವರು [illegible] ದೇವತೆಗಳು ಅನುಗ್ರಹದ ಅಗ್ರದಲ್ಲಿ ಕಾರಣಗಳಾಗಿ ಸಕಲ ಚರಾಚರ ಪ್ರಪಂಚ [illegible] ಸೃಷ್ಟಿಸಿ ಸಕಲರ ಶರೀರಗಳಿಗೂ ಶ್ರವಣೇಂದ್ರಿಯಕ್ಕೂ ಜಿಹ್ವೇಂದ್ರಿಯಕ್ಕೂ [illegible] ಗಳಿಗೂ ಅಧಿಪತಿಗಳಾಗಿ ನಿಯಾಮಕ ಶಕ್ತಿ ವಾಕ್ಯಸಮೂಹ [illegible] ಪ್ರದಾಯಕವಾಗಿ ಸೊನ್ನೆಯುದ್ಭವ [illegible] ವನ್ನು ಪಡೆದು ಸುಖದಿಂದಿದ್ದವು.

ಈ ವೇದರಾಶಿಗಳು ಸೃಷ್ಟಿಯಾಗಲು ಕಾಲಬಂದು ಆ ಕಾಲದಲ್ಲಿ ಮೋ [illegible] ಸೃಷ್ಟಿಸಲು ಶ್ರೀಹರಿಯಾತ್ಮನು ತನ್ನ ಪ್ರಾಪ್ತಿಗಾಗಿ ಬ್ರಹ್ಮನಿಗೆ ಯಾ [illegible] ಉಪದೇಶಿಸಬೇಕೆಂದು ಯೋಚಿಸಿ ಆ ಕಾಲದಲ್ಲಿ ಪ್ರಥಮಾಕ್ಷರವಾಗಿದ್ದರೂ [illegible] ಮೂಲಕಾರಣನಾಗಿದ್ದರೂ, ಅದೆಲ್ಲವನ್ನೂ ಬಿಟ್ಟು, ಬಿಂದುವಿನ [illegible]) ತನಗಿರುವ ಪ್ರೇಮವನ್ನು ವ್ಯಕ್ತಪಡಿಸುವುದಕ್ಕಾಗಿ ಬಿಂದುವಿನಿಂದ ಉತ್ಪ [illegible] ತ ಕಾರವನ್ನು ನಂತರ ಘೋಷದಿಂದ ಉತ್ಪನ್ನವಾ [illegible]ರುವ ಪಕಾರವನ್ನೂ, ಸೇರಿಸಿ "ತ ಪ" "ತ ಪ" ಎಂಬ ಜ್ಞಾನ ಕ್ರಿಯ [illegible] ಬ್ರಹ್ಮನಿಗೆ ಕೇಳುವಂತೆ ಉಚ್ಚಾರಮಾಡಿದನು. ಈ ಶಬ್ದವನ್ನು ಕೇ [illegible] ಯಾವರೀತಿ ಪದವನ್ನಾಚರಿಸಬೇಕೆಂದು ಕಾಲದಲ್ಲಿ ಕೂತು ಯೋಚಿ [illegible] ನ ಹೃದಯದಿಂದ ನಾದಸ್ವರೂಪವಾದ ಓಂಕಾರಾದಿ ವ್ಯಾಹೃತಿಗ [illegible] ಪ್ರಾಂತವಾಗಿ ಉತ್ಪನ್ನವಾದವು. ನಂತರ ಶ್ರೀಹರಿಯು ತನ್ನ ಸಂಕಲ್ಪನುಸಾ [illegible] ಪ್ರತ್ಯಕ್ಷನಾಗಿ ಹದಿನಾಲ್ಕು ಲೋಕಾದಿಗಳನ್ನೂ ಸೃಷ್ಟ್ಯಧಿಕಾರವ [illegible], ಚತುರ್ವೇದಗಳನ್ನೂ ಉಪದೇಶ ಮಾಡಿದನು. ಬ್ರಹ್ಮದೇವರು ಸೃಷ್ಟಿ [illegible] ರಾಗಿರುವಾಗ ವಿದ್ಯಾಪ್ರಚಾರಕ್ಕೆ ಅವಕಾಶ ದೊರೆಯದಂತಾ ವಿದ್ಯಾಸಾಮ್ರಾಜ್ಯಾಧಿಪತ್ಯವನ್ನು ತನ್ನ ಹಿರಿಯ ಪುತ್ರನಾಗಿಯೂ, ಲೋಕ ಗುರು [illegible] ನಾಗಿಯೂ ಇರುವ ವಾಯುದೇವರಿಗೆ ವಹಿಸಲಾಯಿತು. ಈ ರೀತಿ ಬ್ರ ಹ್ಮದೇವರಿಂದ ವಿಸ್ತರಿಸಲ್ಪಟ್ಟು, ಚತುರ್ದಶಲೋಕಗಳಲ್ಲೂ ಚತುರ್ವೇದಗಳ ಸಂಪ್ರದಾಯದಲ್ಲಿ ವ್ಯಾಪ್ತವಾದ ಸೊನ್ನೆ, ನಿಗಮಗಳು ತಮ್ಮಲ್ಲಿ ಯೋಚಿಸಲೂ [illegible] ನಾವು ಹರಿಯ ಗುಣಾನುವಾದ ವಾಕ್ಯಗಳಲ್ಲಿ ಅಡಗಿದ್ದರೂ ಪ್ರಪಂಚ

ಹಾರಕ್ಕೆ ಬಿದ್ದೆವು. ಈ ಪ್ರಪಂಚವು ಎಂಥವರನ್ನಾದರೂ ವಿಕಾರಗೊಳಿಸದೆ ಇರಲಾರದು.
ಹೀಗಿದ್ದರೂ ನಾವುಗಳು ಮಾತ್ರ ಪ್ರಪಂಚ ವ್ಯವಹಾರದಲ್ಲಿದ್ದರೂ, ವಿಕಾರಕ್ಕೊಳ
ಗಾಗದೇ ಇದ್ದಲ್ಲಿ ಭಗವತ್ಪ್ರೀತಿಗೆ ಕಾರಣರಾಗುವೆವು ನಾವು ವ್ಯವಹಾರದಲ್ಲಿ ವಿಕಾರ
ರಹಿತರಾಗಿದ್ದರೂ ಸಹಾ ನಮಗೆ ಆಶ್ರಯಗಳಾದ ವರ್ಣಗಳು ಬಹು ವಿಕಾರಸ್ವಭಾವ
ವುಳ್ಳವುಗಳಾದ್ದರಿಂದ ಅವುಗಳ ಸಹವಾಸದಿಂದ ನಾವುಗಳೂ ವಿಕಾರಕ್ಕೊಳಪಡಬೇಕಾ
ಗುವುದು. ಇದಕ್ಕೇನು ಮಾಡೋಣವೆಂದು ಯೋಚಿಸುವಾಗ್ಗೆ ಹಿಂದೆ ಪರಮಾತ್ಮನು
ಆಜ್ಞಾಪಿಸಿದಂತೆ ವಿದ್ಯಾಸಾಮ್ರಾಜ್ಯಾಧಿಪತಿಯಾದ ಶ್ರೀ ವಾಯುದೇವರು ನಿಮ್ಮನ್ನು
ರಕ್ಷಿಸುವರೆಂಬ ರಹಸ್ಯವಚನವು ಸ್ಮೃತಿಗೆ ತಂದು ಸರ್ವಜ್ಞರಾದ ಜಗದ್ಗುರುಗಳಲ್ಲಿ
ಭಕ್ತಿಯುಳ್ಳವರಾಗಿ ನಮಸ್ಕರಿಸಿದರು. ಮತ್ತು ವಾಯುದೇವರನ್ನು ಪ್ರಾರ್ಥಿಸಿದ್ದೇ
ನೆಂದರೆ – ಚೇತನದ ಸಂಬಂಧವಿಲ್ಲದೆ ಜಡವಾದ ನಮ್ಮ ಶಕ್ತಿಯು ವ್ಯವಹಾರಕ್ಕೆ
ಬರಲಾರದು. ಆದರೆ ವ್ಯವಹಾರಶಬ್ದಗಳ ತೊಡಕಿನಲ್ಲಿ ಸಿಕ್ಕಿರುವ ನಾವು ನಾನಾ
ವಿಕಾರಕ್ಕೊಳಗಾಗಿರುವೆವು. ವಿಕಾರರಹಿತರಾಗಿ ಪರಮಾತ್ಮನನ್ನು ಉಪಾಸಿಸುವ
ಮಾರ್ಗ ಕಾಣದೆ ಚಿಂತಿಸುತ್ತಿರುವೆವು.

ವೇದಗಳು ಭಗವದ್ವಾಚಕಗಳಾಗಿರುವಾಗ ನಿಮಗೆ ಚಿಂತೆ ಏಕೆ ? ಎಂದು ತಾವ
ಕೇಳಬಹುದು. ಆದರೆ ಆ ವೇದಾದಿಗಳು ವ್ಯವಹಾರದಲ್ಲಿ ದ್ವಂದ್ವ, ದ್ವೈತ್ಯರಿಂದ ವಿಕಾ
ವನ್ನು ಹೊಂದುವುದರಿಂದ ಭ್ರಮೆ ಉಂಟಾಗುವುದು. ಆದ್ದರಿಂದ ಯಾವ ಕಾ
ದಲ್ಲಿಯೂ ಭ್ರಮೆ ಎಂಬ ವಿಕಾರ ಬಲೆಗೆ ಸಿಲುಕದವರಾದ ತಮ್ಮನ್ನು ಮರೆ ಹೊಕ್ಕಿರ
ವೆವು. ನಾವು ಹಲವು ರೂಪದಿಂದ ಪ್ರಪಂಚದಲ್ಲಿದ್ದರೂ ಮೂಲರೂಪದಿಂದ ತಮ
ಪಾದಸೇವಕರಾಗಿದ್ದೂ ಭಗವತ್ಪ್ರಾಪ್ತಿಪರವಾದ ಸಾಧನವನ್ನು ಮಾಡಿಸಿ ಉದ್ಧಾ
ಮಾಡಬೇಕು. ಸದ್ಗುರು ಉಪದೇಶದ್ವಾರವೇ ನನ್ನ ಪ್ರಾಪ್ತಿಯಾಗುವುದೆಂದ
ಶ್ರೀಹರಿಯು ಹಿಂದೆಯೇ ನಮಗೆ ಸೂಚಿಸಿರುವನು ವಿಕಾರರಹಿತವಾದ ಸಾಧನೋ
ಪಾಯವನ್ನು ಉಪದೇಶಿಸುವ ವಿಚಾರದಲ್ಲಿ ವಿಚಾರಚತುರರಾದ ತಮ್ಮ ಹೊರ
ಮತ್ತೊಬ್ಬ ಸದ್ಗುರುವನ್ನು ನಾವು ಕಾಣೆವು. ಬ್ರಹ್ಮದೇವರಲ್ಲಿ ಹೋಗಲು ಅವರ
ಸೃಷ್ಟಿಕಾರ್ಯದಲ್ಲಿ ಅವಕಾಶವೇ ಇಲ್ಲವು ಎಂದು ವಾಯುದೇವರನ್ನು ಉದ್ಧಾರಕ್ಕಾ
ಪ್ರಾರ್ಥಿಸಲಾಗಿ, ವಾಯುದೇವರು ಅನುಗ್ರಹಮಾಡಿ ಶ್ರೀಹರಿಯ ಆಜ್ಞೆಯ ಮೇ
ಅನಾದ್ಯನಂತಕಾಲದಲ್ಲಿಯೂ ವಿಕಾರವಾಗದ ಸ್ವರೂಪವನ್ನು ಕೊಂಟ್ಟಿರುವನು ಅದ
ನೀವು ಅಜ್ಞಾನಾವರಣದಿಂದ ಅರಿಯದವರಾಗಿದ್ದೀರಿ – ಈಗ ತಿಳಿಸುವೆನು ಕೇಳ
ನೀವು ನನ್ನಿಂದ ಉಕ್ತವಾದ ವಿಷಯದಲ್ಲಿ ವಿಸ್ಮೃತಿಯನ್ನು ಹೊಂದದೆ ಜಾಗರೂ
ರಾಗಿರಿ–ಏನೆಂದರೆ– ಪ್ರಕೃತಿಪುರುಷಂಗೆ ಸಂಬಂಧವಿಲ್ಲದಿದ್ದರೂ ಪುರುಷಪದವಾ
ಚೇತನಗಳು ಪ್ರಕೃತಿ ಸಂಬಂಧವಿಲ್ಲದೆ ಹೇಗೆ ಇರಲಾರವೋ ತದ್ವತು ನೀವುಗ
ವರ್ಣ ಸಂಬಂಧವಿಲ್ಲದೆ ಇರಲಾಗುವುದಿಲ್ಲ. ಪ್ರಕೃತಿಸಂಬಂಧದಿಂದ ಚೇತ
ಮನಸ್ಸು ವಿಕಾರ ಹೊಂದುವುದೇ ಹೊರತು ನಿಜಸ್ವರೂಪಕ್ಕೆ ವಿಕಾರವು ಉಂಟ
ಲಾರದು. ಅದರಂತೆ ವರ್ಣ ಸಂಪರ್ಕದಿಂದ ನಿಮ್ಮ ವಾಸ್ತವರೂಪಕ್ಕೆ ವಿಕಾರವೇ

ತೋರುವುದೇ ಹೊರತು ನಿಮ್ಮ ಮೂಲ ರೂಪಕ್ಕೆ ವಿಕಾರವಿಲ್ಲವು. ತತ್ವಜ್ಞಾನವನ್ನು ಹೊಂದಿದ ಅಪರೋಕ್ಷಿಗಳು ಪ್ರಕೃತಿಬದ್ಧವಾದ ಪ್ರಪಂಚದಲ್ಲಿದ್ದರೂ ಸಹ ತದ್ವಿಕಾರಕ್ಕೆ ಒಳಗಾಗದೆ ಗುಣಾತೀತರಾಗಿ ವರ್ತಿಸುತ್ತಾ ಭಗವದ್‌ಜ್ಞಾನಾನಂದ ಮಗ್ನರಾಗಿ ಸದಾ ಭಗವಂತನ ಚಿಂತನೆಯಲ್ಲಿ ಇರುವಂತೆ ನೀವು ಹಾಗೆ ವರ್ತಿಸಬೇಕು. ಭಯ ರಹಿತರಾಗಿರಿ ಎಂದು ಹೇಳಿ 84 ಲಕ್ಷ ಯೋನಿಗತರಾದ ಅಸಂಖ್ಯಾತರಾದ ತ್ರಿವಿಧ ಜೀವರುಗಳಲ್ಲಿ ತಾವು ವ್ಯಾಪ್ತರಾಗಿ ಕ್ಷಣಲವಕಾಲವೂ ಬಿಡದೆ ಓಂಕಾರದಲ್ಲಿರುವ ಅತಿ ಶಾಂತವೆಂಬ ಅಂಶದಿಂದ ಉತ್ಪನ್ನವಾದ ಸ, ಹ ಎಂಬ ವರ್ಣಗಳಿಂದ ಸಹಿತವಾದ ಸೊನ್ನೆ ಮತ್ತು ವಿಸರ್ಗಗಳನ್ನು ಶ್ವಾಸರೂಪವಾದ ಹಂಸಮಂತ್ರವನ್ನಾಗಿ ಮಾಡಿಕೊಂಡು "ಸೋಽಹಂ ಹಂಸ ಸ್ವಾಹಾ" ಎಂಬುದಾಗಿ ಜಪಿಸುತ್ತಾ ಸಕಲ ಜೀವರೂ, ಆಯಾದೇಹದಲ್ಲಿ ವಾಸಿಸಲು ಆಧಾರವಾಗಿ ತ್ರಿವಿಧಜೀವರ ಸ್ವಭಾವಾನುಗುಣವಾದ ಮನೋಕಲ್ಪನೆಗಳಂತೆ ಗತಿ ಪ್ರದಾಯಕರಾಗಿ ಶ್ರೀಹರಿಯ ಆಜ್ಞಾದಂತೆ ವರ್ತಿಸುತ್ತಾ ಶ್ರೀಹರಿ ಕೃಪೆಯಿಂದ ತಾವು ಜಪಿಸುತ್ತಿರುವ ಮಂತ್ರಕ್ಕೂ ತಮಗೂ ವಿಕಾರವಿಲ್ಲದೆ ವಿದ್ಯಾಧಿಪತ್ಯವನ್ನಾಳುವ ವಿವರವೆಲ್ಲವನ್ನೂ ಸವಿಸ್ತಾರವಾಗಿ ತಿಳಿಸಲು ಅಪರೋಕ್ಷಿಯು ತನ್ನ ಅಪರೋಕ್ಷ ದೆಶೆಯಲ್ಲಿ ತನ್ನ ಸ್ವರೂಪವನ್ನು ನೋಡುವಂತೆ ಶ್ರೀ ಗುರುಬೋಧಾಮೃತದಿಂದ ಆನಂದ ಮಗ್ನರಾಗಿ ತಮ್ಮ ನಿಜಸ್ವರೂಪದಿಂದ ಭಗವದ್ವಾಚಕವಾಗಿರುವ ಸ್ಥಿತಿಯನ್ನು ಆ ಭಗವಂತನಿಗೆ ತಾವು ಪ್ರತಿಬಿಂಬರಾಗಿರುವ ಭಾವವನ್ನೂ ತದ್ವಾಚ್ಯವಾದ ಭಗವದ್ರೂಪವನ್ನೂ ಬಲ್ಲವರಾಗಿ ಶ್ರೀ ಗುರುದತ್ತಜ್ಞಾನದಿಂದ ಅಜ್ಞಾನ ನಿವೃತ್ತಿಯಾಗಲು ನಾನಾಪರಿಯಿಂದ ವಾಯುದೇವರನ್ನು ಸ್ತುತಿಸಲು, ವಾಯುದೇವರು "ಎಲೈ ವರ್ಣಗಳಿರಾ, ಯೋಚಿಸಬೇಡಿ. ನಾನು ನಿಮ್ಮನ್ನು ಕ್ಷಣಕಾಲವಾದರೂ ಅಗಲದೆ ಎಲ್ಲವನ್ನೂ ಭಗವತ್ಪರವಾಗಿ ಇರುವಂತೆ ಮಾಡುವೆನು ಪ್ರಕೃತಿಪುರುಷಾಧೀನರಾದ ನಿಮಗೆ ನಿಯಾಮಕನಾದ ಈಶ್ವರನೊಬ್ಬನು ಇರುವನು ಎಂಬ ತತ್ವವನ್ನು ಮರೆಯಬೇಡಿರಿ. ನಿಮಗೆ ಅಹಂ ಮಮತಾದಿ ವಿಕಾರಗಳು ಪ್ರಾಪ್ತವಾಗಲಾರವು. ನೀವುಗಳು ವರ್ಣಗಳೊಡನೆ ಸಂದರ್ಭಾನುಸಾರವಾಗಿ ಅನುಕೂಲರಾಗಿರಬಹುದೆಂದು ಅಪ್ಪಣೆಯನ್ನೀಯಲು ಬಿಂದುವಿಸರ್ಗಗಳೊಡಗೂಡಿ ಎಲ್ಲಾ ವರ್ಣಗಳೂ ವೇದದಲ್ಲಿ ವಾಯುದೇವರ ಸ್ತುತಿರೂಪ ಭಾಗದಿಂದ ತದರ್ಥಕ್ಕೆ ಯಾವಕಾಲಕ್ಕೂ ವಿಕಾರವಾಗದಂತೆ ಶ್ರೀಹರಿ ವಾಯುಗಳ ಅನುಗ್ರಹವನ್ನು ಪಡೆದು ಚತುರ್ವೇದ ಸ್ವರೂಪರಾಗಿ ಸಾತ್ವಿಕರಿಗೆ ಭಗವದ್ವಾಚಕಗಳಾಗುತ್ತಲೂ ತದ್ವಿಕಾರಗಳಿಗೆ ಒಳಗಾಗದಲೇ ಸರ್ವರಿಗೂ ಸಾಮಾನ್ಯ ವ್ಯವಹಾರ ಯೋಗ್ಯರಾಗಿ ವರ್ತಿಸುವುದಾಯಿತು. ಇಂತು ಸೊನ್ನೆ ವಿಸರ್ಗಗಳು ತಮ್ಮ ತಮ್ಮ ಆತ್ಮಗೌರವವನ್ನು ಶ್ರೀಹರಿ ವಾಯುಗಳಿಂದ ಪಡೆದವರಾದರು.

## ಸೊನ್ನೆಯ ಮಹಿಮಾವರ್ಣನೆ

ಹೀಗೆ ಸೊನ್ನೆ ವಿಸರ್ಗದೊಡನೆ ಸೇರಿ ಶ್ರೀಹರಿವಾಯುಗಳ ಕೃಪೆಯಿಂದ ವರ್ಣಾಭಿಮಾನಿಗಳ ಆಶ್ರಯವನ್ನು ಪಡೆದು ಕೃತ ತ್ರೇತಾ ದ್ವಾಪರಯುಗಗಳಲ್ಲಿ

ಭಗವದ್ವಾಚ್ಯವಾಕ್ಯಗಳಿಗೆ ಕೊರತೆಯಿಲ್ಲದಂತೆ ಆನಂದದಿಂದಿದ್ದವು. ಹೀಗಿರಲು ದ್ವಾಪರಯುಗದಲ್ಲಿ ಕಾರಣಾಂತರದಿಂದ ಶ್ರೀ ವೇದವ್ಯಾಸ ಪರಮಾತ್ಮನು ವೇದಗಳನ್ನು ವಿಭಾಗಮಾಡಿ, ಭಾರತ ಭಾಗವತಾದಿ ಅಷ್ಟಾದಶ ಪುರಾಣಗಳನ್ನು ರಚಿಸಿ, ತಮ್ಮ ರೂಪಗಳನ್ನು ವಿಸ್ತರಿಸಿದ್ದರಿಂದ ಸರ್ವತೋಮುಖವಾಗಿ ಪರಮಾತ್ಮನನ್ನು ಹೊಗಳುತ್ತಾ ತಮ್ಮ ಆನಂದಕ್ಕೆ ಮೇರೆ ಇಲ್ಲದೆ ಸಂಭ್ರಮದಿಂದಿದ್ದವು. ದ್ವಾಪರವು ಮುಗಿಯುತ್ತಲೂ ಕಲಿಯುಗ ಪ್ರಾರಂಭವಾಗುತ್ತ ಬಂದ ಹಾಗೆ, ದೈತ್ಯರ ಹಾವಳಿ ಬಹಳವಾಗಿ ತಮೋಯೋಗ್ಯರೆಲ್ಲರೂ ವೇದಮಾರ್ಗವನ್ನು ಹಿಡಿಯಲು, ಸೂರ್ಯಚಂದ್ರರಿಗೆ ರಾಹುಕೇತುಗಳು ಆವರಿಸಿದಂತೆ ದೈತ್ಯರು ತಮ್ಮನ್ನು ಆವರಿಸಿಕೊಂಡದ್ದನ್ನು ಸಹಿಸಲಾರದೆ ಶ್ರೀಹರಿಯನ್ನು ಮೊರೆಯಿಡಲು, ಸ್ವಾಮಿಯು ಬುದ್ಧರೂಪದಿಂದ ಅವರಿಗೆ ಮೋಹಕವನ್ನುಂಟುಮಾಡಲು, ಪಾಪಿದೈತ್ಯರು ವೇದಾದಿಗಳಿಗೆಲ್ಲ ಮೋಹಕಾರ್ಥಗಳನ್ನು ಪ್ರತಿಪಾದಿಸ ತೊಡಗಲು, ಶ್ರೀ ಭಗವತ್ತತ್ವವನ್ನು ಉದ್ಯೋತಿಸುವ ತಮ್ಮ ಶಕ್ತಿಯು ದಿನ ದಿನಕ್ಕೂ ಕುಂದುತ್ತಾ ಬರಲು, ವರ್ಣಾಭಿಮಾನಿಗಳು ಬಹಳ ನೊಂದುಕೊಂಡು ಸೊನ್ನೆಯನ್ನು ಕುರಿತು ಈಗ ನಮಗೆ ಪ್ರಾಪ್ತವಾಗಿರುವ ಸಂಕಟವನ್ನು ನೋಡಿದೆಯಾ? ನಮ್ಮ ಗುರುವಿನ ಗುರುತನ್ನೂ, ಸ್ವಾಮಿಯ ಕುರುಹನ್ನೂ ಮರೆಮಾಡುವಂಥ ಅಜ್ಞಾನ ಆವರಕವು ನಮ್ಮನ್ನು ವ್ಯಾಪಿಸಿಕೊಂಡಿರುವುದು. ನೀನೇನೋ ನಿರ್ವಿಕಾರವಾಗಿದ್ದು ನಮ್ಮೊಡನೆ ಸಂಚರಿಸುತ್ತಿರುವೆ. ಆದರೂ ನಮ್ಮ ನಿಬಂಧನವು ಅಪಾರ್ಥಕ್ಕೆ ಎಡೆಗೊಟ್ಟಂತಾಗುವುದು. ಈ ಪಾಪಿದೈತ್ಯರ ತೊಡಕಿನಿಂದ ರಕ್ಷಿಸುವವರು ಯಾರೆಂದು ಯೋಚಿಸುತ್ತಿರಲು, ಸೊನ್ನೆವಿಸರ್ಗಗಳು, ಎಲೈ ವರ್ಣಗಳಿರಾ, ನಮಗೂ ಸಹಾ ನಿಮ್ಮಂತೆ ಸಂಕಟವಾಗುತ್ತಿರುವುದು. ನಮ್ಮ ಸದ್ಗುರುವಿನ ಬಳಿಯೇ ಇದರ ಪರಿಹಾರೋಪಾಯ ತಿಳಿಯಬೇಕಾಗಿರುವುದು, ಎಂದು ಗುರ್ವನುಗ್ರಹಕ್ಕಾಗಿ ಪ್ರಾರ್ಥಿಸಲು, ಆಗ ವಾಯುದೇವರು ಹನುಮ ಭೀಮಾವತಾರಗಳಿಂದ ದೈತ್ಯರ ಸಂಹಾರಮಾಡಿದ. ಜಗದ್ಗುರುಗಳು ಕೃಪಾದೃಷ್ಟಿಯಿಂದ ಸೊನ್ನೆ ವಿಸರ್ಗವರ್ಣಗಳನ್ನು ಸಂತೈಸಿ—ನಿಮ್ಮ ಈಗಿನ ಸಂಕಟಗಳಿಗೆ ಕಾರಣವನ್ನು ಬಲ್ಲೆನು. ನಿಮ್ಮ ಮೂಲರೂಪಕ್ಕೆ ಚ್ಯುತಿಯಿಲ್ಲದಂತೆ ಕಾಪಾಡುವೆನು. ನೀವುಗಳು ಹರಿವಾಯು ಕೃಪಾಪಾತ್ರರಾಗಿರುವಿರಿ. ನಿಮ್ಮಂತೆ ದೇವತೆಗಳೂ ಸಹಾ ಪರಿತಾಪ ಪಡುತ್ತಿರುವರು. ಎಲ್ಲರ ಸಂಕಟವನ್ನು ಶ್ರೀಹರಿಯು ನೋಡಿ ಈ ಕಷ್ಟಗಳನ್ನು ಪರಿಹರಿಸಲು ನನಗೆ ಆಜ್ಞೆ ಕೊಟ್ಟಿರುವನು ನಾನು ಭೂಲೋಕದಲ್ಲಿ ಅವತರಿಸಿ ನಿಮಗೆ ದೈತ್ಯರು ಮೋಹಕಾರ್ಥವನ್ನು ಕಲ್ಪಿಸಿರುವ ಆಚ್ಛಾದನವನ್ನು ಭೇದಿಸಿ ಭಗವದ್ವಾಚಕಗಳನ್ನಾಗಿ ಮಾಡುವೆನು — ಎಂದು ಅಭಯಪ್ರದಾನಮಾಡಿ ನಂತರ ವಾಯುದೇವರು ಕಲಿ ಕಲ್ಮಷವಾದ ಭೂಲೋಕದಲ್ಲಿ ಶ್ರೀಹರಿ ಆಜ್ಞಾಧಾರಕರಾಗಿ ಮಧ್ವಾಭಿಧಾನದಿಂದ ಅವತರಿಸಿ ಸನ್ಯಾಸಾಶ್ರಮದಿಂದ ಬ್ರಹ್ಮಸೂತ್ರಾದಿ ಗ್ರಂಥಗಳಿಗೆ ಕಲ್ಪಿತಾರ್ಥಗಳಾದ ಇಪ್ಪತ್ತೊಂದು ಕುಭಾಷ್ಯಗಳನ್ನು ಖಂಡಿಸಿ ಮೂಲ ಮೂವತ್ತೇಳು ಗ್ರಂಥಗಳನ್ನು ರಚಿಸಿ ವರ್ಣಾಭಿಮಾನಿಗಳನ್ನು ಉದ್ಧರಿಸಿ, "ಓಂ ಶಾಂತಿಃ ಶಾಂತಿಃ ಶಾಂತಿಃ" ಎಂಬುದಾಗಿ ಸೊನ್ನೆ ವಿಸರ್ಗಗಳಿಗೆ ಪರಮಶಾಂತಿಯನ್ನುಂಟು ಮಾಡಿದರು.

ಈ ಶಾಂತಿಯಿಂದುಂಟಾದ ಪರಮಾನಂದದಿಂದ ನಾನಾವಿಧವಾಗಿ ವರ್ಣಗಳು ಶ್ರೀ ಮಧ್ವಮುನಿಯನ್ನು ವರ್ಣಿಸಿ ಸೊನ್ನೆ ವಿಸರ್ಗಗಳು ತಮ್ಮನ್ನು ಶಾಂತಿ ಶಬ್ದದಿಂದ ಆನಂದಗೊಳಿಸಿದ ಗುರುಗಳನ್ನು "ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯಾಃ" ಎಂಬುದಾಗಿ ಸ್ವರವೆತ್ತಿ ಅನೇಕ ವರ್ಣಗಳಿಂದ ಸಹಿತರಾಗಿ ಉದ್ಘೋಷಿಸಿ "ನಮೋನಮಃ" ಎಂದು ಶರಣಾಗತರಾದರು. ಆಗ ಗುರುಗಳು ನಿಮಗೆ ಇನ್ನು ಯೋಚನೆ ಇಲ್ಲ. ನಮ್ಮಿಂದ ಉದ್ಧೃತವಾದ ಶಾಸ್ತ್ರಗಳು ಆಚಂದ್ರಾರ್ಕವಾಗಿರುವುವು. ಈ ಶಾಸ್ತ್ರಬೋಧಕರಾದ ಮಹನೀಯರು ತಮ್ಮ ಮುಖ್ಯ ಶಿಷ್ಯರಿಗೆ ಮುಂದೆ ಪಠಣಮಾಡಿಸಿ, ಅದ್ಯಂತದಲ್ಲಿ ಶಾಂತಿಶಬ್ದವನ್ನು ಉಚ್ಚಾರಮಾಡುವಂತೆ ಮಾಡಿರುವೆವು. ಇನ್ನು ಚಿಂತಿಸಬೇಕಾದ್ದಿಲ್ಲವೆಂದು ಅಪ್ಪಣೆ ಕೊಟ್ಟು ಬದರಿಕಾಶ್ರಮಕ್ಕೆ ತೆರಳುವವರಾದರು. ನಂತರ ಕಲಿಪ್ರಾಬಲ್ಯ ಹೆಚ್ಚುತ್ತಾ ಅನ್ಯಮತಗಳು ತಲೆ ಯೆತ್ತಲು ಮಧ್ವಶಾಸ್ತ್ರಾರ್ಥವು ಮಲಿನವಾಗುವ ಸಂದರ್ಭದಲ್ಲಿ ದೇವತಾಪುರುಷರಾದ ಮಹನೀಯರು ಅವತರಿಸಿ, ಮಧ್ವಶಾಸ್ತ್ರವೆಂಬ ಸೂರ್ಯನಿಗೆ ಆವರಕವಾದ ಅನ್ಯಮತಗಳೆಂಬ ಕಾರ್ಮುಗಿಲುಗಳನ್ನು ವಾಯುಬಲದಿಂದ (ಗುರುಕೃಪಾದಿಂದ) ಒಡಿಸುತ್ತಾ ಮತ್ತೆ ಪ್ರಕಾಶಿಸುವಂತೆ ಮಾಡುತ್ತಿರಲು, ಮಧ್ವಾಗಮಸೂರ್ಯನು ಜಗತ್ತಿನಲ್ಲಿ ಪ್ರಕಾಶವಾದನು.

ಹೀಗೆ ವರ್ಣಗಳೂ ಶಬ್ದಗಳೂ ಸೊನ್ನೆಗಳೂ ಸೇರಿ ಶಬ್ದರಾಶಿಗಳಾದಂತೆ ಗಣಿತಶಾಸ್ತ್ರ ಪ್ರಚಾರಕಗಳಾದ ಸಂಖ್ಯೆಗಳು ಸೊನ್ನೆಗಳನ್ನಾಶ್ರಯಿಸಿ ಅನಂತಾನಂತ ಶಬ್ದವಾಚಕಗಳಾದವು. ಹೇಗೆಂದರೆ ಪೂರ್ವದಲ್ಲಿ ಪ್ರಥಮದಿಂದ ನವಮದವರೆಗೆ ಇರುವ ಸಂಖ್ಯೆಗಳು ಉತ್ಪನ್ನವಾಗಿ, ಅಲ್ಲಿಂದ ಮುಂಗಾಣದೆ ನಿಂತು ಬಿಟ್ಟವು. ಆಗ್ಗೆ ಅವುಗಳೆಲ್ಲಾ ಯೋಚಿಸಿಕೊಂಡವು. ನಾವು ವಿದ್ಯಾಮೂಲದಲ್ಲಿರುವ ಸೊನ್ನೆಯನ್ನು ಆಶ್ರಯಿಸದ ಹೊರತು ನಮಗೆ ಮಾರ್ಗವಿಲ್ಲವು. ಆದ್ದರಿಂದ ನಮ್ಮಲ್ಲಿ ಒಬ್ಬರೂ ಉಳಿಯದೆ ಎಲ್ಲರೂ ಸೊನ್ನೆಯನ್ನು ಆಶ್ರಯಿಸೋಣ. ಅದರಿಂದ ಮಹಾಫಲವುಂಟು—ಎಂಬುದಾಗಿ ಪ್ರಥಮಸಂಖ್ಯೆಯು ಉಳಿದವುಗಳಿಗೆ ಉಪದೇಶಮಾಡಲು, ದ್ವಿತೀಯವು ನ್ಯಾಯವೆಂದು ಒಪ್ಪಿತು. ತೃತೀಯ ಸಂಖ್ಯೆಯು ಅಹಂಕಾರವು ಯುಕ್ತವಲ್ಲ—ನಮ್ಮಲ್ಲಿ ಒಬ್ಬರಿಗಿಂತಲೂ ಒಬ್ಬರು ದೊಡ್ಡವರೆಂತಲೂ ಈ ದೊಡ್ಡಸ್ತಿಕೆಯು ಸೊನ್ನೆಗೆ ಇಲ್ಲವೆಂತಲೂ ಹೇಳಿತು. ನಾವು ಈಗ ಅಹಂಕಾರ ಹೊಂದಿದರೆ ಹಿಂದೆ ವಾಯುದೇವರ ವಿಷಯದಲ್ಲಿ ಅಹಂಕಾರಪಟ್ಟ ದೇವತೆಗಳಂತೆ ನಾವು ಸೊನ್ನೆಯನ್ನಾಶ್ರಯಿಸದೇ ಇದ್ದರೆ ನಿಸ್ಸಾರವಾಗುವೆವು. ಅಲ್ಲದೆ ಸೊನ್ನೆಯನ್ನು ಗೌರವಿಸಿ ನಮ್ಮೊಡನೆ ಸೇರಿಸಿಕೊಂಡರೆ ನಮಗೂ ಗೌರವವು ಅಧಿಕಾಧಿಕವಾಗುವುದು—ಎಂಬುದಾಗಿ ತಮ್ಮಲ್ಲಿ ತಾವು ನಿಶ್ಚಯಿಸಿಕೊಂಡು, ಎಲ್ಲರೂ ಒಗ್ಗಟ್ಟಾಗಿ ಸೇರಿ ಸೊನ್ನೆಯ ಬಳಿಗೆಬಂದು ಪ್ರಾರ್ಥಿಸತೊಡಗಿದರು. ಮೊಟ್ಟಮೊದಲು ಓಂಕಾರಕ್ಕೆ ಆಶ್ರಯವಾದ ಸೊನ್ನೆಯೇ, ಶ್ರೀಹರಿಯ ಆನಂದಾಶ್ರುವಾಗಿಯೂ, ವರ್ಣಗಳಿಗೆ ಮೇಲ್ಮೆಯನ್ನುಂಟುಮಾಡಿರುವುದಾಗಿಯೂ ಇರುವ ನೀನು ನಮ್ಮೆಲ್ಲರಿಗೂ ಮೊದಲಿದ್ದವನು. ಮತ್ತು ನಾವುಗಳು

ಲಯವಾದರೂ ಸಹಕೊನೆಗೆ ಇರತಕ್ಕವನು. ಚ್ಯುತಿಯಿಲ್ಲದ ನೀನು ನಮ್ಮೆಲ್ಲರ ಅಭಿ
ವೃದ್ಧಿಗಾಗಿಯೇ ಇಲ್ಲಿ ಇರುತ್ತೀಯೆ. ದಯವಿಟ್ಟು ನಮ್ಮನ್ನು ಅನಂತಾನಂತ ಸಂಖ್ಯಾಕಾ
ರನ್ನಾಗಿ ಮಾಡುವವನಾಗು. ಆ ಶಕ್ತಿ ನಿನ್ನಲ್ಲಿರುವುದೇ ಹೊರತು ನಮ್ಮಲ್ಲಿ
ಯಾರಲ್ಲೂ ಇಲ್ಲವು. ನಾವು ಹಿಂದೆ ನಿಂತು ಬಹುಸ್ಥಾನಗಳಲ್ಲಿ ನೀನೇ
ಮುಂದಾಳಾಗಿರುವಂತೆ ಒಪ್ಪುತ್ತೇವೆ, ಮುಂದಿನ ಸ್ಥಾನವನ್ನಾಗಲೀ ಮಧ್ಯದ
ಸ್ಥಾನವನ್ನಾಗಲೀ ನೀನಾಗಿ ಬಿಟ್ಟುಕೊಟ್ಟರೆ ಬರುತ್ತೇವೆ. ಇಲ್ಲವೇ ನೀನೇ ಅನೇಕ
ರೂಪಗಳಿಂದ ಇದ್ದರೂ ಒಪ್ಪುತ್ತೇವೆ. ನಿನ್ನನ್ನು ಯಾವಾಗಲೂ ಹಿಂದುಮಾಡುವ
ದಿಲ್ಲ.ಪ್ರಸನ್ನನಾಗು ಎಂದು ಪ್ರಾರ್ಥಿಸಿದವು. ಆಗ್ಗೆ ಸೊನ್ನೆಯು ಸಂಖ್ಯೆಗಳನ್ನು
ಕುರಿತು, ಭೂಲೋಕದಲ್ಲಿ ನನ್ನಿಂದ ನೀವು ಗೌರವವನ್ನು ಬಯಸಿದಂತೆ, ನಿಮ್ಮಿಂದಲೂ
ನನಗೆ ಗೌರವವುಂಟು. ನೀವು ನನ್ನನ್ನು ಹೊಂದಿ ನಿಮ್ಮ ಕಾರ್ಯಗಳನ್ನು ಸಾಧಿಸಿ
ಕೊಂಡು ಅನಂತರ ನಮ್ಮನ್ನು ಬಿಟ್ಟು ಬಿಟ್ಟರೆ, ನಾನು ಕಲಿಕಾಲದ ದುಷ್ಟಜನರಿಂದ
ನಿಸ್ಸಾರವೆನಿಸುವೆನು. ನನ್ನಲ್ಲಿರತಕ್ಕ ಮಹಿಮೆಯನ್ನು ಅನಂತಾನಂತ ರೂಪಗಳನ್ನು
ತಾಳಿ ನಿಮ್ಮ ಮೂಲಕವೇ ವ್ಯಕ್ತಗೊಳಿಸುವೆನಲ್ಲದೆ ಸ್ವತಃ ವ್ಯಕ್ತಗೊಳಿಸುವುದಿಲ್ಲ
ಆದ್ದರಿಂದ ನನ್ನ ಆಶ್ರಯ ಬಿಡುವುದಿಲ್ಲವೆಂಬುದಾಗಿ ನೀವು ವಚನ ಕೊಟ್ಟರೆ ಸಂಪೂರ್ಣ
ವಾದ ಅಕ್ಷಯಾನುಗ್ರಹವನ್ನು ಮಾಡುವೆನು—ಎನ್ನಲು—ಎಲ್ಲರೂ ಏಕ ಕಂಠದಿಂದ
ಜಯಕಾರ ಮಾಡುತ್ತಾ ಸಮ್ಮತಿಸಿದರು. ಆಗ್ಗೆ ಪ್ರಥಮ ಸಂಖ್ಯೆಯು ಬಹುವಾಗಿ
ಸ್ತುತಿಸಿದ್ದರಿಂದ ಪ್ರಸನ್ನವಾದ ಸೊನ್ನೆಯೂ ಮೊದಲು ಮುಂದೆ ನಿಂತಿತು. ಆದರಿಂದ
ಏಕವೆಂಬ ಕಿರಿದಾದ ಸಂಖ್ಯೆಯು ದಶವೆಂಬ ಉಚ್ಚಸ್ಥಾನವನ್ನೇರಿತು. ಬೇರೆ ಸಂಖ್ಯೆ
ಗಳು ಸೊನ್ನೆಯನ್ನು ಪ್ರಸನ್ನೀಕರಿಸಿಕೊಂಡು ತಮ್ಮ ಮುಂಭಾಗದಲ್ಲಿ ಸ್ಥಾನವನ್ನು
ಕೊಡುತ್ತಾ ತಮ್ಮ ತಮ್ಮ ಸ್ಥಿತಿಯನ್ನು ಹೆಚ್ಚಿಸಿಕೊಂಡವು. ಅನಂತರ ಪ್ರಥಮ
ಸಂಖ್ಯೆಯ ಮುಂದೆ ಸೊನ್ನೆಯು ಇನ್ನೊಂದು ರೂಪದಿಂದ ನಿಲ್ಲಲು ಆದಕ್ಕೆ ಶತ ಎಂಬ
ಸಂಕೇತಪ್ರಾಪ್ತವಾಯಿತು. ಇದರಂತೆ ಸ್ಥಾನ ಹೆಚ್ಚಿಸುತ್ತಾ ಸಂಖ್ಯೆಗಳಿಗೆ ಪೂರ್ಣತೆ
ವನ್ನು ಕೊಡುವುದಾಯಿತು. ಹೀಗೆ ಶತ ಸಹಸ್ರ ಇವೇ ಮೊದಲಾದ ಅನಂತರೂಪ
ಗಳಿಂದ ಪ್ರಪಂಚ ಕಾರ್ಯ ನಡೆಸುತ್ತಾ ಗಣಿತಶಾಸ್ತ್ರವು ಎಲ್ಲೆಲ್ಲೂ ವ್ಯಾಪಿಸಲು
ಅನುಕೂಲವಾಯಿತು.

ಈ ಪ್ರಪಂಚದಲ್ಲಿ ಯಾವುದೂ ಸ್ಥಿರವಾದುದಲ್ಲ. ಪ್ರಳಯಕಾಲದಲ್ಲಿ ನಾಶ
ಗಳೂ ಲಯವನ್ನು ಹೊಂದಬೇಕಾಗಿರುವುದು. ಆದ್ದರಿಂದ ನಾವುಗಳು ಶ್ರೀಹ
ವಾಯುಗಳ ಕೃಪೆಯಿಂದ ಅನಾದ್ಯನಂದಕಾಲದಲ್ಲಿರತಕ್ಕ ವಸ್ತುವನ್ನು ಆಶ್ರಯಿ
ಬೇಕೆಂದು ಯೋಚಿಸಿ, ಹರಿ ವಾಯುಗಳನ್ನು ಪ್ರಾರ್ಥಿಸಲು, ಆಗ ವಾಯುದೇವರ
ಸಕಲವೇದಶಾಸ್ತ್ರಾದಿಗಳಲ್ಲಿಯೂ ನೀವುಗಳು ಇದ್ದೇ ಇರಬೇಕು. ಗಣಿತವೆಂಬುದ
ನಕ್ಷತ್ರಮೂಹಗಳಲ್ಲಿ ಅಡಗಿಯೇ ಇರುತ್ತೆ. ಕೆಲವು ಭಾಗಗಳಿಂದ ಪ್ರಪಂಚ ವ್ಯವಹಾ
ದಲ್ಲಿದ್ದರೂ ಕೆಲವು ಭಾಗದಿಂದ ನೀವು ಭಗತ್ಪರವಾಗಿರುವಿರಿ ಚಿಂತಿಸಬೇಕಾ

ನ್ನು ತ್ರಿಚರಣವು ಸಂಖ್ಯೆಗಳನ್ನು ಕುರಿತು ಸೊನ್ನೆಗಳಿಂದ ಸಹಿತರಾಗಿ ನೀ ...ವಾಗಲೂ ನನಕ್ಷದ್ದೇ ಇರುವಿರಿ. ಪ್ರಪಂಚ ಲಯವಾದರೂ ನಿಮ್ಮನ ...ಲೂ ಅಗಲೂ ವ್ಯಕ್ತಿಯಲ್ಲಿಯೂ ಧರಿಸಿಯೇ ಇರುವೆನು, "ಏಕೋ ನಾ... ...ಪಂಚರೂಪಾತ್ಮಕ, ದಶಾವತಾರಿ, ಸತತ ಏಕರೂಪಿಣಿ, ದಶರೂಪಿ... ...ಸಹಸ್ರರೂಪಿಣಿ, ಅವಿಕಾರಿಣಿ... ಸುಖಚಿತ್ ಸಮಸ್ತ ತನುವೇನಮಃ" ಇತ್ಯಾ... ...ದ ಇತ್ಯಾದಿವಿಷಯಗಳು ನಿಮ್ಮ ಅವಯವಗಳಾಗಿರುವುವು. ಪ್ರಳಯಕಾಲದಲ್ಲಿ ಅನಂತ ಬ್ರಹ್ಮಾಂಡ ಕೋಟಿಗಳನ್ನು ಧರಿಸಿರುವೆನು ಚಿಂತಿಸಬೇಕಾದ್ದಿಲ್ಲ ಎಂ... ...ಪ್ರಸನ್ನನಾದನು.

ಹೀಗೆ ವರ್ಣಗಳೂ ಗಣಿತಗಳೂ ಸೇರಿ ಸೊನ್ನೆಯೊಡನೆ ಪ್ರಪಂಚ ವ್ಯವಹಾ... ...ಶ್ರೀಮನ್ಮಧ್ವಾಗಮ ಪ್ರಚಾರದಲ್ಲಿ ದೀಕ್ಷಾಬದ್ಧರಾದ ಯತಿವರ್ಯ... ...ಪನೀಯರಾಗವರು ಅನೇಕ ಸಜ್ಜನರಿಗೆ ಮಧ್ವತತ್ತ್ವವನ್ನು ಬೋಧಿಸುತ್ತಿರು... ...ಗುರುತ್ವೇನ ಭಾವಿಸುತ್ತ ಆಚಾರ್ಯರೆಂಬ ವಿಶೇಷಣದಿಂದ ಅವರನ್ನು ಗೌ... ...ಬಂದರು. ಆಚಾರ್ಯ ಎಂಬ ವಿಶೇಷಣದಿಂದ ಕರೆಸಿಕೊಳ್ಳಲ್ಪಟ್ಟವರ ವಂಶದ... ...ವರೆಲ್ಲರೂ ಆಚಾರ್ಯರೆಂದು ಕರೆಸಿಕೊಳ್ಳುವುದಕ್ಕೆ ಕಾರಣವಾಯಿತು. ಒಂ... ...ತಿರುವು ಎಂದರೆ ಒಬ್ಬರ ತರುವಾಯ ಮತ್ತೊಬ್ಬರಿಗೆ ಸನ್ಯಾಸತ್ವವ... ...ಕೊಡತಕ್ಕ ಪದ್ಧತಿಯೂ ಬೆಳೆಯುತ್ತಾ ಬಂದಿತು. ಹೀಗಿರಲು ಬರುತ ಬರ... ...ಜೋಗುಣ ತಮೋಗುಣ ಯೋಗ್ಯರೂ ಈ ಗುಂಪಿನಲ್ಲಿ ಬೆರೆತು ವಿದ್ಯಾಮದ... ...ವಾಗಿ ನಾವು ಘನಪಂಡಿತರು, ನಮಗೆ ಸಮಾನರಾರು ಎಂಬುದಾಗಿ ಶಿರವ... ...ವಿಕೆಗಳನ್ನು ನೋಡಲಾರಂಭಿಸಿದರು. ಶ್ರೀ ಮಧ್ವಸಿದ್ಧಾಂತವನ್ನು ಶೋಧಿ... ...ದ ಸಾರವನ್ನು ಸಕ್ಸಾಧಕರಿಗೆ ಅರಹುವ ಸನ್ಮಾರ್ಗದರ್ಶಕರು ಅತಿವಿರಳರಾದ... ...ವಾಕ್ ಕಾಯರ್ಗಳೆಂಬ ತ್ರಿಕರಣ ಕರ್ಮಗಳು ಬಹಿರ್ಮುಖವಾಗಿರಲೆ ಧಿ... ...ತ್ತ ಬಂದಿತು. ಹೀಗಾಗಲು ಸೊನ್ನೆಗೆ ಮಹಾಸಂಕಟವಾಗಿ ಪರಮಾತ್ಮ... ...ಕ್ಷವನ್ನು ಮೊರೆಇಡಬೇಕಾಗಿ ಬಂದಿತು. ಜಗದ್ರಕ್ಷಕ ದೇವದೇವನಾದ ಸ್ವಾ... ...ನನ್ನನ್ನು ರಕ್ಷಿಸು ರಕ್ಷಿಸು—ನನ್ನ ಉದ್ಧಾರ ಕರ್ತರಾದ ಗುರುಗಳು ನಾನಾ... ...ತ ನನ್ನನ್ನು ಹೊಂದತಕ್ಕ ಸನ್ಮಾರ್ಗವನ್ನು ತೋರಿಸಿ ಬದರಿಕಾಶ್ರಮಕ್ಕೆ ತೆರಳ... ...ದರು. ನಾನು ಪ್ರಪಂಚಕಾರ್ಯದಕ್ಷದ್ದರೂ ಸದಾ ನಿನ್ನನ್ನು ಹೊಂದತಕ್ಕ ಮಾ... ...ರ್ಗದಲ್ಲೇ ಇರಬೇಕೆಂದು ಬಹುವಾಗಿ ಯತ್ನಿಸಿದೆನು. ಇದಕ್ಕಾಗಿ ನಿನ್ನಾಜ್ಞೆ ಮೇರೆಗೆ ವಾ... ...ದವರಿಗೆ ಶಿಷ್ಯನಾದೆನು. ವಾಯುದೇವನೋ ಸುಜ್ಞಾನವನ್ನು ಕರುಣಿಸಿ ಹಂಸಮಂ... ...ದದಿಂದ ಸದಾಕಾಲವೂ ನನ್ನನ್ನು ಎಡೆಬಿಡದೆ ರಕ್ಷಿಸುತ್ತಿದ್ದರೂ ಸಹ ಕಲಿದೈತ್ಯ "ಸೋಹಂ" ಎಂದು ನಾನೇ ಬ್ರಹ್ಮನೆಂಬುದಾಗಿ ದುರರ್ಥದಿಂದ ನನ್ನನ್ನು ಹಿಂ... ...ಮಾಡುತ್ತಿರಲು ಪುನಃ ನಾನು ಗುರುಗಳಲ್ಲೇ ಮೊರೆ ಇಡಲು, ಆದೇ ವಾಯುದೇವ ...ವತಿಸ್ಥಾನದಿಂದ ಅವತರಿಸಿ ದುರ್ವ್ಯಾಖ್ಯಾನ ಮಾಡುವುದನ್ನು ಖಂಡಿಸಿ, ನನಗೆ ನವ

ಸ್ಥಾನಪಡಿಸಿ, ನನ್ನನ್ನೂ ವಿಸರ್ಗವನ್ನೂ ಅನುಗ್ರಹಿಸಲೋಸುಗ "ಶಾಂತಿಃ ಶಾಂತಿಃ ಶಾಂತಿಃ" ಎಂಬುದಾಗಿ ನಮ್ಮಗಳಿಗೆ ಶಾಂತಿಯನ್ನುಂಟುಮಾಡಿ, ನನ್ನನ್ನು ಶಕಾರಕ್ಕೂ ಕಕಾರಕ್ಕೂ ಮಧ್ಯೆ ನಿಲ್ಲಿಸಿ ಕಾಪಾಡಿದರು. ನಮಗೆ ಶಾಂತಿಯನ್ನು ಅನುಗ್ರಹಿಸಿದ ಗುರುಗಳಿಗೆ "ಶ್ರೀ ಮದಾನಂದತೀರ್ಥ ಭಗವತ್ಪಾದಾಚಾರ್ಯಃ" ಎಂಬ ವಿಶೇಷಣದಿಂದ ಸಂಬೋಧಿಸಿ ಆನಂದಿಸಿದೆವು. ಇನ್ನೂ ಬರಬರುತ್ತಾ ಕೆಲವು ಸಜ್ಜನರು ಸೇರಿ ತಮ್ಮಲ್ಲಿ ಅಧಿಕ ಜ್ಞಾನವುಳ್ಳವರನ್ನು ಗುರುಗಳನ್ನಾಗಿ ಭಾವಿಸಿ, ಅವರಿಗೆ ಆಚಾರ್ಯಃ ಎಂಬ ವಿಶೇಷ ಶಬ್ದದಿಂದಲೇ ಕರೆಯುತ್ತಾ ಬಂದರು. ಇದನ್ನು ಅನುಸರಿಸಿ ಅವರ ಪುತ್ರ ಪೌತ್ರ ಪಾರಂಪರ್ಯವಾಗಿ ಅದೇ ಹೆಸರಿನ ಸಂಪ್ರದಾಯವಾಗಿ ಎಲ್ಲೆಲ್ಲೂ ಆಚಾರ್ಯ ಶಬ್ದವು ತುಂಬಿ ಹೋಯಿತು.

ಜಗತ್ತಿನ ಅಜ್ಞಾನಾಂಧಕಾರವನ್ನು ತೊಲಗಿಸಿ ಜ್ಞಾನಪ್ರಕಾಶವಿತ್ತಂಥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರು, ಮತ್ತು ತಮ್ಮ ಸಂಶಯವನ್ನು ಪರಿಹರಿಸಿಕೊಂಡು ಪರರ ಸಂಶಯವನ್ನು ಪರಿಹರಿಸಿ ಪರಮಾತ್ಮನ ನಿಜಸ್ವರೂಪವನ್ನು ಸಂದರ್ಶನಮಾಡಿಸತಕ್ಕ ಸಚ್ಛಾಸ್ತ್ರಗಳಿಗೆ ಟೀಕಾ ಟಿಪ್ಪಣೀಕಾರರಾದ ಶ್ರೀ ಜಯತೀರ್ಥರು ಟೀಕಾಚಾರ್ಯರೆಂದು ಅನ್ವರ್ಥವಾಚ್ಯರಾಗಿರುತ್ತಾರೆ. ಶ್ರೀ ವೇದವ್ಯಾಸರ ಶಿಷ್ಯರಾಗಿ ಪರೀಕ್ಷಿದ್ರಾಜನಿಗೆ ಸಾಕ್ಷಾತ್ಕಾರಮಾಡಿದ ಶುಕಾಚಾರ್ಯರಿಗೆ ಆಚಾರ್ಯ ಶಬ್ದವು ಅನ್ವರ್ಥವಾಗುವುದು. ಹಾಗೂ ಶ್ರೀಕೃಷ್ಣನು ಅರ್ಜುನನಿಗೆ ಅಜ್ಞಾನ ಹರಿಸಿ ಬೋಧಿಸಿ ತಾನು ಗೀತಾಚಾರ್ಯನೆಂದು ಜಗಕ್ಕೆ ಆಚಾರ್ಯ ಶಬ್ದ ಬೋಧಿಸಿರುವನು. ಇನ್ನು ಕೆಲವು ಮಹನೀಯರು ಶ್ರೀ ಮಧ್ವಗ್ರಂಥ ಸನ್ಮಾರ್ಗ ಬೋಧಕರಿಗೆ ಶಿಷ್ಯರಾದ ಒಂದೊಂದು ಪಂಗಡದ ಜನಗಳು ಆಚಾರ್ಯ ಎಂದು ಕರೆಯುತ್ತಿದ್ದದ್ದು ಸಹಜವಾಗಿರುವುದು. ಇದೆಲ್ಲಾ ಈಗ ಒಂದಾಗಿ ಎಲ್ಲೆಲ್ಲಿಯೂ ಈ ವಿಸರ್ಗದ ಹಾವಳಿಯೇ ಹೆಚ್ಚಾಗಿ ವಿಸರ್ಗಕ್ಕೆ ದಿಕ್ಕುತೋಚದಂತಾಯಿತು.

ಇನ್ನು ಆಶ್ರಮಗಳಲ್ಲಿ ಸಂನ್ಯಾಸಾಶ್ರಮವು ದೊಡ್ಡದಷ್ಟೆ? ಆ ಸಂನ್ಯಾಸಾಶ್ರಮವಾಸಿಗಳಾದವರ ಪಾದಸೇವೆಯನ್ನು ಮಾಡೋಣವೆಂದರೆ ಬಿಂದುವಾದ ನನ್ನನ್ನು ನೂಕಿ ಸಂನ್ಯಾಸಿಗಳನ್ನು ಸ್ವಾಮಿಗಳು ಎಂದು ಕರೆಯುವರು. ಸ್ವಾಮಿಗಳು ಬಂದರು, ಸ್ವಾಮಿಗಳು ಹೋದರು–ಈ ಶಬ್ದ ವ್ಯವಹಾರವಾಯಿತು. ಸ್ವಾಮಿಗಳು ಶಬ್ದಕ್ಕೆ ಏಕವಚನ ಸ್ಥಾನವೇ ಹೊರತು ಬಹುವಚನ ಸ್ಥಾನ ಕೊಡುವುದೇ? ಲೋಕೈಕನಾಥನಾದ ಶ್ರೀ ಪರಮಾತ್ಮನಿಗೆ ಸಂಬಂಧಿಸಿದ ಮಮಸ್ವಾಮಿ ಸರ್ವಸ್ವಾಮಿ ಎಂಬ ಶಬ್ದಗಳು ಹೃದಯಾಂತಃಕರಣ ಜನ್ಯ ಭಕ್ತಿಯಿಂದ ಸಂಬೋಧಿಸತಕ್ಕ ಕರಣಜನ್ಯಭಕ್ತಿಯಿಂದ ಸಂಬೋಧಿಸತಕ್ಕ ವಚಗಳನ್ನು ಯತಿಗಳು ಮುನಿಗಳು ಸಂನ್ಯಾಸಿಗಳು ಎನಿಸಿಕೊಳ್ಳುವವರ ವಿಷಯದಲ್ಲಿ ಜನಗಳು ಸಂಬೋಧಿಸುತ್ತಿರುವುದರಿಂದ ಸೊನ್ನೆ ವಿಸರ್ಗಗಳಿಗೆ ದಿಕ್ಕು ತೋಚದಂತಾಯಿತು.

ಸ್ವಾಮಿಯೇ, ಒಟ್ಟಿನಲ್ಲಿ ನಮ್ಮಗಳ ಕಷ್ಟವನ್ನು ಯಾರಿಗೆ ಹೇಳಿಕೊಳ್ಳೋಣ
ಸೋಽಹಂ ದೈತ್ಯರ ದುಷ್ಟಾರ್ಥಪಾಲಾಯಿತು. ಸನ್ಯಾಸಿ ಶಬ್ದದಿಂದ ಬಿಂದುವ
ನಾನು ತಳ್ಳಿಸಿಕೊಂಡೆ, ಸ್ವಾಮಿಗಳು ಎನ್ನುವ ಬಹು ವಾಚಕದಿಂದ ನಿಜಸ್ವಾ
ಯಾದ ನಿನ್ನನ್ನು ಮರೆಯುವಂತಾಯಿತು. ಆಚಾರ್ಯಃ ಎಲ್ಲಿಲ್ಲಿಯೂ ತಲೆಯೆತ್ತಿ ಅ
ಕಾರ ಪಡತಕ್ಕ ಸ್ನೇಹಿತನ ಸಹವಾಸದಿಂದ ನಮ್ಮ ನಿಜಗುರುಗಳನ್ನು ತಿಳಿಯಲು ನ
ಯನ್ನೇ ಅರಿಯದಂತಾಯಿತು.

ಎಲೈ ಶ್ರೀಹರಿಯೇ ಜಗತ್ತಿನಲ್ಲಿ ಎಲ್ಲರೂ ತಮ್ಮ ಕಾರ್ಯಕ್ಕೆ ಅನುಕೂಲವಾ
ನಮ್ಮನ್ನು (ಬಿಂದು-ವಿಸರ್ಗ) ಉಪಯೋಗಿಸಿಕೊಳ್ಳುವರೇ ಹೊರತು ನಿನ್ನ ಪಾ
ವನ್ನು ಸೇರಿಸತಕ್ಕ ಮಾರ್ಗದರ್ಶಕರೇ ಇಲ್ಲವಾಯಿತು—ಎಂಬುದಾಗಿ ಹಂಬಲಿಸ
ಆಕರುಣಾಳುವಾದ ಶ್ರೀಹರಿಯು ಆಗ ಸಂತೈಸಿ–ನಿಮ್ಮ ಸಂಕಟವನ್ನು ನಾನು ಬಲ್ಲೆ
ನಿಮ್ಮ ನಿಜಸ್ಥಿತಿಗೆ ಎಂದೂ ಕುಂದಿರುವುದಿಲ್ಲ. ಹಂಸಮಂತ್ರರೂಪಿಯಾದ ನಿನ್ನ
ಬಾಧಿಸಿದರೂ ಸಹಾ ವಾಯುದೇವರು ಅಂತರಂಗದಲ್ಲಿ ಕಾಪಾಡುತ್ತಲೇ ಇರುವ
ಈ ವಿಚಾರವನ್ನು ಜ್ಞಾನಿಗಳು ಅರಿಯುವರು. ನಿನ್ನೊಡನೆ ನಾನೂ ಯಾವಾಗ
ಇದ್ದೇ ಇರುವೆನು. ನೀನು ಈ ವಿಚಾರವನ್ನು ತಿಳಿಯಲಾರೆ. ಚಿಂತೆಇಲ್ಲ. ಇದ
ಸರಿಯಾದ ಮಾರ್ಗವು ಮುಕ್ತಿಯಲ್ಲಿಯೂ ಇರತಕ್ಕದ್ದಾಗಿರುವುದು. ಆ ಉಪಾ
ವನ್ನು ತಿಳಿಸುವೆನು ಆ ಮಾರ್ಗವಲ್ಲದೆ ಈಗ ಬೇರೆಮಾರ್ಗವಿಲ್ಲ. ಜಗತ್ತಿನಲ್ಲಿರತ
ಸಂಪ್ರದಾಯಗಳು ಬೇರೂರಿರುವುದರಿಂದ ಈ ಕಲಿಕಾಲದಲ್ಲಿ ನಡೆಯುವ ಕ್ರಮಗ
ವ್ಯಸನಪಡಬೇಕಾಗಿಲ್ಲ. ಈ ಯುಗದಲ್ಲಿ ನನ್ನ ಅವತಾರವಿಲ್ಲದ್ದರಿಂದಲೂ, ವಾ
ದೇವರು ಬದರಿಕಾಶ್ರಮ ಸೇರಿರುವುದರಿಂದಲೂ, ಕಲಿಕಾಲದಕ್ರಮವು ಬದಲಾಯಿ
ಲಾಗುವುದಿಲ್ಲ. ಯಾರು ಹೇಗಾದರೂ ಇರಲಿ, ಯಾವುದು ಹೇಗಾದರೂ ಇರ
ನೀವುಗಳು ನಾನು ಹೇಳುವ ಮಾರ್ಗದಲ್ಲಿ ನಡೆದರೆ ನಿಮಗೆ ಚ್ಯುತಿಯಿಲ್ಲವಾಗುವು
ಆ ಮಾರ್ಗವನ್ನು ಬ್ರಹ್ಮಾದಿಗಳೂ ಎಲ್ಲಾ ದೇವತೆಗಳೂ ಅನುಸರಿಸಿರುವರು.
ಮಾರ್ಗವನ್ನೇ ಶ್ರೀ ಮದಾನಂದತೀರ್ಥರೂ ಅನುಸರಿಸಿ ತಮ್ಮ ಪಾರಂಪರ್ಯದಲ್ಲಿರತ
ಸಂನ್ಯಾಸಿಗಳಿಗೆ ಗೋಪ್ಯವಾಗಿ ತೋರಿಸಿಕೊಟ್ಟಿರುವುದರಿಂದಲೂ, ಆ ಮಾರ್ಗದ
ನೀವೂ ಇದ್ದೇ ಇರುವುದು ನಿಮಗೆ ತಿಳಿಯದಾಗಿದೆ. ಎಡಗೈಯಲ್ಲಿ ಬೀಗದ ಕೈ ಹಿಡಿ
ಕೊಂಡು ಎಲ್ಲಿಯೋ ಗಾಬರಿಯಿಂದ ಹುಡುಕುವವರಂತೆ ಆಗಿರುತ್ತೀರಿ. "ಇಗೋನೋ
"ದಾಸೋಽಹಂ" "ದಾಸೋಽಹಂ" "ದಾಸೋಽಹಂ" ಎಂಬ ಮಂತ್ರವನ್ನು ಯಾ
ಜಪಿಸುವರೋ ಅವರ ದ್ವಾರಾ ನೀವೂ, ನಿನ್ನ ದ್ವಾರ ಭಜಿಸುವವರೂ ನನ್ನ
ಸೇರಲು ಅನುಕೂಲವಾಗಿರುವುದು. ಸೋಽಹಂ ಎಂಬುದು ದೈತ್ಯರ ಪಾಲಾಯಿತೆಂ
ಚಿಂತಯಷ್ಟೆ. ಆ ಶಬ್ದಕ್ಕೆ ಹಿಂದೆ ದಕಾರ ಒಂದು ಸೇರಿದರೆ "ದಾಸೋಽಹಂ"
ಅದರ ತಂಟೆಗೆ ದೈತ್ಯರು ಬರದಂತಾಗುವುದು. ಈ ದಕಾರವೂ ಸಹ ಓಂಕಾ
ಎಂಟು ಅಂಶಗಳಲ್ಲಿ ಒಂದಾದ ನಿನ್ನಿಂದ (ಬಿಂದುವಿನಿಂದ)ಲೇ ಉತ್ಪನ್ನವಾದ
ಗಕ್ಕೆ ಸೇರಿದ್ದಾಗಿದೆ ಜಗತ್ತಿಗೆ ಈಶನಾಗಿ ಹೃದಯಾಂತರ್ವರ್ತಿಯಾದ ನ

ಾಸನೆಂದು ಯಾವ ಭಕ್ತನು ಹೇಳಿಕೊಳ್ಳುವನೋ ಅವನಲ್ಲಿ ಅಹಂಕಾರ ಮಮಕಾರ ು ತಲೆ ಎತ್ತಲಾರವು. ಯಾವ ಭಕ್ತನು ಗುರೂಪದಿಷ್ಟನಾದ ನನ್ನದೊಂದು ವದ್ರೂಪವನ್ನು ತನ್ನ ಹೃತ್ಕಮಲದಲ್ಲಿ ನಿಲ್ಲಿಸಿಕೊಂಡು ಸರ್ವ ಕ್ರಿಯಾದಿಕರಣ ನ್ನು ನನ್ನ ಚರಣಾರವಿಂದಕ್ಕೆ ಅರ್ಪಿಸಿ ಅಹಂಕಾರ ಮಮಕಾರ ವರ್ಜಿತನಾಗಿ ದಾಸೋಹಂ ತವದಾಸೋಹಂ ಎಂಬುದಾಗಿ ನನ್ನಲ್ಲಿ ಶರಣಾಗತನಾಗುವನೋ ನೇ ಮುಕ್ತಿಯೋಗ್ಯನು. ಅಂತಹವನನ್ನು ಒಡಗೂಡಿ ನೀನೂ ನನ್ನನ್ನು ಹೊಂದಲು ರ್ಥನಾಗುವಿ. ನೀನಿಲ್ಲದೆ ಕ್ಷಣವಾದರೂ ಪ್ರಪಂಚ ನಡೆಯಲಾರದು.

ಇನ್ನು ವಿಸರ್ಗವನ್ನು ಒಂದು ರೂಪದಿಂದ ನಿನ್ನೊಡನೆ ಇರುವಂತೆ ಮಾಡುವೆನು. ನಮೋ ನಮಃ” ಎಂದು ನನ್ನಲ್ಲಿ ಅನತನಾಗದೆ ನನ್ನ ಕೃಪಾದೃಷ್ಟಿಗೆ ಕಾರಣನಾಗ ಾರನು. ದಾಸೋಹಂ ಎಂಬಲ್ಲದೆ ನನ್ನ ರಕ್ಷಣೆಗೆ ಅರ್ಹನಾಗಲಾರನು. ಅದ್ದರಿಂದ ಸೋಹಂ ಹಂಸ ಸ್ವಾಹಾ” ಎಂಬ ಮಂತ್ರವು ಮಾನಸಿಕ ತಪಸ್ಸಾಗಿಯೂ ದಾಸೋಹಂ” ವಾಚಕ ತಪಸ್ಸಾಗಿಯೂ ತ್ರಿಕರಣಭಾವವು ಏಕವಾಗಿ ಹೃದಯಾಂ ವರ್ತಿಯಾದ ನನ್ನಲ್ಲಿ ಅರ್ಪಿಸುವುದರಿಂದ ಮುಕ್ತಿದಾಯಕ ವಾಗಿರುವುದು.

“ ದಾಸೋಹಂ ” ಎಂದು ನನ್ನಲ್ಲಿ ಮನಸ್ಸಿಟ್ಟು, ಆನಂದದಿಂದ ವರ್ತನೆ ಾಡುವವನ ಭಾಗ್ಯಕ್ಕೆ ಎಣೆಯೇ ಇಲ್ಲವು. ಹೆಚ್ಚೇಕೆ, ಸೊನ್ನೆಯೇ, ನಿನ್ನನ್ನು ುಂದುಮಾಡಿ ತನ್ನಭಾವವನ್ನು ನನಲ್ಲಿ ಅರ್ಪಿಸತಕ್ಕವನ ನೇತ್ರದಲ್ಲಿ ನೀನೇ ಆನಂ ಾಶ್ರುವಾಗಿ ಸುರಿದು ಹೋಗಿವಿ. ಇದೇ ನಿನಗೆ ಮಾರ್ಗವು ಎಂಬುದಾಗಿ ತಿಳಿಯುವುದು. ದು ಗುರೂಪದೇಶ ಪಾರಂಪರ್ಯವಾಗಿ ರಹಸ್ಯ ತಿಳಿಯದೆ ಇದ್ದಲ್ಲಿ ಸಿದ್ಧಿಯುಂಟಾಗ ಾರದಾದ್ದರಿಂದ ಇನ್ನು ಮುಂದೆ ಭೂಮಿಯಲ್ಲಿ ರಹಸ್ಯಾರ್ಥಗಳನ್ನು ತಿಳಿಸಿ ಉದ್ಧಾರ ಾಡತಕ್ಕ ಶಕ್ತಿಯುಳ್ಳ ನಾರದರು ಅವತರಿಸುವರು. ಅವರ ಉಪದೇಶದ್ವಾರಾ ಹಸ್ಯಾರ್ಥಗಳು ಯೋಗ್ಯರಿಗೆ ಗೋಚರವಾಗುವುವು.

ಈ ರೀತಿ ಪರಮಾತ್ಮನ ಕೃಪಾಪಾತ್ರರಾಗಿ ದೇವಮುನಿಗಳಾದ ನಾರದರು ೂಲೋಕದಲ್ಲಿ ಪುರಂದರದಾಸರೆಂಬ ಅಭಿಧಾನದಿಂದ ಅವತರಿಸಿ ಪ್ರಹ್ಲಾದಾವತಾರ ಾದ ವ್ಯಾಸಮುನಿಗಳಿಂದ ದಾಸದೀಕ್ಷಾವಹಿಸಿ “ಪುರಂದರವಿಠಲ” ನೆಂಬ ಭಗವ ೂಪವನ್ನು ಹೃತ್ಕಮಲದಲ್ಲಿ ನಿಲ್ಲಿಸಿ ಅಂತರಂಗ ಬಹಿರಂಗದಲ್ಲಿ ಸದಾ ಪರಮಾ ನಮುಂದೆ “ ತವದಾಸೋಹಂ ” “ ತವದಾಸೋಹಂ ” ಎಂದು ಸ್ತುತಿಸುವಾಗ್ಗೆ ನ್ನೆಯು ಮುಂದೆ ನಿಂತು, ಭಗವತ್ಪಾದಾರವಿಂದವನ್ನು ಸೇವಿಸತೊಡಗಿ ಶಿಷ್ಯ ಾರಂಪರ್ಯವಾಗಿ ತಾನೂ ವ್ಯಾಪ್ತಿಯನ್ನು ಹೊಂದಿ ಸರ್ವರಿಗೂ ಮುಕ್ತಿ ಕರಗತ ಾಗುವ ಮಾರ್ಗ ತೋರಿ, ಹರಿವಾಯುಗುರುಗಳನ್ನು ಪ್ರೀತಿಸಿ ಅವರ ಅನುಗ್ರಹಕ್ಕೆ ಾತ್ರವಾಯಿತು.

ಹೀಗೆ ಸೊನ್ನೆಯು ಅಕ್ಷರರಾಶಿಗಳಿಗೂ ಸಂಖ್ಯೆಗಳಿಗೂ ಬೇಕಾದುದಾಯಿತು ಉಭಯಪಕ್ಷದಲ್ಲೂ ತಾನು ವಿಕಾರರಹಿತವಾಗಿ ಕಾರ್ಯವನ್ನು ಸಾಧಿಸಿತು. ಅಕ್ಷರಗಳು ಒಮ್ಮೊಮ್ಮೆ ವಿಕಾರ ಹೊಂದುತ್ತಿದ್ದರೂ ತಾನು ವಿಕಾರ ಹೊಂದದಾಯಿತು. ಸಂಖ್ಯೆಗಳಾದರೋ ಈ ಸೊನ್ನೆಯ ಸಹವಾಸದಿಂದ ಪೂರ್ಣತ್ವವನ್ನು ಪಡೆದು ತಾವೂ ವಿಕಾರ ರಹಿತವಾದವು.

ಈ ರೀತಿ ಸೊನ್ನೆಯ ಚರಿತ್ರೆಯನ್ನು ದೇವತೆಗಳೂ ಸಹ ಮಾನ್ಯ ಮಾಡುತ್ತಾ ಅದರ ಸೌಂದರ್ಯಾಕೃತಿಗೆ ಮನಸೋತು ಅನೇಕರು ಇದರ ಆಕೃತಿಯನ್ನು ಹೊಂದಲು ಅಪೇಕ್ಷಿಸಿದರು. ಸೂರ್ಯ ಚಂದ್ರ ಭೂಮಿಗಳು ಅದರಂತೆ ದುಂಡು ಆಕೃತಿಯನ್ನು ಹೊಂದಿದರು. ಕವಿಗಳಿಗೂ ಸಹ ವರ್ಣನೆಗೆ ವರ್ತುಳಾಕೃತಿಗಳು ದೊರೆತವು.

ಸೊನ್ನೆಯು ಒಂದೇ ಸರ್ವತ್ರಮಾನ್ಯವಾದರೂ, ಅದು ಒಂದೇ ಇದ್ದರೆ, ತನ್ನ ರೂಪವನ್ನು ಮಾತ್ರ ತೋರ್ಪಡಿಸುವುದೇ ಹೊರತು, ತನ್ನ ಮಹಿಮೆಯನ್ನು ವ್ಯಕ್ತಪಡಿಸುವುದಿಲ್ಲ. ಹೇಗೆಂದರೆ, ಶ್ರೀ ಪರಮಾತ್ಮನು ಸಕಲ ಚರಾಚರ ಪ್ರಪಂಚವನು ತನ್ನಲ್ಲಿ ಲಯಗೊಳಿಸಿಕೊಂಡು ಅವ್ಯಕ್ತ ತತ್ತ್ವಾಭಿಮಾನಿಯಾದ ಲಕ್ಷ್ಮಿಯನ್ನು ಅವ್ಯಕ್ತಗೊಳಿಸಿ ಏಕೋ ನಾರಾಯಣ ಎಂಬ ನಾಮಧೇಯದಿಂದಿರುವಾಗ ಅವನ ಮಹಿಮೆಯು ಹೇಗೆ ಅಗೋಚರವಾಗಿರುವುದೋ ಹಾಗೆಯೇ ಅಕ್ಷರಗಳೂ ಸಂಖ್ಯೆಗಳೂ ಲಯದಲ್ಲಿ ಲಯಿಸಿದ್ದ ಕಾಲಕ್ಕೆ ಆಕೃತಿಯೊಂದಲ್ಲದೆ ಮತ್ತೇನೂ ತೋರಲಾರದು. ಹೀಗೆ ಓಂಕಾರಾಶ್ರಯವಾಗಿ ಸೊನ್ನೆಯ ಮಹತ್ಕಾರ್ಯದಿಂದ ಶ್ರೀಹರಿಯು ಸೊನ್ನೆಯ ನಾಮಧೇಯಗಳಲ್ಲೊಂದಾದ ಬಿಂಬ ಎನ್ನುವ ನಾಮಧೇಯ ಧರಿಸಿ ಸಕಲ ಚರಾಚರಕ್ಕೂ ಬಿಂಬನಾಗಿದ್ದೂ ಸರ್ವರ ಹೃದಯ ವಾಸಿಯೂ ಆಗಿ ಆಯಾ ಜೀವರಧಿಕಾರಾನುಸಾರ ಅವರವರ ಉಪಾಸನೆಯನ್ನಿತ್ತು, ಆಯಾಯ ಜೀವರಿಗೆ ಗತಿಪ್ರದನಾಗಿ ಕೊನೆಗೆ ಮಹಾಪ್ರಳಯದಲ್ಲಿ ಎಲ್ಲವನ್ನೂ ಲಯಗೈಸಿ, ಸೂಕ್ಷ್ಮಕ್ಕೆ ಸೂಕ್ಷ್ಮನಾಗಿದ್ದು ತನ್ನೊಳಗೆ ಎಲ್ಲವನ್ನೂ ಅಡಗಿಸಿಕೊಂಡು ಶೂನ್ಯನಾಮಕನಾಗಿ ಸೃಷ್ಟಿಕಾಲದಲ್ಲಿ ಅಭಿವ್ಯಕ್ತನಾಗುವನು.

— ಓಂ ತತ್ ಸತ್ —

## ಸೊನ್ನೆತತ್ತ್ವದ ಸಾರಾಂಶ

ಈ ಸೊನ್ನೆಯ ತತ್ತ್ವವು ಪ್ರಾಜ್ಞದೃಷ್ಟಿಯಿಂದ ನೋಡಿದವರಿಗೆ ಅಧ್ಯಾತ್ಮಪರವಾಗಿರುವುದು—ಹೇಗೆಂದರೆ—ಸೊನ್ನೆಯು ಪರಮಾತ್ಮನಿಗೆ ಪ್ರತಿಬಿಂಬನಾದ ಜೀವನು. ನವ ಸಂಖ್ಯೆಗಳೂ ವಿಕಾರರಹಿತಗಳಾದ ನವವಿಧ ಭಕ್ತಿಗಳು. ವರ್ಣಗಳೇ ಪ್ರಕೃತಿ ಸಂಬಂಧವಾದ ವಿಕಾರಗಳು. ಜೀವನು ಪ್ರಕೃತಿಸಂಬಂಧದಿಂದ ವಿಕಾರಕ್ಕೊಳಗಾಗುವನೇ ಹೊರತು, ಸ್ವರೂಪಕ್ಕೆ ವಿಕಾರವಿಲ್ಲವು. ಸೊನ್ನೆಯು ಒಂದೇ ಹೇಗೆ ಉಚ್ಚಾರಕ್ಕೆ ಸಾಧ್ಯವಿಲ್ಲವೋ ಹಾಗೆ ಜೀವನೂಸಹ ಗೋಚರಕ್ಕೆ ಸಾಧ್ಯನಲ್ಲ. ಸೊನ್ನೆಗೆ ವರ್ಣಸಂಬಂಧದಂತೆ ಜೀವನಿಗೆ ಪ್ರಕೃತಿಯಿಂದುತ್ಪನ್ನವಾದ ಶರೀರ ಸಂಬಂ

ಉಂಟಾಗುವುದು. ಎಲ್ಲಾ ಶಬ್ದಗಳೂ ಲಯವಾದರೂ "ದಾಸೋಽಹಂ"
ದು ಮುಕ್ತಿಯಲ್ಲಿಯೂ ಇರತಕ್ಕದ್ದು. ಜೀವನಿಗೆ ಸ್ವರೂಪದೇಹವು ನಿತ್ಯವಾಗಿರು
ಸೊನ್ನೆಗೆ ವಿಕಾರವಾಗದ ಸ್ವರೂಪ. ಸೊನ್ನೆಗೆ ಓಂಕಾರವೇ ಬಿಂಬ; ಜೀವನಿಗೆ
ರಾತ್ಮನೇ ಬಿಂಬ. "ತವದಾಸೋಽಹಂ" ಇಲ್ಲಿ ಅಹಂ ಎಂಬಲ್ಲಿ ಸೊನ್ನೆ ಇರು
. ಅಹಂ ಎಂದರೆ ನಾನು ಎಂದರ್ಥವಾಗುವುದು ನಾನು ಎಂಬ ವಸ್ತುವು
ವುದು? ನಾನು ಎಂಬುದು ಶರೀರವಲ್ಲ; ಇಂದ್ರಿಯಗಳಲ್ಲ ನಾನು ಎಂಬುದು
ವಿರಬಹುದು ಎಂದರೆ ಜೀವನು ಅಸ್ವತಂತ್ರನಾಗಿ ಲಿಂಗದೇಹದಲ್ಲಿ ಅಡಗಿಕೊಂಡು
ಧೀನನಾಗಿರುವನು. ಹಾಗಾದರೆ ನಾನು ಎಂಬುದು ಯಾವುದು? ಯೋಚಿಸಿ
ಡಿದರೆ ನಾನು ಎಂಬುದು ಮನಸ್ಸಿನ ಪ್ರಭೇದಗಳಲ್ಲಿ ಒಂದಾದ ಅಹಂಕಾರತತ್ವ
ಉತ್ಪನ್ನವಾಗಿ ನಿಜವಾದ ನಾನು ಎಂಬ ವಸ್ತುವಾಗಿ ನಿನ್ನ ಎಂಬ ಪರಮಾತ್ಮ
ಎಂದಿಗೆ ನೋಡೇನೆಂದು ಲಿಂಗದೇಹದಲ್ಲಿ ಇಚ್ಛಾಬದ್ಧನಾದ ಜೀವನನ್ನು
ನಸ್ಸು ಪ್ರಕೃತಿ ಶಕ್ತಿಯಿಂದ ತನ್ನ ಕಡೆಗೆ ಸೆಳೆದು ಅನಿತ್ಯವಾದ ಪ್ರಕೃತಿ ವಸ್ತುಗಳ
ಭವ ಅಭಿಮಾನಕ್ಕೆ ನಾನು ನನ್ನದು ಎಂಬ ಮೋಹವನ್ನುಂಟುಮಾಡಿ ಜೀವ
ಸುಖದುಃಖಗಳಲ್ಲಿ ಹೊರಳಾಡಲು ಇರುವ ಅಹಂಭಾವವೇ ಕರ್ಮರಾಶಿಪೂ
ದು. ಈ ಅಹಂಭಾವವನ್ನು ಬುದ್ಧಿಯ ವಶಮಾಡಿದಲ್ಲಿ ಬುದ್ಧಿಯು ಚಿತ್ತಪ್ರಸಾದ
ನಾನು ಎಂಬ ಕರ್ತೃತ್ವ ನೀನು ಎಂಬುದಾಗಿ ಭಗವತ್ಪರವಶನಾಗಿ ಮಾಡು
. ಆಗ ಶ್ರೀಹರಿ ಗುರುಪ್ರಸಾದ ಲಬ್ಧ ಜ್ಞಾನದಿಂದ ಸರ್ವನಿಯಾಮಕನು ನೀನು
ಲ್ಲವೆಂದು ಅಹಂಕಾರವು ತಲೆ ತಗ್ಗಿಸುವುದು. ಆಗ ನಾನು ಎಂಬುದು ಎಲ್ಲಿ
ಗಲೇಬೇಕು. ಯಾವುದರಲ್ಲಿ ವ್ಯವಹರಿಸಬೇಕು? ನಾನು ಎಂಬುದು ದೇವರಲ್ಲ—
ಶೆಗಳಲ್ಲಿ ಸ್ವರ್ಗವಲ್ಲ—ಮೋಕ್ಷವಲ್ಲ—ರಾಜನಲ್ಲ. ಒಂದು ಕಾರ್ಯವನ್ನು ಸ್ವತಂತ್ರ
ವ ಮಾಡತಕ್ಕ ಶಕ್ತಿ ಉಳ್ಳದ್ದಲ್ಲ. ಎಲ್ಲವೂ ನೀನೇ, ಎಲ್ಲಕ್ಕೂ ನೀನೇ, ಎಲ್ಲವೂ
ಇತ್ಯಾದಿಯಾಗಿ ನಾನು ಎಂಬುದೇ ಇಲ್ಲವೆಂದರೆ ಈ ಬಂಧ ಮೋಕ್ಷಾದಿಗಳು
ರಿಗೆ? ನಾನು ಎಂಬುದು ನಿತ್ಯವಾದದ್ದು ಆದರೂ ಈಗ ಎಲ್ಲಕ್ಕೂ ನೀನು ಎಂದು
ರಿಂದ ನನಗೆ ಚಲನಾದಿಗಳು ಇಲ್ಲವೆನ್ನಬೇಕಾಯಿತು. ಚಲನಾದಿಗಳು ಇಲ್ಲ
ದರೆ ನಾನು ಜಡನಲ್ಲ ಚೇತನ. ಚಲನಾದಿಗಳು ಇದೆ ಎಂದರೆ ಸ್ವತಂತ್ರ ಕಲ್ಪಿತ
ಯಿತು. ಸ್ವತಂತ್ರವಿಲ್ಲವೆಂದರೆ ಬಂಧ ಮೋಕ್ಷಗಳು ನಿನಗೆ ಉಂಟಾಗ ಬೇಕಾಯಿತು
ು ನಿತ್ಯಮುಕ್ತ—ನಿನಗೆ ಬಂಧಮೋಕ್ಷಗಳಿಲ್ಲ ನನಗೆ ಸ್ವತಂತ್ರವಿಲ್ಲದ್ದರಿಂದಲೂ,
—ಕ್ಕೂ ನೀನು ನಿಯಾಮಕನಾದ್ದರಿಂದಲೂ ನಾನು ಎಂಬುದಕ್ಕೆ ವ್ಯವಹಾರವಿಲ್ಲ
ಯಿತು. ನಾನು ವ್ಯವಹಾರಕ್ಕೆ ಬರದೆ ಇದ್ದಲ್ಲಿ ನಾನೇ ನೀನು, ನೀನೇ ನಾನು
ಹೂ ಒಂದೇ ಎಂಬ ಭ್ರಾಮಕಕ್ಕೆ ಕಾರಣವಾಗುವುದು. ಆದರೆ ಯೋಚಿಸುತ್ತಾ
ದರೆ ನೀನು ಎಲ್ಲವೂ ಆಗುವೆ. ನಾನು ಎಂಬ ಜೀವವಾಗಲಿ, ನಾನು ಅನನ್ಯ
ಕಾಲಕ್ಕೂ ಇರತಕ್ಕ ನಿತ್ಯವಸ್ತು ಆದರೆ ಪ್ರಪಂಚ ವ್ಯವಹಾರದಲ್ಲಿ ಒಂದು
ತ್ರ ನೀನಲ್ಲ. ಅದನ್ನು ನಾನು ಅಂಗೀಕರಿಸಿ ಒಡಂಬಡುವೆನು. ನಾನು ಎಂಬು
ನ ಅ ಬಿಂದು ವಿಷಯದಲ್ಲಿ ವ್ಯವಹರಿಸಿಕೊಳ್ಳುವೆನು. ಆದ್ದರಿಂದ ನನಗೆ ಯಾವ

ಕಾಲಕಲ್ಕೂ ಚ್ಯುತಿಯಿಲ್ಲ. ಅದಾವುದೆಂದರೆ ಸಕಲ ಚರಾಚರ ಪ್ರಪಂಚಕ್ಕೂ ಪರಾ
ವಸ್ತುಗಳಿಗೂ ನೀನು ಈಶನಷ್ಟೆ. ಇಂಥ ಈಶನಾದ ನಿನಗೆ ನಾನು ದಾಸನಾಗುವೆ
ನಾನು ಈಶನಾಗಲಾರೆನು. ನೀನೇ ಈಶನಾದ್ದರಿಂದಲೂ, ನಿನಗೆ ಶರೀರವಿ
ರಿಂದಲೂ ನೀನು ದಾಸನಾಗಲಾರೆ. ಈಗ ನೀನಿಲ್ಲದೆ ನಾನಿರಲಾರೆ – ನಾನಿ
ನೀನಿರಲಾರೆ. ಈಶನಿಲ್ಲದೆ ದಾಸನಿಲ್ಲ–ದಾಸನಿಲ್ಲದೆ ಈಶತ್ವ ಬರಲಾರದು. ನ
ಎಂಬುದು ನಿನ್ನ ದಾಸನೆಂಬುದರಲ್ಲಿ ವ್ಯವಹರಿಸಲ್ಪಟ್ಟಿತು ನನ್ನದು ಎಂಬ ವಸ್ತುವಿ
ನೀನೇ ಆಗಿರುವಿ. ಇನ್ನು ನನಗೆ ಬಂಧನವಿಲ್ಲ. ಇದೇ ನನಗಿರತಕ್ಕ ಸ್ವತಂತ್ರ. ಇ
ವಿಕಲ್ಪದ ನನ್ನ ರಕ್ಷಣ–ಶಿಕ್ಷಣ-ಸ್ವತಂತ್ರವೆಲ್ಲ ನಿನ್ನದು. ಆದ್ದರಿಂದ ನನ್ನ ಅಂಗತ
ನಾದ ಪರಮಾತ್ಮನೇ, ಸ್ವಾಮಿಯೇ, ಈಶನೇ ಅಹಂ ನಾನು ತವ ನಿನ್ನ ದಾಸದ
ಹೀಗೆ ಸೂಕ್ಷ್ಮದೃಷ್ಟಿಯಿಂದ ತತ್ವವನ್ನು ವಿಮರ್ಶಿಸಿ ನೋಡಿದಲ್ಲಿ ನಾನು ನನ್ನ
ಎಂಬ ಅಹಂ ಮಮಕಾರಗಳು ಅಭಿಮಾನ ಮೂಲಕ ಪ್ರಪಂಚ ವಸ್ತುವಿನಲ್ಲಿ ಬ
ಬಂಧಕವಾಗುವುದು. ಅಲ್ಲದೆ ನಾನು ಎಂಬ ಜೀವನು ನಿನ್ನ ದಾಸನೆಂದು ನನ್ನ
ಎಂಬ ವಸ್ತು ನೀನಲ್ಲದಿಲ್ಲವೆಂದು ನನ್ನ ಬಿಂಬನಿಗೆ ನಾನು ಪ್ರತಿಬಿಂಬನಾಗಿ
ವ್ಯವಹರಿಸಿಕೊಂಡಲ್ಲಿ ಇದೇ ಮೋಕ್ಷಮಾರ್ಗವಾಗುವುದು. ಚತುರ್ವೇದ ವೇದಾ
ಷಟ್ ಶಾಸ್ತ್ರಾದಿಗಳನ್ನು ಶೋಧಿಸಿದರೆ ತಿಳಿಯಬೇಕಾದ್ದು ಇಷ್ಟೇ ತತ್ವವೆಂದು ತೊ
ವುದು. ಇದಕ್ಕಾಗಿ ಎಲ್ಲವೂ ಏರ್ಪಟ್ಟಿರುವುವು. ಆದರೆ ಸದ್ಗುರುಗಳ ಅನುಗ್ರಹವಾ
ಈ ಜ್ಞಾನ ದಾರ್ಢ್ಯವಾಗುವುದು. ಮಹನೀಯರಾದ ಅಪರೋಕ್ಷಿಗಳು ಜ್ಞಾನಯು
ಭಕ್ತಿಗಾಗಿಯೇ ಯೋಗ್ಯಜೀವನಿಗೆ ಬೋಧಿಸಿದ ದಾಸರುಗಳ ಪರಂಪರಾ ಬೆಳೆಯ
ಅವಕಾಶವಾಯಿತು. ಬರೇಶಾಸ್ತ್ರ ಜ್ಞಾನಕ್ಕಾಗಿ ಶ್ರಮಿಸಿ ಜ್ಞಾನ ಸಂಪಾದಿಸಿದ
ಸರಿಯಾದ ದಾಸದೀಕ್ಷಾ ಗುರೂಪದೇಶವಿಲ್ಲದೆ ಕಾರ್ಯಾತ್ಮಕವಾಗಿ ಫಲಕೊಡಲಾರ
ವಿದ್ಯಾ ವಿವಾದಾಯ ಧನಂ ಮದಾಯ ಶಕ್ತಿಃ ಪರಪೀಡನಾಯ ಎಂಬಂತೆ ಆಗುವು

ದೇಶ ಕಾಲಾವಸ್ಥೆಗೆ ಒಳಪಟ್ಟು ಜನಗಳಲ್ಲಿ ಸಜ್ಜೀವರು ಉದ್ಧೃತರಾ
ಆಯಾಯ ಧರ್ಮಗಳನ್ನು ಅನುಸರಿಸಿ ಶ್ರೀಮನ್ಮಧ್ವಶಾಸ್ತ್ರ ಸಾರತತ್ವವನ್ನು ಸು
ವಾಗಿ ಗ್ರಹಿಸಿ ಅನುಷ್ಠಾನಮಾಡಲು ದಾಸದೀಕ್ಷಾಪದ್ಧತಿಯನ್ನು ತೋರಿಸಿ
ಪರಂಪರಾಸಾಧನಕ್ಕೆ ಮಾರ್ಗದರ್ಶಿಗಳಾದರು; ಸದ್ಗುರೂಪದೇಶ ದ್ವಾರಾ ಲಭಿ
ಜ್ಞಾನಸಾಧನವೇ ಸರ್ವಸ್ವಾಮಿ ಮಮಸ್ವಾಮಿಯಾದ ಭಾರತೀರಮಣ ಮು
ಪ್ರಾಣಾಂತರ್ಗತ ಶ್ರೀನಿವಾಸನ ಅತ್ಯರ್ಥ ಪ್ರಸಾದಕ್ಕೆ ಕಾರಣವಾಡುದರಿಂದ ಭ
ದ್ದಾಸ ಶ್ರೇಷ್ಠರು.

"ಸಾಟಿಯುಂಟೇ ಶ್ರೀನಿವಾಸನ ದಾಸಕೂಟದ ಮೇಳಕೆ?"

ಇತ್ಯಾದಿ ಸ್ತೋತ್ರಮಾಡಿ ದಾಸವೃಂದವನ್ನು ವರ್ಣಿಸಿರುವರು

ಇತಿ ಹರಿದಾಸ ದಾಸ ದಾಸ ಸೇವ

ಮ. ಶ್ರೀನಿವ

ಓಂ ತತ್ಸತ್

# ಅರ್ಥ ಕೋಶ

ಅಕಳಂಕ=ದೋಷವಿಲ್ಲದ
ಅಕುಟಿಲ—ಮೋಸವಿಲ್ಲದ, ವಕ್ರವಲ್ಲದ
ಅಘ=ಪಾಪ
ಅಚಲ=ಬೆಟ್ಟ; ಅಲ್ಲಾಡದಿರುವ
ಅಜ=ಹುಟ್ಟಿಲ್ಲದವನು; ವಿಷ್ಣು; ಬ್ರಹ್ಮ
ಅಜಪಿತ=ಬ್ರಹ್ಮನ ತಂದೆ ವಿಷ್ಣು
ಅಜ್ಞಾತ=ತಿಳಿಯದ
ಅಡಿ=ಪಾದ; ಬುಡ
ಅಡಿದಾವರೆ=ಪಾದಪದ್ಮ
ಅಣಿಯಾಗಿ=ಸಿದ್ಧವಾಗಿ
ಅದ್ರಿ=ಬೆಟ್ಟ
ಅನಲ=ಬೆಂಕಿ
ಅನಲಾಕ್ಷ=ಬೆಂಕಿಯ ಕಣ್ಣಿನವ—ರುದ್ರದೇವ
ಅನಲಾಕ್ಷವೈರಿ=ರುದ್ರನವೈರಿ-ಮನ್ಮಥ
ಅನವರತ=ಯಾವಾಗಲೂ
ಅನಿಮಿತ್ತ—ಕಾರಣವಿಲ್ಲದೆ
ಅನಂಗ=ಮನ್ಮಥ
ಅನಂಗಜನಕ=ಮಹಾವಿಷ್ಣು
ಅಪ್—ನೀರು
ಅಪ್ರಾಪ್ಯ=ಎಟುಕದಿರುವ
ಅಬ್ಜ=ಬ್ರಹ್ಮದೇವ
ಅಬ್ದ=ವರ್ಷ
ಅಮರಪತಿ=ದೇವತೆಗಳೊಡೆಯ—ಇಂದ್ರ
ಅರಿಷಡ್ವರ್ಗ=ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ
ಅಲವಬೋಧ=ಪೂರ್ಣಬೋಧ—ಆನಂದತೀರ್ಥ
ಅವಸ್ಥಾತ್ರಯ=ಜಾಗ್ರತ್ ಸ್ವಪ್ನ ಸುಷುಪ್ತಿ
ಅಷ್ಟ ವಿಟಪಿ= ಎಂಟು ಪಕ್ಷಿಗಳು— ಎಂಟು ಪಾದಗಳು
ಅಷ್ಟಕರ್ತೃತ್ವ=ಸೃಷ್ಟಿ, ಸ್ಥಿತಿ ಲಯ ನಿಯಮನ ಜ್ಞಾನ ಅಜ್ಞಾನ ಬಂಧ ಮತ್ತು ಮೋಕ್ಷ
ಅಸು=ಪ್ರಾಣ; ಪ್ರಾಣದೇವ
ಅಸುರ=ರಾಕ್ಷಸ
ಅಹಿ=ಹಾವು
ಅಹಿಪ=ಶೇಷದೇವ
ಅಳವು=ಅಳತೆ-ಶಕ್ತಿ
ಅಳಿ=ದುಂಬಿ; ನಾಶಹೊಂದು
ಅಕ್ಷರ=ನಾಶವಿಲ್ಲದ; ಮಹಾಲಕ್ಷ್ಮೀದೇವಿ
ಅಂಗಜ=ಮನ್ಮಥ
ಅಂಗಜಪಿತ=ಮನ್ಮಥನ ತಂದೆ ಮಹಾವಿಷ್ಣು
ಅಂಗುಳ್ಯ=ಉಂಗುರ
ಅಂಗುಷ್ಠ=ಹೆಬ್ಬೆರಳು
ಅಂತಕ=ಯಮ
ಅಂಬರ=ಆಕಾಶ
ಅಂಬುಜ=ಕಮಲ
ಅಂಭೃಣೀದೇವಿ=ಮಹಾಲಕ್ಷ್ಮೀದೇವಿ
ಆಣತಿ=ಅಪ್ಪಣೆ
ಅಭಿಜಾತ್ಮ=ವಜ್ರದಂತಿರುವವರು—ವಾಯುದೇವರು ವಜ್ರದೇಹಿ
ಆಗಸ=ಆಕಾಶ
ಆಗಾಮಿ=ಮೂರುವಿಧ ಕರ್ಮಗಳಲ್ಲಿ ಒಂದು ಆಗಾಮಿ ಸಂಚಿತ

[illegible] ಪ್ರಾರಬ್ಧ. ಮುಂದೆ [illegible]ದ ಕರ್ಮಕ್ಕೆ [illegible] ಎಂದು ಹೆಸರು

[illegible] ಕೊಳೆ, ಕೆರೆ

[illegible]

[illegible]

[illegible] ಧೂರ್ತರು

[illegible] ರೋಗ

[illegible] ವಿಶಾಲವಾದ ಕಣ್ಣುಳ್ಳ

[illegible]=ಗಜೇಂದ್ರ

[illegible] ಗಜೇಂದ್ರರಕ್ಷಕ—ವಿಷ್ಣು

[illegible] ಗಂಡ

[illegible] [illegible]ಪಾಲ—ರಾಜ

[illegible]

[illegible]ದೇವರು

[illegible]ವಿಷ್ಣು=ಮಹಾಲಕ್ಷ್ಮೀ ದೇವಿ

[illegible]=ದಾರ (ಹೆಂಡತಿ) ಪುತ್ರ ಮಿತ್ರ ವಿತ್ತ (ಧನ) ಎಂಬ ಮೂರು ಬಗೆಯ ಮೋಹಗಳು

[illegible]=ಇಂದ್ರನ ಪಟ್ಟದ ಕುದುರೆ

[illegible]=ನಕ್ಷತ್ರಸಮೂಹ

[illegible]=ಸಮುದ್ರ

[illegible] ಶೇಷಾದ್ರಿ—ತಿರುಪತಿಯ ಬೆಟ್ಟ

[illegible]

[illegible]

[illegible]=[illegible]ಗಣವೆಂಬ

ವಿಶಿಷ್ಟ, ದೇವತಾವರ್ಗದಲ್ಲಿ ಶ್ರೇಷ್ಠ—ವಾಯುದೇವರು

ಏಕ್ ಪಂಚಾಶತ್ ವರ್ಣ=ಐವತ್ತೊಂದು ಅಕ್ಷರ

ಏಕೋನವಿಂಶತಿ=ಹತ್ತೊಂಭತ್ತು

ಒಡಲು=ದೇಹ

ಓಷಧೀಶ=ಚಂದ್ರ

ಓಷಧೀಶಧರ=ಚಂದ್ರಶೇಖರ—ರುದ್ರದೇವರು

ಕಟಕ=ಸೇನೆ—ಸಮೂಹ

ಕಟಿ=ಸೊಂಟ

ಕಟಕ=ಮರ

ಕಪಾಲಿ=ರುದ್ರದೇವರು

ಕಮಠ=ಕೂರ್ಮ; ಆಮೆ

ಕರಿಗೊರಳ=1) ಕಂಠದಲ್ಲಿ ಕಪ್ಪು (ವಿಷ) ಳ್ಳವ ರುದ್ರದೇವರು
2) ಆನೆಯ ಮುಖದವ—ವಿನಾಯ

ಕಲ್ಪದ್ರುಮ=(ದೇವಲೋಕದಲ್ಲಿರುವ) ಕಲ್ಪಿಸಿಕೊಂಡುದನ್ನು ಕೊಟ್ಟು ನೀಡುವ ಮರ

ಕಲುಷ ಕ್ರಿಯೆ=ಕೆಟ್ಟಕೆಲಸ

ಕವಾಟ=ಬಾಗಿಲು

ಕಾಪಿಡು=ಕಾಪಾಡು

ಕಾಯಜಪಿತ=ಮನ್ಮಥನತಂದೆ- ವಿಷ್ಣು

ಕಾಲ=ಯಮ

ಕಾವಳ=ಕತ್ತಲು

ಕಾಶ್ಯಪಿ=ಭೂಮಿ

ಕಾಂಚನವಿಮಾನ=ಚಿನ್ನದ ಗೋಪುರ

ಕೀಶ=ಕಪಿ

ಕುಟಿಲಮನ=ವಕ್ರವಾದ ಮನಸ್ಸು

ಕುಲಿಶ=ವಜ್ರಾಯುಧ
ಕುವಲಯ=ಭೂಮಿ
ಕುಕ್ಷಿ=ಹೊಟ್ಟೆ
ಕುಂಜರ=ಆನೆ
ಕುಂಜರಪುರ=ಹಸ್ತಿನಾವತಿಪಟ್ಟಣ
ಕುಂಭಿಣಿ=ಭೂಮಿ
ಕೂಪ=ಬಾವಿ
ಕೇಸರಿಕ್ಷೇತ್ರ=ಕೇಸರಿ ಎಂಬ ಕಪಿಯ ಪತ್ನಿ ಅಂಜನಾದೇವಿ
ಕಂದರ್ಪ=ಮನ್ಮಥ
ಕಂದರ್ಪಹರ=ಮನ್ಮಥಧ್ವಂಸಕ–ರುದ್ರ
ಕಂಬುಕಂಠ=ಶಂಖದಂತಿರುವ ಕುತ್ತಿಗೆ
ಕೊಂಡೆಮಾತು=ಚಾಡಿಯಮಾತು
ಖೇಶ=ಆಕಾಶಕ್ಕೆ ಅಭಿಮಾನಿ–ಗಣಪತಿ
ಖಗಪ=ಪಕ್ಷಿಗಳೊಡೆಯ–ಗರುಡ
ಖರ್ಪಟ=ಚಿಪ್ಪು–ಹೊರಗಿನ ಭಾಗ
ಖುಲ್ಲ=ಕೆಟ್ಟ–ದುಷ್ಟ
ಖೂಳ=ನೀಚ–ದುಷ್ಟ
ಖೇಚರ=ಆಕಾಶದಲ್ಲಿ ಸಂಚರಿಸುವವ
ಖೇಚರಮಾರ್ಗ=ಆಕಾಶಮಾರ್ಗ
ಗಜವಕ್ತ್ರ=ಆನೆಯ ಮುಖವುಳ್ಳ–ಗಣಪತಿ
ಗಾತ್ರ=ದೇಹ
ಗೀರ್ವಾಣ=ದೇವತೆ
ಗೋರಕೆ=ತಿಳಿವಳಿಕೆಗೆ
ಗ್ರಂಥಿ=ಗಂಟು
ಗ್ರಾಸ=ಆಹಾರ
ಗ್ರೀವ=ಕುತ್ತಿಗೆ
ಚತುರಾಸ್ಯ=ನಾಲ್ಕು ಮುಖದ–ಬ್ರಹ್ಮದೇವರು
ಚತುರಾಕ್ಷರಸ್ಥ=ವೇಂಕಟೇಶ ಎಂಬ ನಾಲ್ಕು ಅಕ್ಷರಗಳಿಂದ ಪ್ರಸಿದ್ಧ
ಚತುರ್ವಿಂಶತಿ=ಇಪ್ಪತ್ತನಾಲ್ಕು
ಚರಿಯ=ಕೆಲಸ
ಚಕ್ಷು=ಕಣ್ಣು
ಚಿತ್ತಜನಯ್ಯ=ಮನ್ಮಥನತಂದೆ-ವಿಷ್ಣು
ಚಿನ್ಮಯ–ಜ್ಞಾನಪೂರ್ಣ
ಚೇತನಕೊಟ್ಟು=ಅಭಿವ್ಯಕ್ತಗೊಳಿಸಿ–ಪ್ರಕಟಮಾಡಿ
ಜರೆ=ಮುಪ್ಪು
ಜರೆಜ=ಜರೆಯಮಗ–ಜರಾಸಂಧ
ಜಯಾಪತಿ=ಜಯಾ ಎಂಬ ಮಹಾಲಕ್ಷ್ಮೀಪತಿ ಸಂಕರ್ಷಣ ದೇವರು
ಜಲಜಸಂಭವ=ಕಮಲದಲ್ಲಿ ಹುಟ್ಟಿದ–ಬ್ರಹ್ಮದೇವ
ಜಾಲ=ಗುಂಪು
ಡಿಂಬ=ದೇಹ
ತಟಿತ್=ಮಿಂಚು
ತಟಿಶ್ರೋಣಿ=ಉಬ್ಬಿದ ನಿತಂಬ
ತರಣಿ=ಸೂರ್ಯ
ತಿರ್ಯಕ್=ಪಕ್ಷಿ
ತ್ರಿಗುಣ=ಸಾತ್ವಿಕ ರಾಜಸ ತಾಮಸ
ತುರು=ಹಸು
ತುರ್ಯಾಶ್ರಮ=ಕೊನೆಯ ಆಶ್ರಮ–ಸಂನ್ಯಾಸ.
ತುಂಗ=ಎತ್ತರವಾದ
ತೈಜಸ=ಸ್ವಪ್ನವನ್ನು ಕಾಣಿಸುವ ಪರಮಾತ್ಮನ ಹೆಸರು
ತೋಯ=ನೀರು

ತೋಯಜ=ಕಮಲ

ತೋಯಜಮುಖಿ=ಕಮಲದಂತೆ ಮುಖವುಳ್ಳವಳು

ತೋಯಜಾಂಬಕ=ಕಮಲಾಕ್ಷ-ವಿಷ್ಣು

ತ್ರ್ಯಕ್ಷ=ಮೂರು ಕಣ್ಣುಳ್ಳವ-ರುದ್ರದೇವರು

ತ್ರ್ಯಂಬಕ= ,, ,,

ತ್ರಾಣ=ಶಕ್ತಿ

ತ್ರಾಹಿ=ಕಾಪಾಡು

ತೃಷೆ=ದಾಹ-ನೀರಡಿಕೆ

ದನುಜ=ರಾಕ್ಷಸ

ದಶಚ್ಛದ-ಹತ್ತು ಇಂದ್ರಿಯಗಳು(ಕೂಡಿ ಕೆಲಸಮಾಡುವುದು)

ದಶಪ್ರಮತಿ=ಪೂರ್ಣಪ್ರಜ್ಞರು-ಶ್ರೀಮಧ್ವಾಚಾರ್ಯರು

ದಳಾವಿಲಸಿತ=ಆರುದಳದ ಕಮಲ

ದಕ್ಷಾಧ್ವರ=ದಕ್ಷಯಜ್ಞ

ದ್ವಾತ್ರಿಂಶಲಕ್ಷಣ=32 ಲಕ್ಷಣ ಉಳ್ಳ ವಾಯುದೇವರು

ದೀಧಿತಿ=ಕಾಂತಿ

ದ್ವಿಜ=ದೇವತೆ-ಬ್ರಾಹ್ಮಣ

ದ್ವಿಜರಾಜ=ದೇವತೆಗಳರಾಜ-ಇಂದ್ರ

ದುಗ್ಧಾಬ್ಧಿ-ಹಾಲಿನ ಸಮುದ್ರ

ದುರಿತ=ಪಾಪ

ಧಾಮತ್ರಯ=ಅನಂತಾಸನ, ಶ್ವೇತದ್ವೀಪ ವೈಕುಂಠ (ಮುಕ್ತಿಯ ಮೂರು ಸ್ಥಳಗಳು)

ಧ್ವಾಂತ=ಧ್ವಂಸ

ಧೂರ್ಜಟಿ=ರುದ್ರದೇವರು

ನಕ್ರ=ಮೊಸಳೆ

ನಗ=ಬೆಟ್ಟ

ನಗಜೆ=ಪರ್ವತರಾಜನ ಮಗಳು ಗಿರಿಜೆ-ಪಾರ್ವತಿ

ನಗಜಾಧವ=ಗಿರಿಜೆಯ ಪತಿ ರುದ್ರದೇವರು

ನರಮೃಗಾಕಾರ=ನರಸಿಂಹದೇವರು

ನರಹರಿಯಕ್ಷ=ನರ+ಹರಿಯಕ್ಷ (ಸಿಂಹ) =ನರಸಿಂಹ

ನವಾಕ್ಷ=ನವದ್ವಾರಗಳುಳ್ಳ ಮಾನವ ದೇಹ (ಎರಡು ಕಿವಿಗಳು; ಎರಡು ಕಣ್ಣುಗಳು; ಮೂಗಿನ ಹೊಳ್ಳೆಗಳು ಎರಡು; ಮುಖ; ಗುದ ಉಪಸ್ಥ)

ನಳಿನ=ಕಮಲ

ನಳಿನಜ=ಬ್ರಹ್ಮದೇವರು

ನಳಿನಜಾಂಡ=ಬ್ರಹ್ಮಾಂಡ

ನಾಕ=ಸ್ವರ್ಗ

ನಾಕೇಶ=ಸ್ವರ್ಗದೊಡೆಯ-ಇಂದ್ರ

ನಾಗಗಿರಿ=ಶೇಷಾದ್ರಿ-ತಿರುಮಲೆ-ತಿರುಪತಿ ಬೆಟ್ಟ

ನಾಗರಾಜ=ಗಜೇಂದ್ರ; ಶೇಷದೇವ

ನಾಗರಾಜಾಖ್ಯ=ನಾಗರಾಜನ ಹೆಸರುಳ್ಳ-ಇಲ್ಲಿ ಸುಬ್ಬರಾಯ (ದಾಸರು)

ನಿಕಾಯ=ಸಮೂಹ

ನಿಗಮ=ವೇದ

ನಿಟಿಲನಯನ=ಹಣೆಗಣ್ಣ-ರುದ್ರದೇವ

ನಿಟಿಲನೇತ್ರ=ಹಣೆಗಣ್ಣ-ರುದ್ರದೇವ

ನಿರ್ಜರ=ದೇವತೆ

ನಿರ್ಜರೇಶ=ದೇವತೆಗಳೊಡೆಯ-ಇಂದ್ರ

ನಿತ್ಯಾವಿಯೋಗಿನಿ=ಶ್ರೀಹರಿಯಿಂದ ಎಂದೂ ವಿಯೋಗವಿಲ್ಲದ ಮಹಾಲಕ್ಷ್ಮೀದೇವಿ

ನಿಮ್ನ ನಾಭಿ–ಆಳವಾದ ಹೊಕ್ಕಳು

ನಿಶಾಚರ=ರಾಕ್ಷಸ (ರಾತ್ರಿ ಸಂಚರಿಸುವವರು)

ಪನ್ನಗನಗ=ಶೇಷಾಚಲ (ತಿರುಮಲೆ)

ಪಟ್ಟಿ=ರೇಷ್ಮೆ

ಪರ್ಣ=ಎಲೆ

ಪರಮೇಷ್ಠಿ ಪದ=ಬ್ರಹ್ಮ ಪದವಿ

ಪವಳಿಸು=ಮಲಗು

ಪಕ್ಷಿವಾಹನ=ಗರುಡವಾಹನ (ವಿಷ್ಣು)

ಪಯೋಜಜಾಂಡ=ಬ್ರಹ್ಮಾಂಡ

ಪರ್ಯಂಕ=ಮಂಚ

ಪಂಕ=ಕೆಸರು

ಪರಾಶರಸೂನು=ವೇದವ್ಯಾಸರು

ಪಾದಪಾಂಸು=ಪಾದದಧೂಳಿ

ಪಾಪೌಘ=ಪಾಪಗಳಸಮೂಹ

ಪ್ರಣತರು=ಭಕ್ತರು (ಶರಣಾದವರು)

ಪ್ರಣಯನ=ಸ್ಥಳದಿಂದ ಸ್ಥಳಕ್ಕೆ ಸಾಗಿಸು

ಪ್ರಾಕೃತ=ಸಂಸ್ಕೃತವಲ್ಲದ್ದು (ಇಲ್ಲಿ ಕನ್ನಡ)

ಪ್ರಾಣಪಂಚಕ=ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ

ಪ್ರಾರಬ್ಧ=ಅಪರೋಕ್ಷ ಜ್ಞಾನವಾದ ಮೇಲೆ ಅನುಭವಿಸಲೇಬೇಕಾದ ಕರ್ಮ

ಪ್ರಾಶಿಸು=ತಿನ್ನು–ಕುಡಿ

ಪಿನಾಕಿ=ರುದ್ರ

ಪೀವರ=ದಪ್ಪವಾದ

ಪುಳಕ=ರೋಮಾಂಚನ

ಪುಂಡರೀಕ=ತಾವರೆ

ಪೂರ್ವದೇವ=ದೈತ್ಯ

ಪೂವಿಲ್ಲ=ಹೂವಿನಬಿಲ್ಲಿನವ–ಮನ್ಮ

ಪೊಂಬಸುರ=ಬ್ರಹ್ಮದೇವರು

ಪೊಂಬಸುರಸುವರ=ರುದ್ರದೇವರು

ಫಣಿಗಿರಿ=ಶೇಷಾದ್ರಿ (ತಿರುಮಲೆ)

ಫಾಲ=ಹಣೆ

ಫಾಲಾಕ್ಷ=ರುದ್ರದೇವರು

ಬನ್ನ=ಭಗ್ನ

ಬಿಲ=ಶ್ರೀಹರಿಯು ನಾಭಿಪ್ರದೇಶ (ಭೂ

ಬಾಣಸಿಗ=ಅಡಿಗೆಯವ

ಬಿಡೌಜ=ಇಂದ್ರ

ಬಿಸಜ=ತಾವರೆ

ಬುಧಜನ=ವಿದ್ವಾಂಸರು

ಭುಕ್ತ=ಭೋಜನ

ಮರ್ಕಟ=ಕಪಿ

ಮಾತಲಿ=ಇಂದ್ರನ ಸಾರಥಿ

ಮಾತಂಗವರದ=ಗಜವರದ

ಮಾಯಾಮತ=ಪ್ರಪಂಚ ಮಿಥ್ಯೆ ಸಾಧಿಸಿರುವ ಅದ್ವೈತ

ಮಾರ=ಮನ್ಮಥ

ಮಾರಾರಿ=ರುದ್ರದೇವ (ಮನ್ಮಥ

ಮಾರಾರಿಪಿತ=ರುದ್ರನ ತಂದೆ ಬ್ರಹ್ಮದೇ

ಮಾರಾರಿಪಿತವಂದ್ಯ=ಬ್ರಹ್ಮನಿಂ ವಂದ್ಯ–ಶ್ರೀ

ಮುಮುಕ್ಷು=ಮೋಕ್ಷಾಪೇಕ್ಷಿ

ಮುಹುರ್ಮುಹು=ಮೇಲಿಂದಮೇ

ಮೇಲುಗಿರಿ=ತಿರುಮಲೆ

ಮಂಥ=ಕಡೆಗೋಲು

ಮೃಗಾಂಕ=ಜಿಂಕೆಯ ಗುರುತುಳ್ಳವ–ಚಂದ್ರ

ಮೃಗಾಂಕಮೌಳಿ=ಚಂದ್ರನನ್ನು ತಲೆಯಲ್ಲಿ ಧರಿಸಿರುವ-ರುದ್ರದೇವರು

ಯಜನ=ಯಜ್ಞ

ಯರಗೋಳ=ಶ್ರೀ ಜಯತೀರ್ಥರು ಗ್ರಂಥಗಳನ್ನು ರಚನೆ ಮಾಡುತ್ತಿದ್ದ ಸ್ಥಳ. ಕಲ್ಬುರ್ಗಿ ಜಿಲ್ಲೆಯಲ್ಲಿದೆ

ಯೂಥಪ=ಆನೆಗಳ ಒಡೆಯ–ಸಲಗ

ಯೋಷಿತ್=ಹೆಂಗಸು

ರಜ್ಜು=ಹಗ್ಗ

ರಿಕ್ತಹಸ್ತ=ಬರಿಕೈ

ರುಜೆ=ರೋಗ

ಲಲಾಟನೇತ್ರ=ರುದ್ರದೇವರು

ಲಾಕ್ಷಾಗಾರ=ಅರಗಿನ ಮನೆ

ಲಿಂಗದೇಹ=ಜೀವನಿಗಿರುವ ನಾಲ್ಕು ದೇಹಗಳಲ್ಲಿ ಒಂದು (ಸ್ವರೂಪದೇಹ, ಲಿಂಗದೇಹ, ಅನಿರುದ್ಧದೇಹ ಮತ್ತು ಸ್ಥೂಲದೇಹ)

ವಟಪತ್ರ=ಆಲದೆಲೆ

ವನಧಿ=ಸಮುದ್ರ

ವಸುಮತಿ=ಭೂಮಿ

ವಸುಮತಿಯ ಸುರ=ಭೂದೇವತೆ–ಬ್ರಾಹ್ಮಣ

ವಾಮದೇವ=ಸುಂದರಪುರುಷ (ರುದ್ರದೇವರು)

ವಾಂಛಿತ=ಅಪೇಕ್ಷೆ

ವ್ಯಷ್ಟಿ=ಪ್ರತ್ಯೇಕ

ವ್ಯಾಧ=ಬೇಟೆಗಾರ

ವ್ರಾತ=ಸಮೂಹ

ವಿಗ್ರಹ=ಯುದ್ಧ

ವಿಜಯ=ಅರ್ಜುನ

ವಿಜಯರಥಕೇತು=ಅರ್ಜುನನ ರಥದ ಬಾವುಟ

ವಿಜಯರಥಕೇತುನಾಥ=ಅರ್ಜುನನ ರಥದ ಬಾವುಟದ ನಾಯಕ. ಹನುಮಂತದೇವ.

ವಿತ್ತ=ಧನ

ವಿಧಿ=ಬ್ರಹ್ಮದೇವ

ವೀತಿಹೋತ್ರ=ಅಗ್ನಿದೇವ

ವೈಶ್ವಾನರ=ಅಗ್ನಿದೇವ

ವೃಂದಾರಕ=ದೇವತೆ

ಶಕ್ರ=ಇಂದ್ರ

ಶತಸೂನು=ನೂರುಮಕ್ಕಳುಳ್ಳವರು. ಧೃತರಾಷ್ಟ್ರ–ಗಾಂಧಾರಿ

ಶತಾನಂದ=ಬ್ರಹ್ಮದೇವರು

ಶರಧಿ=ಸಮುದ್ರ

ಶಾರ್ವರೀಕರ=ಚಂದ್ರ

ಶಾರ್ವರೀಕರಧರ=ಚಂದ್ರನನ್ನು ತಲೆಯಲ್ಲಿ ಧರಿಸಿದವನು–ರುದ್ರದೇವ

ಶೃಗಾಲ=ನರಿ

ಶ್ರೀಧವ=ಲಕ್ಷ್ಮೀಪತಿ (ನಾರಾಯಣ)

ಶ್ರೀಲೋಲ=ಲಕ್ಷ್ಮೀರಮಣ

ಶ್ರೀಯಮ್ಮಹತಿ=ಶ್ರೀ=ಮಹಾಲಕ್ಷ್ಮೀ, ಯ=ವಾಯುದೇವ, ಮಹತೀ=ಮಹತೀ

ವೀಣಾಧಾರಿ ನಾರದರು
(ಪುರಂದರದಾಸರು)

ಶ್ರೀಶಯನ=ಶೇಷದೇವ

ಶೂಲಿ=ರುದ್ರದೇವರು

ಶಂಬರಾಂತಕವೈರಿ=ಶಂಬರಾಸುರನ ವೈರಿ ಅನಿರುದ್ಧ ಅತನಿಗೆ ವೈರಿ ರುದ್ರದೇವರು

ಸಮೀರ=ವಾಯುದೇವ

ಸಂಗರ=ಯುದ್ಧ

ಸಂದೋಹ=ಸಮೂಹ

ಸರಿತು=ನದಿ

ಸಹಜಾತ=ತಮ್ಮ

ಸುಮನಸ=ದೇವತೆ

ಸೂತ್ರನಾಮಕದೇವ=ವಾಯುದೇವರು

ಸೊಲ್ಲು=ಮಾತು

ಷಡೂರ್ಮಿ=ಆರುತೆರೆಗಳು-ಹಸಿವು ನೀರಡಿಕೆ ಇತ್ಯಾದಿ

ಹೈಮವತಿ=ಹಿಮವಂತನ ಮಗಳು ಪಾರ್ವತಿ

ಹೊದರು=ಪೊದರು (ಪೊದೆ)

ಹೊಲಬು=ದಾರಿ


ಹೃತ್ಪುಟ=ಹೃದಯವೆಂಬ ನಿಲುಗಡೆಯ ಸ್ಥಳ

ಕ್ಷರ ಪುರುಷರು=ದೇಹನಾಶವುಳ್ಳವರು-ಜೀವರು

ಅಕ್ಷರಪುರುಷ=ರಮಾದೇವಿ

ಕ್ಷಿತಿ=ಭೂಮಿ

ಕ್ಷೋಣಿ=ಭೂಮಿ.



# ಅಕ್ಷರಾನುಕ್ರಮಣಿಕೆ

—*—



Religious Publications Series No: 408

*Price Rs:* **15—**

घृणिः

“दासन माडिको एन्न”

ublished by M.V.S. Prasad, I.A.S. Executive Officer, T.T. Devasthanams and
Printed at T T.D. Press, Tirupati A.P—Copies 3000.